**ಉಪಾಧ್ಯಕ್ಷರು:** ಮಾನ್ಯ ಪ್ರಸನ್ನ ಕುಮಾರ್‌ರವರೇ, ತಾವು ಮುಂದುವರಿಸಿ.

**ಶ್ರೀ ಕೆ.ಬಿ. ಪ್ರಸನ್ನ ಕುಮಾರ್ (ಶಿವಮೊಗ್ಗ):** ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಆ ಒಂದು ಪ್ರದೇಶದಲ್ಲಿ Planetarium ಅನ್ನು ನಿರ್ಮಾಣ ಮಾಡಿ ನಾಗರೀಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅದರ ಸೌಲಭ್ಯವನ್ನು ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಡಬೇಕೆಂದು ಅಲ್ಲಿನ ನಾಗರೀಕರ ಪರವಾಗಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆಯನ್ನು ಮಾಡುತ್ತೇನೆ. ಅದೇ ರೀತಿಯಾಗಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 50 ಸಾವಿರಕ್ಕಿಂಥ ಹೆಚ್ಚು ಕಾರ್ಮಿಕ ಬಂಧುಗಳಿದ್ದಾರೆ. ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಆರೋಗ್ಯದಲ್ಲಿ ವ್ಯತ್ಯಾಸವಾದಾಗ ESI ಆಸ್ಪತ್ರೆಯ ಒಂದು ವ್ಯವಸ್ಥೆ ಆಗಬೇಕಾಗಿದೆ. ಆದ್ದರಿಂದ, ಅತಿ ಜರೂರಾಗಿ ಒಂದು ESI ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಇವತ್ತಿನದಿವಸ ನಮ್ಮ ನಗರ ಬೆಳೆಯುತ್ತಿದ್ದ ಹಾಗೆ ವಾಹನಗಳ ದಟ್ಟಣೆ ಅತಿ ಹೆಚ್ಚಾಗಿದೆ. ಆದ್ದರಿಂದ, ಅಲ್ಲಿರುವ ಮೂರ್‍ನಾಲ್ಕು ಮುಖ್ಯ ರಸ್ತೆಗಳನ್ನು ಅಂದರೆ, ಜೈಲ ರಸ್ತೆ, ಮಿಳಘಟ್ಟ ರಸ್ತೆ, ದುರ್ಗಿಗುಡಿ ರಸ್ತೆಗಳನ್ನು ಅಗಲೀಕರಣ ಮಾಡತಕ್ಕಂಥದ್ದು ಅತ್ಯಾವಶ್ಯಕತೆ ಇದೆ. ಆದ್ದರಿಂದ, ಈ ರಸ್ತೆಗಳ ಅಗಲೀಕರಣಕ್ಕೆ ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ನಮ್ಮ ನಗರದಲ್ಲಿ ಮಹಿಳಾ ಪಾಲಿಟೆಕ್ನಿಕ್ ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದೆ. ಜಿಲ್ಲೆಯಲ್ಲಿ ಇದರಿಂದ ಹಲವಾರು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ. ಈ ಪ್ರದೇಶ ತುಂಬಾ ದೊಡ್ಡದಾಗಿದ್ದು ಈ ಪ್ರದೇಶದಲ್ಲಿ ಒಂದು ಮಹಿಳಾ ಇಂಜಿನಿಯರಿಂಗ್ ಕಾಲೇಜ್ ಅನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ನಮ್ಮ ನಗರದಲ್ಲಿ Automobile ಉದ್ಯಮ ಕೂಡ ಬಹಳ ವ್ಯಾಪಕವಾಗಿ ಬೆಳೆದಿದೆ. ಈಗಾಗಲೇ ಅಲ್ಲೊಂದು auto complex ಇದ್ದು ನಮ್ಮ

KIADB ಯಿಂದ ಇನ್ನೊಂದು auto complex ಅನ್ನು ಮಾಡಿದರೆ ಈ ಭಾಗದ ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಾಗುತ್ತದೆ. ಇಷ್ಟು ಬೇಡಿಕೆಗಳನ್ನು ಮಾಡಿಕೊಡಬೇಕೆಂದು ನಮ್ಮ ನಾಗರೀಕರ ಪರವಾಗಿ ಮತ್ತು ತಮ್ಮ ಮೂಲಕ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ದಯಮಾಡಿ ಇದನ್ನು ಮಾಡಿಕೊಡಬೇಕೆಂದು ಹೇಳುತ್ತಾ ಶಿವಮೊಗ್ಗಕ್ಕೆ ಸಮೀಪ ಇರುವ ಗಾಜನೂರಿನ ತುಂಗಾ ಡ್ಯಾಂ ಹತ್ತಿರ ಕೆ.ಆರ್.ಎಸ್. ಮಾದರಿಯಲ್ಲಿ ಬೃಂದಾವನ ಮಾಡಿದರೆ ಅದು ಪ್ರವಾಸಿ ತಾಣವಾಗಿ ಬದಾವಣೆ ಆಗುವುದರ ಜೊತೆಗೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪಿ. ರಾಜೀವ್ (ಕುಡಚಿ):** ಮಾನ್ಯ ಉಪಾಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ರಾಜ್ಯಪಾಲರು ಪ್ರತಿವರ್ಷದ ಪ್ರಾರಂಭದಲ್ಲಿ ಅಧಿವೇಶನವನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಅವರ ಭಾಷಣದ ಮೂಲಕ ಆ ವರ್ಷದ ಅಧಿವೇಶನಗಳು ಪ್ರಾರಂಭವಾಗುತ್ತವೆ. ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯಸರ್ಕಾರದ ಆಶೋತ್ತರಗಳು ಏನಿವೆ ಒಂದು ವರ್ಷದಲ್ಲಿ ನಾವೆಲ್ಲಾ ಏನನ್ನು ಸಾಧನೆ ಮಾಡಬೇಕೆಂದು ಇದ್ದೇವೆ ಈ ಕರ್ನಾಟಕ ರಾಜ್ಯವನ್ನು ಮತ್ತಷ್ಟು ಪ್ರಗತಿ ಪಥದಲ್ಲಿ ನಾವು ಯಾವ ಮಾರ್ಗದಲ್ಲಿ ಕೊಂಡೊಯ್ಯುತ್ತೇವೆ ಎನ್ನುವಂಥ ಆಶಾಭಾವನೆಯನ್ನು ಸರ್ಕಾರಗಳು ರಾಜ್ಯಪಾಲರ ಮೂಲಕ ಜಂಟಿ ಸದನದಲ್ಲಿ ಹೇಳಿಸುತ್ತಾರೆ. ರಾಜ್ಯಪಾಲರ ಭಾಷಣ ಈ ರಾಜ್ಯದ ಪ್ರತಿಯೊಬ್ಬ ಯುವಕನಲ್ಲಿ ಒಂದು ಉತ್ಸಾಹವನ್ನು ಮೂಡಿಸಬೇಕು. ಈ ರಾಜ್ಯದ ರೈತರಲ್ಲಿ ಒಂದು ಭರವಸೆಯನ್ನು ಮೂಡಿಸಬೇಕು, ಶೋಷಿತ ವರ್ಗದಲ್ಲಿ ಒಂದು ಆಶಾಕಿರಣವನ್ನು ಮೂಡಿಸಬೇಕು. ಆದರೆ ಈ ಎಲ್ಲಾ ಭರವಸೆ ಮತ್ತು ಆಶೋತ್ತರಗಳನ್ನು ಮೂಡಿಸುವಲ್ಲಿ ಈ ರಾಜ್ಯಪಾಲರ ಭಾಷಣ ವಿಫಲವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. 1942 ರಲ್ಲಿ ನಾವು ಇನ್ನು ವಸಾಹತು ಆಡಳಿತದಲ್ಲಿದ್ದಾಗ CRIPPS mission

ಬರುತ್ತೆ, 1946 Cabinet Mission ಬರುತ್ತೆ, ಅಷ್ಟೊತ್ತಿಗೆ ಎರಡನೆಯ ಮಹಾಯುದ್ಧ ಪ್ರಾರಂಭವಾಗಿರುತ್ತದೆ. 1945 ರಲ್ಲಿ ಜಪಾನಿನ ಹೀರೋಶಿಮಾ ಮತ್ತು ನಾಗಾಸಾಕಿ ಏಪ್ರಿಲ್ 12 ಮತ್ತು 13ನೇ ತಾರೀಖಿಗೆ ಸಂಪೂರ್ಣ ಸುಟ್ಟು ಹೋಗುತ್ತವೆ. 1946 ರಲ್ಲಿ Cabinet Mission ಬಂದು declare ಮಾಡುತ್ತಾರೆ. 1948ರೊಳಗಾಗಿ ಈ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುತ್ತೇವೆಂದು ಹೇಳಿ ತಕ್ಷಣ Constituent Assembly form ಆಗುತ್ತೆ. ನನ್ನ ಮುಂದೆ ಯಾವಾಗಲೂ ಕಾಡುತ್ತಿರುವ ಒಂದು ಗೊಂದಲ ಏನೆಂದರೆ, 1945 ರಲ್ಲಿ ಸಂಪೂರ್ಣವಾಗಿ ಸುಟ್ಟು ಹೋದ ದೇಶ ಒಂದು ಕಡೆ 1946 ರಲ್ಲಿ ಸ್ವಾತಂತ್ರ್ಯ ಘೋಷಣೆಗೆ ಒಳಪಟ್ಟಂಥ ದೇಶ ನಮ್ಮದು. 1947 ರಲ್ಲಿ ನಾವು ಸ್ವಾತಂತ್ರ್ಯವನ್ನು ಅಧಿಕೃತವಾಗಿ ಪಡೆದುಕೊಳ್ಳುತ್ತೇವೆ. ಎರಡೇ ವರ್ಷಗಳ ವ್ಯತ್ಯಾಸ 1945 ರಲ್ಲಿ ಸುಟ್ಟು ಹೋದ ದೇಶ ಇವತ್ತು ಯಾವರೀತಿ ಇದೆ. 1947 ರಲ್ಲಿ ಸ್ವಾತಂತ್ರ್ಯಕ್ಕೆ ಒಳಪಟ್ಟ ದೇಶ ಇವತ್ತು ಯಾವ ಮಟ್ಟದಲ್ಲಿ ಇದೆ. ತಲಾ ಆದಾಯವನ್ನು ನಾವು ನೋಡುತ್ತಾ ಹೋದರೆ, ಜಗತ್ತಿನ ಅತೀ ತಲಾ ಆದಾಯವನ್ನು ಹೊಂದಿರುವಂಥ ರಾಷ್ಟ್ರಗಳಲ್ಲಿ ಜಪಾನ್ ಬಂದು ನಿಲ್ಲುತ್ತದೆ. ಹಾಗಿದ್ದರೆ ನಾವು ಎಲ್ಲಿ ಸೋತಿದ್ದೇವೆ. ಈ ಪ್ರಗತಿಯನ್ನು ಜಪಾನ್ ಸುಟ್ಟ ಮೇಲೆ ಆ ರೀತಿ ಫಿನಿಕ್ಸ್ ತರಹ ಎದ್ದು ಬಂತು ಎಂದಾದರೆ, ನಾವು ಏಕೆ ನಮ್ಮ ರಾಷ್ಟ್ರವನ್ನು ಆ ಮಟ್ಟದಲ್ಲಿ ಕಟ್ಟಲಿಕ್ಕೆ ಆಗಲಿಲ್ಲ. ಈ ಆಲೋಚನೆಯನ್ನು ನನಗೆ ಯಾವಾಗಲೂ ಕೊರೆಯುತ್ತಿರುತ್ತದೆ. ಸ್ವಾತಂತ್ರ್ಯ ಸಂದರ್ಭದಲ್ಲಿ ವಸಾಹತುಶಾಹಿ ಆಡಳಿತದಿಂದ ಮುಕ್ತವಾದ ರಾಷ್ಟ್ರಗಳನ್ನು Third World Countries ಎಂದು ಕರೆಯುತ್ತಿದ್ದರು. ಇತ್ತೀಚೆಗೆ ಸಮಾಜ ಚಿಂತಕರು ಇಲ್ಲಾ ಅವುಗಳನ್ನು ಅಭಿವೃದ್ಧಿಶೀಲ ರಾಷ್ಟ್ರಗಳು ಎಂದು ಕರೆಯಬೇಕು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಭಾರತವು ಕೂಡ ಒಂದು. ಸ್ವಾತಂತ್ರ್ಯದ ನಂತರ 68 ವರ್ಷಗಳ ನಂತರ ನಾವು ಮಾತನಾಡುತ್ತಿದ್ದೇವೆ. ನನ್ನ ದೇಶಕ್ಕೆ ಸ್ವಾತಂತ್ರ್ಯದ 68 ವರ್ಷದ ವಯಸ್ಸು ಎಂದರೆ ಸಣ್ಣ ವಯಸ್ಸು ಅಲ್ಲ. ಇವತ್ತಿಗೂ ನಾವು ಬಡವರ ಬಗ್ಗೆಯೇ ಮಾತನಾಡುತ್ತೇವೆ. ಶೋಷಿತರ ಬಗ್ಗೆಯೇ ಮಾತನಾಡುತ್ತೇವೆ. ಸೂರು ಇಲ್ಲದವರಿಗೆ ಮತ್ತೆ ಸೂರನ್ನು ಕಟ್ಟಿ ಕೊಡುತ್ತೇವೆಂದು ಮಾತನಾಡುತ್ತೇವೆ. ಇನ್ನು ಹಸಿದಿದ್ದಾರೆ ಅದಕ್ಕಾಗಿ ಒಂದು

ರೂ.ಗಳಿಗೆ ಒಂದು ಕೆ.ಜಿ.ಅಕ್ಕಿಯನ್ನು ಕೊಡುತ್ತೇವೆಂದು ಮಾತನಾಡುತ್ತಿದ್ದೇವೆ. ಒಂದು ರೂ.ಗೆ ಒಂದು ಕೆ.ಜಿ.ಅಕ್ಕಿ ಕೊಡುವಂಥದ್ದು ಒಪ್ಪಿಕೊಳ್ಳುತ್ತೇನೆ, ಜನಪರವಾದಂಥ ಕಾಳಜಿ. ಆದರೆ ಸ್ವಾತಂತ್ರ್ಯ ಬಂದು 68 ವರ್ಷಗಳಾದ ನಂತರವೂ ನನ್ನ ದೇಶದ ಜನತೆ ನನ್ನ ರಾಜ್ಯದ ಜನತೆ ಹಸಿವನ್ನು ಅನುಭವಿಸುತ್ತಿದ್ದಾರಲ್ಲಾ ಇಷ್ಟು ವರ್ಷಗಳವರೆಗೆ ಇವರ ಹೊಟ್ಟೆಯನ್ನು ನಾವು ಏಕೆ ತುಂಬುವುದಕ್ಕಾಗಲಿಲ್ಲ. ನಾವು ಎಲ್ಲಿ ಸೋತೆವು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇರುವಂಥದ್ದು ಬಹಳ ದೊಡ್ಡ ಸಮಸ್ಯೆ ಎಂದರೆ ಈ ನೆಲದ ಕಾನೂನುಗಳು. ನಾವು ವಿಶ್ವಸಂಸ್ಥೆಯ ವೇದಿಕೆಯಲ್ಲಿ ನಾವು ಅಂತಾರಾಷ್ಟ್ರೀಯ ಮಟ್ಟದ ವಿಚಾರಗಳನ್ನು ಹೊಂದಿರುವಂಥ ಕಾನೂನುಗಳನ್ನು ನಾವು ರೂಪಿಸಿದ್ದೇವೆ. ಜನರನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಇಂತಹ ಕಾನೂನುಗಳು ಇದ್ದಾನೆಂದು ಅಂತಾರಾಷ್ಟ್ರೀಯ ವೇದಿಕೆಯ ಮೇಲೆ ಹೇಳಿಕೊಳ್ಳುತ್ತೇವೆ. ಆ ಕಾನೂನುಗಳು ಈ ಸಮಾಜದ ಅತ್ಯಂತ ಕಟ್ಟ ಕಡೆಯ ವ್ಯಕ್ತಿಗೆ ಆ ಕಾನೂನುಗಳನ್ನು ಉಪಯೋಗಿಸಿಕೊಳ್ಳುವಂಥ ಶಕ್ತಿಯನ್ನು ನಾವು ತುಂಬಿಲ್ಲ. ಈ ನೆಲದ ಕಾನೂನು ಒಂದು ಕಡೆ ಇದೆ. ಈ ಸಮಾಜದ ಅತ್ಯಂಥ ದೊಡ್ಡ ಸಂಖ್ಯೆಯ ಸಮುದಾಯ ಕಾನೂನನ್ನು ಬಳಸಿಕೊಳ್ಳುವುದಕ್ಕೆ ಅಶಕ್ತವಾಗಿ ನಿಂತಿದೆ. ಆಗ ಮಧ್ಯವರ್ತಿಗಳು ಹುಟ್ಟಿಕೊಳ್ಳುತ್ತಾರೆ. ಈ ಕಾನೂನನ್ನು exploit ಮಾಡುವಂಥ ವರ್ಗ ಈ ಕಾನೂನನ್ನು ದುರುಪಯೋಗ ಮಾಡಿಕೊಳ್ಳುವಂಥ ಇನ್ನೊಂದು ವರ್ಗ ಈ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹುಟ್ಟಿಕೊಳ್ಳುತ್ತೇವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾವು ಬಹಳ ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತೇವೆ. ಇದಕ್ಕೆ ಒಂದು ಉದಾಹರಣೆ, ರಾಜ್ಯಪಾಲರ ಭಾಷಣದ ಪುಟ–2 ಕಂಡಿಕೆ 4 ರಲ್ಲಿ ತಾವು ಸಕಾಲಸೇವೆಗಳ ಬಗ್ಗೆ ಹೇಳುತ್ತೀರಿ. 6.8 ಕೋಟಿ ಅರ್ಜಿಗಳನ್ನು ನಾವು ನಾಗರೀಕರಿಂದ ಸ್ವೀಕರಿಸಲಾಗಿದ್ದು ಅದರಲ್ಲಿ 6.73 ಕೋಟಿ ಮೂರು ಅರ್ಜಿಗಳನ್ನು ಸಮಯಬದ್ಧವಾಗಿ ವಿಲೇವಾರಿಗೊಳಿಸಲಾಗಿದೆ. ವಿಲೇವಾರಿ ಅಂದರೆ ಏನು? ಇಲ್ಲಿ accountability ಅನ್ನು ಯಾರಿಗೆ ಕೊಟ್ಟಿದ್ದೀರಿ. ಒಬ್ಬ ಬಡವ ನನಗೆ pension ಕೊಡಿ ಎಂದು ಅರ್ಜಿಯನ್ನು ಹಾಕುತ್ತಾನೆ, ಮಾಸಿಕ ವೇತನ ಕೊಡಿ ಎಂದು ಅರ್ಜಿಯನ್ನು ಹಾಕುತ್ತಾನೆ

ನನಗೆ ಬಿ.ಪಿ.ಎಲ್. ಕಾರ್ಡು ಕೊಡಿ ಎಂದು ಅರ್ಜಿಯನ್ನು ಹಾಕುತ್ತಾನೆ. ಆದರೆ ಈ ಸಕಾಲ ಸೇವೆ ಏನು ಹೇಳುತ್ತದೆಂದರೆ, ನಿಗಧಿತ ಸಮಯದೊಳಗೆ ವಿಲೇವಾರಿ ಆಗಬೇಕು ಅಷ್ಟೆ. ಅರ್ಹ ಫಲಾನುಭವಿ ಅದರಿಂದ ವಂಚಿತನಾದರೆ ಇದಕ್ಕೆ ಯಾರು accountability. ಇದನ್ನು ಇವತ್ತಿಗೂ ಕೊಡುವುದಕ್ಕೆ ನಮ್ಮಿಂದ ಆಗಿಲ್ಲ. ನಾವು ಜಗತ್ತಿನ ಜಾಗತೀಕ ಮಟ್ಟದಲ್ಲಿ ಹೇಳಿ ಬಹಳ ಚಪ್ಪಾಳೆಯನ್ನು ಗಿಟ್ಟಿಸಿ ಬಿಡುತ್ತೇವೆ. ಅದಕ್ಕೆ ಪ್ರತಿಷ್ಠಿತ Commonwealth Association for Administration and Management, ಅಂತಾರಾಷ್ಟ್ರೀಯ ಪ್ರಶಸ್ತಿ–2014 ಪ್ರಾಪ್ತವಾಗಿದೆ. ನೀವು ಅರ್ಜಿಗಳನ್ನು ಸ್ವೀಕಾರ ಮಾಡಿ ಅಂತಹ ನೂರಾರು ಉದಾಹರಣೆಗಳು ನನ್ನ ಹತ್ತಿರ ಇದ್ದಾವೆ. ಕೂಲಿ ಬಿಟ್ಟರೆ ನನಗೆ ಬೇರೆ ಆದಾಯವೇ ಇಲ್ಲ, ನನಗೆ ಬಿ.ಪಿ.ಎಲ್ ಕಾರ್ಡು ಕೊಡಲಿಲ್ಲ. ನಿಮ್ಮ ಸಕಾಲಸೇವೆ ಹೇಳುತ್ತೆ, ಇಂತಹ ಕಾರಣಕ್ಕಾಗಿ ಅದನ್ನು ನಿಷೇಧಿಸಲಾಗಿದೆ ಅಥವಾ ರದ್ದುಪಡಿಸಲಾಗಿದೆ. ಒಬ್ಬ ಅಂಗವಿಕಲ 80% handicapped certificate ಅನ್ನು Doctor ನನಗೆ ಕೊಟ್ಟಿದ್ದಾರೆ ನನಗೆ ಅಂಗವಿಕಲವೇತನ ಕೊಡುತ್ತಿಲ್ಲವೆಂದು ಹೇಳುತ್ತಾನೆ. ನೀವು ಅವನ ಅರ್ಜಿ ಇತ್ಯರ್ಥ ಮಾಡಿಬಿಟ್ಟಿದ್ದೇವೆಂದು ಹೇಳುತ್ತೀರಿ. ನಾನು ಹಿರಿಯ ಸದಸ್ಯರ ಜೊತೆಯಲ್ಲಿ ಚರ್ಚೆ ಮಾಡುತ್ತಿದೆ. Commonwealth Association for Administration and Management, ಅಂತಾರಾಷ್ಟ್ರೀಯ ಪ್ರಶಸ್ತಿ–2014. . . please.

**ಶ್ರೀ ಅಶೋಕ ಖೇಣಿ:** ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿದರು handicapped ಗೆ vehicles ಕೊಡುತ್ತಾರೆ. ನನ್ನದು ಒಂದು simple question ಸರ್ಕಾರಕ್ಕೆ ಇದೆ. Where a person is suffering from some handicapped, something this one special need ಅದರ ಮೇಲೆ quota system ಏಕೆ ಹಾಕಿದ್ದಾರೆ, ಎಲ್ಲರಿಗೂ ಕೊಡಬೇಕು. There should be a comprehensive programme to give everybody. Why should the person wait for years to get a vehicle for that, because he didn't become handicapped because he wanted to become It is God's creation. So we as a society, if we really pastured society, care about these people we should

declare one. ಒಂದು ವರ್ಷದಲ್ಲಿ ಎಲ್ಲವನ್ನು ಮುಗಿಸಿ ಬಿಡಿ. Why should they wait in queue and wait, come and beg for something which we should rightfully give to them. ನನ್ನದು ಸರ್ಕಾರಕ್ಕೆ request ಇದೆ, ಬೇರೆ ಕಡೆ ದುಡ್ಡನ್ನು ಕಳ್ಳತನ ಮಾಡುವುದನ್ನು ಬಂದ್ ಮಾಡಿ ಇಲ್ಲಿ ಕೊಡಿ. ದುಡ್ಡು ಇರುತ್ತದೆ. Special children are God's children. ಅವರ ಮುಖದ ಮೇಲೆ ದೇವರು ಕಾಣಿಸುತ್ತಾನೆ. ಅದಕ್ಕಾಗಿ ಸರ್ಕಾರಕ್ಕೆ ನನ್ನ request ಇದೆ, ಅವರಿಗೆ ಒಂದು programme ಮಾಡಿ ಮುಗಿಸಿ ಬಿಡಿ. ಆ ಜನರ ಪುಣ್ಯ ನಿಮಗೆ ಸಿಗುತ್ತದೆ, ನಿಮ್ಮ ಸರ್ಕಾರಕ್ಕೆ ಇನ್ನು ಮೂರು ವರ್ಷ ಅಲ್ಲ, ಇನ್ನು 30 ವರ್ಷ ದೇವರ ದಯೆಯಿಂದ ಸರ್ಕಾರ ನಡೆಯುತ್ತಿದೆ.

**ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ಅವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅಂಗವಿಕಲರಿಗೆ ಪ್ರಾಧ್ಯಾನ್ಯತೆಯ ಮೇಲೆ ಕೊಡಬೇಕು wait ಮಾಡಬಾರದೆಂದು, ಅದರ ಬಗ್ಗೆ ಸರ್ಕಾರ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತದೆ.

**ಶ್ರೀ ಪಿ. ರಾಜೀವ್:** ಮಾನ್ಯ ಉಪಾಧ್ಯಕ್ಷರೆ, ಈ ಅಂತಾರಾಷ್ಟ್ರೀಯ ಪ್ರಶಸ್ತಿಗಳು ಬಂದಾಗ ನನಗೂ ನೆನೆಪಾಗಿತ್ತು. ಆಗ ನಾನು ಚುನಾವಣೆಯ ಸ್ಪರ್ಧೆ ಮಾಡಿ 2008 ರಲ್ಲಿ ಸೋತಿದ್ದೆ. ನನಗೆ ಒಂದು ಪತ್ರ ಬಂದಿತ್ತು. ನಿಮಗೆ ಕರ್ನಾಟಕ ರಾಜ್ಯ ಕಣ್ಮಣಿ ಎಂದು ಪ್ರಶಸ್ತಿಗೆ ಆಯ್ಕೆ ಮಾಡಿದ್ದೇವೆ ನೀವು ಬೆಂಗಳೂರಿಗೆ ಬಂದು ಪ್ರಶಸ್ತಿಯನ್ನು ತೆಗೆದುಕೊಳ್ಳಬೇಕೆಂದು ಒಂದು ಪತ್ರ ಬಂದಿತ್ತು. ನಾನು ಯಾವ ಸಾಧನೆಯನ್ನೂ ಮಾಡಿಲ್ಲ ನನಗೆ ಏಕೆ ಈ ಪತ್ರ ಬಂದಿದೆ ಎಂದು ನನಗೆ ಆಶ್ಚರ್ಯವಾಯಿತು. ಆನಂತರ, ನನ್ನ ಪಕ್ಕದಲ್ಲಿದ್ದ ಒಬ್ಬರು Advocate 'ಇಲ್ಲ ಸಾರ್, ಹೋದ ವರ್ಷ ನಾವು ಐದು ಜನ ಈ ತಾಲ್ಲೂಕಿನವರು ಹೋಗಿ ಈ ಪ್ರಶಸ್ತಿಯನ್ನು ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳಿದರು. ಹೇಗೆ ಪ್ರಶಸ್ತಿಯನ್ನು ತೆಗೆದುಕೊಂಡು ಬಂದಿರಿ ಎಂದು ನಾನು ಕೇಳಿದೆ. ಆಗ ಅವರು 'ಏನೂ ಇಲ್ಲ ಸಾರ್, 25,000 ರೂ.ಗಳನ್ನು ನಾವು ಕಟ್ಟಿದ್ದರೆ ಸಾಕು ಅವರು ನಮಗೆ ಪ್ರಶಸ್ತಿಯನ್ನು ಕೊಡುತ್ತಾರೆ' ಎಂದು ಹೇಳಿದರು. ಅಂಥದ್ದೇ ಈ ಪ್ರಶಸ್ತಿಗಳ ಸ್ಥಾನಮಾನ ಆ ಮಟ್ಟಕ್ಕೆ ಬಂದಿದೆ.

ಅದಕ್ಕೆ ನಾವು ಇಂತಹ ಅಂತರರಾಷ್ಟ್ರೀಯ ಪ್ರಶಸ್ತಿ ಬಂದಿದೆ ಎಂದು ಹೇಳಿ ನಾವು 'ಸಕಾಲ' ಸೇವೆಯನ್ನು ಹಿಗ್ಗಿ ಹೇಳಿಕೊಳ್ಳುವುದಕ್ಕಿಂತ ಇರುವಂತಹ ಈ 'ಸಕಾಲ' ಸೇವೆಗಳನ್ನು ಇನ್ನೂ ಎಷ್ಟು ಅರ್ಥಪೂರ್ಣವಾಗಿ ನಾವು ಆಚರಣೆಗೆ ತರಲು ಸಾಧ್ಯ? ಈ ಆಲೋಚೆಯನ್ನು ನಾವು ಮಾಡಬೇಕಾಗಿದೆ. ಇದೊಂದೇ ಅಲ್ಲ. ನಾವು Human Rights ಬಗ್ಗೆ ಮಾತನಾಡುತ್ತೇವೆ. Human Rights ನ ಅತಿ ಹೆಚ್ಚು violation ಇಲ್ಲಿ ಆಗುತ್ತಿವೆ. C&R rules ಅನ್ನು amendment ಮಾಡಬೇಕೆಂದು ಈ ಸರ್ಕಾರ 1982ರಲ್ಲಿ Government Order ಮಾಡಿದೆ. ಇದೇ ಸದನದಲ್ಲಿ ಚರ್ಚೆಯಾಗಿ ಇದೇ ಸರ್ಕಾರದಿಂದ 1982 ರಲ್ಲಿ C & R rules ಅನ್ನು amendment ಮಾಡಬೇಕೆಂದು ಹೇಳಿದರೆ, ಇವತ್ತಿನವರೆಗೆ ಇದೇ ಸರ್ಕಾರ ಅದನ್ನು implement ಮಾಡಿಲ್ಲವೆಂದರೆ, ಯಾವ ಮಟ್ಟಕ್ಕೆ ಇದೆ? ನಮ್ಮ ಆಡಳಿತ ಯಾವ ಮಟ್ಟಕ್ಕೆ ಹೋಗುತ್ತಿದೆ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಈ ಮೀಸಲಾತಿ ಸಂಖ್ಯೆಗಿಂತಲೂ ಹೆಚ್ಚಿಗೆ ಇದ್ದಾರೆ ಅದಕ್ಕಾಗಿ ಮೀಸಲಾತಿಯನ್ನು ಕೊಡುವಂತಹ ಅವಶ್ಯಕತೆ ಇದೆಯೇ? ಇದರ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಇಂದಿರಾ ಸಹವಾನಿ v/s ಯೂನಿಯನ್ ಆಫ್ ಇಂಡಿಯಾ ಎನ್ನುವ ಒಂದು ಕೇಸ್ ಆಗುತ್ತದೆ. ಆಗ ಸುಪ್ರೀಂಕೋರ್ಟ್ ಒಂದು observation ಮಾಡುತ್ತದೆ. ಹೌದು 15+3ಗಿಂಥ ಹೆಚ್ಚಿಗೆ ಇವರು ಸಂಖ್ಯೆಯಲ್ಲಿ ಇದ್ದಾರೆ ಎಂದರೆ ಇವರಿಗೆ reservation ಅನ್ನು ಕೊಡುವಂತಹ ಅವಶ್ಯಕತೆ ಇದೆಯೇ? ಸುಪ್ರೀಂಕೋರ್ಟಿನ ಈ observation ಮೇಲೆ 1992 ರಲ್ಲಿ Government Orders ಕೂಡ ಆಗುತ್ತವೆ. ಆನಂತರ ನಾಗರಾಜ್ ಕೇಸ್ ಹಾಗೂ ಭಟ್ ಕೇಸ್‌ನಲ್ಲಿ ಸುಪ್ರೀಂಕೋರ್ಟ್ 81st and 83rd amendment, Article 16 (4) ಅನ್ನು admendment ಮಾಡಿದ್ದನ್ನು ಎತ್ತಿಹಿಡಿಯುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಕೊಡುವಂಥದ್ದು ಬಹಳ ಅವಶ್ಯಕತೆ ಇದೆ. 15+3 ಅನ್ನು ಹೊರತುಪಡಿಸಿ merit ಮೇಲೆ ಬಂದವರನ್ನೂ ಕೂಡ ಇವರನ್ನು ಪರಿಗಣನೆ ಮಾಡಬೇಕೆಂದು ಸುಪ್ರೀಂಕೋರ್ಟ್ ಪಾರ್ಲಿಮೆಂಟ್ ಮಾಡಿರುವ 81ನೇ ಹಾಗೂ 83ನೇ ತಿದ್ದುಪಡಿಯನ್ನು ಎತ್ತಿಹಿಡಿಯುತ್ತದೆ. ಇವತ್ತಿನವರೆಗೆ ಪರಿಶಿಷ್ಟ ಜಾತಿ ಹಾಗೂ

ಪರಿಶಿಷ್ಟ ಪಂಗಡದ ನೌಕರರು ಏನು ಇಂದಿರಾ ಸಹವಾನಿ ಕೇಸ್ judgment ನಿಂದ ತೊಂದರೆಗೆ ಒಳಗಾದರು ಆವತ್ತು 1992ರಲ್ಲಿ ಮಾಡಿಕೊಂಡಿರುವಂತಹ Government Order ಅನ್ನು ಹಿಡಿದುಕೊಂಡು ಇವತ್ತಿಗೂ ತೊಂದರೆ ಮಾಡುತ್ತಿದ್ದಾರೆ. 1992ರಲ್ಲಿ ಮಾಡಿರುವಂತಹ ಇಂದಿರಾ ಸಹವಾನಿ ಕೇಸ್ judgment ನಲ್ಲಿ ಆಗಿರುವಂತಹ Government order, it is against 81st and 83rd amendment to the Indian Constitution. ಇದರ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಗಳ ಕಲ್ಯಾಣ ಸಮಿತಿಗೆ ಮುಖ್ಯ ಕಾರ್ಯದರ್ಶಿಯವರನ್ನು ಕರೆದು ಒಂದು ಸಭೆಯನ್ನು ಮಾಡಿದೆವು. ಅಂದು ಮುಖ್ಯ ಕಾರ್ಯದರ್ಶಿಗಳು ಒಂದು ತಿಂಗಳಿನೊಳಗೆ ಎಲ್ಲಾ ಇಲಾಖೆಗಳಲ್ಲಿ 1982 ರ C&R rules ಅನ್ನು amendment ಮಾಡುತ್ತೇವೆ ಎಂದು ಹೇಳುತ್ತಾರೆ. ಇವತ್ತಿನವರೆಗೂ ಅದು amendment ಆಗುವುದಿಲ್ಲ. ಸರ್ಕಾರ ತಾನು ಮಾಡಿರುವಂತಹ ಕಾನೂನನ್ನೇ ತಾನು ಜಾರಿಗೆ ತರಲಿಕ್ಕೆ ಹಿಂದೇಟು ಹಾಕುತ್ತಿದೆ ಎಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಏನು ಶೋಷಣೆ ಒಳಗಾಗಿದ್ದಾರೆ ಅವರಿಗೆ ನಾವು ಇವತ್ತಿಗೂ 1982 ರಿಂದ ಇವತ್ತಿನವರೆಗೆ ನ್ಯಾಯ ಕೊಡುವುದಕ್ಕೆ ಆಗಲಿಲ್ಲವೆಂದರೆ ಇನ್ನು ಎಷ್ಟು ವರ್ಷಗಳ ನಂತರ ನ್ಯಾಯವನ್ನು ಕೊಡುತ್ತೇವೆ? RDPR ನಲ್ಲಿ 'ಬಹುಹಳ್ಳಿ ಕುಡಿಯುವ ನೀರಿನ ಯೋಜನೆ' ಎಂದು ಮಾಡಿದ್ದಾರೆ. ನಮ್ಮ ಇತ್ತೀಚಿನ order ನಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ 70 ಲೀಟರ್‌ನಷ್ಟು ಶುದ್ಧವಾದಂತಹ ನೀರನ್ನು ಕೊಡಬೇಕೆಂದು ಇದೆ. ಉತ್ತರ ಕರ್ನಾಟಕದಲ್ಲಿ ಬಹುತೇಕ ಬೆಳಗಾವಿ, ಬಾಗಲಕೋಟೆ, ವಿಜಾಪುರ, ಹಾವೇರಿ, ಧಾರವಾಡ ಈ ಭಾಗದಲ್ಲಿ ಊರುಗಳಲ್ಲಿ 30% ಮಾತ್ರ population ಇರುತ್ತದೆ. ಇನ್ನು 70% population ತೋಟಗಳಲ್ಲಿ ಇರುತ್ತಾರೆ. ಇವರು ಹೇಳುತ್ತಾರೆ ಏನೆಂದರೆ, ತೋಟಗಳಲ್ಲಿರುವಂತಹ habitation creation ಅನ್ನು ಇವರು ಮಾಡಿರುವುದಿಲ್ಲ. ಅಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿದೆ ಎಂದು. ಈ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿದಾಗ, NRDWP ಯೊಳಗೆ ನಿಮ್ಮ ಹಳ್ಳಿ cover ಆಗಿದೆ. ಅದಕ್ಕಾಗಿ ಮತ್ತೆ ಕುಡಿಯುವ ನೀರಿನಿಂದ

ಯಾವುದೋ ಹೊಸ estimate ಗಳನ್ನು, plan ಗಳನ್ನು approve ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಅನ್ನಭಾಗ್ಯ ಯೋಜನೆಯದ್ದು ಇದೆ. ಇದಕ್ಕೆ ನಾನು ಹೇಳುವಂಥದ್ದು, ಕಾನೂನು ಮತ್ತು ಜನಜೀವನ ಇವರೆಡರ ಮಧ್ಯೆ ವ್ಯತ್ಯಾಸವಿದ್ದಾಗ, ಸಂಘರ್ಷಗಳು ಶುರುವಾಗುತ್ತವೆ. ಜನತೆ ಸರ್ಕಾರದ ವಿರುದ್ಧ ಸಂಘರ್ಷ ಮಾಡುತ್ತಾರೆ. ಈ ಪ್ರಜೆಗಳು ಸರ್ಕಾರದ ವಿರುದ್ಧ ಸಂಘರ್ಷವನ್ನು ಮಾಡುತ್ತಾರೆ. ಆಗ judicial interference ಆಗುತ್ತದೆ. Judicial activism ಎಂದು ನಾವು ಕರೆಯುತ್ತೇವೆ. ನಾವೇ ಮಾಡಿರುವಂತಹ ಕಾನೂನನ್ನು ಸರಿಯಾಗಿ implement ಮಾಡಿಲ್ಲವೆಂದರೆ ಅಥವಾ ನಾವು ತಪ್ಪು ಕಾನೂನುಗಳನ್ನು ಮಾಡಿದ್ದೇವೆ ಎಂದರೆ ಅದೇ ಕಾನೂನಿನ ಮೇಲೆ ಈ ಸದನಕ್ಕೆ judicial interference ಆಗುವಂತಹ ಅವಶ್ಯಕತೆಗಳು ಬಹಳ ಆಗಿವೆ. ಇಂತಹ judicial interference ನಿಂದ ಇವತ್ತು ನಾವೇ ಅಧಿಕಾರಿಗಳು ಮತ್ತು ಈ ಸದನದಲ್ಲಿ ಕೆಲವೊಂದು ತಪ್ಪು ನಿರ್ಧಾರಗಳು ಆಗಿರುವುದರಿಂದ ಇವತ್ತಿಗೂ ಗೇಣಿದಾರರ ಸಮಸ್ಯೆಯನ್ನು, ಬಗರ್‌ಹುಕುಂ ಸಮಸ್ಯೆಯನ್ನು ನಾವು ಬಗೆಹರಿಸಲು ಸಾಧ್ಯವಾಗಿಲ್ಲ. ಮೊನ್ನೆ ನಾನು ಒಬ್ಬ ಹಿರಿಯ ಪತ್ರಕರ್ತರ ಜೊತೆ ಮಾತನಾಡುತ್ತಿದ್ದಾಗ, ನಮ್ಮ ಸಭಾಧ್ಯಕ್ಷರಾದ ಮಾನ್ಯ ಕಾಗೋಡು ತಿಮ್ಮಪ್ಪನವರ ಬಗ್ಗೆ ಚರ್ಚೆ ಬರುತ್ತಿತ್ತು. ಅವರು ಹೋರಾಟದ ಮೂಲಕ ಈ ಸದನವನ್ನು ಪ್ರವೇಶ ಮಾಡಿದಂತಹವರು. ಒಂದು Karnataka Land Reformation Bill ನ amendment ಅನ್ನು ಪಾಸ್ ಮಾಡಲು ಅವರು ಬಹಳಷ್ಟು ಹೋರಾಟದ ಮೂಲಕವೇ ಬಂದಿರುತ್ತಾರೆ. Amendment Bill ಗೆ ಈ ಸದನದಲ್ಲಿ ಚರ್ಚೆ ನಡೆಯುತ್ತಿರುತ್ತದೆ. ಆವತ್ತು ಅವರ ಕುಟುಂಬವರನ್ನು ಮೆಗ್ಗಾನ್ ಆಸ್ಪತ್ರೆಯಲ್ಲಿ admit ಮಾಡಿರುತ್ತಾರೆ. ಆವತ್ತು ಮೊಬೈಲ್, ಫೋನ್‌ಗಳು ಇರಲಿಲ್ಲ. ಮೇಲಿಂದ ಮೇಲೆ ಅವರಿಗೆ trunk call ಬರುತ್ತಿತ್ತು. ಇಲ್ಲ ಸ್ಥಿತಿ ಬಹಳ ಗಂಭಿರವಾಗಿದೆ. ಅವರು ಬದುಕುವಂತಹ ಪರಿಸ್ಥಿತಿಯಲ್ಲಿ ಇಲ್ಲ. ನೀವು ತಕ್ಷಣ ಬರಬೇಕು ಎಂದು. ಆದರೆ ಈ Karnataka Land Reformation Bill ನ amendment ಅನ್ನು ಪಾಸ್ ಮಾಡಿಕೊಂಡೇ ಹೋಗಬೇಕೆಂದು ಆ trunk call ಗಳನ್ನು ಧಿಕ್ಕರಿಸಿ ಇಲ್ಲಿ ಚರ್ಚೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಅವರು

ಏನೇನು ಚರ್ಚೆ ಮಾಡಿದ್ದರು ಎನ್ನುವುದನ್ನು ನಾನು ಅಭ್ಯಾಸ ಮಾಡುತ್ತಿದ್ದೆ. ಮಾನ್ಯ ದೇವರಾಜು ಅರಸುರವರ ಕಾಲದಲ್ಲಿ Karnataka Land Reformation Bill ಅನ್ನು ಪಾಸ್ ಮಾಡಿಕೊಂಡು ಹೋಗುತ್ತಾರೆ, ಅವರು ಅವರ ಕುಟುಂಬದವರನ್ನು ಕಳೆದುಕೊಳ್ಳುತ್ತಾರೆ. ಇವತ್ತು ಈ ಸದನದಲ್ಲಿ ಅವರು ಸಭಾಧ್ಯಕ್ಷರಾಗಿದ್ದಾಗ ಅವರ ಅಧ್ಯಕ್ಷತೆಯೊಳಗೆ ಸದನದ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ ಎನ್ನುವಂಥದ್ದೆ ನನಗೆ ಹೆಮ್ಮೆ. ಎಲ್ಲೋ ಒಂದು ಕಡೆ ನಾವು ಸದನ ಒಗ್ಗಟ್ಟಾಗಬೇಕು. ಸದನದ ಬಗ್ಗೆ ಮಾತನಾಡುವಷ್ಟು ಹಿರಿಯ, ಅನುಭವಿ ನಾನಲ್ಲ. ಆದರೆ ಬಹಳಷ್ಟು ಬಾರಿ ನನ್ನ ಅನುಭವಕ್ಕೆ ಬರುವಂಥದ್ದು, ವಿರೋಧಪಕ್ಷದ ಗುಂಪು, ಆಡಳಿತ ಪಕ್ಷದ ಗುಂಪು. ಮಾನ್ಯ ಸಿದ್ದರಾಮಯ್ಯನವರು ಈ ರಾಜ್ಯದ ಮುಖ್ಯ ಮಂತ್ರಿಯಾಗುವುದಕ್ಕಿಂತ ಮುಂಚೆ ವಿರೋಧಪಕ್ಷದ ನಾಯಕರಾಗಿ ಅವರು ಏನೇನು ಮಾತನಾಡುತ್ತಾರೆ, ಅದೇ ಸಮಸ್ಯೆಯನ್ನು ಇವತ್ತು ಯಾರಾದರೂ ಮಾತನಾಡಿದರೆ ಅವರು ಕೊಡುವಂತಹ ಉತ್ತರ ಏನಿರುತ್ತದೆ? ನನಗಿನಿಸುತ್ತದೆ, ಇಲ್ಲಿ ಎಡಭಾಗದಲ್ಲಿದ್ದಾಗ ನಮ್ಮ ಭಾವನೆಗಳೇ ಬೇರೆ ಆಗುತ್ತವೆ. ಬಲ ಭಾಗಕ್ಕೆ ಹೋದ ತಕ್ಷಣ ನಾವು ಅದೇ ಸಮಸ್ಯೆಗೆ ಕೊಡುವಂತಹ ಉತ್ತರ ಬೇರೆ ಆಗುತ್ತದೆ ಎಂದರೆ, ಈ ಸದನದಲ್ಲಿ ವ್ಯಕ್ತಿ ಮಾತನಾಡುವದಕ್ಕಿಂಥ ಕುರ್ಚಿ ಮಾತನಾಡುತ್ತಿದೆ. ನಮಗೆ control ಮಾಡುತ್ತಿರುವಂತಹ ಇನ್ನೊಂದು ಯಾವುದೋ ಒಂದು ವರ್ಗ ಈ administration ಅನ್ನು, ಈ ಸದನವನ್ನೂ ಕೂಡ control ಮಾಡುತ್ತಿದೆ. ನಾವು ನೋಡಬೇಕು. ನಾವೆಲ್ಲರೂ ಈ ಚುನಾವಣೆ ಸದನವನ್ನು ಪ್ರವೇಶ ಮಾಡುವುದಕ್ಕೆ ಚುನಾವಣೆ. ಒಂದು ಬಾರಿ ಈ ಸದನವನ್ನು ಪ್ರವೇಶ ಮಾಡಿದ ಮೇಲೆ ಆಡಳಿತ ಪಕ್ಷ, ವಿರೋಧಪಕ್ಷ ಎನ್ನುವುದು ಹೋಗಬೇಕು. ನಮಗೆ ಈ ಸದನದಲ್ಲಿ ಎದುರಾಳಿಗಳು ಇರಬೇಕು, ಈ ಸದನದಲ್ಲಿ ಶತ್ರುಗಳು ಇರಬೇಕು. ನಮ್ಮ ಎದುರಾಳಿಗಳು ಯಾರಾಗಬೇಕೆಂದರೆ, ಈ ರಾಜ್ಯದಲ್ಲಿ ತಾಂಡವವಾಡುತ್ತಿರುವ ಬಡತನ ನಮ್ಮ ಎದುರಾಳಿಯಾಗಬೇಕು. ಈ ರಾಜ್ಯದಲ್ಲಿ ನೃತ್ಯ ಮಾಡುತ್ತಿರುವ ದೌರ್ಜನ್ಯ ನಮ್ಮ ಶತ್ರು ಆಗಬೇಕು. ಅದಕ್ಕಾಗಿ ಈ ಸದನ ಒಟ್ಟಾಗಬೇಕು. ಇನ್ನು ಎಷ್ಟು ದಿನ

ಎಂದು ನಾವು ಇದೇ ರೀತಿ ಆಡಳಿತವನ್ನು ಮಾಡುತ್ತಾ ಹೋಗುತ್ತೇವೆ? ಪ್ರತಿ ವರ್ಷ ನಾವು ಮನೆಗಳನ್ನು ಕೊಡುತ್ತೇವೆ, ಮನೆಗಳನ್ನು ಆಡಳಿತ ಪಕ್ಷಕ್ಕೆ ಮಾತ್ರ ಹಂಚಿದಿರಿ ನಮಗೆ ಹಂಚಲಿಲ್ಲವೆಂದು ಇಲ್ಲಿ ಗಲಾಟೆ ಕೂಡ ಆಯಿತು. ನಾನು ಈ ಬಗ್ಗೆ ಯೋಜನೆ ಮಾಡುತ್ತೇನೆ ಎಷ್ಟು ವರ್ಷ ಅಂತ ಮನೆಗಳನ್ನು ಹಂಚುತ್ತಾ ಹೋಗುತ್ತೇವೆ. ಅದು ಕೊನೆಯಾಗುವುದು ಯಾವಾಗ? ಇವತ್ತು ನಾವು ಮನೆಯನ್ನು ಹಂಚುತ್ತೇವೆ. ಅವನಿಗೆ already 50 ವರ್ಷಗು ಆಗಿದೆ. ಅವನಿಗೆ 20 ವರ್ಷದ ಮಕ್ಕಳು ಇದ್ದಾರೆ. ಇನ್ನು ಎರಡು ವರ್ಷ ಆದ ಮೇಲೆ ಅವರ ಮಕ್ಕಳಿಗೆ ಮನೆಯನ್ನು ಕೊಡಬೇಕು. ಇವತ್ತು ನಾವು ಅಕ್ಕಿಯನ್ನು ಕೊಡುತ್ತಿದ್ದೇವೆ ಇದನ್ನು ಎಲ್ಲಿಯವರೆವಿಗೆ ಕೊಡುತ್ತೇವೆ ಇದಕ್ಕೆ ಕೊನೆ ಹಾಡುವುದು ಯಾವಾಗ? ಈ ರಾಜ್ಯದ ಪ್ರತಿಯೊಬ್ಬ ನಾಗರೀಕ ತನ್ನ ಕಾಲ ಮೇಲೆ ತಾನು ಬದುಕುತ್ತೇನೆ ಎನ್ನುವಂತಹ ಶಕ್ತಿಯನ್ನು ನಿರ್ಮಾಣ ಮಾಡುವುದು ಯಾವಾಗ? ನಾವು ಇನ್ನು ಕೂಡ ರಾಜ್ಯದ ಜನತೆಯನ್ನು ಪರಾವಲಂಬಿಗಳನ್ನಾಗಿ ಮಾಡುತ್ತಾ ಹೋದರೆ ಎಲ್ಲಿಯವರೆವಿಗೆ ಜನಪರ ಯೋಜನೆಗಳನ್ನು ಹೇಳುತ್ತಾ ಹೋಗಬೇಕು. ಅವನು ಅವನ ಕಾಲ ಮೇಲೆ ನಿಂತು ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಶಾಶ್ವತವಾದಂತಹ ಯೋಜನೆಯನ್ನು ನಾವು ಏನು ಮಾಡಿದ್ದೇವೆ? ಪ್ರತಿವರ್ಷ ಸಾವಿರಾರು ಪದವೀಧರ ವಿದ್ಯಾರ್ಥಿಗಳು ಈ ರಾಜ್ಯದಿಂದ ಲಕ್ಷಾಂತರ ಸಂಖ್ಯೆಯಲ್ಲಿ ಹೊರಗೆ ಬರುತ್ತಿದ್ದಾರೆ. ಪ್ರತಿ ವರ್ಷ ಪದವಿಯನ್ನು ಪಡೆದುಕೊಂಡು ಹೊರಗೆ ಬರುತ್ತಿರುವಂತಹ ವಿದ್ಯಾರ್ಥಿಗಳಿಗೆ ಎಲ್ಲರಿಗೂ ಸರ್ಕಾರಿ ನೌಕರಿಯನ್ನು ಕೊಡುವುದಕ್ಕೆ ಸರ್ಕಾರದಿಂದ ಸಾಧ್ಯವಿಲ್ಲ. ಹಾಗಿದ್ದರೆ ಅವನ ಬದುಕನ್ನು ಅವನು ಹೇಗೆ ಕಟ್ಟಿಕೊಳ್ಳಬೇಕು? ಅಂತಹ ಯಾವ ಯೋಜನೆಗಳು ನಮ್ಮಲ್ಲಿ ಇದೆ. ನಾವು ಪ್ರತಿ ಮನೆಯನ್ನು ಕೈಗಾರಿಕೆಯನ್ನಾಗಿ convert ಮಾಡುತ್ತೇವೆ. ಪ್ರತಿಯೊಬ್ಬ ಯುವಕ ಅವನ ಬದುಕನ್ನು ಅವನು ಕಟ್ಟಿಕೊಳ್ಳುವಂತಹ ವ್ಯವಸ್ಥೆಯನ್ನು ನಾವು ನಿರ್ಮಾಣ ಮಾಡುತ್ತೇವೆ. ಇಂತಹ ಘೋಷಣೆಯು ಸರ್ಕಾರದಿಂದ ಇಲ್ಲ. ನಾವು ಬಿಪಿಎಲ್ ಕಾರ್ಡ್ ಅನ್ನು ಕೊಡುತ್ತಿದ್ದೇವೆ. ಇಲ್ಲಿಯವರೆವಿಗೆ ಬಿಪಿಎಲ್ ಕಾರ್ಡುದಾರರನ್ನೇ ಗುರುತಿಸುವುದಕ್ಕೆ ನಮ್ಮಿಂದ

ಸಾಧ್ಯವಾಗಿಲ್ಲ. ಆದರೂ ಕೂಡ ಬಿಪಿಎಲ್ ಕಾರ್ಡ್ ಅನ್ನು ಹಂಚುತ್ತಾ ಹೋಗುತ್ತಿದ್ದೇವೆ. ಸರ್ಕಾರದ ಒಂದಾದರೂ ಯೋಜನೆಯು ಇಲ್ಲಾ ಈ ವರ್ಷ ಕನಿಷ್ಟ 1,000 ಬಿಪಿಎಲ್ ಕಾರ್ಡು surrender ಮಾಡಬೇಕು. ಅವರನ್ನು ಆರ್ಥಿಕ ಮಟ್ಟದಿಂದ ಮೇಲ್ಮಟ್ಟಕ್ಕೆ ತರಬೇಕೆನ್ನುವಂತಹ ಯೋಜನೆ ಒಂದಾದರೂ ಈ ಸರ್ಕಾರದಿಂದ ಬೇಕಲ್ಲವೇ? ನಮ್ಮ ರಾಜ್ಯದ 6 ಕೋಟಿ ಜನಸಂಖ್ಯೆಯಲ್ಲಿ ಲಕ್ಷಾಂತರ ಕುಟುಂಬದಲ್ಲಿ 1,000 ಕುಟುಂಬ ಬಿಪಿಎಲ್ ಕಾರ್ಡ್ ಅನ್ನು voluntary ಆಗಿ surrender ಮಾಡಿ ನಾನು ಈ ಸರ್ಕಾರದ ಯೋಜನೆಯ ಮೂಲಕವಾಗಿ ಆರ್ಥಿಕವಾಗಿ ಮೇಲುಸ್ತರಕ್ಕೆ ಬಂದಿದ್ದೇನೆ. ಅಂತಹ ಬದ್ಧತೆಯ ಈ ಸದನದಲ್ಲಿ ಈ ಸರ್ಕಾರದಿಂದ ಬಯಸಲಿಲ್ಲ ಎಂದರೆ ನಾವು ಏನನ್ನೂ ಕಾಣುವುದಕ್ಕೆ ಸಾಧ್ಯವಿದೆ.

**ಉಪಾಧ್ಯಕ್ಷರು:** ಮಾನ್ಯ ರಾಜೀವ್‌ರವರೆ, ತಾವು ಬೇಗ conclude ಮಾಡಿ.

**ಶ್ರೀ ಪಿ. ರಾಜೀವ್:** ಈ ಒಂದು ರಾಜ್ಯಪಾಲರ ಭಾಷಣ ನಿರಾಶದಾಯಕವಾದ ಭಾಷಣವಾಗಿದೆ. ಇದೊಂದು ಸಾಂಪ್ರದಾಯಿಕವಾದ ಭಾಷಣವಾಗಿದೆ. ಇದರಲ್ಲಿ ಯಾವುದೇ ಹೊಸತನವಿಲ್ಲದೆ, ಯಾವುದೇ ಉತ್ಸಾಹ ಇಲ್ಲದೆ, ಯಾವುದೇ ಆಶೋತ್ತರ ಇಲ್ಲದೆ ಮಾಡಿರುವಂತಹ ಭಾಷಣವಾಗಿದೆ. ಅದಕ್ಕಾಗಿ ಇನ್ನು ಮುಂದಾದರೂ ಕೂಡ ಈ ಸರ್ಕಾರವು ಮತ್ತಷ್ಟು ತ್ವರಿತಗತಿಯಲ್ಲಿ ಆಡಳಿತವನ್ನು ಕೊಡುವಂತಹದ್ದು ಆಗಬೇಕು. ಆಡಳಿತ ಸುಧಾರಣೆಗೆ ಹೆಚ್ಚಿನ ಒತ್ತನ್ನು ಈ ಸರ್ಕಾರವು ಕೊಡಬೇಕು ಎಂದು ಹೇಳುತ್ತಾ ಈ ಸದನದಲ್ಲಿ ಮಾಡಿರುವಂತಹ ಭಾಷಣಕ್ಕೆ ಘನವೆತ್ತ ರಾಜ್ಯಪಾಲರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ತಮಗೂ ಕೂಡ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):** ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣ ಸರ್ಕಾರದ ನೀತಿ ಮತ್ತು ಆಲೋಚನೆ, ಚಿಂತನೆ, ಮುಂದಿನ ಗುರಿಗಳ ಬಗ್ಗೆ ಒಂದು ನೋಟದ ಪುಸ್ತಕವನ್ನು ಕೊಟ್ಟಿದ್ದಾರೆ.

ಆಡಳಿತ ಸುಧಾರಣೆ ಮಾಡದಿರುವುದರಿಂದ ದೇಶದಲ್ಲಿ ಏನನ್ನೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಅದಕ್ಕಿಂತಲೂ ಮುಂಚೆ ಎಲ್ಲಾ ಪಕ್ಷಗಳು, ಎಲ್ಲಾ ಸರ್ಕಾರಗಳು ರೈತರ ಸುದ್ದಿಯನ್ನು ಮಾತನಾಡುತ್ತಾರೆ. ಕೇವಲ 9 ವರ್ಷಕ್ಕೆ 19350 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಡೀ ಭಾರತದಲ್ಲಿ 3 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾವುದೋ ಒಬ್ಬ ಮಂತ್ರಿಯ ಸಾವಾದರೆ, ಯಾವುದೆ ಒಬ್ಬ ಎಂಎಲ್ಎ ಸಾವಾದರೆ ಸದನದ ತುಂಬಾ ಅವರ ಬಗ್ಗೆ ಗುಣಗಾನ ಮಾಡುತ್ತೇವೆ. ಅವರು ಒಳ್ಳೆಯದು ಅಥವಾ ಕೆಟ್ಟದ್ದು ಮಾಡಿದ್ದಾರೋ ಅದನ್ನು ಬಿಟ್ಟುಹಾಕೋಣ. ಆದರೆ ರೈತರ ಬಗ್ಗೆ ಒಂದು ಸಾಂತ್ವನ ಹೇಳುವಂತಹ ಯಾವುದೇ ನಿರ್ಣಯವಾಗಲಿ ಯಾವುದೇ ಆಲೋಚನೆಯಾಗಲಿ ಯಾಕಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ. ಭಾರತದ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು "ಕಿಸಾನ ಜೀಯೇ ತೋ ದೇಶ ಜೀತಾಹ್ಯೆ, ಲೇಕಿನ್ ಇನಕೇ ಲಿಯೇ ನಯಾ ನೀತಿ ಬನಾನಾಹ್ಯೆ. ಸಬ್ ಭಾರತ್‌ಕೆ ಇನ್‌ಸಾನ್‌ಕಾ ಪೇಟ್‌ಬರ್ತಿ ಕಿಯಾ ಕಿಸಾನ್, ಲೇಕಿನ್ ಇನ್ ಕಾ ಜೋಬ್ ಖಾಲಿ ಹೋಗಯಾ. ಇನ್‌ಕಾ ಜೋಬ್ ಭರ್ತಿ ಕರನೇ ಕೇ ಲಿಯೇ ನಯಾ ನೀತಿ ಬನಾನ ಹ್ಯೆ, ವೈಸೆ ಭಾಷಣ್ ಕರತೇ ಹ್ಯೆ. ಆದ್ದರಿಂದ ಆಲೋಚನೆಗಳು ಹೇಗೆ ಎಂದರೆ ಇದು ಯಾರಿಗಾಗಿ ಅನ್ನುತ್ತಾರೆ. ಈ ಆಡಳಿತವು ಯಾರಿಗಾಗಿ? ಯಾರ ಬದುಕನ್ನು ರಕ್ಷಣೆ ಮಾಡುವುದಕ್ಕೆ ಶಾಸಕಾಂಗ ಮತ್ತು ಕಾರ್ಯಾಂಗ ಕೆಲಸ ಮಾಡುತ್ತಿದೆ? ನಾನು ಒಂದೆರಡು ಮೂರು ಉದಾಹರಣೆಯನ್ನು ಕೊಡುತ್ತೇನೆ. ಪಾಂಡವಪುರದಲ್ಲಿ ಯು.ಜಿ.ಡಿ. ಕಾರ್ಯಕ್ರಮವೆಂದು ಹೇಳಿ ಭೂಮಿಯನ್ನು ಕೈಗೆ ತೆಗೆದುಕೊಂಡರು ಸುಮಾರು 6.25 ಕೋಟಿ ರೂಪಾಯಿಗಳಿಗೆ ಕಾರ್ಯಕ್ರಮಕ್ಕೆ ಸರ್ಕಾರವು ಹಣವನ್ನು ಮೀಸಲು ಇಟ್ಟಿದ್ದರು. ಈಗಾಗಲೇ 7 ವರ್ಷಗಳು ಕಳೆದು 8ನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಅದು ಇನ್ನು ಆಗಿರುವುದಿಲ್ಲ. ಈ ಬಗ್ಗೆ ನಾವು ಸ್ವಲ್ಪ ಆಲೋಚನೆಯನ್ನು ಮಾಡಬೇಕು. ಭೂಮಿಯ ಬೆಲೆಯನ್ನು ಒಂದು ಗುಂಟೆಗೆ 7,000 ರೂಪಾಯಿಗಳೆಂದು ನಿಗಧಿಮಾಡಿದರು. ಅಲ್ಲಿ ಅವತ್ತು ಗುಂಟೆಗೆ 40,000 ರೂಪಾಯಿಗಳು ನಡೆಯುತ್ತಿತ್ತು. ಇವತ್ತು ಒಂದು ಗುಂಟೆಯ ಬೆಲೆ

2,00,000 ರೂಪಾಯಿಗಳು ನಡೆಯುತ್ತಿದೆ. ಈ ತರಹದ ವಿಳಂಬ ನೀತಿಯಿಂದ ಆಗಿರುವಂತಹ ಪರಿಣಾಮದಿಂದಾಗಿ ಆ project ಈಗ 10.5 ಕೋಟಿ ರೂಪಾಯಿಗಳು ಆಗಿದೆ. ಈಗ ಭೂಮಿಯ ಬೆಲೆ 3.5 ಕೋಟಿ ರೂಪಾಯಿಗಳಾಗಿದೆ. ಅಲ್ಲಿ ಯುಜಿಡಿ ಕಾರ್ಯಕ್ರಮವು ಆಗಲಿಲ್ಲ. ಅವೆಲ್ಲಾ block ಆಗಿಬಿಟ್ಟಿದೆ. ಈಗಾಗಲೇ 6 ವರ್ಷಗಳ ಡಿಲೇ ಆಗಿದೆ. ಇದು ನಮ್ಮ ಆಡಳಿತವನ್ನು ಸುಧಾರಣೆ ಮಾಡದೇ ಹೇಗೆ ಬದಲಾವಣೆಯನ್ನು ಮಾಡುವುದಕ್ಕೆ ಸಾಧ್ಯ? ಇನ್ನು ಎರಡನೆಯದಾಗಿ ಹೇಳುವುದಾದರೆ, ಒಂದು primary school Boys school ಗೆ ವರ್ಗಾವಣೆಯಾಗಿ ಅದು Girls & Boys ಎರಡು ಒಂದೇ ಕಡೆಗೆ ಹೋಗಿರುವುದರಿಂದ ಆ building ಖಾಲಿ ಇದೆ. ಅದರ ಪಕ್ಕದಲ್ಲಿಯೇ ಉನ್ನತ ಶಿಕ್ಷಣದ ಕಾಲೇಜು ಇದೆ. ಆ ಕಾಲೇಜಿಗೆ 6 ರೂಮುಗಳನ್ನು ಕೊಡುವ ಸಂಬಂಧ ವಿಧಾನಸೌಧಕ್ಕೆ ಫೈಲ್ ಬಂದು 6 ತಿಂಗಳುಗಳು ಆಗಿದೆ. ಅದು ಕೇವಲ 500 ಮೀಟರ್ ದೂರ ಮಾತ್ರ ಇರುವುದು. ಕಾಲೇಜು ಇಲ್ಲಿ ಇದೆ, middle school building ಅಲ್ಲಿ ಇದೆ. ಈ ಬಗ್ಗೆ 6 ತಿಂಗಳು ಆಗಿದೆ. ಇದು ಯಾವ ಆಡಳಿತ ಎಂದು ಹೇಳಬೇಕು? ಮಾನ್ಯ ಉನ್ನತ ಶಿಕ್ಷಣ ಸಚಿವರೆ, 20–25 ವರ್ಷ ತಾವು Most Senior ಆಗಿದ್ದೀರಿ. ನೀವು ಆಡಳಿತವನ್ನು ಹೇಗೆ ಸುಧಾರಣೆಯನ್ನು ಮಾಡುತ್ತೀರಿ? ಈಗ ಸಕಾಲ ಬಂದಿದೆ, ಆದರೆ ಇದನ್ನು ಸುಧಾರಣೆ ಮಾಡುವುದು ಹೇಗೆ? ಉದಾಹರಣೆಗೆ ಹೇಳುವುದಾದರೆ, ಮರಳಿನ ಬಗ್ಗೆ ಎರಡು ವರ್ಷವಾಗಿದೆ ಆ ಮರಳು ಮಾಫೀಯಾ ತಡೆಯುವುದಕ್ಕೆ ನಮ್ಮಲ್ಲಿ ಯಾರ ಕೈಯಲ್ಲಿಯೂ ಆಗಲಿಲ್ಲ. ವಿರೋಧಪಕ್ಷದವರು ನಾವು ಭಾಷಣ ಮಾಡುತ್ತೇವೆ ಆಡಳಿತ ಪಕ್ಷದವರು ನಾವು ನೀತಿಯನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಇದರ ಪರಿಣಾಮ ಏನಾಗಿದೆ ಗೊತ್ತೇ? ಭ್ರಷ್ಟಾಚಾರ ವಿಕೇಂದ್ರೀಕರಣವಾಗಿದೆ. ಒಬ್ಬ Sub-Inspector ನಿಂದ ಹಿಡಿದು ಮೇಲ್ಮಟ್ಟದತನಕ ದುಡ್ಡು ಕೊಡಬೇಕಾಗಿದೆ. ಒಂದು ಲೋಡ್ ಮರಳು 15,000 ರೂಪಾಯಿಗಳು ಇದ್ದದ್ದು ಈಗ 40,000 ರೂಪಾಯಿಗಳಾಗಿದೆ. 25,000 ರೂಪಾಯಿಗಳ ಲಂಚವನ್ನು ಕೊಟ್ಟರೆ ಆ ದುಡ್ಡನ್ನು ಯಾರು ಕೊಡಬೇಕು? ಆ ಹಣವನ್ನು ಜನರು ಕೊಡಬೇಕಾಗಿದೆ.

20,000 ರೂಪಾಯಿಗಳು ಇದ್ದ ಮರಳನ್ನು 40,000 ರೂಪಾಯಿಗಳಿಗೆ ಅವನು ಕೊಡುತ್ತಾನೆ. ಆ 20,000 ರೂಪಾಯಿಗಳ ದಂಡವನ್ನು ಕಟ್ಟಿದವರು ಯಾರು? ಯಾವ ಸರ್ಕಾರವು ದಂಡವನ್ನು ಕಟ್ಟುವುದಿಲ್ಲ ಇದನ್ನು ಜನರು ಕಟ್ಟುತ್ತಾರೆ. ಆ 40,000 ರೂಪಾಯಿಗಳ ಮರಳನ್ನು ತೆಗೆಯುವುದಕ್ಕೆ ಅವನು ಇನ್ನು ಹೆಚ್ಚು ದೊಡ್ಡ ಭ್ರಷ್ಟಾಚಾರವನ್ನು ಮನೆ ಕಟ್ಟುವವನು ಇಲ್ಲಿ ಮಾಡುತ್ತಾನೆ. ಮತ್ತೆ ಹೇಗೆ ಸುಧಾರಣೆಯನ್ನು ಮಾಡುವುದು? ಮರಳಿಗೆ ಒಂದು ನೀತಿಯನ್ನು ಮಾಡುವುದಕ್ಕಾಗಲಿಲ್ಲವೆಂದರೆ ನೀವು ಹೇಗೆ ಸರ್ಕಾರವನ್ನು ನಡೆಸುತ್ತಿದ್ದೀರಿ? ಅದು ಯಾವ ಸರ್ಕಾರವೇ ಆಗಲಿ, ಸರ್ಕಾರಕ್ಕೆ ಕೆಲವು ಪ್ರಮುಖವಾದಂತಹ ವಿಷಯಗಳನ್ನು ಚರ್ಚೆ ಮಾಡುವಂತಹ ಸಾಮರ್ಥ್ಯ ಇರಬೇಕು. ಇದು ಏನು ನನಗೆ ಅರ್ಥವಾಗುತ್ತಿಲ್ಲ. ನೀವು ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ತರುತ್ತೀರೋ ಬಿಡುತ್ತೀರೋ ಅದು ಬೇರೆ ಪ್ರಶ್ನೆ. ಒಂದು ರೂಪಾಯಿಯು ಸರ್ಕಾರದಿಂದ ಹೋದರೆ ಕನಿಷ್ಟ 70 ಪೈಸೆಯ ಕೆಲಸ ಆದರೆ ಸಾಕು. ಇದು 30 ಪೈಸೆ ಯಿಂದ 40 ಪೈಸೆ ಆಗುತ್ತಿದೆ. ನೀವು ಹೇಗೆ ಸರ್ಕಾರವನ್ನು ನಡೆಸುತ್ತೀರಿ? ಬಹಳ ದೊಡ್ಡದಾಗಿ ಭ್ರಷ್ಟಾಚಾರ ನಡೆದರೆ ತನಿಖೆ ಮಾಡಲು ಲೋಕಾಯುಕ್ತ ಇದೆ, ಯಾರು ಜಾಸ್ತಿ ಕಳ್ಳತನವನ್ನು ಮಾಡುತ್ತಾರೆ? ಓದಿರುವವರು. 27,000 ಲೋಕಾಯುಕ್ತ ಕೇಸ್‌ನಿಂದ ಎಷ್ಟು ಜನರನ್ನು ಒಳಗೆ ಹಾಕಿದ್ದೇವೆ. ಯಾರ್ಯಾರನ್ನು ಒಳಕ್ಕೆ ಹಾಕುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಇನ್ನು ನಾಲ್ಕನೆಯದಾಗಿ ಹೇಳುವುದಾದರೆ, ಅಮೇರಿಕಾದವನು ಬಂದರೆ ಮಾನ್ಯ ಮುಖ್ಯಮಂತ್ರಿಗಳು ಸೂಟು ಹಾಕಿಕೊಂಡು ಹೋಗಿ ಬೆಂಗಳೂರಿನಲ್ಲಿ ಸೈಟ್ ಕೊಡುತ್ತೇವೆ. ಅವರಿಗೆ ಜಮೀನು ಕೊಡುತ್ತೇವೆ, ಅವರುಗಳಿಗೆ ಬನ್ನಿ, ಬನ್ನಿ, ಈ ರಾಜ್ಯವನ್ನು ಉದ್ದಾರ ಮಾಡುವುದಕ್ಕೆ ಬನ್ನಿ ಎಂದು ಅವರನ್ನು ಕರೆಯುತ್ತೇವೆ. 28,000 ಬೇಷರತ್ ಗ್ರಾಮಗಳು ಇವೆ. ಈಗಾಗಲೇ 65 ವರ್ಷಗಳು ಆಗಿದೆ ಕಂದಾಯ ಗ್ರಾಮವನ್ನಾಗಿ ಪರಿವರ್ತನೆ ಮಾಡಿ ಆ ಬಡವರಿಗೆ ಮೂಲಭೂತ ಸೌಕರ್ಯವನ್ನು ಕೊಡುವುದಕ್ಕೆ ಆಗಲಿಲ್ಲವೆಂದ ಮೇಲೆ ಸರ್ಕಾರದ ಅಧಿಕಾರಿಗಳು ಬಹಳ ಸಮಸ್ಯೆಯಿದೆ ಎಂದು ಹೇಳುತ್ತಾರೆ. ಸಮಸ್ಯೆಗಳಿವೆ, ಇವನ್ನು ಕಂದಾಯ ಗ್ರಾಮವನ್ನಾಗಿ ಮಾಡಲು ಕೆಲವು ಗ್ರಾಮಗಳು ಅರಣ್ಯ

ಇಲಾಖೆಯ ಒಳಗಿದೆ, ಕೆಲವು ಗ್ರಾಮಗಳು ಖಾಸಗಿ ಜಮೀನಿನಲ್ಲಿದೆ, ಕೆಲವು ಗ್ರಾಮಗಳಿಗೆ ಸಮಸ್ಯೆ ಇಲ್ಲ. ಎಷ್ಟು percent ಗ್ರಾಮಗಳಿಗೆ ಸಮಸ್ಯೆ ಇಲ್ಲ? 90% ಗ್ರಾಮಗಳಿಗೆ ಯಾವುದೇ ಸಮಸ್ಯೆ ಇಲ್ಲ. ಏಕೆ ಮಾಡಲಿಕ್ಕಾಗಿಲ್ಲ. 10% problem ಇರಬಹುದು. 90% ಗೆ ಏಕೆ ಮಾಡಲಿಕ್ಕಾಗಲಿಲ್ಲ ಅವರು. ಬಡವರ ರಕ್ಷಣೆ ಮಾಡುತ್ತೀರಿ? ಯಾವ ಆಧಾರದ ಮೇಲೆ ಬಡವರ ರಕ್ಷಣೆ ಮಾಡುತ್ತೀರಿ? ಅದು ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ಚಳುವಳಿಗಳು ಸ್ವತಂತ್ರ ಪಾರ್ಕ್‌ಗಳ ತುಂಬಾ ಇವೆ. ಡಾಕ್ಟರ್ಸ್ ಚಳವಳಿ ಮಾಡಿದರೆ ನಾಲ್ಕು ದಿವಸಗಳಿಗೆ ಕರೆದು ಮಾತನಾಡುತ್ತಾರೆ. ಹೆಂಡದಂಗಡಿ ಬಾಗಿಲು ಹಾಕಿದ ತಕ್ಷಣ tax ಬರುವುದಿಲ್ಲವೆಂದು ಕರೆದು ಮಾತನಾಡುತ್ತಾರೆ. ಅವರು ತಿಂಗಳಾನುಗಟ್ಟಲೆ ಕುಳಿತರೂ ಯಾರೂ ಅವರನ್ನು ಮಾತನಾಡಿಸುವುದಿಲ್ಲ. ಗಾಂಧಿಯವರನ್ನು ಮಾತನಾಡಿಸುವವರಿಲ್ಲ, ಸೇಂದಿಯನ್ನು ಬಹಳ ಜನ ಮಾತನಾಡಿಸುತ್ತಾರೆ. ಗಾಂಧಿಗಿಂತ ಸೇಂದಿ ದೊಡ್ಡದಾಗಿದೆ. ಗಾಂಧಿ ಫೋಟೋ ಇಟ್ಟುಕೊಂಡು ಕುಳಿತಿದ್ದಾರೆ. Atleast ಏನು ಮಾಡುತ್ತೀರಿ ಎಂದು ಕೇಳುವುದು ಬೇರೆ ಪ್ರಶ್ನೆ. ಚಳವಳಿ ಜೊತೆಯಲ್ಲಿ ಮಾತನಾಡುವಂಥ ಕನಿಷ್ಠ ಹೊಣೆಗಾರಿಕೆ, ಜವಾಬ್ದಾರಿ ಇಲ್ಲದೆ ಇದ್ದರೆ ಚಳವಳಿಗೆ ಅರ್ಥವೇನು? ಗಾಂಧಿ ಫೋಟೋ ಏಕೆ ಇಟ್ಟುಕೊಂಡಿದ್ದೀರಿ? ಕಾಂಗ್ರೆಸ್‌ನವರಿಗೆ ಹೇಳುತ್ತೀರಿ, ಗಾಂಧಿ ನಮ್ಮ ಮೊದಲನೆ ಗುರು ಎಂದು.

**ಶ್ರೀ ಕೆ. ಶಿವಮೂರ್ತಿ:** ಗಾಂಧಿ ಮತ್ತು ಸೇಂದಿಯ ಬಗ್ಗೆ ತಾವು ವಿವರಣೆ ಕೊಡುತ್ತಿದ್ದೀರಿ. ನೀರಾ ಕುಡಿಯಬೇಕೆಂದು ಮಹಾತ್ಮ ಗಾಂಧಿಯವರು ಹೇಳುತ್ತಿದ್ದರು.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನೀರಾವನ್ನು ಎಷ್ಟು ಗಂಟೆಗೆ ಕುಡಿಯಬೇಕು?

**ಶ್ರೀ ಕೆ. ಶಿವಮೂರ್ತಿ:** It is not intoxicated. ಆದ್ದರಿಂದ ನೀರಾ ಬಹಳ ಪವಿತ್ರವಾಗಿರುವಂಥ ಪಾನ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಸೇಂದಿ ಎಂದು ಹೇಳುವುದಿಲ್ಲ. ಸೇಂದಿ ಬೇಡ ಬ್ರಾಂದಿ ಎಂದು ತಿದ್ದುಕೊಳ್ಳೋಣ, ಸೇಂದಿ ಕುಡಿದರೂ ಬೆಳಿಗ್ಗೆ 6.00 ಗಂಟೆಯೊಳಗೆ ಕುಡಿಯಬೇಕು. ಸೂರ್ಯ ಹುಟ್ಟಿದ ಮೇಲೆ ಕುಡಿದರೆ ಅದು ಬದಲಾವಣೆಯಾಗಿ ಹೋಗುತ್ತದೆ. ಏನಿದ್ದರೂ 6.00 ಗಂಟೆಯೊಳಗೆ ಕುಡಿದುಕೊಳ್ಳಬೇಕು. ಅದಕ್ಕೆ ಬೇಕಾದರೆ ನೀತಿ ಮಾಡಬಹುದಾಗಿತ್ತು. ಅದರಿಂದ ಬೆಲ್ಲ ತಯಾರು ಮಾಡಬಹುದು. ಉಪ ಉತ್ಪನ್ನಗಳ ಘಟಕ ತಯಾರು ಮಾಡಬಹುದು, ಬೇಕಾದಷ್ಟು ಕೆಲಸ ಮಾಡಬಹುದು.

ಶ್ರೀ ಕೆ. ಶಿವಮೂರ್ತಿ: ನೀರಾದಿಂದ ಚಾಕಲೇಟ್ ತಯಾರಾಗಿ ಹೊರದೇಶಕ್ಕೆ ಹೋಗುತ್ತಿತ್ತು. ಮಹಾತ್ಮ ಗಾಂಧಿಯವರ concept ನಲ್ಲಿ ಖಾದಿ ಗ್ರಾಮೋದ್ಯೋಗ ಯೋಜನೆಯಲ್ಲಿ ನೀರಾ ಕೇಂದ್ರಗಳಿದ್ದವು. ಆ ನೀರಾದಿಂದ ಚಾಕಲೇಟ್ ತಯಾರಾಗಿ ಬೇರೆ ದೇಶಕ್ಕೆ ಬೇಡಿಕೆ ಮೇಲೆ ಹೋಗುತ್ತಿತ್ತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಚಾಕಲೇಟ್ ತಯಾರಾಗಿ ಅಮೆರಿಕಾ ದೇಶಕ್ಕೆ ಹೋಗುತ್ತಿತ್ತು. ಈಗ ಅಮೆರಿಕಾದವರನ್ನು ಕರೆದುಕೊಂಡು ಬಂದು ಭೂಮಿ ಕೊಡುತ್ತೇವೆ ಅದೇನು ಮಾಡುತ್ತೀರೋ ಮಾಡಿ ಎಂದು ನಾವು ಕರೆಯುತ್ತಿದ್ದೇವೆ. ಚಾಕಲೇಟ್ ಮಾತ್ರ ಅಲ್ಲಿಗೆ ಹೋಗುತ್ತದೆ. ಅವರನ್ನೇ ನಾವು ಇಲ್ಲಿಗೆ ಕರೆದುಕೊಂಡು ಬರುತ್ತೇವೆ. ಈಗ ಅವರು ಇಲ್ಲಿಗೆ ಬರದೆ ನಾವೇನು ಮಾಡುವ ಹಾಗಿಲ್ಲವಲ್ಲ. ವಿದೇಶದಿಂದ ಹೋರಿ, ವಿದೇಶದಿಂದ ವ್ಯಾಪಾರ ಮಾಡುವುದು. ನಮ್ಮದೆಲ್ಲಾ ವಿದೇಶಿಮಯ ಆಗಿದೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ: Excise ಮೇಲೆ rate ಜಾಸ್ತಿ ಮಾಡಿದ್ದೇ ಬೇರೆ ಸರ್ಕಾರ. ನಾವು ಅದನ್ನು continuation ಮಾಡಿದ್ದೇವೆ ಅಷ್ಟೇ ಹೊರತು..

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಕನ್ನಡ ಭಾಷೆಯನ್ನು ಉಳಿಸಿ ಎಂದು ಹೇಳುವುದು, convent ಶಾಲೆಗಳಿಗೆ ಪರವಾನಗಿ ಕೊಡುವುದು. ಸಿಗರೇಟ್ ಸೇದಬೇಡಿ ಎಂದು ಹೇಳುವುದು, ಸಿಗರೇಟ್ ಕಂಪನಿಗೆ ಪರವಾನಗಿ ಕೊಡುವುದು. ಹೆಂಡ ಸಾರಾಯಿ ಸಹವಾಸ ಹೆಂಡತಿ ಮಕ್ಕಳ ಉಪವಾಸ

ಎಂದು ಹೇಳುವುದು ಎಣ್ಣೆ ತಯಾರು ಮಾಡುವುದು. ಇದೊಂದು ಹೇಗೆಂದರೆ ಯಾರಿಗೋ ಹುಚ್ಚು ಹಿಡಿದುಕೊಂಡಿದೆಯೋ? ಯಾರಿಗೆ ಹುಚ್ಚು ಹಿಡಿದುಕೊಂಡಿಲ್ಲವೋ ಗೊತ್ತಿಲ್ಲ. ಹುಚ್ಚು ಬಿಡುವವರೆಗೆ ಮದುವೆಯಾಗುವುದಿಲ್ಲ. ಮದುವೆಯಾಗುವವರೆಗೆ ಹುಚ್ಚು ಬಿಡುವುದಿಲ್ಲ. ಆ ಸ್ಥಿತಿಯಲ್ಲಿದ್ದೇವೆ. ರಾಜಕಾರಣ ಎಂದರೆ ಆಡಳಿತ ವಿರೋಧ ಪಕ್ಷಗಳಲ್ಲ. ಅದನ್ನು ಬಿಟ್ಟಾಯಿತು. ನೀವು ಚಳವಳಿ ಮಾಡುತ್ತಿರುವವರನ್ನು ಮಾತನಾಡಿಸಲಿಲ್ಲವಲ್ಲ, ಅದಕ್ಕೆ ಹೇಳುತ್ತಿರುವುದು. ಎರಡನೆಯದಾಗಿ ವಸತಿ ಬಗ್ಗೆ ಹೇಳುವುದಾದೆ ಮನೆ ಕೊಡುತ್ತೇವೆಂದು ಹೇಳುತ್ತಾರೆ. ಗುಡಿಸಲು ಇಲ್ಲದ ಕರ್ನಾಟಕವನ್ನು ಕಟ್ಟುತ್ತೇವೆ. ಬಡವರಿಗೆ ಇರುವ ಬಡತನವನ್ನು ಸಂಪೂರ್ಣವಾಗಿ ನಾಶ ಮಾಡುತ್ತೇವೆ ಎಂದು ಹೇಳುತ್ತೀರಿ. ವಸತಿ ಸಚಿವರು ಇದ್ದಿದ್ದರೆ ಚೆನ್ನಾಗಿತ್ತು. ನಾನು ನಿಮ್ಮನ್ನು ಕೇಳುವುದು ಸರ್ಕಾರ ಅಧಿಕಾರಕ್ಕೆ ಬಂದಿದೆ. ಒಂದು ಪಂಚಾಯಿತಿಯಲ್ಲಿ ಎಷ್ಟು ಜನ ಬಡವರು ಇದ್ದಾರೆ. ಎಷ್ಟು ಮನೆಗಳು ಬೇಕು, ಎಷ್ಟು ನಿವೇಶನಗಳು ಬೇಕು ಎಂದು ಒಂದು identify ಮಾಡಿ ಒಂದು ಪಂಚಾಯಿರತಿಗೆ 5 ವರ್ಷಗಳಿಗೆ 400 ಮನೆಗಳೆಂದು ಘೋಷಣೆ ಮಾಡಿ ನಮ್ಮ ಸರ್ಕಾರ ಒಂದು ವರ್ಷದಲ್ಲಿ 400 ಮನೆಗಳನ್ನು ಕೊಡುತ್ತೇವೆ. 500 ಮನೆಗಳನ್ನು ಈ ಪಂಚಾಯಿತಿಗೆ ಕೊಡುತ್ತೇವೆಂದು ಹೇಳಿ ನೀವೇನಾದರೂ ಲಾಟರಿ ಎತ್ತಿ 500 ಪಂಚಾಯಿತಿಗಳಿಗೆ ಎಂದು 5 ವರ್ಷಗಳಿಗೆ ಬರೆದುಬಿಟ್ಟಿದ್ದಿದ್ದರೆ ಯಾವ MLA ಮನೆ ಕೇಳುವ ಹಾಗಿಲ್ಲ, ನಿವೇಶನ ಕೇಳುವ ಹಾಗಿಲ್ಲ. ಆ 8 ಮನೆಗಳನ್ನು ಕೊಡುವುದು, 12 ಮನೆಗಳನ್ನು ಕೊಡುವುದು. ಆ 8 ಮನೆಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/general ಎಂದು ಮಾಡಿಬಿಡುವುದು. ಅವನು ಜನತಾ ಪಕ್ಷದ ಛೇರ್ಮನ್ ಆಗಿದ್ದರೆ ಅವರ ಕಡೆಯವರನ್ನು ಹುಡುಕುವುದು. ಕಾಂಗ್ರೆಸ್ ಪಕ್ಷದ ಛೇರ್ಮನ್ ಇದ್ದರೆ ಅವರ ಕಡೆಯವರನ್ನು ಹುಡುಕುವುದು. ದಳದವರು ಛೇರ್ಮನ್ ಆಗಿದ್ದರೆ ಅವರ ಕಡೆಯವರನ್ನು ಹುಡುಕುವುದು, ರೈತ ಸಂಘದವರು ಛೇರ್ಮನ್ ಆಗಿದ್ದರೆ ಅವರ ಕಡೆಯವರನ್ನು ಹುಡುಕುವುದು, ಬಿಜೆಪಿ ಪಕ್ಷದ ಛೇರ್ಮನ್ ಆಗಿದ್ದರೆ ಅವರ ಕಡೆಯವರನ್ನು ಹುಡುಕುವುದು.

ಗುಡಿಸಲಿಲ್ಲದ ಕರ್ನಾಟಕವನ್ನು ಕಟ್ಟಬೇಕಾದರೆ ಒಂದು ನೀತಿ ಬೇಕೋ ಬೇಡವೋ? ಎಷ್ಟು ಮನೆಗಳನ್ನು select ಮಾಡಿದ್ದೇವೆ. ಎಷ್ಟು ಜನರಿಗೆ ನಿವೇಶನಗಳಿಗೆ ಎಂಬ ಬಗ್ಗೆ ಏನಾದರೂ ಮಾಹಿತಿ ಇದೆಯೇ? ಎರಡನೆಯದು ಸರ್ಕಾರಕ್ಕೆ ಹಳ್ಳಿಗಳ ಬಗ್ಗೆ, ಪಂಚಾಯಿತಿಯ ಬಗ್ಗೆ ಗೌರವ ಇದ್ದರೆ ಬೇಷರತ್ ಆಗಿ ಮನೆ ನಾಶವಾಗಿದ್ದರೆ ಮನೆ ಬಿದ್ದು ಹೋಗಿರುವಂಥ ಬಡವರಿಗೆ ಮನೆ ಕೊಡಬೇಕಾಗುತ್ತದೆ. ಪಂಚಾಯಿತಿಗೆ ಎಲ್ಲಿದೆ ಅಧಿಕಾರ? ಇವತ್ತಿನ S.R. rate ನಲ್ಲಿ 400 ರೂಪಾಯಿಗಳನ್ನು ಕೊಟ್ಟು ಸಿಮೆಂಟ ತಂದು ಒಬ್ಬ ಕೂಲಿ ಮಾಡುವವನು ಮನೆ ಕಟ್ಟಲಿಕ್ಕೆ ಸಾಧ್ಯವೇ? ಸರ್ಕಾರದ ಮಂತ್ರಿಗಳು ಯೋಚನೆ ಮಾಡಬೇಕು. ಒಬ್ಬ ಬಡವನ ಮನೆ ಬಿದ್ದು ಹೋದರೆ ಅದನ್ನು ಸುಧಾರಣೆ ಮಾಡಲಿಕ್ಕೆ ಕನಿಷ್ಠ 25,000 ಅಥವ 30,000–00 ರೂಪಾಯಿಗಳನ್ನು ಕೊಡತಕ್ಕಂಥ ಸಾಮರ್ಥ್ಯ ಇರಬೇಕು. ಗ್ರಾಮ ಪಂಚಾಯಿತಿಗಳು ಎಂದರೆ ಗುಲಾಮಗಿರಿ ಪಂಚಾಯಿತಿಯೇ? ಆರು ಸಾವಿರ ಮಾಡುತ್ತಿದ್ದೀರಿ. ಏಕೆ ಸ್ವಾತಂತ್ರ್ಯ ಬಂದು ಎಷ್ಟು ವರ್ಷಗಳಾಯಿತು? 45 ಸಾವಿರ ಕೋಟಿ ರೂಪಾಯಿಗಳು ಕುಡಿಯುವ ನೀರಿಗೆ ಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವರು ಹೇಳುತ್ತಾರೆ. ಶ್ರೀ ಹೆಚ್.ಕೆ. ಪಾಟೀಲ್‌ರವರು ಬಂದ ಮೇಲೆ ಜ್ಞಾನೋದಯವಾಗಿ 55 ಲೀಟರ್ ಇದ್ದುದನ್ನು 85 ಲೀಟರ್ ಮಾಡಿದ್ದಾರೆ. ಅದೇಕೆ ಇನ್ನೊಂದು 50 ಲೀಟರ್ ಕಡಿಮೆ ಮಾಡಬೇಕಾಗಿತ್ತು. ಇವರಿಗೂ ಸ್ವಲ್ಪ ಕಡಿಮೆ ಮಾಡಿ. ನಾವೇನು clean ಆಗಿ ತೊಳೆದುಕೊಳ್ಳಬೇಡವೆ? ನಾವು ವಾರಕ್ಕೊಮ್ಮೆಯೋ ತಿಂಗಳಿಗೊಮ್ಮೆಯೋ, ಮಹಾನವಮಿ ಹಬ್ಬದಲ್ಲಿ ಸ್ನಾನ ಮಾಡಬೇಕೇ? ಮೈಸೂರು, ಬೆಂಗಳೂರು ನಗರದವರು ದಿವಸ ತೊಳೆದುಕೊಳ್ಳಬೇಕು, ನಾವೇನು ತೊಳೆದುಕೊಳ್ಳುವುದು ಬೇಡವೇ? ನಮಗೂ ಮಾಡಿ ಸರ್, ನಿಮ್ಮಂಥವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದೀರಿ, ಘೋಷಣೆ ಮಾಡಿ. ನೀರು ಕೊಡದಿದ್ದರೂ ಪರವಾಗಿಲ್ಲ, ಸುಮ್ಮನೆ ಹೇಳುವುದಕ್ಕಾದರೂ ಹೇಳಿ. ನಿಮಗೂ 135 ಲೀಟರ್ ನೀರು ಕೊಡುತ್ತಿದ್ದೇವೆ, ನೀವು ನಗರ ಪ್ರದೇಶದವರ ನೀತಿ ಶುದ್ಧವಾಗಿರಿ ಎಂದು ಹೇಳಿ. ಈಗ 85 ಲೀಟರ್ ಕೊಟ್ಟಿದ್ದೇವೆಂದು ಹೇಳಿದರೆ ಆ 85 ಲೀಟರ್‌ಗೆ

augmentation ಎಲ್ಲಿ ಆಗಿದೆ? 55 ಲೀಟರ್ ನೀರು ಘೋಷಣೆ ಮಾಡಿದರೂ ಅಷ್ಟು ಪ್ರಮಾಣದ ನೀರಿಲ್ಲ. 108 ಟಿಎಂಸಿ ನೀರು ಬೇಕು ಅದಕ್ಕೆ plan ಮಾಡಿ ಸರ್. ಕುಡಿಯುವುದಕ್ಕೆ ನೀರು ಕೊಡಲಿಕ್ಕಾಗಲಿಲ್ಲ. 10 ರೀತಿಯ ರಸ್ತೆಗಳನ್ನು ಕೊಟ್ಟಿದ್ದೀರಿ, ಯಾರಿಗೋಸ್ಕರ ಆ ರಸ್ತೆಗಳನ್ನು ಕೊಟ್ಟಿದ್ದೀರಿ? ಈಗೇನೋ ಇದ್ದಕ್ಕಿದ್ದ ಹಾಗೆ 'ವಿಕಾಸ ಗ್ರಾಮ', ಎಷ್ಟು ವರ್ಷ ಮೂರು ವರ್ಷಗಳಿಗೆ ಸರ್ ಅದು?

ಶ್ರೀ ಕೆ. ಶಿವಮೂರ್ತಿ: ವಸತಿ ನೀತಿಯ ಬಗ್ಗೆ ಪುಟ್ಟಣ್ಣಯ್ಯನವರು ಗ್ರಾಮೀಣ ಪ್ರದೇಶ, ಕೃಷಿ ಬಗ್ಗೆ ಮಾತನಾಡಬೇಕಾದರೆ ಕುತೂಹಲ ಬರುತ್ತದೆ. ಹಿಂದೆ ಬಡವರಿಗೆ ಜನತಾ ಮನೆಗಳನ್ನು ಕಟ್ಟುತ್ತಿದ್ದರು. ಅದಕ್ಕಿಂತ ಹಿಂದೆ ಗುಡಿಸಲು ಮನೆಗಳನ್ನು ಕಟ್ಟುತ್ತಿದ್ದರು, ಹೆಂಚಿನ ಮನೆಗಳನ್ನು ಕಟ್ಟುತ್ತಿದ್ದರು, ಆಮೇಲೆ ಕೆಸರು ಮತ್ತು ಎಣ್ಣೆಯಿಂದ ಕಟ್ಟುತ್ತಿದ್ದರು. ಈಗ blocks ಉಪಯೋಗ ಮಾಡಿ ಮನೆ ಕಟ್ಟುತ್ತೇವೆ. ಇತ್ತೀಚೆಗೆ resort ಗಳಲ್ಲಿ ಗುಡಿಸಲುಗಳನ್ನು cottage ರೀತಿ ಕಟ್ಟುತ್ತಿದ್ದಾರೆ. ಹೊಸ ಹೊಸ technology ಮೇಲೆ ಮನೆಗಳನ್ನು ಕಟ್ಟುತ್ತಿದ್ದಾರೆ. Apartments ಬರುತ್ತಿವೆ. ಒಂದರ ಮೇಲೆ ಒಂದು ಮನೆಗಳನ್ನು ಕಟ್ಟುವುದು. ಜಾಗದ ಕೊರತೆ ಇದೆ. ಹಾಗಾಗಿ ಗ್ರಾಮೀಣ ಪ್ರದೇಶಕ್ಕೆ permanent ಆಗಿ ಯಾವ ನಮೂನೆಯ ವಸತಿ ಯೋಜನೆ ಆಗಬೇಕು. ಏಕೆಂದರೆ ನೆಲ ಇಲ್ಲ, ಪಾಯಿಖಾನಾ ಇಲ್ಲ, ಅವರಿಗೆ ಜಾಗ ಇಲ್ಲ, ಈ ಒಂದು ವ್ಯವಸ್ಥೆಯಲ್ಲಿ ವಸತಿ ಬಗ್ಗೆ ಯಾವ ರೀತಿ ನೀತಿ ಆಗಬೇಕೆಂದು ಹೇಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮೂಲಭೂತ ಸೌಕರ್ಯಗಳನ್ನು ಒಳಗೊಂಡಂಥ ಮನೆಗಳು ಆಗಬೇಕು. ಬಡವರಿಗೂ S.R. rate ಇರಬೇಕು. ಕೇವಲ ಯಾವ್ಯಾವುದೋ buildings and roads ಗೆ ಮಾತ್ರ S.R. rate ಇದೆ. S.R rate ಬಡವರಿಗೆಲ್ಲಿದೆ? ಬಡವರಿಗೂ S.R. rate ಆಗಬೇಕು. ಅದು ಸಂವಿಧಾನದ ಹಕ್ಕು. ನಾವೇನು ನಿಮ್ಮ ದಮ್ಮಯ್ಯ ಕೊಡಿ ಎಂದು ಕೇಳಬೇಕಾದ ಅವಶ್ಯಕತೆ ಇಲ್ಲ. ಅದು constitutional right. ಒಂದು ಕುಟುಂಬ ಆರೋಗ್ಯಕರವಾಗಿ ಬದುಕಬೇಕು. ರೈತರಿಗೆ ಇನ್ನೂ ಅನುಕೂಲ

ಮಾಡಿಕೊಡಬೇಕು. ನಾಲ್ಕು ಆಡುಗಳು, ನಾಲ್ಕು ಎಮ್ಮೆಗಳು, ಎರಡು ಹಂದಿಗಳನ್ನು ಆತ ಸಾಕಿರುತ್ತಾನೆ. ಅವನು ಅವನ ಹೆಂಡತಿ ಎಲ್ಲಿ ಮಲಗಿಕೊಳ್ಳಬೇಕು. ಈ ಕಡೆ ಎಮ್ಮೆ, ಆ ಕಡೆ ಆಡು, ಗಂಡ ಹೆಂಡತಿ ಹೇಗೆ ಮಲಗಿಕೊಳ್ಳಬೇಕು? ಸಂತೋಷವಾಗಿ ಹೇಗೆ ಮಲಗಿಕೊಳ್ಳಬೇಕು, ಹೆಂಡತಿ ಜೊತೆ ಮಾತನಾಡಿದರೆ ಅದು ಬ್ಯಾ... ಎನ್ನುತ್ತದೆ. ಇವರು ಅವನ ಜೊತೆಯಲ್ಲಿ ಮಾತನಾಡಿದರೆ ಅದು ಹುರ್ ಎನ್ನುತ್ತದೆ. ಇವರು ಯಾವರೀತಿ love ಮಾಡಿ ಬದುಕಬೇಕು? ಅವರ ಮಧ್ಯೆ ಎರಡು ಮಕ್ಕಳು ಬೇರೆ. ಹಾಗಾಗಿ ಸ್ವಾತಂತ್ರ್ಯ ಬಂದ ಮೇಲೆ ಹಂತ ಹಂತವಾಗಿ ಬದಲಾವಣೆ ಆಗಬೇಕು. 1 ಲಕ್ಷದ 35 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ ಎಂದು ಹೇಳುವುದಲ್ಲ. ಒಬ್ಬ ಬಡ ಕುಟುಂಬದ ವ್ಯಕ್ತಿ ಯಾವ ರೀತಿ ಬದುಕಬಹುದು, ಎರಡು ಮನೆಗಳನ್ನು ಕಡಿಮೆ ಕೊಡಿ. ಕೊಟ್ಟಂಥ ಮನೆ ಸುಭದ್ರವಾಗಿರಬೇಕು.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಪುಟ್ಟಣ್ಣಯ್ಯನವರೇ, ನೀವು ಹೇಳಿದರಲ್ಲಾ ಗಂಡ ಹೆಂಡತಿ ಮಲಗುವ ವಿಚಾರ. ಅವರು permanent ಆಗಿ ದೇವಸ್ಥಾನ, ಜಗತಿ ಖಾಯಂ ಮಾಡಿಕೊಂಡಿರುತ್ತಾರೆ. ಅವರ ಮನೆಗೆ ನೆಂಟರು ಬರಲಿ, ಯಾರಾದರೂ ಅಳಿಯ ಬರಲಿ, ಅವರು ಚಾಪೆ, ಕಂಬಳಿಯನ್ನು ಹೊದ್ದುಕೊಂಡು ದೇವಸ್ಥಾನದ ಕಡೆಗೆ ಹೋಗುತ್ತಾರೆ. ಆಗ ಜನ ಇವರ ಮನೆಗೆ ಗ್ಯಾರಂಟಿ ಅಳಿಯ ಬಂದಿದ್ದಾನೆ, ಅದಕ್ಕೆ ಇವನು ಈ ಕಡೆ ಬಂದಿದ್ದಾನೆ ಎಂದು ಗೊತ್ತಾಗುತ್ತದೆ. ಆದ್ದರಿಂದ ಈ ಪರಿಸ್ಥಿತಿ ಇದೆ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನೀವು ಹೇಳುವುದು ಸರಿ. ನಾವು ನಮ್ಮ ಊರಲ್ಲಿ ತೋಟದವ್ವನ ಹಬ್ಬ ಮಾಡುತ್ತೇವೆ. ಹಬ್ಬ ಮಾಡಿದಾಗ ನಮ್ಮ ಊರಿನಲ್ಲಿರುವಷ್ಟು ಜನರ ಜೊತಗೆ 10 ಪಟ್ಟು ಜನ ಬಂದು ಬಿಡುತ್ತಾರೆ. ನಾವೇನು ಮಾಡುತ್ತೇವೆ ಎಂದರೆ ರಾತ್ರಿ 10 ಗಂಟೆಗೆ ನಾಟಕ ಶುರು ಮಾಡಿಸಿಬಿಡುತ್ತೇವೆ. ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ನಾಟಕ ನಡೆಯುವಾಗ ಅವರ ಮನೆಗಳ ನೆಂಟರೆಲ್ಲಾ ಬಂದು ಆ field ನಲ್ಲಿಯೇ ಮಲಗಿರುತ್ತಾರೆ. ನಾವು ಸಮಸ್ಯೆ ಕಡಿಮೆ ಮಾಡಿಕೊಂಡಿದ್ದೇವೆ. ಏಕೆಂದರೆ, ಪ್ರತಿ ವರ್ಷ ನಾಟಕವಾಡಲೇ ಬೇಕು. ನಾಟಕ ಏತಕ್ಕೆ ಎಂದೆ, ಕಲೆಗೆ

ಎಂದು ಅಲ್ಲ. ಇವರನ್ನೆಲ್ಲಾ ಕರೆದುಕೊಂಡು ಬಂದು ಒಂದು ಕಡೆಯಲ್ಲಿ ಮಲಗಿಸಿಕೊಳ್ಳುವುದಕ್ಕೆ ಎಂದು ಮಾಡುತ್ತೇವೆ. ಈ ಸ್ಥಿತಿಗೆ ನಾವು ಬಂದಿದ್ದೇವೆ. ಏಕೆಂದರೆ, ಎಲ್ಲರ ಮನೆಗೂ ನೆಂಟರು ಬಂದರೆ ಹೇಗೆ ಮಲಗಿಕೊಳ್ಳಲು ಸಾಧ್ಯ. ಅದನ್ನು ಬಿಡಿಸುವುದಕ್ಕೆ ಏನು ಮಾಡಬೇಕು ಎಂದು ಅದಕ್ಕೆ ಒಂದು ನಾಟಕವಾಡಿಸುತ್ತೇವೆ. ಆದ್ದರಿಂದ ಇದು ನಿಜ ಶಿವಲಿಂಗಣ್ಣನವರು ಹೇಳಿದ ಹಾಗೆ ಇದರಲ್ಲಿ ಬಹಳ ಸಮಸ್ಯೆಯಿದೆ. ಆಮೇಲೆ, ಭೂಮಿ, ಕೃಷಿ ಬಗ್ಗೆ ಹೇಳುವುದಾದರೆ, ಏಕೆ ಕೃಷಿ ಬಗ್ಗೆ ಇಷ್ಟೊಂದು ಮಾತನಾಡುತ್ತಿದ್ದೇವೆ ಎಂದರೆ, ಈಗ ಯಾರು ಕೃಷಿ ನೀತಿ? ರಾಜ್ಯ ಸರ್ಕಾರ ಕೃಷಿ ಆಯೋಗ ಮಾಡಿ ಎರಡು ವರ್ಷಗಳಾಯಿತು. ಮೊದಲು ಕೃಷಿ ಆಯೋಗಕ್ಕೆ ಎಷ್ಟು ಹಣ ಸಂಗ್ರಹಣೆ ಮಾಡುವುದಕ್ಕೆ ಸಾಧ್ಯತೆಯಿದೆ? ವಾಣಿಜ್ಯ ಬೆಳೆಗಳ ಕೃಷಿ ನೀತಿ, ತೋಟಗಾರಿಕೆ ಬೆಳೆಗಳ ಕೃಷಿ ನೀತಿ, ಕಾಳು ಮಂಡಳಿಯ ರಚನೆ ಮತ್ತು ಆಹಾರ ಭದ್ರತೆಗೆ ಬೇಕಾದಂತಹ ಕೃಷಿ ನೀತಿ. ಉದಾಹರಣೆಗೆ ಕಬ್ಬಿನದ್ದು ನಮ್ಮ ಕೈಯಲ್ಲಿ ಏನು ಮಾಡುವುದಕ್ಕೆ ಆಗುತ್ತದೆ? ಮಾನ್ಯ ಉಪಾಧ್ಯಕ್ಷರೆ, ಕಬ್ಬಿನ ಪರಿಸ್ಥಿತಿ ಹೇಗೆ ಇದೆ ಗೊತ್ತಿದೆಯೇ? 3 ವರ್ಷಗಳ payment ಬಾಕಿ ಇದೆ. ಕಬ್ಬು ತೂಕ ಮಾಡುವ ಬಗ್ಗೆ ನಿಮ್ಮನ್ನು ಯಾರೂ ಕೇಳುವ ಆಗಿಲ್ಲ. ಒಂದು ಕಾರ್ಖಾನೆಯಲ್ಲಿ 600 ಟನ್ ಕಬ್ ಹೊಡೆದಿದ್ದಾನೆ. ತೊಂಡೆ ಬೇರಿಗೆ ಎಂದು 150 ಟನ್ ಅನ್ನು deduct ಮಾಡಿಕೊಂಡಿದ್ದಾನೆ. ಸಧ್ಯ ಇನ್ನು 450 ಟನ್‌ಗೆ ದುಡ್ಡು ಕೊಟ್ಟಿಲ್ಲ. ಇನ್ನು 2 ವರ್ಷಗಳನ್ನು ಬಿಟ್ಟು ಕೊಟ್ಟಿದ್ದಾನೆ. ಇಲ್ಲಿ ಯಾರನ್ನೂ ಕೇಳುವ ಆಗಿಲ್ಲ. ಶುಗರ್ ಫ್ಯಾಕ್ಟರಿ ಹಾಗೂ ಕೆಲವು ಫ್ಯಾಕ್ಟರಿಯವರನ್ನು ಟಚ್ ಮಾಡುವ ಆಗಿಲ್ಲ. ನನಗೆ ಅರ್ಥವಾಗುತ್ತಿಲ್ಲ, ರೈತರನ್ನು ಹೇಗೆ ರಕ್ಷಣೆ ಮಾಡುವುದು? 17–18 ತಿಂಗಳುಗಳು ಆಗಿವೆ, ಕಬ್ಬನ್ನು ಕೇಳುವವರಿಲ್ಲ. ಯಾವುದೇ ಮಾನದಂಡದ ಮೇಲೆ ಬೆಲೆ ನಿಗದಿ ಮಾಡುವುದಕ್ಕೆ ಆಗುತ್ತಿಲ್ಲ. ಇಂಗ್ಲೀಷ್‌ನವರು ಹೋದರು. ಇಂಗ್ಲೀಷ್‌ನವರು ಹೋಗಿ ಇವರು ಬಂದ ಮೇಲೆ MSP, SMP, MRP ಎಂದು ಇಂಗ್ಲೀಷ್‌ನಲ್ಲಿ ಇವರು ಒಂದು ರೀತಿಯಲ್ಲಿ ಮೋಸ ಮಾಡುತ್ತಾರೆ. MRP, MSP, SMP ಇಂಗ್ಲೀಷ್‌ನಲ್ಲಿ ಹೇಳಿಬಿಡುವುದು. ಇಂಗ್ಲೀಷ್‌ನಲ್ಲಿ ಹೇಳಿಬಿಟ್ಟರೆ ಜನರಿಗೆ ಏನೇನೋ

ಬದಲಾವಣೆಯಾಗುತ್ತದೆ ಎಂದು ಹೇಳಿಬಿಡುತ್ತಾರೆ. MSP ನ ಮಾಡಿದರೂ Minimum Support Price, SMP ಮಾಡಿದರೂ Statutory Minimum Price ಅದನ್ನು ಬಿಟ್ಟು FRP ಅಂದರೆ, Fair and Remunerative Price. Fair ಅಂದರೆ ಅರ್ಥವಾಗುತ್ತಿಲ್ಲ. Fair ಎಂದರೆ ಏನು? ಕಾನೂನು ಸಚಿವರು ಹೇಳಬೇಕು. Fair ಅಂದರೆ ಏನು ಸ್ವಾಮಿ? ನ್ಯಾಯ fair ಆಗಿದೆ ಎಂದರೇನು? Far ಆಗಿದೆ ಎಂದು ಇದೆಯೋ ಅಥವಾ fair ಆಗಿದೆ ಎಂದು ಇದೆಯೋ? ಕಾರ್ಖಾನೆ ಪರ far ಆಗಿದೆಯೇ ಏಕೆ? ಅರೆ ಕಬ್ಬಿಗೆ ಜಾಗತೀಕರಣ ಹಾಗೂ ಉದಾರೀಕರಣವಾದ ಮೇಲೆ ದೇಶದಲ್ಲಿ ಶ್ರೀಮಂತ ರಾಷ್ಟ್ರಗಳಿಗೆ ಮಾರ್ಕೆಟ್ dumping ಮಾಡಿಬಿಟ್ಟು ಈ ದೇಶದ 263 ಮಿಲಿಯನ್ ಟನ್ ಆಹಾರವನ್ನು ಉತ್ಪಾದನೆ ಮಾಡತಕ್ಕಂತಹ ರೈತರಿಗೆ ಒಂದು ನೀತಿ ಮಾಡಿಲ್ಲ. ಏಕೆ ಮಾಡುವುದಕ್ಕೆ ಆಗಲಿಲ್ಲ? ಕಾಂಗ್ರೆಸ್‌ನವರು ಸಹ ಜಾಸ್ತಿ ವರ್ಷಗಳ ಕಾಲ ಆಡಳಿತ ಮಾಡಿದ್ದೀರಿ. ಈಗ ಮಾನ್ಯ ಮೋದಿಯವರ ಸರ್ಕಾರ ಬಂದಮೇಲೆ ಎಲ್ಲಿದೆ? ಯಾವ ನೀತಿಯಾಗಿದೆ, ಯಾರನ್ನು ರಕ್ಷಣೆ ಮಾಡಿದ್ದೀರಿ, ಯಾರಿಗಾಗಿ ಭೂಮಿಯ ಮೇಲೆ ಸುಗ್ರೀವಾಜ್ಞೆ? ಹಿಂದೆ ಇದದವರು ರೈತರನ್ನು ಕೇಳಿ ಎಂದು ಹೇಳುತ್ತಿದ್ದರು. ಈಗ ರೈತರನ್ನೇ ಕೇಳುವ ಆಗಿಲ್ಲವೆಂದು ತೀರ್ಮಾನ ಮಾಡಿಕೊಂಡಿದ್ದಾರೆ. ಕೆಲವರು ಬಿಸಿಲಿಗೆ ತಳ್ಳಿದರೆ ಕೆಲವರು ಬೆಂಕಿಗೆ ತಳ್ಳುತ್ತಿದ್ದಾರೆ. 'ಕಿಲಾಡಿ ರಂಗ' ಸಿನಿಮಾದಲ್ಲಿ ಒಂದು ಡೈಲಾಗ್ ಹೇಳುತ್ತಾರೆ. 'ಅಮ್ಮ ಪ್ರಜೆಗಳು ನನ್ನನ್ನು ಬಿಸಿಲಿಗೆ ತಳ್ಳುತ್ತಿದ್ದಾರೆ. ಆದರೆ, ನಾನು ಅವರನ್ನು ಬೆಂಕಿಗೆ ತಳ್ಳುತ್ತಿದ್ದೇನೆ ಅಮ್ಮ ಎಂದು ಹೇಳುತ್ತಾರೆ' ಇದನ್ನು ಯಾರು ಸರಿ ಮಾಡುವುದು? ಯಾವ ತರಹದ್ದು ಎಂದು ನನಗೆ ಅರ್ಥವಾಗುತ್ತಿಲ್ಲ. ಹೌದು ತಾವು ವಿರೋಧ ಪಕ್ಷದಲ್ಲಿದ್ದೀರಿ. ಮಾನ್ಯ ಕಾರಜೋಳರವರು ರೈತರ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತೀರಿ. ಆದರೆ, ರಕ್ಷಣೆ ಮಾಡುವವರು ಯಾರು? ಭೂಮಿಯನ್ನು ಎಲ್ಲಿಂದ ತರುತ್ತೀರಿ? ಈಗ 10 ಲಕ್ಷದ 20 ಸಾವಿರ ಎಕರೆ ಜಮೀನಿನ ವಿಷಯವಾಗಿ ಭೂಮಿಯನ್ನು ಉಳಿಸಬೇಕು ಎಂದು ಇಡೀ ಸದನ ಹೋರಾಟ ಮಾಡುತ್ತಿದೆ, ಇಡೀ ಸದನದಲ್ಲಿ ಎಲ್ಲರೂ ಅಂದರೆ ಆಡಳಿತ ಹಾಗೂ ವಿರೋಧ ಪಕ್ಷದವರೆಲ್ಲರೂ ಹೋರಾಟ ಮಾಡುತ್ತೇವೆ. ಭೂಮಿಯನ್ನು

ನೀವು ಎಲ್ಲಿಂದ ತರುತ್ತೀರಿ? ವಾಣಿಜ್ಯ ಬೆಳೆಗಳಿಗೆ ಏಕೆ ನೀತಿ ಮಾಡುವುದಕ್ಕೆ ಆಗಲಿಲ್ಲ. ಅರೆ ಮೊನ್ನೆ ದಿವಸ ಕೊಯಮತ್ತೂರಿನಲ್ಲಿ ಹೇಳುತ್ತಾರೆ, 47 by-product ಗಳನ್ನು ತಯಾರು ಮಾಡಿ 26 ಕೋಟಿ ಜನರಿಗೆ ಉದ್ಯೋಗವನ್ನು ಸೃಷ್ಟಿ ಮಾಡಿ ಈ ದೇಶದ ರಾಜ್ಯ ಮತ್ತು ರಾಷ್ಟ್ರದ ಸರ್ಕಾರಗಳ ಬೊಕ್ಕಸಕ್ಕೆ ಸುಮಾರು 20% ತೆರಿಗೆ ಕೊಡುವ ಶಕ್ತಿ ಇರುವಂತಹ ಕಬ್ಬು ಎಂದು ಅವರು ಹೇಳುತ್ತಾರೆ. ಇಲ್ಲಿ ಏನು ಹೇಳುತ್ತಾರೆ ಎಂದರೆ, ರೈತರಿಂದ ಯಾವುದೇ ಆದಾಯ ಬರುವುದಿಲ್ಲವೆಂದು ಹೇಳುತ್ತಾರೆ. ಈಗ ನೀವೇ ಲೆಕ್ಕ ಹಾಕಿಕೊಳ್ಳಿ. ಕರ್ನಾಟಕದ ಕಬ್ಬು 10 ಸಾವಿರ ಕೋಟಿ ರೂಪಾಯಿಗಳು, ಒಡಗೂಲಿ, ಕಡಗೂಲಿ ಎಲ್ಲಾ ಕಳೆದು ಸೊಸೈಟಿ ಸಾಲ ತೀರಿದರೆ ನಮಗೆ ಮೂರೂವರೆ ಸಾವಿರ ಕೋಟಿ ರೂಪಾಯಿಗಳು ಉಳಿದುಕೊಳ್ಳುತ್ತದೆ. ಬರೀ ಕರ್ನಾಟಕ ಸರ್ಕಾರಕ್ಕೆ excise ಒಂದರಿಂದಲೇ, 40 ಕೆ.ಜಿ. ಕಾಕಂಬಿ ಒಂದರಿಂದಲೇ 1,350 ಕೋಟಿ ತೆರಿಗೆ ಬರುತ್ತದೆ ಎಂದು ಹೇಳಿದ್ದೀರಿ. ಕಬ್ಬು ಬೆಳೆಗಾರರಿಗೆ ಏನು ಬೆಲೆ ನಿಗದಿ ಮಾಡಿದ್ದೀರಿ? 2,200 ರೂಪಾಯಿಗಳನ್ನು ನಿಗದಿ ಮಾಡಿದ್ದೀರಿ. ಇನ್ನು 300 ಯಾರು ಕೊಡುತ್ತಾರೆ? ಫಾಕ್ಟರಿಯವರು ಹೇಳುತ್ತಾರೆ ನಾವು ಕೊಡುವುದಿಲ್ಲ ನಮ್ಮನ್ನು ಜೈಲಿಗೆ ಹಾಕ್ರಿ ಎಂದು ಹೇಳುತ್ತಾರೆ, ದಮ್ಮು ಇದ್ದರೆ ಫ್ಯಾಕ್ಟರಿಯನ್ನೇ ಕೈಗೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಎಲ್ಲಿದೆ ದಮ್ಮು? ಯಾರಿಗಾಗಿ ಈ ಬೆಳೆ? ಯಾವ ಬೆಳೆ ಇದೆ, ಏಳೂವರೆ ಸಾವಿರ ರೂಪಾಯಿಗಳು ಇದ್ದಂತಹ ಹತ್ತಿಗೆ ಈಗ ರೂ.3,500–4,000 ಆಗಿದೆ. ಗಾರ್ಮೆಂಟ್ಸ್‌ಗೆ ಬರತಕ್ಕಂತಹ ಲಕ್ಷಾಂತರ ಹೆಣ್ಣುಮಕ್ಕಳಿಗೆ ಬಹಳ ದೊಡ್ಡ ಉದ್ಯೋಗವನ್ನು ಹತ್ತಿ ಬೆಳೆ ಸೃಷ್ಟಿ ಮಾಡಿದೆ. ಆದರೆ, ಹತ್ತಿ ಬೆಳೆಗೆ cost of cultivation ಮೇಲೆ ಒಂದು ಬೆಲೆ ನಿಗದಿ ಏಕೆ ಮಾಡುವುದಕ್ಕಾಗಿಲ್ಲ? 90% ಹತ್ತಿ ಬೆಳೆಯತಕ್ಕಂತಹವರು, 90% ಹತ್ತಿ ಬೆಳೆಯುವವರು ಯಾರು? ಮಳೆಯಾಧಾರಿತ ಪ್ರದೇಶದ ಪಂಪ್‌ಸೆಟ್ ಬಳಕೆದಾರರು ಈ ಹತ್ತಿಯನ್ನು ಬೆಳೆಯುತ್ತಾರೆ. ಆಮೇಲೆ ಗಾರ್ಮೆಂಟ್ಸ್ ಹೆಣ್ಣು ಮಕ್ಕಳು ಇದ್ದಾರೆ. ಮಾಜಿ ಮುಖ್ಯಮಂತ್ರಿಗಳು ಸಹ ಇಲ್ಲಿಯೇ ಇದ್ದೀರಿ. ಆ ಗಾರ್ಮೆಟ್ಸ್‌ನಿಂದ ಹೆಣ್ಣು ಮಕ್ಕಳು ಬರುತ್ತಾರೆ ನೋಡಬೇಕು. ಒಂದು

ಟೆಂಪೋಗೆ 30–40 ಹೆಣ್ಣುಮಕ್ಕಳನ್ನು ತುಂಬಿಕೊಂಡು ಬರುತ್ತಾರೆ. ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡುತ್ತೇವೆ ಎಂದು ಹೇಳಿ ಬಹಳ ಜನರು ಭಾರತ ಮಾತೆ ನಮ್ಮ ಹೆಣ್ಣು, ನಮ್ಮವ್ವ, ನಮ್ಮಕ್ಕ, ನಮ್ಮ ತಂಗಿ ಎಂದು ಹೇಳಿ ನಾವೆಲ್ಲರೂ ಸೇರಿ ಬೆಳಿಗ್ಗೆಯೇ ಕೂಗಿಕೊಳ್ಳುತ್ತೇವೆ. ಆ ಎಲ್ಲಾ ಹೆಣ್ಣುಮಕ್ಕಳನ್ನು ಒಂದೇ ಟೆಂಪೋದಲ್ಲಿ ಒಂದೇ ಟೆಂಪೋದಲ್ಲಿ 300 ಜನರನ್ನು ತುಂಬಿಕೊಂಡು ಕರೆದುಕೊಂದು ಹೋಗುತ್ತಾರೆ. ಗಾರ್ಮೆಂಟ್ಸ್‌ನವರಿಗೆ ಕನಿಷ್ಠ ಸಾರಿಗೆ ವ್ಯವಸ್ಥೆ ಮಾಡಿಲ್ಲ. ಅಲ್ಲಿ ಏನೂ ಮಾಡುವುದು ಬೇಡ ಅವರನ್ನು ಅಲ್ಲಿಂದ ಕರೆದುಕೊಂಡು ಹೋಗಿ ಮತ್ತೆ ಅಲ್ಲಿಗೆ ತಂದು ಬಿಡಲಿ. ಸರ್ಕಾರ ಹಾಗೂ ಕೈಗಾರಿಕೆಗಳನ್ನು ನಡೆಸುವವರು ಇಬ್ಬರೂ ಕುಳಿತುಕೊಂಡು ಏಕೆ ಮಾತನಾಡುವುದಕ್ಕಾಗುವುದಿಲ್ಲ? ಆ ಮಂಡ್ಯದಲ್ಲಿ ನೀವು ನೋಡಬೇಕು. ಹಲಗೆ ಮೇಲೆ ನಿಂತಿರುತ್ತಾರೆ. ಇಷ್ಟು ಚಿತ್ರಾನ್ನ ತೆಗೆದುಕೊಂಡು ಹೋಗುತ್ತಾರೆ. ಅದನ್ನು ತಿಂದು ಸಂಜೆಯವರೆಗೆ ಗೆಯ್ದು ಅವರು ಎಷ್ಟು ಸಂಬಳ ಕೊಡುತ್ತಾರೋ ಅಥವಾ ಕೊಡುವುದಿಲ್ಲವೋ ಅದು ಬೇರೆ ಪ್ರಶ್ನೆ. 2,500, 3,000, 3,500, 4,000 ರೂಪಾಯಿಗಳನ್ನು ಕೊಡಬಹುದು. ಎಲ್ಲಾ ಹೆಣ್ಣುಮಕ್ಕಳನ್ನು ಗಾರ್ಮೆಂಟ್ಸ್‌ಗೆ ಕರೆದುಕೊಂಡು ಹೋಗುವುದು, ಗಾರ್ಮೆಂಟ್ಸ್‌ನಿಂದ ಮನೆಗೆ ಕರೆದುಕೊಂಡು ಬಿಡುವುದು. ಖೈದಿಗಳನ್ನು ಜೈಲಿಗೆ ಕರೆದುಕೊಂಡು ಹೋಗುವುದು ಮತ್ತೆ ಕರೆದುಕೊಂಡು ವಾಪಸ್ಸು ಬಿಡುತ್ತಾರಲ್ಲಾ ಆ ಸ್ಥಿತಿಯಲ್ಲಿ ಮಾಡುತ್ತಾರೆ. ಹೆಣ್ಣುಮಕ್ಕಳ ಬಗ್ಗೆ ಬಹಳ ದೊಡ್ಡ ವ್ಯಾಖ್ಯಾನ ಮಾಡುತ್ತಾರೆ. ಹೆಣ್ಣು ಭಾರತ ಮಾತೆ, ಮಾನವ ಕುಲಕ್ಕೆ ಜನ್ಮ ಕೊಡುವವಳು, ಅವಳನ್ನು ರಕ್ಷಣೆ ಮಾಡುವುದೇ ನನ್ನ ಸರ್ಕಾರದ ಗುರಿ, ಹೀಗೆ ತುಂಬಿಕೊಂಡು ಹೋಗುವುದೇ ಗುರಿಯೇ? ಯಾರಾದರೂ ಯೋಚನೆ ಮಾಡಬೇಕು. ಮಾನ್ಯ ಉಪಾಧ್ಯಕ್ಷರೆ, 3 ವರ್ಷಗಳಿಂದ ಮಾತನಾಡುತ್ತಿದ್ದೇವೆ. ಡಾಕ್ಟರ್‌ರವರೆ, ಏನು ಮಾಡಬೇಡ್ರಿ, ಗರ್ಭಕೋಶದ ಕಾಯಿಲೆಗೆ ಒಂದು health card ಕೊಡಿ ಸಾಕು. ನಿನ್ನ ಗರ್ಭಕ್ಕೆ ಅಪಾಯ ಬಂದಾಗ ನಿನ್ನ ಗರ್ಭವನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ನಮ್ಮವ್ವ, ನನ್ನ ತಾಯಿ ಈ ಕಾರ್ಡ್‌ಅನ್ನು ಮಡಗಿಕೊಂಡಿರು, ನಿನಗೆ ಅಂತಹ ಕಷ್ಟ ಬಂದಾಗ ಉಪಯೋಗಿಸುವ ಎಂದು ಒಂದು ಕಾರ್ಡ್‌ಅನ್ನು

ಕೊಡುವುದಕ್ಕೆ ಆಗುವುದಿಲ್ಲವೇನ್ರಿ? ಬರೀ ತಿಥಿ ಕಾರ್ಡ್ ಕೊಡುವುದೇ ಆಗಿದೆಯಲ್ಲಪ್ಪ. ನಾವು ತಿಥಿ ಕಾರ್ಡ್‌ಅನ್ನೇ ಕೊಡುತ್ತಿರುವುದು. ಮಾನ್ಯ ಉಪಾಧ್ಯಕ್ಷರೆ, ಅದಕ್ಕಿಂತ ಕಷ್ಟ ಯಾವುದು? ಪೌಷ್ಠಿಕಾಂಶದ ಕೊರತೆಯಿದೆ. ಗರ್ಭಕೋಶದ ಕಾಯಿಲೆಗೆ ತುತ್ತಾಗಿ ಆ ಬಿಸಿಲಿನಲ್ಲಿ ದುಡಿಯುತ್ತಿರುವಂತಹ ಹೆಣ್ಣುಮಕ್ಕಳಿಗೆ ರಕ್ಷಣೆ ಮಾಡುತ್ತಿದ್ದೇವಾ? ಕೃಷಿ ಎಂದರೆ ಏನು? ಒಂದು ಸರ್ಕಲ್ ಇದ್ದ ಹಾಗೆ, ಅದನ್ನು ತಾವು ಆಲೋಚನೆ ಮಾಡಬೇಕು. ಉದಾಹರಣೆಗೆ ಮಾನ್ಯ ಖೇಣಿಯವರು ಹಿಂದೆಯೇ ಕುಳಿತಿದ್ದಾರೆ. 18 ಸಾವಿರ ಎಕರೆ ಭೂಮಿಯಿದೆ, 18 ವರ್ಷವಾಯಿತು. ಇಲ್ಲವೇ ಸರ್ಕಾರ ಮಧ್ಯ ಪ್ರವೇಶ ಮಾಡಿ, ರೈತರನ್ನು ಮತ್ತು ಅವರನ್ನು ಕುಳ್ಳಿರಿಸಿ ಮಾತನಾಡಿ ಏನು ಮಾಡಬೇಕು ಎಂದು ಚರ್ಚೆ ಮಾಡಬೇಕು. 18 ವರ್ಷಗಳಿಂದ ಅವರು ಭೂಮಿಯನ್ನು ಮಾರುವ ಆಗಿಲ್ಲ, ಅಭಿವೃದ್ಧಿ ಮಾಡುವ ಆಗಿಲ್ಲ. ಕೋರ್ಟ್‌ನಲ್ಲಿ ತೀರ್ಪು ಬರುವವರೆಗೆ ಹೊರಗಡೆಗೆ ಬರುವ ಆಗಿಲ್ಲ. ಸರ್ಕಾರ ಮಾತನಾಡುವ ಆಗಿಲ್ಲ, ಮಾನ್ಯ ಖೇಣಿಯವರು ಅಲ್ಲಿದ್ದಾರೆ. ಸರ್ಕಾರ ಇಲ್ಲಿದೆ, ಕೂಗಾಡುತ್ತೇವೆ, ಜಗಳ ಕಾಯುತತೇವೆ, ಮನೆ ಸೇರಿಕೊಳ್ಳುತ್ತೇವೆ. ಆದರೆ, ಆ ರೈತರ ಗತಿಯೇನು?

**ಶ್ರೀ ಅಶೋಕ್ ಖೇಣಿ:** ಮಾನ್ಯ ಉಪಾಧ್ಯಕ್ಷರೆ, ಪುಟ್ಟಣ್ಣಯ್ಯನವರು ಹೇಳಿರುವುದು correct ಆಗಿದೆ. 85% ಜನರು ಭೂಮಿಗೆ consent ಕೊಟ್ಟಿದ್ದಾರೆ. ಮಾನ್ಯ ಪುಟ್ಟಣ್ಣಯ್ಯನವರಿಗೆ ಗೊತ್ತಿದೆ. ಸರ್ಕಾರ ಏಕೆ ಮಾಡಿಕೊಡುತ್ತಿಲ್ಲವೆಂದು ಸರ್ಕಾರವೇ answer ಕೊಡಬೇಕು.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಇಲ್ಲ ನೀವು ಹಾಗೂ ಸರ್ಕಾರ ಇಬ್ಬರೂ ಕುಳಿತುಕೊಂಡು ಮಾತನಾಡಿ. ರೈತರನ್ನೂ ಕರೆಯಿರಿ, ಮಧ್ಯವರ್ತಿಗಳಾರು ಬೇಡ. ರೈತರನ್ನೇ ಕರೆದು ಮಾತನಾಡಿ. ರೈತರು ಹಾಗೂ ನೀವಿಬ್ಬರೂ ತೀರ್ಮಾನ ಮಾಡಿ ಸರ್ಕಾರದ ಮುಂದೆ ಹೇಳಿ.

**ಶ್ರೀ ಅಶೋಕ್ ಖೇಣಿ:** ಮಾನ್ಯ ಪುಟ್ಟಣ್ಣಯ್ಯನವರೆ, ಒಂದು ಒಂದೂವರೆ ವರ್ಷದಿಂದ ಸರ್ಕಾರ . .

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಯಾವ ರಾಜಕೀಯ ಪಕ್ಷದ ರಾಜಕಾರಣೆಯೂ ಬೇಡ, ಯಾರೂ ಬೇಡ. ರೈತರು ಹಾಗೂ ನೀವೇ ಮಾತನಾಡಿ.

**ಶ್ರೀ ಅಶೋಕ ಖೇಣಿ:** ಸರ್ಕಾರ ಒಂದು ಮೀಟಿಂಗ್ ಮಾಡುವುದಕ್ಕೆ ರೆಡಿಯಿಲ್ಲ. ಒಂದೂವರೆ ವರ್ಷಗಳಾಗಿವೆ. . . .

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಇವರೂ ಹಾಗೆಯೇ ಇರುವುದು. ಸರ್ಕಾರವೂ ಹಾಗೆಯೇ ಇರುವುದು. ರೈತರ ಗತಿಯೇನು? ಅವರು ಏನು ಮಾಡಬೇಕು? ಅರೆ ಅವರು ಮಾರುವ ಆಗಿಲ್ಲ, ಅಭಿವೃದ್ಧಿ ಮಾಡುವ ಆಗಿಲ್ಲ, ಅವರ ಬದುಕನ್ನು ಯಾರು ನೋಡುತ್ತಾರೆ? ಯಾರು ಮಾಡಬೇಕು? ಇದರಿಂದ ಇದರ ಬಗ್ಗೆ ಆಲೋಚನೆ ಮಾಡಬೇಕು. ಇದು ಮಾನ್ಯ ಖೇಣಿಯವರ ಪ್ರಶ್ನೆಯಲ್ಲ, ಇಲ್ಲವೇ ಸರ್ಕಾರದ ಪ್ರಶ್ನೆಯಲ್ಲ. ಇದು ರೈತರ ಪ್ರಶ್ನೆಯಾಗಿದೆ. 18 ವರ್ಷಗಳಿಂದ ಮೌನವಾಗಿದ್ದೀರಿ ಎಂದರೆ ರೈತರ ಗತಿ ಏನು, ರೈತರನ್ನು ಯಾರು ರಕ್ಷಣೆ ಮಾಡಬೇಕು? ಈ ವಿಷಯವನ್ನು ಗಂಭೀರವಾಗಿ ಆಲೋಚನೆ ಮಾಡುವುದು ಮುಖ್ಯ ಎರಡನೆಯದಾಗಿ ಕೃಷಿ ಭೂಮಿಯನ್ನು ಕೃಷಿ ಬ್ಯಾಂಕ್ (Land bank) ಎಂದು ಮಾಡಿದ್ದೀರಿ ಇದು ಎಲ್ಲಾದರೂ ಉಂಟೆ? ಭೂಮಿಗೆ ಒಂದು ಬ್ಯಾಂಕ್ ಮಾಡುತ್ತೇವೆಂದರೆ ಏನರ್ಥ? ಕೈಗಾರಿಕೆಗಳಿಗೆ ಯಾವ ರೀತಿ ಭೂಮಿ ಮತ್ತು ಮೂಲಭೂತ ಸೌಕರ್ಯಗಳಿಗೆ ಯಾವ ರೀತಿ ಭೂಮಿ ಎಂದು ಎರಡು ಭಾಗ ಮಾಡಿ. ಯಾರು ಭೂಮಿಯ ವಂಶವೃಕ್ಷವನ್ನು ಬರೆದಿದ್ದಾರೆಂದು ನಾನು ಪ್ರಶ್ನೆ ಮಾಡುತ್ತೇನೆ. ಜೋಳವನ್ನು ಎರಡು ವರ್ಷ ಇಟ್ಟುಕೊಂಡರೆ ಹಳೆ ಜೋಳಕ್ಕೆ ಎಷ್ಟು ಬೆಲೆ ಆಗುತ್ತದೆ? ಹೊಸ ಜೋಳಕ್ಕೆ 1,000 ರೂ.ಗಳೆಂದರೆ ಒಂದು ಕ್ವಿಂಟಲ್ ಹಳೆ ಜೋಳಕ್ಕೆ 2,500 ರೂ.ಗಳು. ನನ್ನ ಭೂಮಿ ಸುಮಾರು 200 ವರ್ಷಗಳಿಂದ ಬಂದಿದೆ ಅದರಲ್ಲಿ ಐದು ಜನರು ಬದುಕಿದ್ದೇವೆ. ನನ್ನ ಭೂಮಿಯನ್ನು ನೀವು ಪಡೆಯಬೇಕಾದರೆ ನನ್ನ ಐದು ಜನರ ಬದುಕನ್ನು, ಕನಸನ್ನು ಕೇವಲ ಒಂದು ಗಂಟೆಯಲ್ಲಿ 4(1), 6(1) ನಲ್ಲಿ ತೆಗೆದುಕೊಳ್ಳುತ್ತೇವೆಂದರೆ ಆ ಭೂಮಿಯ ಜ್ಞಾನ ಸರ್ಕಾರಕ್ಕಿದೆಯೇ? ಯಾವ ಅಧಿಕಾರಿಗಳಿಗೆ ಭೂಮಿ ಜ್ಞಾನವಿದೆ? ಭೂಮಿಗೆ

ಯಾವ ಮಾನದಂಡದ ಮೇಲೆ ಬೆಲೆಯನ್ನು ನಿಗದಿ ಮಾಡುತ್ತೀರಿ? ದಯವಿಟ್ಟು ಈ ವಿಚಾರವನ್ನು ಸ್ವಲ್ಪ ಆಲೋಚನೆ ಮಾಡಬೇಕು. ಸರ್ಕಾರಗಳಿಗೆ ಭೂಮಿ ಜ್ಞಾನವಿಲ್ಲ, ಬೆಲೆ ನೀತಿ ಜ್ಞಾನವಿಲ್ಲ. ಹಳ್ಳಿಯಿಂದ ರೈತರು ಗುಳೆ ಹೋಗುತ್ತಿದ್ದಾರೆ, ಅವರನ್ನು ರಕ್ಷಣೆ ಮಾಡುವ ಜ್ಞಾನವಿಲ್ಲ, ಬರಗಾಲದ ಬಗ್ಗೆ ಯಾವುದೇ ನೀತಿಯಿಲ್ಲ. ಬರಗಾಲದ ಬಗ್ಗೆ ಯಾವುದಾದರೂ ಒಂದು ನೀತಿಯಿದೆಯೇ? ಬರಗಾಲದಲ್ಲಿ ರೈರು ಗೋವಾ ಮತ್ತು ಇತರೆ ಕಡೆಗಳಿಗೆ ಗುಳೆ ಹೋಗಿ ಫುಟ್‌ಪಾತ್ ಮೇಲೆ ಮಲಗಿದ್ದಾರೆ, ಅವರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ರೈತರಿಗೆ ಒಂದು ಮೆಸೆಜ್ ಕೊಡುತ್ತದೆಯೇ, 65% ಈ ದೇಶಕ್ಕೆ ಅನ್ನ ಕೊಡುವಂತಹ ಖುಷ್ಕಿ ಪ್ರದೇಶದ ರೈತರು ತನ್ನ ವಯಸ್ಸಾದ ತಂದೆ-ತಾಯಿಗಳನ್ನು ಬಿಟ್ಟು ಹನ್ನೊಂದು ತಿಂಗಳು ಗುಳೆ ಹೋಗುತ್ತಾರೆಂದರೆ ಇದರ ಬಗ್ಗೆ ನಾವೇನಾದರೂ ಯೋಚನೆ ಮಾಡಿದ್ದೇವೆಯೇ? ಹುಡಗಾಟಕ್ಕೋಸ್ಕರ ಭಾಷಣ ಮಾಡುವುದಕ್ಕೆ ನಾವ್ಯಾರು ಇಲ್ಲಿ ಬಂದಿಲ್ಲ. ಸಂಪೂರ್ಣ ಬರಗಾಲವನ್ನು ರಕ್ಷಣೆ ಮಾಡುವುದಕ್ಕೆ ಒಂದು ರೂಪಾಯಿ ವ್ಯಾಟ್ ಅನ್ನು ಹೆಚ್ಚು ಮಾಡಿ ಎಂದು ನಾನು ಮುಖ್ಯಮಂತ್ರಿಯವರನ್ನು ಕೇಳಿದೆ. 25,000 ಸಾವಿರ ಕೋಟಿ ರೂ.ಗಳ ಹಣ ಸಂಗ್ರಹಣೆ ಮಾಡಿ, ವಿಧಾನಸೌಧದ ಮುಂದೆ ಬೋರ್ಡ್ ಹಾಕಿ, ಯಾರು ಗುಳೆ ಹೋಗಬಾರದು, ನಿಮ್ಮ ಸಂಪೂರ್ಣ ಬದುಕನ್ನು ರಕ್ಷಣೆ ಮಾಡುವಂತಹ ಆರ್ಥಿಕ ನೆರವಿಗೆ ನಾವು ಸಿದ್ಧರಿದ್ದೇವೆ ದಯವಿಟ್ಟು ಯಾವುದೇ ರೈತರು ಗುಳೆ ಹೋಗಬಾರದು, ನಿಮ್ಮ ಯಾವುದೇ ನಷ್ಟಕ್ಕೆ ನಾವು ಹೊಣೆಗಾರರಾಗಿರುತ್ತೇವೆಂದು ಒಂದು ಶಬ್ದವನ್ನು ಈ ವಿಧಾನಸೌಧದಿಂದ, ಪಾರ್ಲಿಮೆಂಟ್‌ನಿಂದ ನೀವು ಹೇಳಿ. Drought ಬಂದ ತಕ್ಷಣ ಕೇಂದ್ರ ಸರ್ಕಾರಕ್ಕೆ ಬರೆಯುತ್ತೀರಿ. ಅವರಿಗೆ ಮೂರು ಸಾವಿರ ಕೋಟಿ ರೂ.ಗಳ ಪ್ರಸ್ತಾವನೆ ಕೊಡಬೇಕು. ಅವರು 500 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರಕ್ಕೆ ಕೊಡುತ್ತಾರೆ. ನಾವು ಆರ್ಥಿಕವಾಗಿ ಯಾವ ವರ್ಗವನ್ನು ರಕ್ಷಣೆ ಮಾಡಬೇಕು. 2-3 ವರ್ಷದ ಮಕ್ಕಳನ್ನು ಫುಟ್‌ಪಾತ್ ಮೇಲೆ ಮಲಗಿಸಿಕೊಂಡು ಮಲಗಿರುವುದನ್ನು ನೋಡಿದರೆ ದುಃಖವಾಗುತ್ತದೆ. ಯಾವ ಹೋಟೆಲ್ ಸಪ್ಲೈಯರ್ ಅನ್ನು ಕೇಳಿದರು ಹಳ್ಳಿಯಲ್ಲಿ 3-4 ಎಕರೆ

ಗದ್ದೆಯಿದೆ, ಹೊಲವಿದೆಯೆಂದು ಹೇಳುತ್ತಾರೆ ನೋಡಿದರೆ ಹೋಟೆಲ್‌ನಲ್ಲಿ ಎಂಜಲು ಲೋಟವನ್ನು ತೊಳೆಯುತ್ತಿರುತ್ತಾರೆ. ಕೊನೆಪಕ್ಷ ಹೋಟೆಲ್‌ನಲ್ಲಿ ಎಂಜಲು ಲೋಟ ತೊಳೆಯುವವರಿಗೆ ಟಿಪ್ಸ್ ಆದರೂ ಫಿಕ್ಸ್ ಮಾಡಿ, ಅಮೇರಿಕಾ ಪ್ರವಾಸ ಹೋಗಿದ್ದಾಗ ಐದು ಜನರಿಗೆ ಅನ್ನ ಕೊಟ್ಟ ನಂತರ service charge 10 ಡಾಲರ್ ಎಂದು ಬರೆದಿದ್ದರು. ಇಲ್ಲಿ service charge ಎಲ್ಲಿದೆ? ಮಸಾಲೆದೋಸೆಗೆ 15 ರಿಂದ 25 ರೂ.ಗಳಾದರೂ ಕೊಡುತ್ತೇವೆ, service charge ಅನ್ನು ಏಕೆ ಫಿಕ್ಸ್ ಮಾಡಬಾರದು? ಕಾರ್ಮಿಕ ಸಚಿವರೆ service charge ಅನ್ನು ಫಿಕ್ಸ್ ಮಾಡಿ, ಹಳ್ಳಿಯಿಂದ ಬಂದಿರುವ ಬಡವರ ಮಕ್ಕಳು ನಗರ ಪ್ರದೇಶದಲ್ಲಿನ ಹೋಟೆಲ್‌ಗಳಲ್ಲಿ ಕೆಲಸ ಮಾಡುವವರಿಗೆ 10, 15 ರೂ.ಗಳ ಟಿಪ್ಸ್ ಫಿಕ್ಸ್ ಮಾಡಿಕೊಡಿ. ಆತ ಅವನ ತಂದೆ-ತಾಯಿಗೆ ಹಣವನ್ನು ಕಳುಹಿಸಿಕೊಡುತ್ತಾನೆ. ಈ ರೀತಿ ಮಾಡಿದ್ದೀರಾ? ಸರ್ಕಾರವೆಂದರೆ ಯಾರಿಗೋಸ್ಕರ ಇರುವುದು, 10 ಡಾಲರ್ ಸೇವಾ ತೆರಿಗೆ ಎಂದು ಅಮೇರಿಕಾದಲ್ಲಿದೆ. ಇಲ್ಲಿ ಎಲ್ಲಿದೆ? ನೀವು ದಯವಿಟ್ಟು ಮತ್ತೊಂದು ಹೊಸ ಕಾನೂನನ್ನು ಮಾಡಬೇಕು. ತಮ್ಮ ವಿಷಯ ನನಗೆ ಗೊತ್ತಿಲ್ಲ, ನನಗಂತು ಶುಗರ್ ಇದೆ. ಹೋಟೆಲ್‌ಗಳಲ್ಲಿ ಶುಗರ್‌ಲೆಸ್ ಕಾಫಿ ಕೊಡು ಎಂದರೆ ಸಕ್ಕರೆಯನ್ನು ಇಟ್ಟುಕೊಂಡು ಕಾಫಿ ಕೊಡುತ್ತಾನೆ ನಮಗ್ಯಾಕೆ ಮೂರು ರೂ.ಗಳನ್ನು ಕಡಿಮೆ ಮಾಡುವುದಿಲ್ಲ? sugar less ರವರಿಗೆ ಒಂದು ರೀತಿ, with sugar ರವರಿಗೆ ಒಂದು ರೀತಿ ಬೆಲೆಯನ್ನು ಫಿಕ್ಸ್ ಮಾಡಬೇಕು. ಅವನು ಸಕ್ಕರೆ ಉಳಿಸಿಕೊಳ್ಳುತ್ತಾನೆ ಜೊತೆಗೆ ನನ್ನಿಂದ ಹೆಚ್ಚು ಹಣವನ್ನು ಪಡೆಯುತ್ತಾನೆ. ಇನ್ನು ಮುಂದೆ ಎರಡು ರೀತಿಯಾದ ಕಾಫಿ ಮಾಡಬೇಕು. Sugar less coffee ಗೆ 12 ರೂ.ಗಳು ಮತ್ತು with sugar coffee ಗೆ 13 ರೂ.ಗಳೆಂದು ಮಾಡಬೇಕು. ಸಕ್ಕರೆಯನ್ನು ಇಟ್ಟುಕೊಂಡು ನನ್ನ ಬಳಿ 13 ರೂ.ಗಳನ್ನು ತೆಗೆದುಕೊಳ್ಳುವುದು ಎಷ್ಟು ಸರಿ.

ಶ್ರೀ ಆರ್. ನರೇಂದ್ರ: ಪುಟ್ಟಣ್ಣಯ್ಯನವರೆ ಬ್ಲಾಕ್ ಟೀ ಕುಡಿಯುವವರಿಗೆ ಹಾಲು ಕೂಡ ಹಾಕುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಬ್ಲ್ಯಾಕ್ ಟೀಗೆ ಇನ್ನೂ ಕಡಿಮೆ ಮಾಡಬೇಕು. ನೀರಾವರಿ ಬಗ್ಗೆ ಹೇಳಿದರೆ, ಕಾನೂನು ಮಂತ್ರಿಗಳೇ ನೀವು ಸರ್ಕಾರವನ್ನು ನಡೆಸುತ್ತಿದ್ದೀರಿ ತಮ್ಮ ಭಾಷಣದಲ್ಲಿ ಯಾವುದಾದರೂ ಒಂದು ಆದ್ಯತಾ ವಲಯ ಇದೆಯೇ? ಯಾವುದಾದರೂ ಒಂದನ್ನು ಆದ್ಯತಾ ವಲಯ ಮಾಡಿ. ಕರ್ನಾಟಕದಲ್ಲಿ ಇಷ್ಟು ಟಿ.ಎಂ.ಸಿ ಅಂತರ್ಜಲ ಕಡಿಮೆಯಿದೆ ಈ ಅಂತರ್ಜಲವನ್ನು ಕೂಡಿ ಹಾಕುವುದಕ್ಕೆ ಸರ್ಕಾರ ಎರಡು ವರ್ಷಗಳಲ್ಲಿ ಒಂದು ದೊಡ್ಡ plan ಮಾಡಿದೆಯೆಂದು ಮಾಡಿ. ಕರ್ನಾಟಕದಲ್ಲಿ ಎಷ್ಟು ಬೇಕೆಂದು ನಾನು ಕೇಳುತ್ತೇನೆ. ಕರ್ನಾಟಕದಲ್ಲಿ 65 ಲಕ್ಷ ಎಕರೆ, 30 ಲಕ್ಷ ಪಂಪ್‌ಸೆಟ್, ಕುಡಿಯುವ ನೀರಿಗೆ ಅಂತರ್ಜಲ ಬೇಕು, ಜೂನ್, ಜುಲೈ ಮತ್ತು ಆಗಸ್ಟ್ ಈ ಮೂರು ತಿಂಗಳಲ್ಲಿ ಎಷ್ಟು flood excess ಬರುತ್ತದೆಂದು assessment ಮಾಡಿಸಿದ್ದೀರಾ? ನೀರಿಲ್ಲವೇ, ನೀರು ಏಕಿಲ್ಲ, ಜೂನ್, ಜುಲೈ ಮತ್ತು ಆಗಸ್ಟ್ ಈ ಮೂರು ತಿಂಗಳಲ್ಲಿ highest flood ಬರುತ್ತದೆ. ಉದಾಹರಣೆಗೆ ತಮಿಳುನಾಡಿನಿಂದ 23 ಟಿ.ಎಂ.ಸಿ ನೀರನ್ನು ಸಮುದ್ರಕ್ಕೆ ಬಿಟ್ಟಿದ್ದೇವೆ. ನೀರನ್ನು ನೀವು ಇಟ್ಟುಕೊಳ್ಳಲಿಲ್ಲ, ನಾವು ಇಟ್ಟುಕೊಳ್ಳಲಿಲ್ಲ. 23 ಟಿ.ಎಂ.ಸಿ ನೀರನ್ನು diversion ಮಾಡಿ excess water ಅನ್ನು ಕೆರೆಗಳಿಗೆ dump ಮಾಡಿದ್ದರೆ ಉಪಯೋಗವಾಗುತ್ತಿತ್ತು. ಈ ಬಗ್ಗೆ ಏನಾದರೊಂದು paln ಮಾಡಿ. 30 ಲಕ್ಷ ಪಂಪ್‌ಸೆಟ್ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? 900 ಟಿ.ಎಂ.ಸಿ ನೀರನ್ನು ಕೃಷ್ಣಾದಲ್ಲಿ ಬಳಕೆ ಮಾಡಿಕೊಳ್ಳದಿರುವುದರಿಂದ ಆಗಿರುವ ನಷ್ಟ ಎಷ್ಟೆಂದು ಗೊತ್ತೆ? ಅಮೆರಿಕಾದಲ್ಲಿನ over dam ಅನ್ನು ನಾಲ್ಕೇ ವರ್ಷಕ್ಕೆ ಕಟ್ಟಿದರೆಂದು ನಾನು ಈ ಸದನದಲ್ಲಿ ಈಗಾಗಲೇ ಹೇಳಿದ್ದೇನೆ. ಕಾರಣವೇನೆಂದರೆ ಅವರು investment ಲೆಕ್ಕ ಹಾಕುತ್ತಾರೆ, 10,000 ಕೋಟಿ ಹಣವನ್ನು ಈ ಡ್ಯಾಂ ಕಟ್ಟುವುದಕ್ಕೆ ಕೊಟ್ಟಿದ್ದೇನೆ ತ್ವರಿತವಾಗಿ ಭೂಮಿಗೆ ನೀರಿಲ್ಲದಿದ್ದರೆ ಎಷ್ಟು ನಷ್ಟವಾಗುತ್ತದೆಂದು ಲೆಕ್ಕಾಚಾರ ಮಾಡುತ್ತಾರೆ. ಆದರೆ ನಾವು 50 ವರ್ಷಗಳಾಗಿದೆ ಇನ್ನೂ 350 ಟಿ.ಎಂ.ಸಿ ನೀರನ್ನು ಬಳಸಿಕೊಂಡಿಲ್ಲ, 10,000 ಕೋಟಿ ರೂ.ಗಳ ಹಣ ಇಟ್ಟಿದ್ದೇವೆ, ಈ ಹಿಂದೆ 3,000 ಕೋಟಿ ಆಗಿತ್ತು ಈಗ SR rate ನಲ್ಲಿ 10,000 ಕೋಟಿ ರೂ.ಗಳಾಗಿದೆ. ಇವತ್ತು ಬೆಲೆ

ಜಾಸ್ತಿಯಾಗಿರುವುದರಿಂದ ನೀವು ನೀರಾವರಿಗೆ 10,000 ಕೋಟಿ ರೂ.ಗಳನ್ನು ಕೊಟ್ಟರೆ ಅದು ಯಾವ ಮೂಲೆಗೆ ಆಗುತ್ತದೆ? ಅಭಿವೃದ್ಧಿ ಕಾರ್ಯಕ್ರಮಗಳು ಯಾವ್ಯಾವುದಿದೆಯೋ ಅವುಗಳನ್ನು ನಿಲ್ಲಿಸಿ ನೀರಾವರಿಗೆ 20,000 ಕೋಟಿ ರೂ.ಗಳನ್ನು ಕೊಡಿಯೆಂದು ನಾನು ಮುಖ್ಯಮಂತ್ರಿಗಳಿಗೆ ಹೇಳಿದೆ. ನೀವು ಇಷ್ಟು ಡ್ಯಾಂ, ಇಷ್ಟು ಚಾನಲ್ ಮಾಡಿ ಇಷ್ಟು ಹಣ ಖರ್ಚು ಮಾಡಿರುವುದಕ್ಕೆ interest ಹೇಗೆ ಬರುತ್ತದೆ? ಪ್ರಕೃತಿ ಕೊಡುವ ನೀರನ್ನು ನಾವು ಬಳಕೆ ಮಾಡಿಕೊಳ್ಳುವುದಕ್ಕೆ ಬಚಾವತ್ ಆಯೋಗದ ಪ್ರಕಾರ 2005ನೇ ಇಸವಿಗೆ ಮುಗಿಯಬೇಕಾಗಿತ್ತು ಇವತ್ತಿಗೆ ಎಷ್ಟು ವರ್ಷ ಆಯಿತು? 10 ವರ್ಷ ಆಗಿದೆ, 350 ಟಿ.ಎಂ.ಸಿ ನೀರನ್ನು ಬಳಸಿಕೊಳ್ಳಬೇಕಾದರೆ ನಮಗೆ ಇನ್ನೂ 10 ವರ್ಷಗಳು ಬೇಕಾಗುತ್ತದೆ. ನೀರು ಬಳಸುವುದಿರಲಿ, ಉತ್ತರ ಕರ್ನಾಟಕದಲ್ಲಿ black soil ಅನ್ನು ಸಂಪೂರ್ಣ ನಾಶವಾಗಿದೆ. Black sopil ಅನ್ನು ಸಂಪೂರ್ಣವಾಗಿ ಉಳಿಸುವುದರಲ್ಲಿ utterly failure, ನೀರಾವರಿ ಎಂದರೆ ಡ್ಯಾಂ ಕಟ್ಟುವುದು ಚಾನಲ್ ಮಾಡುವುದು, ತೂಬು ನೀಡುವುದು, ಇಂಜಿನಿಯರ್ ನೀರು ಬಿಡುವುದು ಇಷ್ಟೆ ಎಂದು ನಾವು ತಿಳಿದುಕೊಂಡಿದ್ದೇವೆ, ನಮಗೆ ಗೊತ್ತಿರುವುದು ಇಷ್ಟೆ. ಬೆಳೆ ನೀತಿಯಿಲ್ಲ. ಬೆಲೆ ನೀತಿಯಿಲ್ಲ, water maintenance ಯಾವುದು ಇಲ್ಲ. ಏನೆಂದರೆ ಏನು ಇಲ್ಲ. ಮಂಡ್ಯದಲ್ಲಿ 15 ಟಿ.ಎಂ.ಸಿ ನೀರು ವ್ಯರ್ಥವಾಗುತ್ತಿದೆಯೆಂದು ನಾನು ಮೂರು ಬಾರಿ ಭಾಷಣ ಮಾಡಿದ್ದೇನೆ. ಈ 15 ಟಿ.ಎಂ.ಸಿ ನೀರನ್ನು ಉಳಿಸಿದರೆ ಸಾಕು. Semi dry crops success ಆಗಿರುವುದು ಈ ಸರ್ಕಾರದಲ್ಲಿ ಯಾವುದಿದೆಯೆಂದು ನೀರಾವರಿ ಮಂತ್ರಿಗಳಿದ್ದರೆ ಹೇಳಿ. ನಾವು ಬೆಳೆಯುತ್ತಿರುವ Semı dry crops ನಲ್ಲಿ ಯಾವುದಾದರೊಂದು project successs ಆಗಿದೆಯೇ? ಸಾಧ್ಯವೇ ಇಲ್ಲ. Semi dry crops ಎಂದು ನೀವು ಹೇಳಿದ ತಕ್ಷಣ drip ırrigation sprinkler irrigation ಘೋಷಣೆ ಆಗಿಬಿಡುತ್ತದೆ. ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಮಾಡುವುದಕ್ಕಾಗುವುದಿಲ್ಲ. ಇವತ್ತು ಹೇಮಾವತಿಯಲ್ಲಿ ಮಾಡಿದ್ದೇವೆ.

**ಉಪಾಧ್ಯಕ್ಷರು:** Conclude ಮಾಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ 10 ನಿಮಿಷ ಮಾತನಾಡುತ್ತೇನೆ. ಹಿರಿಯ ಮಂತ್ರಿಗಳು ತಾವಿದ್ದೀರಿ Semi dry crop pattern ನಲ್ಲಿ ನಾವು ಡ್ಯಾಂ ಕಟ್ಟಿ ನೀರು ಕೊಟ್ಟಿರುವುದರಲ್ಲಿ success ಆಗಿರುವುದು ಯಾವುದೆಂದು ಒಂದೇ ಒಂದು ಹೇಳಲಿ. ಯಾವುದೆಂದು ನೀರಾವರಿ ಮಂತ್ರಿಗಳು ಹೇಳಿದರೆ ಅವರ ಕಾಲಿನ ಕೆಳಗೆ ನುಗ್ಗಿಬಿಡುತ್ತೇನೆ. ಯಾವುದು ಆಗುತ್ತಿಲ್ಲ ಕಾರಣವೇನೆಂದರೆ ಅದು ಆಗುವುದಿಲ್ಲ. ಏನಿದ್ದರು ನೀವು ವೈಜ್ಞಾನಿಕ ನೀರಾವರಿ ಬಗ್ಗೆ ಯೋಚನೆ ಮಾಡಬೇಕು. ವೈಜ್ಞಾನಿಕವಾಗಿ ನೀವು ಆಲೋಚನೆ ಮಾಡದಿದ್ದರೆ ನೀರನ್ನು ಹೇಗೆ ಬಳಕೆ ಮಾಡುವುದಕ್ಕೆ ಸಾಧ್ಯ? ಬಳಕೆ ಮಾಡುವುದಕ್ಕೆ ನೀರಿಲ್ಲವೇ? ನೀರು ಬೇಕಾದಷ್ಟು ಇದ್ದು ಬಳಕೆ ವಿಧಾನ ಸರಿಯಿಲ್ಲ. ನಾನು ಅಮೇರಿಕಾ ದೇಶಕ್ಕೆ ಹೋದಾಗ, ಅಲ್ಲಿ 35 ಅಡಿ ಒಳಗೆ ನೀರು ಸಿಗುತ್ತದೆ: ಆದರೆ ಅದು ಸಂಪೂರ್ಣ ವೈಜ್ಞಾನಿಕವಾದ ನೀರು. ಇದಕ್ಕೆ ಕಾರಣವೇನೆಂದರೆ ಮಣ್ಣು ಮತ್ತು ನೀರನ್ನು ಸಂಪೂರ್ಣವಾಗಿ ರಕ್ಷಣೆ ಮಾಡಬೇಕು. ಈ ದೇಶದಲ್ಲಿ ಮೂರು slogans ಪ್ರಾರಂಭ ಮಾಡಬೇಕಾಗಿದೆ "SAVE WATER, SAVE POWER, SAVE SOLI" ಎಂದು ಇಡೀ ದೇಶದಲ್ಲಿ ಘೋಷಣೆಯಾಗಬೇಕಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀರಿದ್ದು, ಒಳ್ಳೆಯ ಭೂಮಿಯಿದ್ದು, ಇಷ್ಟೊಂದು ಫಲವತ್ತೆಯಲ್ಲಿ ಇರುವಂತಹ ಭೂಮಿಯನ್ನು ವೈಜ್ಞಾನಿಕವಾಗಿ ರಕ್ಷಣೆ ಮಾಡುವುದಕ್ಕಾಗುವುದಿಲ್ಲವೇ? ರಕ್ಷಣೆ ಮಾಡಿ. ಪ್ರಗತಿ ತಾಲ್ಲೂಕಿನಲ್ಲಿಯೂ ಸಂಬಂಧಿಸಿದ ಒಂದು ಕಮಿಟಿಯನ್ನು ರಚನೆ ಮಾಡಿ.

ಶ್ರೀ ಅಪ್ಪಾಜಿ ನಾಡಗೌಡ: ಇಲ್ಲಿಯವರೆಗೂ ನಿಮ್ಮ ಮಾತನ್ನು ಕೇಳಿಸಿಕೊಂಡಿರುತ್ತೇನೆ. ಮೂಲಭೂತವಾಗಿ ಇದನ್ನು ಯಾರು ಮಾಡಬೇಕು?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಜನ ಮತ್ತು ಸರ್ಕಾರ.

ಶ್ರೀ ಅಪ್ಪಾಜಿ ನಾಡಗೌಡ: ಈಗ ಸರ್ಕಾರ ಮಾಡಬೇಕಾಗಿರುವ ಕರ್ತವ್ಯ ಸರ್ಕಾರ ಮಾಡುತ್ತಿದೆ. ತಾವು ಹೇಳಿದ ಹಾಗೆ, light irrigation ಯಾವುದು, medium irrigation ಯಾವುದು ಮತ್ತು heavy irrigation ಯಾವುದು

ಎಂದು crop pattern ಮೇಲೆಯೇ ಡ್ಯಾಮ್ ಕಟ್ಟುವ ಸಂದರ್ಭದಲ್ಲಿ ನೋಟಿಫೈ ಮಾಡುತ್ತಾರೆ. ರೈತರಾದ ನಾವು ಪಾಲನೆ ಮಾಡುವುದೂ ಸಹ ನಮ್ಮ ಕೆಲಸವಲ್ಲವೇ? ಆದರೆ ನಾವು ಅದನ್ನೆವನ್ನು ಗಾಳಿಗೆ ತೂರಿ ಮನಸ್ಸಿಗೆ ಬಂದಂತೆ ಬಳಕೆ ಮಾಡುವುದಕ್ಕೆ ಹೋದರೆ, ಅವರನ್ನು educate ಮಾಡುವವರ್ಯಾರು? ಅವರನ್ನು ಹತೋಟಿಗೆ ತರುವವರ್ಯಾರು? ನಿಮ್ಮಂತಹವರು ಹತೋಟಿಗೆ ತರಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಪ್ರಾಥಮಿಕ ಶಿಕ್ಷಣಕ್ಕೆ ಕೊನೆ ಯಾವುದು?

ಶ್ರೀ ಬಿ.ಎ. ಮೊಹಿಯೂದ್ದೀನ್ ಭಾವಾ: ಪುಟ್ಟಣ್ಣಯ್ಯ ಅವರೆ, ಕೆಲವು ಕಡೆ ದೇಶೀ ವ್ಯವಸ್ಥೆಯನ್ನು ಬಳಸಬೇಕೆಂದು ಮತ್ತು ಇನ್ನೂ ಕೆಲವು ಕಡೆ ಅಮೇರಿಕ ವ್ಯವಸ್ಥೆಯನ್ನು ನೋಡಬೇಕೆಂದ ಹೇಳುತ್ತೀರಿ. ಯಾವುದನ್ನು ಬಳಸಬೇಕೆಂದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಸನ್ಮಾನ್ಯ ಸ್ನೇಹಿತರೆ, ನಾನು ಒಂದು ಪ್ರಶ್ನೆಯನ್ನು ಮಾಡುತ್ತೇನೆ. After independence ಈ ದೇಶದ ಆಡಳಿತಕ್ಕೆ ಆಡಳಿತ ಮಾಡಿದವರ್ಯಾರು? ಯಾವುದನ್ನು ಆಧ್ಯತಾವಲಯವೆಂದು ಘೋಷಣೆ ಮಾಡಿದ್ದೀರಿ? ಒಂದೇ ಒಂದು ಪ್ರಾಕೃತಿಕ ಸಂಪತ್ತನ್ನು ಸಂಪೂರ್ಣವಾಗಿ ಸಾರ್ವಜನಿಕರು ಬಳಕೆ ಮಾಡುವಂತಹ ನೀತಿ, ಅದೇ ಗುರಿ. ಭಾರತ ದೇಶಕ್ಕೆ ಬೇಕಾದಂತಹ ಸಂಪೂರ್ಣ ವಿದ್ಯುತ್ತನ್ನು ಉತ್ಪಾದನೆ ಮಾಡುವಂತಹ ಸಮಗ್ರ ಕ್ಷೇತ್ರವನ್ನು ರಕ್ಷಣೆ ಮಾಡುತ್ತೇವೆನ್ನುವ ಗುರಿ, ಯಾವುದಿದೆ ಗುರಿ? ಜಾತಿ ಮತ್ತು ದುಡ್ಡು ಎರಡೇ ಗುರಿ. ಎಷ್ಟು ಸಮಾಜವನ್ನು ಒಡೆದು ಹಾಕುವುದಕ್ಕೆ ಸಾಧ್ಯವೋ ಅಷ್ಟು ಒಡೆದು ಹಾಕಿದ್ದೇವೆ. Caste, Cash and corruption ಇವು ಮೂರು ಒಂದು ನಾಣ್ಯದ ಮುಖಗಳು. Cause ಏನಿದೆ ಅದು ಗೊಮ್ಮಟೇಶ್ವರನ ರೀತಿ ದಿಗಂಬರವಾಗಿದೆ. ಆ ಸುದ್ಧಿ ಮಾತನಾಡಿದರೆ ಇವರಿಗೆ ಬುದ್ಧಿ ಕೆಟ್ಟು ಹೋಗಿದೆಯೆಂದು ಹೇಳುತ್ತಾರೆ. ಯಾರು ಕೆಡಿಸಿದ್ದಾರೋ_ ಅಥವಾ ಕೆಡಿಸಿಲ್ಲವೋ ಎನ್ನುವುದು ಬೇರೆ ಪ್ರಶ್ನೆ.

**ಶ್ರೀ ವೈ.ಎನ್. ರುದ್ರೇಶ್‌ಗೌಡ:** ವಿಧಾನಸೌಧದಲ್ಲಿ ಕುಳಿತುಕೊಳ್ಳಬೇಕೆಂದರೆ ಹಣ ಕೊಟ್ಟರೆ ಮಾತ್ರ ಸಾಧ್ಯ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಅದನ್ನು ಮಾಡಿದವರ್‍ಯಾರು? ಆ ರೀತಿ ಕಾನೂನು ಮಾಡಿದವರ್‍ಯಾರು?

**ಶ್ರೀ ಬಸವರಾಜ ರಾಯರೆಡ್ಡಿ:** ತಾವು ಡಿ.ಎ. ತೆಗೆದುಕೊಳ್ಳುವುದಿಲ್ಲವೇ? ಪುಟ್ಟಣ್ಣಯ್ಯ ಅವರೆ ಇಲ್ಲಿ ಕುಳಿತುಕೊಳ್ಳುವುದಕ್ಕೆ ನಾವೇ ಒಂದು ಸಾವಿರ ರೂ.ಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಅದೊಂದು ನೀತಿ. ಡಿ.ಸಿ., ಎ.ಸಿ., ಅವರುಗಳೂ ಸಹ ಕೆಲಸ ಮಾಡಿ ಸಂಬಳ ತೆಗೆದುಕೊಳ್ಳುತ್ತಾರೆ. ನೀವು ಸಮಾಜದ ಬಗ್ಗೆ ಹಗಲು ರಾತ್ರಿ ಆಲೋಚನೆ ಮಾಡುತ್ತೀರಿ. ಊರಿಗೆ ಹೋದ ಕೂಡಲೇ ಬೆಳಿಗ್ಗೆಯಿಂದಲೇ ಬಡವರ ಬಗ್ಗೆ ಆಲೋಚನೆ ಮಾಡುತ್ತೀರಿ. ಈ ಹಣ ನಿಮ್ಮ ಹತ್ತಿರ ಉಳಿಯುವುದಿಲ್ಲ. 1,000 ರೂ.ಗಳ ಜೊತೆಗೆ ಇನ್ನೊಂದು 1,000 ಖರ್ಚಾಗಿರುತ್ತದೆ. ಜನರೇನೂ ಕಮ್ಮಿಯಿಲ್ಲ. ಜನ ನಿಮ್ಮನ್ನು ನೋಡಿ ಕಲಿತಿದ್ದಾರೆ ಮತ್ತು ಜನರನ್ನು ನೋಡಿ ನೀವು ಕಲಿತಿದ್ದೀರಿ, ನಾವು ಕಲಿತಿದ್ದೇವೆ. ನೀವೆಂದರೆ ನೀವೊಬ್ಬರೇ ಅಲ್ಲ ನನ್ನನ್ನು ಸೇರಿ ಹೇಳುತ್ತಿದ್ದೇನೆ. ಈಗ ಸರ್ಕಾರ ಬಂದಿದೆ. ಜಲಸಂಪನ್ಮೂಲ ಇಲಾಖೆಗೆ ನನ್ನ ಪ್ರಶ್ನೆ ಏನೆಂದರೆ, ನೀರು ಮತ್ತು ಮಣ್ಣಿನ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡದೇ 10 ಸಾವಿರ ಕೋಟಿ ರೂ. ಗಳನ್ನೂ ಖರ್ಚನ್ನು ಮಾಡುತ್ತಿದ್ದೀರಿ, ಅದರ ಜೊತೆಗೆ ಇನ್ನೂ 20 ಸಾವಿರ ಕೋಟಿ ಖರ್ಚು ಮಾಡಿ ಸವಳು ಜವಳು ಮಾಡಬೇಕಾಗುತ್ತದೆ. ವ್ಯವಸಾಯದಲ್ಲಿ ಬೆಳೆಯನ್ನೇ ಬೆಳೆಯದ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಆದ್ದರಿಂದ ತಾವು ಗಂಭೀರವಾಗಿ ದಯಮಾಡಿ ಆಲೋಚನೆ ಮಾಡಬೇಕು.

ಮೂರನೇಯದಾಗಿ ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ಉಡುಪಿಯಲ್ಲಿ ಉಷ್ಣಸ್ಥಾವರ ಮಾಡಿ ಜನರ ಸ್ಥಿತಿ ಏನಾಗಿದೆ ಎಂದು ನೋಡಿದ್ದಾರೆ. ರಾಯಚೂರಿನಲ್ಲಿಯೂ ಸಹ ನಾವು ನೋಡಿದ್ದೇವೆ. ನಮ್ಮ ರಾಜ್ಯದಲ್ಲಿ ಕಲ್ಲಿದ್ದಲ್ಲಿನ ನಿಕ್ಷೇಪ ಎಲ್ಲಿದೆ? ಇದರಿಂದ ಜಾಗತಿಕ ತಾಪಮಾನ

ಏನಾಗಬಹುದು? 2 ಸಾವಿರ ಕಿ.ಮೀ.ಗಳಿಂದ ಕಲ್ಲಿದ್ದಲ್ಲನ್ನು ತರುತ್ತಿದ್ದೇವೆ. ಬೂದಿಯನ್ನು ಎಲ್ಲಿ ಗುಡ್ಡೆಹಾಕುತ್ತೀರಿ? ನೀರಿನೊಳಗೆ ಬಿಡುತ್ತಿದ್ದೇವೆ. ಗಾಳಿಯಲ್ಲಿ ಹೋಗುತ್ತಿರುವುದರಿಂದ ಪರಾಗಸ್ಪರ್ಶ ಏನಾಗಬಹುದು? ಬೆಳೆಗಳ ಮೇಲೆ ಪರಿಣಾಮ ಯಾವ ರೀತಿಯಲ್ಲಿ ಬೀರಬಹುದು? ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಯಾರು ಕೇಳುವವರಿದ್ದಾರೆ? ಅಲ್ಲಿ ಯಾರು ಕೇಳುವವರೇ ಇಲ್ಲ. ಮಂತ್ರಿಯೂ ಇಲ್ಲ, ಯಾರನ್ನು ಕೇಳುವ ಹಾಗೆಯೇ ಇಲ್ಲ.

**ಶ್ರೀ ಅಶೋಕ್ ಖೇಣಿ:** ಪುಟ್ಟಣ್ಣಯ್ಯ ನವರೇ ಈಗ ರಾಯಚೂರಿನ ಬಗ್ಗೆ ಹೇಳಿದಿರಿ. ಅಷ್ಟೊಂದು power generation ಆಗುತ್ತಿದ್ದು, ರಾಯಚೂರಿನಲ್ಲಿಯೇ ಕರೆಂಟ್ ಇಲ್ಲ. ಹಳ್ಳಿಗಳಿಗೂ ಕರೆಂಟ್ ಸರಿಯಾಗಿ ಕೊಡುತ್ತಿಲ್ಲ. But they are getting the effects of the pollution.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಹಲ್ಲಿನ ಡಾಕ್ಟರಿಗೆ ಒಂದು ಹಲ್ಲು ಇಲ್ಲದೆಯೇ ಹಲ್ಲಿಗೆ ಔಷಧಿ ಕೊಟ್ಟು ಹಲ್ಲನ್ನು ಸರಿಮಾಡಿಕೊಡುತ್ತೇನೆಂದು ಹೇಳುವ ರೀತಿಯಿದೆ. ನಾನು ಸರ್ಕಾರವನ್ನು ಕೇವಲ ಟೀಕೆ ಮಾಡುವುದಕ್ಕೋಸಕ್ಕರ ಕೇಳುತ್ತಿಲ್ಲ. ಹೊಸ ಹೊಸ ಅವಿಷ್ಕಾರ ಮತ್ತು ಆಲೋಚನೆಗಳನ್ನು ಮಾಡದೇ ಹೇಗೆ ಮಾಡುತ್ತೀರಿ? Power ಗೆ ಸಂಬಂಧಿಸಿದಂತೆ ಸೋಲಾರ್‌ಗೆ ಏಕೆ ಹೋಗುವುದಕ್ಕಾಗುವುದಿಲ್ಲ? Declare a war. ಐದು ವರ್ಷದಲ್ಲಿ ಶೇ.39 ರಷ್ಟು ವಿದ್ಯುಚ್ಛಕ್ತಿಯನ್ನು ರೈತರಿಗೆ ಕೊಡುತ್ತಿದ್ದೇವೆಂದು ಏನು ಹೇಳುತ್ತಿದ್ದೀರಿ, ಆ 39% ಕರೆಂಟ್ ಅನ್ನು ಸೋಲಾರ್‌ಗೆ ತೆಗೆದುಕೊಳ್ಳಲು plan ಮಾಡಿ. ಇದರಲ್ಲಿ ಇಡೀ ರೈತರುಗಳನ್ನು involve ಮಾಡಿ. ನಿಮಗೆ ಶೇ20-25 ರಷ್ಟು ಕರೆಂಟ್ shortage ಇದೆ. ಭೂಮಿ, ಪರಿಸರ ಹಾಳು ಮಾಡಿ, ಜನರ ಆರೋಗ್ಯ ನಾಶ ಮಾಡುವುದಕ್ಕೆ ಉಷ್ಣ ಸ್ಥಾವರಗಳೇಕೆ ಬೇಕು? ಈ ಬಗ್ಗೆ ಕೇಳಿದರೆ ಬಿ.ಜೆ.ಪಿ.ಯವರು ಮಾಡಿದ್ದರಿಂದ, ನಾವು ಅದನ್ನು ಬಿಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ ಬಿ.ಜೆ.ಪಿ.ಯವರು ಮಾಡಿದಾಗ ನೀವೇಕೆ ವಿರೋಧ ಮಾಡಿದಿರಿ? ಮುಂದಕ್ಕೆ ಇಲ್ಲಿಗೆ ಬರುವ ಸಲುವಾಗಿ ವಿರೋದ ಮಾಡಿದಿರಾ? ಕಾಂಗ್ರೆಸ್‌ನವರು ಏಕೆ ವಿರೋಧ ಮಾಡಿದಿರಿ?

**ಶ್ರೀ ಅಪ್ಪಾಜಿ ನಾಡಗೌಡ:** ಯಾರೋ ಒಬ್ಬ ವ್ಯಕ್ತಿ ಮಾಡಿರುವುದು.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನೀವಲ್ಲ. ವ್ಯಕ್ತಿ ಎಂದರೆ ಯಾರು? ರೈತ ಸಂಘದಲ್ಲಿ ಟವಲ್ ಹಾಕಿಕೊಂಡು ವಿರೋಧ ಮಾಡುತ್ತೇನೆಂದರೆ ಅವನ್ಯಾರು? ಅವನನ್ನು ರೈತ ಸಂಘದವರೆಂದು ಕರೆಯುತ್ತಾರೆಯೇ ಹೊರತು ಪುಟ್ಟಣ್ಣಯ್ಯ ಎಂದು ಕರೆಯುವುದಿಲ್ಲ. ಅದೇ ರೀತಿ ಕಾಂಗ್ರೆಸ್ಸಿನಿಂದ ಬಂದಿರತಕ್ಕಂತಹ MLA ಹಾಗೂ ಈಗ ಹಾಲಿ MLA ಆಗಿರುವವರು ಅಂದು ಹೋರಾಟ ಮಾಡಿದಾಗ ಅವರನ್ನು ಕಾಂಗ್ರೆಸ್‌ನವರಲ್ಲದ ವ್ಯಕ್ತಿ ಎಂದು ಹೇಗೆ ಕರೆಯುವುದಕ್ಕಾಗುತ್ತದೆ? ಅದು ಆ ರೀತಿ ಆಗುವುದಿಲ್ಲ. ಸತ್ಯವನ್ನು ಹಾಗೂ ನಮ್ಮದು ತಪ್ಪಿದೆ ಎಂದು ಒಪ್ಪಿಕೊಳ್ಳಬೇಕು. ಪರಿಸರ ನಮಗೆ ಮತ್ತು ನಿಮಗೆ ಸೇರಿದ್ದು. ಯಾರದೋ ಒಬ್ಬ ವ್ಯಕ್ತಿಗೆ ಪರಿಸರ ಸೇರಿದ್ದಲ್ಲ. ಈ ಬಗ್ಗೆ ನೀವೇ ಯೋಚನೆ ಮಾಡಿ ಸೋಲಾರ್ ಪವರ್ ಜನರೇಷನ್‌ಗೆ ಹೋಗಿ. ಅಮೇರಿಕದ ಒಬ್ಬ ವ್ಯಕ್ತಿ ಇಲ್ಲಿಗೆ ಬಂದು ನಿಮ್ಮ ಬಿಸಿಲು ನಮಗೆ ಇದ್ದರೆ ಇಡೀ ಅಮೇರಿಕಾಕ್ಕೆ ಕರೆಂಟ್ ಕೊಡುತ್ತೇವೆಂದು ಹೇಳುತ್ತಾರೆ. ಸೋಲಾರ್‌ಗೆ ಏಕೆ ಹೋಗುವುದಕ್ಕಾಗುವುದಿಲ್ಲ? ಎಷ್ಟಿದೆಯೋ ಅಷ್ಟು ಕೋ–ಜನರೇಷನ್‌ಗೆ ಹೋಗಿ. ಸಣ್ಣ ಸಣ್ಣ ಘಟಕಗಳನ್ನು ಮಾಡುವುದಕ್ಕೆ ಯಾರು ಬೇಡ ಎನ್ನುತ್ತಾರೆ? 20 ಸಾವಿರ ಮತ್ತು 30 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿ, ಭೂಮಿ ಮತ್ತು ಪರಿಸರವನ್ನು ಹಾಳು ಮಾಡುತ್ತೀರಿ? ಕೇಂದ್ರ ಸರ್ಕಾರ ಪ್ರಾಜೆಕ್ಟ್‌ಗಳನ್ನು ಕೊಟ್ಟಿದೆ. ನಮ್ಮದು 100 ಮೆ.ವಾ. ವಿದ್ಯುತ್ ಉತ್ಪಾದನೆ ಮಾಡಿ. ವಿದ್ಯುಚ್ಛಕ್ತಿ ಮುಖ್ಯನಾ ಅಥವಾ ಪರಿಸರ ಮುಖ್ಯನಾ ಎಂದು ನಾನು ನಿಮಗೆ ಪ್ರಶ್ನೆ ಮಾಡುತ್ತಿದ್ದೇನೆ. ಎರಡೂ ನಮ್ಮ ಮುಂದಿರುವ ಸವಾಲುಗಳು. ಪರಿಸರವನ್ನು ರಕ್ಷಣೆ ಮಾಡದೇ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ಏನು ಮಾಡುವುದು? ಆದ್ದರಿಂದ ಆಲೋಚನೆ ಮಾಡಬೇಕು. ಸೋಲಾರ್‌ಗೆ ಏಕೆ ಹೋಗುವುದಕ್ಕಾಗುವುದಿಲ್ಲ? ಬಳಕೆ ವಿಧಾನಕ್ಕೆ ಹೋದರೆ ಯಾರು ಬೇಡವೆಂತಾರೆ? ಬಳಕೆ ವಿಧಾನಕ್ಕೆ ಹೋದರೆ ಏಕೆ ಆಗುವುದಿಲ್ಲವೆಂದು ನೋಡೋಣ. 100% ಸಬ್ಸಿಡಿ ಕೊಟ್ಟು ಸೈಂಟಿಫಿಕ್ ಇರಿಗೇಷನ್‌ಗೆ ಹೋಗಿ ಪ್ರಯತ್ನ ಪಡೋಣ. ನಮ್ಮ ಸ್ನೇಹಿತರು ವೈಜ್ಞಾನಿಕ

ನೀರಾವರಿ ಬಗ್ಗೆ ರೈತರಿಗೆ ತಿಳಿವಳಿಕೆ ನೀಡಬೇಕೆಂದು ಹೇಳಿದರು. Flood irrigation . . . . . ಮಾನ್ಯ ಅಧ್ಯಕ್ಷರೆ, ಒಬ್ಬೊಬ್ಬರ ರೈತರ 8–10 ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ. ಇದರಿಂದ ಭೂಮಿಯೆಲ್ಲವೂ ಹಾಳಾಗಿದೆ. ಇಲ್ಲಿ ಕೊರೆದರೆ ನೀರು ಬರುತ್ತದೆ, ಒಬ್ಬರು ತೆಂಗಿನಕಾಯಿ ಉರುಳಿಸಿಕೊಂಡು, ಇನ್ನೊಬ್ಬ geologist ಗೆ ತೋರಿಸುತ್ತಾನೆ. ಮತ್ತೊಬ್ಬರು ಕಡ್ಡಿ, ತಾಮ್ರ ಹೀಗೆ ಎಲ್ಲದರಿಂದ ಗುರುತಿಸಿ ಹೇಳುತ್ತಾರೆ. ಒಬ್ಬರು ಈಶಾನ್ಯ ಮೂಲೆಯಲ್ಲಿ ಕೊರೆದರೆ ನೀರು ಬರುತ್ತದೆಯೇ ಎಂದು ಶನಿದೇವರ ಹತ್ತಿರ ಶಾಸ್ತ್ರ ಕೇಳುತ್ತಾರೆ. ಆಗ ದೇವರು ಬಾಲಕ ಆ ಮೂಲೆಯಲ್ಲಿ ಕೊರೆದರೆ ನೀರು ಗ್ಯಾರಂಟಿ ಬರುತ್ತದೆಂದು ಹೇಳುತ್ತಾರೆ. ಆಗ ಶನಿದೇವರ ಮೇಲೆ ಕೇಸ್ ಹಾಕುವುದಕ್ಕಾಗುತ್ತದೆಯೇ? ಆಗ ದೇವರು ಮೇಲಿಂದ ಬರುವುದಕ್ಕಾಗುತ್ತದೆಯೇ? ಇವೆಲ್ಲವನ್ನು ನೋಡಿದರೆ ಯಾವ ಸ್ಥಿತಿಗೆ ಬಂದಿದ್ದೇವೆಂದು ತಿಳಿಯುತ್ತದೆ. ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್:** ಪುಟ್ಟಣ್ಣಯ್ಯನವರೆ, ನೀವು ಹೇಳಿದ್ದು ಸರಿಯಿದೆ. Geologist ಬಂದು ಲೈನ್‌ಲೈನ್ ಆಗಿ ಫೇಲ್ ಆದರೆ ಪ್ರಾಣ ಹೋಗುತ್ತಾ ಇರುತ್ತದೆ. ಆಗ ಅವರು ಕಡ್ಡಿ ಹಿಡಿದುಕೊಳ್ಳುತ್ತಾರಾ ಅಥವಾ ಉಡಿದಾರ ಹಿಡಿದುಕೊಳ್ಳುತ್ತಾರಾ ಗೊತ್ತಿಲ್ಲ. ಬೋರ್‌ವೆಲ್ ಕೊರೆಯುವುದಕ್ಕೆ ಗುರುತು ಮಾಡಿಕೊಡಿ ಎಂದರೆ ಅವರು ಮಾಡಿಕೊಡುತ್ತಾರೆ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನೀರು ಬರುತ್ತದೆನ್ನುವ ಆಸೆ. ಆರು ಬೋರ್‌ವೆಲ್‌ಗಳನ್ನು ಕೊರೆದು ಬಹಳ ನಷ್ಟವಾಗಿದೆ. ನಾನು ಬೆಂಗಳೂರಿಗೆ ಹೋಗುತ್ತಿದ್ದೇನೆಂದು ಹೇಳುತ್ತಾರೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

**ಶ್ರೀ ವೈ.ಎನ್. ರುದ್ರೇಶ್‌ಗೌಡ:** Mines and Geology ಗಿಂತ ಕಡ್ಡಿಯೇ success ಆಗುತ್ತಿರುವುದು.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಎಲ್ಲೆಲ್ಲಿ successs ಆದರೆ ಅಲ್ಲಿ ನೀವೇ ಅಧ್ಯಕ್ಷರಾಗಿ ಇಡೀ ಕರ್ನಾಟಕ ರಾಜ್ಯದ ತುಂಬಾ ಬೋರ್ ಕೊರೆಯಿಸಿ. ನನನಗೆ ಅರ್ಥವಾಗುತ್ತಿಲ್ಲ. ಭೂಮಿಯನ್ನು ಸ್ವಲ್ಪ ಮಟ್ಟಿಗೆ ತೂತು ಮಾಡಿದರೆ

ಪರವಾಗಿಲ್ಲ. ರಮೇಶ್ ಕುಮಾರ್ ಅವರೆ ಕೋಲಾರ ಜಿಲ್ಲೆಯಲ್ಲಿ 1,200 ಅಡಿ ಆಳಕ್ಕೆ ಹೋಗಲು ಕಾರಣವೇನು? Excess flood ಬಂದಾಗ ಮಾಡಲಿ. ಸರ್ಕಾರಕ್ಕೆ ಇದು ಯಾವ ದೊಡ್ಡ ಸುದ್ಧಿ? ಆಗ ಎಲ್ಲಾ ಕೆಲಸವನ್ನು ನಿಲ್ಲಿಸಿ. ಈಗ ನಾವೇನು ಮಾಡುತ್ತಿದ್ದೇವೆ? ಸಮಗ್ರ ಕರ್ನಾಟಕದ ಬದುಕನ್ನು ರಕ್ಷಣೆ ಮಾಡುವಂತಹ ಆರ್ಥಿಕ ನೀತಿಗೆ, ನಾವು ಪ್ಲಾನ್ ಮಾಡಿಕೊಂಡೇ ಬರುತ್ತಿದ್ದೇವೆ. Vote ಗಾಗಿ ನಮ್ಮ plan. ಬಿ.ಪಿ.ಎಲ್. ಕಾರ್ಡುಗಳನ್ನು ವಿತರಣೆ ಮಾಡುತ್ತೀರಿ. ಇದರಲ್ಲಿ ಎಷ್ಟೋ ಕುಟುಂಬಗಳು ಬೆಂಗಳೂರು, ಬೆಳಗಾಂ, ಬೀದರ್, ಗುಲ್ಬರ್ಗಾ ಜಿಲ್ಲೆಗಳಿಗೆ ಹೋಗಿರುತ್ತಾರೆ. ಆ ಅಕ್ಕಿ ಮತ್ತು ಸೀಮೆಎಣ್ಣೆ ಯಾರಿಗೆ ಹೋಗುತ್ತಾ ಇದೆ? ಮೊಬೈಲ್ ವ್ಯಾನ್ ಮಾಡಿ ಯಾರ್ಯಾರು ಗುಳೆ ಬಂದಿದ್ದಾರೋ ಅಂತಹವರಿಗೆ ಸ್ವಲ್ಪ ಅನ್ನವನ್ನಾದರೂ ಕೊಡಿ. ಬೆಂಗಳೂರಿನಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ. ಅವರು ಬೀದಿಯಲ್ಲಿ ಮಲಗಿದ್ದಾರೆ. ಒಂದು ಮೊಬೈಲ್ ವ್ಯಾನ್ ಮಾಡಿ ಆ ಬಡವರನ್ನು ರಕ್ಷಣೆ ಮಾಡಿ. BPL ಕಾರ್ಡ್ ಎಲ್ಲಿಗೆ ಹೋಗುತ್ತದೆ, ಆ BPL ಕಾರ್ಡ್‌ನ ಅಕ್ಕಿ, ಸೀಮೆಎಣ್ಣೆ ಏನಾಗುತ್ತದೆ, ಎಲ್ಲಿಗೆ ಹೋಗುತ್ತದೆ? ಎನ್ನುವುದು ಯಾರಿಗೂ ಗೊತ್ತಿಲ್ಲ. ಯಾರು ರಕ್ಷಣೆ ಮಾಡಬೇಕು? ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ನಮಗೆ ವಿದ್ಯುಚ್ಛಕ್ತಿ ಎಷ್ಟು shortage ಇದೆ? ನಾವು ಉಷ್ಣಸ್ಥಾವರ ಮಾಡುತ್ತೇವೆಂದು ಹೇಳುತ್ತಾರೆ. ಜಗತ್ತಿನಲ್ಲಿ ಎಲ್ಲ ದೇಶಗಳು ಉಷ್ಣಸ್ಥಾವರವನ್ನು ಬ್ಯಾನ್ ಮಾಡಿದರೆ, ಇಲ್ಲಿ ಉಷ್ಣ ಹತ್ತಿಕೊಂಡು ಉಷ್ಣಸ್ಥಾವರ ಮಾಡುತ್ತಾರೆ. ಇವರಿಗೆ ಹತ್ತಿರುವ ಉಷ್ಣ ಯಾವುದು? ಎಂದು ನನಗೆ ಗೊತ್ತಿಲ್ಲ. ಈ ಉಷ್ಣದಿಂದ ನಮ್ಮ ಇಡೀ ರೈತ ಸಮುದಾಯ ನಾಶವಾಗುತ್ತದೆ. ಅಲ್ಲಿ ಚಳುವಳಿ ಮಾಡುವುದಕ್ಕೆ ಹೋಗಿ 146 ದಿವಸಗಳು ಆಗಿವೆ. ಹೇಗೆ ರಕ್ಷಣೆ ಮಾಡುತ್ತೀರಿ? ಅಲಮಟ್ಟಿಗೂ, ಆ ಸ್ಥಾವರಕ್ಕೂ 25 ಕಿ.ಮೀ ಇದೆ. ತಾವು ದೊಡ್ಡವರು, ತಾವು ಹೇಳಿ. ಕಾನೂನು ಪರಿಸರವು 50 ಕಿ.ಮೀ ದೂರ ಇರಬೇಕೆಂದು ಹೇಳುತ್ತದೆ. ಇದು ಬಿಜೆಪಿಯವರು ಮಾಡಿದರೋ, ಕಾಂಗ್ರೆಸಿನವರು ಮಾಡಿದರೋ, ಪುಟ್ಟಣ್ಣಯ್ಯ ಮಾಡಿದರೋ ಅದು ಬೇರೆ ವಿಷಯ. ಯಾರು ರಕ್ಷಣೆ ಮಾಡಬೇಕು? ಆಲ್‌ಮೋರ್ ಎಂಬ ವಿಜ್ಞಾನಿ, ನೋಬೆಲ್ ಪ್ರಶಸ್ತಿ ವಿಜೇತ ಜಗತ್ತಿನ

ಉಷ್ಣಸ್ಥಾವರವನ್ನು ನಿಲ್ಲಿಸಬೇಕೆಂದು ಹೋರಾಟ ಮಾಡಿದರು. ಎರಡನೆಯದಾಗಿ, ಗ್ರಾಮೀಣಾಭಿವೃದ್ಧಿಗೆ ನಮ್ಮಿಂದ ಎಷ್ಟು ತೆರಿಗೆ ಬರುತ್ತದೆಂದು ಹೇಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದನ್ನು ಸ್ವಲ್ಪ ಹೇಳಿ. ನಮ್ಮೂರಿನಿಂದ ನಾನು ಕ್ಯಾತನಳ್ಳಿ ಪಂಚಾಯಿತಿಯಲ್ಲಿದ್ದೇನೆ. ನಿಮ್ಮ ಕರ್ನಾಟಕ ಸರ್ಕಾರದ ತೆರಿಗೆಯನ್ನು ನಾವು ಐದು ವರ್ಷಕ್ಕೆ 7 ಲಕ್ಷ ಕೋಟಿ ರೂ.ಗಳನ್ನು ಭಾಗ ಮಾಡಿಕೊಂಡರೆ ತಲಾವಾರು ಒಂದೂವರೆ ಲಕ್ಷ ಬರುತ್ತದೆ. ಸನ್ಮಾನ್ಯ ಮಂತ್ರಿಯವರೆ, ನಮ್ಮ ಪಂಚಾಯಿತಿಯಿಂದ 105 ಕೋಟಿ ರೂ.ಗಳ ತೆರಿಗೆಯನ್ನು ನಿಮಗೆ ಕೊಡುತ್ತೇವೆ. ನಮಗೆ ನೀವು ಏನೂ ಮಾಡಬೇಡಿ. ನೀವು 90 ಕೋಟಿ ರೂ.ಗಳನ್ನು ಇಟ್ಟುಕೊಳ್ಳಿ. 15 ಕೋಟಿ ರೂ.ಗಳಿಗೆ ರೋಡ್, ಮೋರಿಗಳಿಗಾಗಿ ಒಂದು ಪ್ಲ್ಯಾನ್ ಮಾಡಿ. ಎಲ್ಲ ಹಳ್ಳಿಗಳ ಮೋರಿಗಳನ್ನು ಪರೀಕ್ಷೆ ಮಾಡಿಸಿ ತರಿಸಿ, ನೀರು ಮುಂದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ವರ್ಷ ಒಬ್ಬ 200 ಮೀಟರ್ ಮಾಡುತ್ತಾನೆ. ಆತ ವಾಟ ಹೇಗೆ ಕೊಟ್ಟಿರುತ್ತಾನೆ ಅದು ಬೇರೆ ಪ್ರಶ್ನೆ. ಹಣವನ್ನು ತೆಗೆದುಕೊಂಡು ವಾಟ ಒಡೆಯುತ್ತಿರುತ್ತಾನೆ. ಎರಡನೆಯವನು, ಇನ್ನು 300 ಮೀಟರ್ ಮಾಡುತ್ತಾನೆ. ಐದು ವರ್ಷಕ್ಕೆ 1,500 ಮೀಟರ್ ಮಾಡುವುದಕ್ಕೆ ಅವನದು ವಾಟ ಇಲ್ಲ, ಹಣ ತೆಗೆದುಕೊಂಡು ವಾಟ ಒಡೆಯುತ್ತಾನೆ. ನೀರು ಮಾತ್ರ ಅಲ್ಲೇ ಇರುತ್ತದೆ. Drainage ಎಂದು ಕರೆಯುತ್ತಾರೆ. ನಮ್ಮ ಹಳ್ಳಗಳಲ್ಲಿ drainage ಎಂದರೆ, ಎಲ್ಲ ನೀರು ಹಾಗೆ ನಿಂತಿರಬೇಕು. ಅದು drainage. ಉದ್ಯೋಗ ಭರವಸೆ ಯೋಜನೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, MLA grants, irrigation track roads, CADA roads, ಉದ್ಯೋಗ ಭರವಸೆ ಯೋಜನೆ ರಸ್ತೆ, ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆ, ಇತ್ತೀಚೆಗೆ ಬಂದಿರುವಂತಹ ಮುಖ್ಯಮಂತ್ರಿಗಳ ರೋಜ್‌ಗಾರ್ ಯೋಜನೆ. ಇವೆಲ್ಲಾ ಏನು? ಇವುಗಳು ಯಾವ ರಸ್ತೆಗಳು? ಇವುಗಳು ಇನ್ನೂ ಏಕೆ ಆಗಿಲ್ಲ? ಎಲ್ಲ ರೋಡ್‌ಗಳಿಗೆ ಹೆಸರುಗಳಿವೆ. ಹಳ್ಳಿಯಲ್ಲಿ ಮರಿಯನ್ನು ಕದ್ದು ಪಾಲು ಹಾಕಿಕೊಳ್ಳುತ್ತಾರಲ್ಲ ಹಾಗೆ ಆಯಿತು. ಹಳ್ಳಿಯಲ್ಲಿ ಹಾಗೆನೆ. ಒಂದು ಮರಿ ಕದ್ದುಬಿಡುತ್ತಾರೆ, ಎಲ್ಲರೂ ಒಮ್ಮೆಲೆ ಪಾಲು ಹಾಕಿಕೊಳ್ಳುತ್ತಾರೆ. ಹಾಗೆ ಆಯಿತು. ಯಾವ ರೋಡ್

ಯಾರಿಗೆ ಸೇರಿತ್ತೋ, ಎಲ್ಲಿಗೆ ಸೇರಿತ್ತೋ? ಅಡಿಯಲ್ಲಿ ನೀನು ಏಕೆ drainage ಮಾಡಿಲ್ಲವೆಂದು ಕೇಳಿದರೆ, ಮೇಲ್ಸೇತುವೆ ಜಿಲ್ಲಾಪಂಚಾಯತ್ ಮಾಡುವಂಥದ್ದು, ಒಳಗೆ ನೀರು ಹೋಗುವಂಥದ್ದು ಮಾಡುವವರು ತಾಲ್ಲೂಕು ಪಂಚಾಯಿತಿ ಎಂದು ಹೇಳುತ್ತಾರೆ. ಒಳಗಡೆ ಎಲ್ಲ ತಾಲ್ಲೂಕು ಪಂಚಾಯಿತಿ ಅಂತೆ. ಮೇಲೆ ಎಲ್ಲ ಜಿಲ್ಲಾ ಪಂಚಾಯತ್ ಅಂತೆ. ನೀರು ಕಟ್ಟಿಕೊಂಡರೆ ಅದು ಪಂಚಾಯಿತಿ. ನೀರು ಕಟ್ಟಿಕೊಂಡರೆ ನಮ್ಮದಂತೆ ಮೇಲೆ ಮಾಡುವುದೆಲ್ಲ ಜಿಲ್ಲಾ ಪಂಚಾಯಿತಿ, ಕೆಳಗೆ ಮಾಡುವುದೆಲ್ಲಾ ತಾಲ್ಲೂಕು ಪಂಚಾಯಿತಿ, ನೀರು ಕಟ್ಟಿಕೊಂಡರೆ ಆ ನೀರನ್ನು ಕಳುಹಿಸಲು MLA ಸದಾ ಕಾಲ ಸಿದ್ಧರಾಗಿರಬೇಕು. ನೀರು ಕಟ್ಟಿಕೊಳ್ಳುವುದನ್ನು ಸರಿ ಮಾಡದೇ ಹೋದರೆ, ಅಯೋಗ್ಯ MLA ಎಂದು ನಮಗೆ ಜನರಿಂದ ಬೈಗುಳ ಸಿಗುತ್ತದೆ. ಅವರು ಅಯೋಗ್ಯ ಎಂದರೂ ನಮಗೆ ಮುಂದಕ್ಕೆ ಓಟ್ ಬೇಕಾಗುತ್ತದೆ ಎಂದು ನಾವು ಅದನ್ನೇ ಪ್ರಶಸ್ತಿ ಎಂದು ಸ್ವೀಕಾರ ಮಾಡಿಕೊಂಡು ವಾಪಸ್ಸು ಬರುತ್ತೇವೆ. ನನಗೆ ಅರ್ಥವಾಗುತ್ತಿಲ್ಲ. ಐದು ವರ್ಷಕ್ಕೆ ಗ್ರಾಮ ವಿಕಾಸ ಯೋಜನೆ ತಂದಿದ್ದೀರಿ. ಯಾರನ್ನು ವಿಕಾಸ ಮಾಡುತ್ತೀರಿ? ಕಾಸೇ ಇಲ್ಲ, ವಿಕಾಸ ಅಂತೆ. 'ವಿ' ತೆಗೆದು ಹಾಕಿದರೆ ಕಾಸು ಇರುವುದಿಲ್ಲ, ಅದಕ್ಕೆ ಇರಲಿ ಎಂದು 'ವಿ' ಸೇರಿಸಿಕೊಂಡರು. ವಿಕಾಸ ಗ್ರಾಮ ಎಂದರೆ ಏನು? ಹೋಗಲಿ, ವಿಕಾಸ ಪಂಚಾಯತಿ... ನಾನು ಈ ವರ್ಷದಲ್ಲಿ ಒಂದು ಪಂಚಾಯಿತಿಗೆ ಸಂಪೂರ್ಣ ಎಲ್ಲ ಮೂಲಭೂತ ಸೌಕರ್ಯಗಳನ್ನು ಕೊಡುವುದರ ಮೂಲಕ ಕ್ರಾಂತಿಯುತವಾದ ಬದಲಾವಣೆಯನ್ನು ತರಬೇಕೆನ್ನುವವನು. ನಾವು ನಿಮ್ಮನ್ನು ಏನು ಕೇಳುವುದಿಲ್ಲ. 5 ವರ್ಷಕ್ಕೆ ನಮ್ಮ ಸೌಕರ್ಯಕ್ಕೋಸ್ಕರ 5 ಕೋಟಿ ರೂ.ಗಳನ್ನು ಕೊಡಿ. 7 ಲಕ್ಷ ಕೋಟಿ ರೂ.ಗಳಲ್ಲಿ 30,000 ಕೋಟಿ ರೂ.ಗಳನ್ನು ಕೊಟ್ಟರೆ ಸಾಕು. ಅರ್ಜಿ ಕೊಟೂ ಕೊಟ್ಟೂ ಸಾಕಾಗಿದೆ. ಒಬ್ಬ MLA ನಮ್ಮ ಬಳಿ ಬಂದು, ಸನ್ಮಾನ್ಯ ಶಾಸಕರಲ್ಲಿ, ಸಾಹೇಬ್ರರಲ್ಲಿ ವಿನಂತಿ, ತಾವು ಈ ರೋಡ್ ಅನ್ನು ಈ ವರ್ಷ ನಿಮ್ಮ ಅನುದಾನದಲ್ಲಿ ಸೇರಿಸಿ ಒಂದೂವರೆ ಕಿ.ಮೀ ರಸ್ತೆಯನ್ನು ಮಾಡಿ, ಜನ-ಜಾನುವಾರುಗಳ ರಕ್ಷಣೆ ಮಾಡಬೇಕೆಂದು ಆತ ಕೊಟ್ಟರೆ, ಅದಕ್ಕೆ ನಾನು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಈ ವಿಷಯವನ್ನು ಗಂಭೀರವಾಗಿ

ಪರಿಗಣಿಸಿ ಇದನ್ನು estimate ಮಾಡಿ ರಸ್ತೆ ಮಾಡಬೇಕು ಎಂದು ಹೇಳಿದಾಗ ಅವರು ಸನ್ಮಾನ್ಯ ಶಾಸಕರು ಹೇಳಿರುವಂಥ ವಿಚಾರವನ್ನು ನಾನು ಗಂಭೀರವಾಗಿ ಪರಿಗಣಿಸಿ ಈ ವರ್ಷದ ಅನುದಾನ ಇಲ್ಲದೆ ಇರುವುದರಿಂದ ತಾವು ಮುಂದಿನ ವರ್ಷಕ್ಕೆ ಆಲೋಚನೆ ಮಾಡುವುದಕ್ಕೆ ಕ್ರಮ ಎಂದು ಬರೆಯುತ್ತಾರೆ. ಅದಕ್ಕೆ ನಾನು, ನೀನು ಏನಾದರು ಬದುಕಿದ್ದರೆ ಮುಂದಿನ ವರ್ಷದವರೆಗೆ ಕಾಯ್ದುಕೊಂಡಿರು ಎಂದು ಹೇಳುತ್ತೇನೆ. ಯಾವ ಅರ್ಜಿ? D.C ಗೆ ಅರ್ಜಿ, ಅಮಲ್‌ದಾರರಿಗೆ ಅರ್ಜಿ, ಮಂತ್ರಿಗೆ ಅರ್ಜಿ, MLA ಗೆ ಅರ್ಜಿ, BDO ಗೆ ಅರ್ಜಿ PDO ಗೆ ಅರ್ಜಿ, ಅರ್ಜಿ, ಅರ್ಜಿ ..... ಅಲ್ಲಿ ಯಾರೋ ಒಬ್ಬ ಮಂತ್ರಿ ಅರ್ಜಿಗಳನ್ನು ತೆಗೆದುಕೊಂಡು ಹೋಗಿ ಬೇಲಿ ಮಗ್ಗಲಿನಲ್ಲಿ ಎಸೆದುಬಿಟಿದ್ದಾರೆ. ಅದು ಜನರ ಕೈಗೆ ಸಿಕ್ಕಿದೆ. ಆ ಜನ ತುಂಬಾ ಬೈದರಂತೆ. ಆ ಮಂತ್ರಿ 2–3 ವರ್ಷಗಳವರೆಗೆ ಆ ಕಡೆ ಹೋಗಲೇ ಇಲ್ಲ. ತೆಗೆದುಕೊಂಡವನು ಅದನ್ನು ಎಲ್ಲಿಯಾದರೂ ದೂರದಲ್ಲಿ ಬಿಸಾಕುವುದನ್ನು ಬಿಟ್ಟು ಬೇಲಿ ಮಗ್ಗಲಿನಲ್ಲಿ ಹಾಕಿದ್ದಾನೆ. ಈ ಆಡಳಿತ ಯಾರಿಗಾಗಿ? ಗ್ರಾಮ ವಿಕಾಸ್, ಗ್ರಾಮ ಸ್ವರಾಜ್, ಗಾಂವ್ ಜಿಯೆತೊ ದೇಶ್ ಜಿತಾಹೇ, ಗಾಂಧಿ ಐಸೇ ಬೋಲ್‌ರಹೇ. ಅದು ಸುವರ್ಣ ಆಗಿ ವಿಕಾಸ ಆಗಿರುವುದು. ಆ ಹೆಸರು ಇಟ್ಟರೆ ಇವರಿಗೆ ಹೆಸರು ಬರುತ್ತದೆ ಎಂದು ನೀವು ಗ್ರಾಮೀಣ.. .

**ಶ್ರೀ ಬಸವರಾಜ್ ರಾಯರೆಡ್ಡಿ:** ಮಾನ್ಯ ಹೆಚ್.ಕೆ. ಪಾಟೀಲ್‌ರವರು ಬಚ್ಚಲು ಮನೆ ಕಟ್ಟಿಸಲು ಶುರುಮಾಡಿದ್ದಾರೆ, ನೀವೇನ್ರಿ? Shower, ಶ್ಯಾಂಪು ಕಿಟ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. ನಿಮ್ಮ ಅಮೇರಿಕಾದಲ್ಲೇನಾದರೂ ಕೊಟ್ಟಿದ್ದೀರಾ?

**ಉಪಾಧ್ಯಕ್ಷರು:** ಮಾನ್ಯ ಪುಟ್ಟಣ್ಣಯ್ಯನವರೆ, conclude ಮಾಡಿ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ಉಪಾಧ್ಯಕ್ಷರೆ, ಒಂದು ಹತ್ತು ನಿಮಿಷ. ಮುಗಿಸುತ್ತೇನೆ.

**ಉಪಾಧ್ಯಕ್ಷರು:** ಹತ್ತು ನಿಮಿಷ, ಹತ್ತು ನಿಮಿಷ ಎಂದು ಹೇಳುತ್ತೀರಿ one hour ತೆಗೆದುಕೊಂಡಿದ್ದೀರಿ.

(ಗೊಂದಲ)

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):** ಮಾನ್ಯ ರಾಯರೆಡ್ಡಿಯವರು ಹಳ್ಳಿಗರಿಗೆ ಶ್ಯಾಂಪು ಕಿಟ್ ಕೊಡುತ್ತೇವೆಂದು ಛೇಡಿಸುತ್ತಿದ್ದಾರೆ. ನಮ್ಮ ಆರ್ಥಿಕ ಪರಿಸ್ಥಿತಿ ಅನುಕೂಲ ಮಾಡಿಕೊಟ್ಟರೆ, ನಾವು ಏನು ಸಮುದಾಯದ ಸಂಕೀರ್ಣವನ್ನು ಮಾಡುತ್ತಿದ್ದೇವೆ ಅಲ್ಲಿ ಈಗಾಗಲೇ Hair Drier ಕೊಡುತ್ತೇವೆಂದು ಘೋಷಣೆ ಮಾಡಿದ್ದೇವೆ. ಅಲ್ಲಿ ಶ್ಯಾಂಪು ಕಿಟ್ ಅನ್ನು ಸಹ ಕೊಡಬೇಕೆನ್ನುವುದು ನಮ್ಮ ಇಚ್ಛೆ ಆಗಿದೆ. ಆದರೆ, ಅದಕ್ಕೆ ಅನುಕೂಲಕರವಾದಂಥ ವಾತಾವರಣವನ್ನು ನೋಡುತ್ತೇವೆ. ಆಮೇಲೆ, ಅಮೇರಿಕಾಕ್ಕೆ ಹೋಗಿ ಬಂದವರಿಗೆ ಅಷ್ಟೇ ಶ್ಯಾಂಪು ಕಿಟ್ ಅಲ್ಲ. ಹಳ್ಳಿಗರಿಗೂ ಆ ಶ್ಯಾಂಪು ಕಿಟ್ ಸಿಗಬೇಕು ಎನ್ನುವವರು ನಾವು.

**ಶ್ರೀ ಬಸವರಾಜ್ ರಾಯರೆಡ್ಡಿ:** Hair Drier ಕೊಡಬೇಕಾದರೆ ಶ್ಯಾಂಪು ಇಲ್ಲದೆ Hair Drier ತೆಗೆದುಕೊಂಡು ಏನು ಮಾಡುತ್ತೀರಿ? ತಲೆ ತೊಳೆಯುವುದಕ್ಕೆ ಆಗುತ್ತದೆಯೇ?

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ರಾಯರೆಡ್ಡಿಯವರೆ, ಒಂದು ವಿಷಯ ತಿಳಿದುಕೊಳ್ಳಿ. ಎಲ್ಲಿ ಬೆವರು ಬರುತ್ತದೆ, ಎಲ್ಲಿ ಶ್ರಮ ಇರುತ್ತದೆ ಅಲ್ಲಿ ಶ್ಯಾಂಪು ಬೇಕಾಗಿಲ್ಲ. ಯಾರು ಊಟ ಮಾಡಿಕೊಂಡು ಮೈ, ಹೊಟ್ಟೆ ಬೆಳಿಸಿಕೊಂಡು ವಾಸನೆ ಬಂದಿರುತ್ತದೆ ಅವರಿಗೆ ಶ್ಯಾಂಪು ಬೇಕು. ನಮ್ಮ ರೈತರಿಗೆ ಶ್ಯಾಂಪುವಿನ ಅವಶ್ಯಕತೆ ಇಲ್ಲ. ಏಕೆಂದರೆ, ಇಡೀ ಬೆವರು ಝುಳಝುಳನೆ ಹೊರಗೆ ಹೋಗುತ್ತದೆ. ಆಗ ಅವನ ಬೆವರಿನಲ್ಲಿರತಕ್ಕಂಥ ಮಲೀನ ಹೋಗುತ್ತದೆ. ಅವನಿಗೆ ಶ್ಯಾಂಪು ಬೇಕಾಗಿಲ್ಲ. ನಾನು, ನನ್ನ ಮುಖಕ್ಕೆ 45 ವರ್ಷ ಆಗಿದೆ ಸೋಪು ಹಾಕಿ. ನನ್ನ ಮುಖ ಏನಾಗಿದೆ?

**ಶ್ರೀ ಹೆಚ್.ಕೆ. ಪಾಟೀಲ್:** ಮಾನ್ಯ ಪುಟ್ಟಣ್ಣಯ್ಯನವರೆ, ತಾವು, ಮುಖಕ್ಕೆ ಸೋಪ್ ಹಾಕಿ 45 ವರ್ಷ ಆಗಿದೆ. ನನ್ನ ಮುಖಕ್ಕೆ ಏನಾಗಿದೆ? ಎಂದು

ಕೇಳುತ್ತಿದ್ದೀರಿ. ಒಂದು ವೇಳೆ ಮೊದಲಿನಿಂದಲೂ ಸೋಪ್ ಹಚ್ಚಿಕೊಂಡಿದ್ದರೆ ನೀವು ಹಾಲಿವುಡ್‌ನಲ್ಲಿ ಇರುತ್ತಿದ್ದಿರಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನಾನು ಹಾಲಿವುಡ್‌ನಲ್ಲಿ ಇರುತ್ತಿರಲಿಲ್ಲ. ನಾನು ಸೋಪ್ ಹಚ್ಚಿಕೊಂಡಿದ್ದರೆ ಕಾಲಿವುಡ್‌ನಲ್ಲಿ ಕುಳಿತ್ತಿರುತ್ತಿದ್ದೆ. ಹಾಲಿವುಡ್‌ಗೆ ಎಲ್ಲಿ ಹೋಗುವುದಕ್ಕೆ ಆಗುತ್ತಿತ್ತು? ಚರ್ಮ ಎಲ್ಲ ಸೀದು ಹೋಗಿ, ಒಣಗಿ ಹೋಗಿ ಕಾಲಿವುಡ್‌ನಲ್ಲಿ ಎಲ್ಲಿಯಾದರೂ ಜಾಗ ಸಿಕ್ಕಿದ್ದರೆ ಅಲ್ಲಿ ಕುಳಿತುಕೊಳ್ಳುತ್ತಿದ್ದೆ. ಹಾಲಿವುಡ್‌ಗೆ ಎಲ್ಲಿ ಹೋಗಲು ಸಾಧ್ಯ? ಮಾನ್ಯ ಅಧ್ಯಕ್ಷರೆ, ತಮಗೆ ನಮಸ್ಕಾರ. ತಾವು ಬಂದಿದ್ದೀರಿ.

**ಅಧ್ಯಕ್ಷರು:** ಮಾನ್ಯ ಪುಟ್ಟಣ್ಣಯ್ಯನವರೆ, ನಾವು ಎಲ್ಲಿಗೆ ಹೋಗಿದ್ದೆವು? ಬಂದಿದ್ದೀರಿ ಎಂದರೆ ಏನರ್ಥ?

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ಅಧ್ಯಕ್ಷರೆ, ನಿಮ್ಮ ಮೇಲೆ ನನಗೆ ಬಹಳ ಗೌರವ ಇದೆ. ಮಾನ್ಯ ರಮೇಶ್ ಕುಮಾರ್‌ರವರಿಗೂ, ನಿಮಗೂ ಒಳ್ಳೆಯ ಸಂಬಂಧವಿದೆ. ಮಾನ್ಯ ಅಧ್ಯಕ್ಷರೆ, ಆ ಸಂಬಂಧ ನಮಗೂ, ನಿಮಗೂ ಕೊಡಿ. ನಾನು ಕೇವಲ ಐದು ನಿಮಿಷ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ಮಾನ್ಯ ಪುಟ್ಟಣ್ಣಯ್ಯನವರೆ, ಮಾನ್ಯ ಅಧ್ಯಕ್ಷರು ಬಂದಿದ್ದು ಏಕೆ ಗೊತ್ತಾ? ನಿಮ್ಮ ಭಾಷಣಕ್ಕೆ ಅವರು ಮನ ಸೋತು ಹೋಗಿ ಅಲ್ಲಿಂದ ಏನು ಕೇಳುವುದು, ಇನ್ನೂ ಸ್ವಲ್ಪ ಹೊತ್ತು ಮಾತನಾಡಲಿ, ಇಲ್ಲೇ ಕುಳಿತು ಕೇಳೋಣ ಎಂದು ಬರೆದಿದ್ದಾರೆ. ತಾವು ಅದನ್ನು ಬೇರೆ ರೀತಿಯಲ್ಲಿ ತಿಳಿದುಕೊಂಡಿದ್ದೀರಿ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ರಮೇಶ್ ಕುಮಾರ್ ರವರೆ, ಸಮಯ ಆಗಿದೆ, ಇನ್ನೂ ಮಾತನಾಡುತ್ತಿದ್ದೀರಿ, ಮಾತನ್ನು ಮುಗಿಸಿ ಎಂದು ಹೇಳುವುದಕ್ಕೆ ಮಾನ್ಯ ಅಧ್ಯಕ್ಷರು ಬಂದಿದ್ದಾರೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್:** ಮಾನ್ಯ ಅಧ್ಯಕ್ಷರು ನಿಮ್ಮ ಭಾಷಣಕ್ಕೆ ಆಕರ್ಷಿತರಾಗಿದ್ದಾರೆ.

**ಅಧ್ಯಕ್ಷರು:** ಇಲ್ಲ, ಇಲ್ಲ, ಪುಟ್ಟಣ್ಣಯ್ಯನವರೆ, ನೀವು ಕೆಲವು ವಿಷಯ ಪ್ರಸ್ತಾಪ ಮಾಡಿದ್ದೀರಿ, ನನಗೂ ಕುತೂಹಲ ಬಂದಿತು. ಈಗ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಉತ್ತರ ಹೇಳುವ ಸನ್ನಿವೇಶ ಉದ್ಭವವಾಯಿತಲ್ಲ, ಏನೆಂದರೆ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಬಗ್ಗೆ ಒಳ್ಳೊಳ್ಳೆ ಪುಸ್ತಕಗಳನ್ನಂತೂ ಈಗ ಪ್ರಿಂಟ್ ಮಾಡಿದ್ದಾರೆ. ನೋಡಿದ್ದೀರೋ, ಇಲ್ಲವೋ?

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನೋಡಿದ್ದೇನೆ.

**ಅಧ್ಯಕ್ಷರು:** ಆ ಪುಸ್ತಕದ ಬೆಳಕು ಗ್ರಾಮದ ಮೇಲೆ ಬೀಳಬೇಕೆಂದು, ಅಷ್ಟಕ್ಕೆ ನೋಡೋಣ ಏನಾದರೂ ಪ್ರಸಾದ ಬರುತ್ತದೆಯೇನೋ ಎಂದು ಈಗ ನಾನು ಬಂದೆ.

**ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:** ಎಲ್ಲಾ ಕಡೆ ಕ್ರೀಡಾಂಗಣ ಎಂದು ಹೇಳಿದ್ದೀರಿ. ಎಲ್ಲ ಕಡೆ ಗರಡಿಮನೆ, ಎಲ್ಲಿ ಮಾಡುತ್ತೀರಿ? ಕ್ರೀಡಾಂಗಣ ಮಾಡುವುದಕ್ಕೆ ಎಲ್ಲಿದೆ ಜಾಗ? ಆಟದ ಮೈದಾನಕ್ಕೆ ಎಲ್ಲಾ ಸೌಕರ್ಯಗಳಿರಬೇಕು. ನಮಗೆ ಎಲ್ಲಿದೆ field, ಎಲ್ಲಿದೆ ಆಟ, ನೀವು ಸರಿಯಾಗಿ ಸಾಕಿ, ನಾವು ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕವನ್ನು ತಂದು ಕೊಡುತ್ತೇವೆ. ಈಗ, ಕಂಬಳ ಓಡುತ್ತಾರಲ್ಲಾ, ಕಂಬಳದಲ್ಲಿ ಓಡುವವರ ಪೈಕಿ 4 ಜನರನ್ನು ದತ್ತು ತೆಗೆದುಕೊಳ್ಳಿ. World Champion ಆಗಿ ಬಿಡುತ್ತಾರೆ. ಆ ಕೋಣದ ಜೊತೆಯಲ್ಲಿ ಓಡುತ್ತಾರಲ್ರೀ, ಸರ್ಕಾರವಾಗಿ ನೀವು ಅವರಿಗೆ ಏನೂ ಮಾಡಬೇಡಿ, 10 ಜನರನ್ನು ಆಯ್ಕೆ ಮಾಡಿಕೊಳ್ಳಿ, 10 ಚಿನ್ನದ ಪದಕ ಬರುತ್ತದೆ. ಕಂಬಳದವರನ್ನು ಹುಡುಕಿ, ಆ ಕೋಣದ ಜೊತೆ ಏನು fast ಆಗಿ ಓಡುತ್ತಾರೆ ಎಂದರೆ ನೀವು ಹುಡುಕಬೇಕು. ಕರ್ನಾಟಕ ಸರ್ಕಾರ ಯಾವತ್ತಾದರೂ ಕ್ರೀಡಾ ರಂಗದ ಬಗ್ಗೆ, ಕ್ರೀಡೆ ಬಗ್ಗೆ ಆಲೋಚನೆ ಮಾಡಿ ಏನಾದರೂ ಮಾಡಿದ್ದೀರಾ? ಬೇಕಾದಷ್ಟು ಜನ ಇದ್ದಾರೆ. ಅದು ಆಟದ ಪ್ರಶ್ನೆಯಲ್ಲ, ಎಲ್ಲಾ ಸ್ನೇಹಿತರುಗಳಿಗೆ ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ,

ತಾವು 6 ಅಡಿ 2 ಅಂಗಲ ಇದ್ದೀರಿ. ನಿಮ್ಮನ್ನು ಎಂಥ player ನ್ನಾಗಿ ಮಾಡಬಹುದಾಗಿತ್ತು, ಏಕೆ ಬಂದಿರಿ ಇಲ್ಲಿಗೆ, international player ಮಾಡಬಹುದಾಗಿತ್ತು. Volley ball, basket ball. . . .

ಅಧ್ಯಕ್ಷರು: ನಾನು volley ball ಆಡುತ್ತಿದ್ದೆನು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ತಾವು ವಾಲಿಬಾಲ್ ಆಟವಾಡಿ ಇಲ್ಲಿಗೆ ಏಕೆ ಬಂದಿರಿ? ಈ ಬಾಲ್‌ಗಳೆನ್ನೆಲ್ಲಾ ನೋಡುವುದಕ್ಕೆ ಬಂದರಾ? ಸರಿಯಾಗಿ ಬಾಲ್ ಹೊಡೆದರೆ ನೆಲ ತೂತಾಗಬೇಕಿತ್ತು. ಅಂಥ height ಇದ್ದೀರಿ. ಎಂಥ height, ಏನು ಕಥೆ. ನಾನೇನು ಸುಮ್ಮನೆ ನಿಮ್ಮನ್ನು ಹೊಗಳುವುದಕ್ಕೋಸ್ಕರ ಹೇಳುತ್ತಿಲ್ಲ. ನಿಮ್ಮಂಥವರನ್ನು ದತ್ತು ತೆಗೆದುಕೊಂಡು ಸಾಕಿದ್ದರೆ World Champion ಮಾಡಬಹುದಾಗಿತ್ತು. ಎಂತೆಂಥ ಬಡವರು, ಪೀಲೆ ಅವರ ತಾಯಿ ಕೂಲಿ ಮಾಡುತ್ತಿದ್ದರು. ಅವರ ತಾಯಿಯ ಬಟ್ಟೆಯನ್ನು ತೆಗೆದುಕೊಂಡು ಆಟವಾಡಿಕೊಂಡು ರಸ್ತೆಗೆ ಬಂದರು. 17ನೇ ವಯಸ್ಸಿಗೆ foot ball ನಲ್ಲಿ world cup ಪಡೆದರು. ಈ ದೇಶದಲ್ಲಿ ಇಷ್ಟೊಂದು ಪ್ರಮಾಣದಲ್ಲಿ 120 ಕೋಟಿ ಜನರನ್ನು ಸೃಷ್ಟಿ ಮಾಡಿ ಇಟ್ಟುಕೊಂಡಿದ್ದೇವೆ. ಒಂದು ಪದಕವೂ ಇಲ್ಲ, ಎಂಥದ್ದೂ ಇಲ್ಲ. ನಾನ್ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಒಂದು ದೇಶದ ಮಾನವ ಶಕ್ತಿಯ ಮಾನದಂಡ ಜಗತ್ತಿನಲ್ಲಿ ಅಳತೆ ಮಾಡುವುದು ಹೇಗೆಂದರೆ ಜಗತ್ತಿನಲ್ಲಿ ಎಲ್ಲಿ ಎಷ್ಟು ಚಿನ್ನದ ಪದಕ ತೆಗೆದುಕೊಳ್ಳುತ್ತಾರೆಯೋ ಅಲ್ಲಿ ಯುವಶಕ್ತಿಗೆ ಬಹಳ ದೊಡ್ಡ ಗೌರವವಿದೆ. ಇದೊಂದು ಮಾನದಂಡವಾಗಿದೆ. ಚೈನಾ ದೇಶವನ್ನು ನೋಡಿ, ಇಡೀ ಚೈನಾ ಮಾಡಿದಂಥ ಎರಡೇ ಒಲಂಪಿಕ್ಸ್, 1600 ಕೋಟಿ, 1 ಲಕ್ಷದ 60 ಸಾವಿರ ಕೋಟಿ ಖರ್ಚು ಮಾಡಿದರು, ಒಂದು ಬಾರಿ 1 ಲಕ್ಷ ಕೋಟಿ ರೂಪಾಯಿ ಖರ್ಚು ಮಾಡಿದರು. ಇಡೀ ಜಗತ್ತಿಗೆ ಕೈಗಾರಿಕಾ ವಸ್ತುಗಳನ್ನು ಕ್ರೀಡಾ ರಂಗದಿಂದ ಪರಿಚಯ ಮಾಡಿಸಿಕೊಟ್ಟರು. 4 ವರ್ಷ 1400 ಜನರನ್ನು ದತ್ತು ತೆಗೆದುಕೊಂಡಿದ್ದರು. ನಾವು ಯಾರನ್ನು ದತ್ತು ತೆಗೆದುಕೊಂಡಿದ್ದೇವೆ? ಅದೊಂದು ಕ್ರಿಕೆಟ್ ಎನ್ನುವ ಕ್ರೀಡೆಯನ್ನು ಇಟ್ಟುಕೊಂಡಿದ್ದೇವೆ. ಈ ಕಡೆ 3 ದೊಣ್ಣೆ, ಆ ಕಡೆ 3 ದೊಣ್ಣೆ, ಇಬ್ಬರು ಬಿಳಿ ಬಟ್ಟೆ ಹಾಕಿಕೊಂಡು ಬರುತ್ತಾರೆ. 11 ಜನ ಆ ಕಡೆಯಿಂದ

ಬರುತ್ತಾರೆ. (ಈ ಹಂತದಲ್ಲಿ ಕೈಸನ್ನೆಯಿಂದ ತಮ್ಮ ಮಾತುಗಳಲ್ಲಿ ಕ್ರಿಕೆಟ್ ಆಟದ ಬಗ್ಗೆ ವರ್ಣಿಸಿದರು) ಇವನು ಹೀಗನ್ನುತ್ತಾನೆ, ಅವನು ಹೀಗನ್ನುತ್ತಾನೆ, ನಾವು ಕುಳಿತಿರುವವರು ಚಪ್ಪಾಳೆ ಮೂಲಕ ಎರಡೂ ಕೈಗಳನ್ನು ಒಟ್ಟಾಗಿ ಸೇರಿಸುತ್ತೇವೆ, ಒಂದು ಪೆಪ್ಸಿ, ಕೋಕಾ–ಕೋಲಾವನ್ನು ಕುಡಿಯುತ್ತೇವೆ. ಬಾಲ್ ಯಾವ ಕಡೆಗೆ ಹೋಯಿತು, ಎಲ್ಲಿಗೆ ಹೋಯಿತು ಒಂದೂ ಗೊತ್ತಾಗುವುದಿಲ್ಲ. ಕ್ರಿಕೆಟ್ ಶುರುವಾದ ಪ್ರಾರಂಭದಲ್ಲಿ ಒಬ್ಬ ಬಾಲ್‌ನ್ನು ಹೊಡೆದುಬಿಟ್ಟನು, ಹುತ್ತದ ಕೋವೆಯೊಳಗೆ ಬಾಲ್ ಹೊರಟು ಹೋಯಿತು. ಆ ಬಾಲ್ ತೆಗೆಯುವವರೆಗೂ ಓಡುತ್ತಲೇ ಇದ್ದನು. 50 ರನ್, 51 ರನ್, ಯಾರೂ ಹುತ್ತದೊಳಗೆ ಕೈ ಹಾಕುವಂತಿಲ್ಲವಲ್ಲ. ಅಲ್ಲಿ ಹಾವು ಇದ್ದರೆ ಏನು ಮಾಡುವುದು? ಆದ್ದರಿಂದ ಕೈ ಹಾಕುವಂತಿಲ್ಲ. ಓಡುತ್ತಲೇ ಇದ್ದನಂತೆ, ಓಡುತ್ತಲೇ ಇದ್ದನಂತೆ, ಮತ್ತೊಂದು ಬಾರಿ ಕ್ರಿಕೆಟ್ ಆಡುತ್ತಿರುವುದನ್ನು ನೋಡುವುದಕ್ಕೆ ಒಬ್ಬ ಹಳ್ಳಿಯವನು ಬಂದನಂತೆ, ಇಬ್ಬರು ದಢೂತಿ ಜನ ಬಂದರಂತೆ, 11 ಜನ ಮೇಲೆ ಒಂದರಂತೆ ಬಾಲ್‌ನ್ನು ತೆಗೆದು ಇನ್ನೇನು release ಮಾಡಬೇಕಾಗಿತ್ತು ಅಷ್ಟರೊಳಗೆ ಮಳೆ ಬಂದಿತಂತೆ, ಆಗ ಆ ಹಳ್ಳಿಯವನು ಹೇಳಿದನಂತೆ, ಮಳೆ ಬರಬೇಕಾದರೆ ಈ ರೀತಿ ಎಲ್ಲಾ ದಯ್ಯಾಗಳು ಸೇರಿ ಆಟವಾಡಿದರೆ ಮಳೆ ಬರುತ್ತದೆ ಎಂದು ಹೇಳಿಕೊಂಡು ಹೋದನಂತೆ. ಕ್ರಿಕೆಟ್ ಆಟವೊಂದನ್ನು ಬಿಟ್ಟರೆ ಬೇರೆ ಆಟಕ್ಕೆ ಏಕೆ ಬೆಂಬಲವಿಲ್ಲ? ಏಕೆ ಇಲ್ಲ? ಕುಸ್ತಿಯಲ್ಲಿ 10 ವರ್ಷ ನಾವು world champion, 18 ವರ್ಷದ ಹೆಣ್ಣುಮಗಳು ಮಗು ಜನನವಾದರೆ ಆ ಕುಸ್ತಿ ಫೈಲ್ವಾನನಿಗೆ ಎದೆ ಹಾಲನ್ನು ಕುಡಿಸುತ್ತಿದ್ದಂಥ ಒಂದು ಕಾಲವಿತ್ತು. ಕುಸ್ತಿ ಆಟವೆಂದರೆ ಹುಡುಗಾಟಿಕೆಯೇ? ಆದರೆ, ಈಗ ಇದ್ಯಾವುದೂ ಇಲ್ಲ. ಯಾವುದೂ ಇಲ್ಲ. ಈಗ ಕಿವಿಗೆ earphone ಹಾಕಿಕೊಳ್ಳುವುದು, ಎಲ್ಲಾ ಯುವಕರು ಡಿಂಗ್ ಚಿಕ್ ಡಿಂಗ್ ಚಿಕ್ ಎನ್ನುವ ಮ್ಯೂಸಿಕ್‌ನ್ನು ಕೇಳುತ್ತಿರುವುದು. ಪ್ಯಾಂಟ್ ಬಿಚ್ಚುವಂತೆ ಇಲ್ಲ. ಪ್ಯಾಂಟ್‌ನೊಳಗೆ ಇಷ್ಟು ದಪ್ಪ ಕಾಲು, ಶರ್ಟ್‌ನೊಳಗೆ ಇಷ್ಟು ದಪ್ಪ ಕೈ, ಡಿಂಗ್ ಚಿಕ್ ಡಿಂಗ್ ಚಿಕ್ ಎಂದು ಬಸ್ಸಿನಲ್ಲಿ ಕುಳಿತಿದ್ದರೂ ತಲೆ, ಕೈ ಕಾಲು ಆಡಿಸುತ್ತಿರುತ್ತಾರೆ. ಯಾರಿಗೆ ರೋಗ ಬಂದಿದೆಯೋ, ಏನು ಕಥೆಯೋ, ನಾನು

ಸನ್ಮಾನ್ಯ ಮುಖ್ಯಮಂತ್ರಿಗಳೀಗೆ ಹೇಳಿದೆ, ಈ ವರ್ಷನಾದರೂ ಮಾಡಿ. 7ನೇ ತರಗತಿಯಿಂದ 12ನೇ ತರಗತಿವರೆಗೆ 10 ಮಾರ್ಕ್ಸ್, ಯಾರು ದೇಹವನ್ನು ಚೆನ್ನಾಗಿ ಇಟ್ಟುಕೊಂಡಿರುತ್ತಾರೆ, ಆಟದಲ್ಲಿ champion ಆಗಿರುತ್ತಾರೆಯೋ ಅಂಥವರಿಗೆ 10 ಮಾರ್ಕ್ಸ್ ಎಂದು ಘೋಷಣೆ ಮಾಡಿ, ಇಡೀ ಕರ್ನಾಟಕದ 50 ಭಾಗ ಜನರ ಆರೋಗ್ಯ ಸರಿಯಾಗುತ್ತದೆಂದು 3 ವರ್ಷಗಳಿಂದ ಕೂಗಿ ಕೊಳ್ಳುತ್ತಿದ್ದೇನೆ. ಏಕೆ, ನೀವು ಹೀಗೆ ಇದ್ದೀರಿ? ನಿಮಗಂತೂ ಗೊತ್ತಿಲ್ಲ, ಇಲ್ಲಿ ಯಾರು sportsman ಎನ್ನುವುದು ಯಾರಿಗೂ ಗೊತ್ತಿಲ್ಲ. ಇದ್ದಾರೆ, ನಮ್ಮ ಅಂಬರೀಶ್‌ರವರು ಒಳ್ಳೆಯ sportsman ಇರಬಹುದು. ಕಲಾವಿದರು, sportsman etc., etc., ಅದನ್ನು ಬಿಡಿ ಅವರ ಸುದ್ದಿಯನ್ನು ನಾನು ಮಾತನಾಡುವುದಿಲ್ಲ. ಬೇಡ.

**ಶ್ರೀ ಬಸವರಾಜ ರಾಯರೆಡ್ಡಿ:** ಅಂಬರೀಶ್‌ರವರಿಂದ ಈಗ sports ಆಡುವುದಕ್ಕೆ ಆಗುವುದಿಲ್ಲ. ಈಗ ಮಾಜಿ ಆಗಿದ್ದಾರೆ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಇಬ್ಬರು ಒಳ್ಳೆಯ sportsmen ಬಂದರಂತೆ, ಒಬ್ಬ ದಪ್ಪಗಿರುವವನು, ಮತ್ತೊಬ್ಬ ಸಣ್ಣಗಿರುವವನು ತಿರುಗಿಸಿ ಎಸೆಯುತ್ತಾರಲ್ಲ ಆ ಹ್ಯಾಮರ್ ತೆಗೆದುಕೊಂಡು ಬಂದರಂತೆ. ಸನ್ಮಾನ್ಯ ಸಭಾಧ್ಯಕ್ಷರೆ, ಈ ದಪ್ಪಗಿರುವವನು ಎಸೆದನಂತೆ 300 ಮೀಟರ್ ದೂರ ಹೊರಟು ಹೋಯಿತಂತೆ. ಸಣ್ಣಗಿರುವವನು ತಿರುಗಿ ಎಸೆದರೆ, ಇವನ್ನೇ 300 ಮೀಟರ್ ದೂರಕ್ಕೆ ಹೊರಟು ಹೋದನಂತೆ. ಆ ರೀತಿಯಲ್ಲಿ ನಾವು sportsman ಗಳನ್ನು ತಯಾರು ಮಾಡುತ್ತಿದ್ದೇವೆ ಅಷ್ಟೆ. ಆದ್ದರಿಂದ, ಸನ್ಮಾನ್ಯ ಸಭಾಧ್ಯಕ್ಷರೆ, ಕೊನೆಯದಾಗಿ, ಕೊನೆಯ ವಿಷಯ ತಮ್ಮ ಹತ್ತಿರ ಮಾತನಾಡುವಂಥದ್ದು, ಲೋಕಾಯುಕ್ತವನ್ನು strengthen ಮಾಡುವುದಕ್ಕೆ ನಮಗೆಲ್ಲಾ ಏನಾಗಿದೆ? ಬಹಳ ಚರ್ಚೆ ಮಾಡುತ್ತಿದ್ದೇವೆ, ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದೇವೆ. ಎಚ್ಚರಿಕೆ ಗಂಟೆಯೂ ಸಹ ನಮಗೆ ನಿಮಗೆ ಬಂದಿದೆ. ಇವತ್ತು ಆಮ್ ಆದ್ಮಿ ಪಾರ್ಟಿಯವರು ಜಾತಿ ಮತ್ತು ದುಡ್ಡು ಇದ್ಯಾವುದೂ ಇಲ್ಲದೆಯೇ ಜನಾಂದೋಲನದ ಮೂಲಕ ಚುನಾವಣೆಯಲ್ಲಿ ಗೆದ್ದಿದ್ದಾರೆ. ಜನ ಜಾಗೃತರಾಗಿದ್ದಾರೆ, ರಾಷ್ಟ್ರೀಯ ಪಕ್ಷಗಳಿಗೆ ಎಚ್ಚರಿಕೆ ಗಂಟೆಯನ್ನು

ಹೊಡೆದಿದ್ದಾರೆ. ಜನ ಸಾಮಾನ್ಯರ ಬದುಕಿನ ಬಗ್ಗೆ neglect ಮಾಡಿದರೆ ನಮ್ಮನ್ನು ನಿಮ್ಮನ್ನು ಯಾರನ್ನೂ ಉಳಿಸುವುದಿಲ್ಲವೆನ್ನುವ ತೀರ್ಪು ಅದು. ಹಣವಿಲ್ಲದೆಯೇ ಗೆಲ್ಲುವಂಥ ಒಂದು ವಿಚಾರ, ಭ್ರಷ್ಟಾಚಾರದ ವಿರುದ್ಧ ಒಂದೇ voice ಗೆ ಇಷ್ಟು ದೊಡ್ಡ ಬದಲಾವಣೆಯಾಗಿದೆ. ನಮಗೆಲ್ಲರಿಗೂ ಎಚ್ಚರಿಕೆ ಗಂಟೆಯನ್ನು ಕೊಟ್ಟಿದ್ದಾರೆ. ಆದ್ದರಿಂದ, ರಾಜಕಾರಣ ಶುದ್ಧೀಕರಣಗೊಳಿಸುವುದರಲ್ಲಿ ನಾವೆಲ್ಲಾ ಆಲೋಚನೆ ಮಾಡದೇ ಇದ್ದರೆ ಎಲ್ಲರನ್ನೂ ಒದ್ದೋಡಿಸುವಂಥ ಕಾಲ ಬರಬಹುದು. ಆದ್ದರಿಂದ ನಾವೆಲ್ಲಾ ಆಮ್ ಆದ್ಮಿ ಪಾರ್ಟಿ ಮೂಲಕ ಪ್ರಜಾಪ್ರಭುತ್ವ ಮೌಲ್ಯವನ್ನು ರಕ್ಷಣೆ ಮಾಡುವುದರಲ್ಲಿ ಬಹಳ ಗಂಭೀರವಾಗಿರಬೇಕು. ನಾವೇನೋ ಸಮಾಧಾನ ಮಾಡಿಕೊಳ್ಳಬಹುದು. ನಾವು 3 ಕಡೆ ಗೆದ್ದಿದ್ದೇವೆಂದು, ನಾವು ಸೊನ್ನೆಯಾದರೂ ಪರವಾಗಿಲ್ಲ, ಅವರು 3 ಕಡೆ ಗೆದ್ದಿದ್ದಾರೆಂದು. . . . .

**ಅಧ್ಯಕ್ಷರು:** ಪುಟ್ಟಣ್ಣಯ್ಯನವರೆ ನೀವು ಪ್ರಸ್ತಾಪ ಮಾಡಿದ್ದು ಲೋಕಾಯುಕ್ತ ಬಗ್ಗೆ, ಇರಲಿ, ಹೇಳಿ, ಲೋಕಾಯುಕ್ತವನ್ನು ಹೇಗೆ ಸರಿಮಾಡಬೇಕೆನ್ನುವುದರ ಬಗ್ಗೆ ಹೇಳಿ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನಾನು ಭ್ರಷ್ಟಾಚಾರಕ್ಕೆ ಲಿಂಕ್ ಕೊಡುವುದಕ್ಕಾಗಿ ಹೇಳಿದೆ. ಕಾನೂನು ಮಾಡಬೇಕು. ಸನ್ಮಾನ್ಯ ಸಭಾಧ್ಯಕ್ಷರೆ, 25 ವರ್ಷದಿಂದ ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂಥ ಒಂದು ಕಾನೂನನ್ನು ಮಾಡಿ. Unanimous resolution ಮಾಡಿ ಘೋಷಣೆ ಮಾಡಿ. ಏಕೆ ಆಗುವುದಿಲ್ಲ, ಭ್ರಷ್ಟಾಚಾರ, ಭ್ರಷ್ಟಾಚಾರ ಎಂದು ಬರೀ ಭಾಷಣ ಮಾಡುತ್ತಾ ಕುಳಿತಿದ್ದೇವೆ. ಅದರ ಬಗ್ಗೆ ಏನೂ ಕಾನೂನು ಮಾಡದೇ ಇದ್ದರೆ ಹೇಗೆ ಬದಲಾವಣೆಯಾಗುತ್ತದೆ? ತಾವು ಹೇಳುತ್ತಿರುವುದು ಸರಿ, ಭ್ರಷ್ಟಾಚಾರದ ಬಗ್ಗೆ ಎಲ್ಲಿವರೆಗೆ, ಎಲ್ಲಿಂದ, ಯಾರು, ನೊಂದಿರುವಂಥ ವ್ಯಕ್ತಿಗಳು ಯಾರು? ಭ್ರಷ್ಟಾಚಾರದ ಬಗ್ಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕು.

**ಶ್ರೀ ಕೆ.ಆರ್. ರಮೇಶ್ ಕುಮಾರ್:** ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಅಧ್ಯಕ್ಷರೆ, ತಾವು ಕೇಳಿದಿರಿ, ಆದರೆ, ಈ

ಲೋಕಾಯುಕ್ತದವರಿಗೆ ಸರಿಯಾಗಿ staff ಕೊಡದೆ, ಜವಾಬ್ದಾರಿ ನಿಗದಿ ಮಾಡದೆ, ಅವರಿಗೇನು ಹೆಚ್ಚು ಕೆಲಸವಿಲ್ಲ. ಅವರೀಗ ಏನು ಮಾಡುತ್ತಿದ್ದಾರೆಂದು ಗೊತ್ತಿದೆಯೇ, regular administration ಗೆ interfere ಆಗುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ petitioners ಒಂದು ಅರ್ಜಿ ಕೊಡುವುದು, ತಮಗೆ jurisdiction ಇದೆಯೋ, ಇಲ್ಲವೋ, ಇದರಿಂದ ನಮಗೇನು ಸಂಬಂಧ ಎನ್ನುವುದನ್ನು ಸಹ ನೋಡುತ್ತಿಲ್ಲ, ಈಗ ಅವರೊಂದು overseeiong authority ಯಾಗಿ ಬಿಟ್ಟಿದ್ದಾರೆ. So, they have given up their main job.

**ಅಧ್ಯಕ್ಷರು:** ರಮೇಶ್‌ಕುಮಾರ್‌ರವರೆ, ಈಗ ಅದಕ್ಕೊಂದು ಕಾನೂನಿದೆ. ಮೊದಲನೇ ಬಾರಿಗೆ ಬಂದಿತು, ಈಗ ಅನುಭವ ಆಗಿದೆ. ಇದನ್ನು effective machinery ಮಾಡಬೇಕೆನ್ನುವುದಾದರೆ ಈಗಿರುವಂಥ ಕಾನೂನಿನಲ್ಲಿ ಏನು ಬದಲಾವಣೆ ಮಾಡಬೇಕೆನ್ನುವ ಸಲಹೆ ಇಟ್ಟುಕೊಂಡು ಚರ್ಚೆ ಮಾಡಿದರೆ ಸರ್ಕಾರದವರು ಮಾಡುತ್ತಾರೆ. ಕಾನೂನು ಸಚಿವರು ಇಲ್ಲೇ ಇದ್ದಾರೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ಮಾನ್ಯ ಅಧ್ಯಕ್ಷರೆ, let the House take up, ತಾವೇ lead ಕೊಡಿ, exclusive ಆಗಿ ಬಜೆಟ್ ಸೆಷನ್ ಸೇರಿದಾಗ ಒಂದು ದಿವಸ ಅದಕ್ಕಾಗಿ ಮೀಸಲಿಡಿ. ಸಮಗ್ರವಾಗಿ ಎಲ್ಲರೂ let us all come forward with good suggestions, we have to do that. ಅದನ್ನು ಮಾಡಲೇಬೇಕು. ಒಂದು ದಿವಸ ಪ್ರತ್ಯೇಕವಾಗಿ ಚರ್ಚೆ ಮಾಡೋಣ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ಅಧ್ಯಕ್ಷರೆ, ಅದೇನಾಗುತ್ತದೆಯೋ, ತಮ್ಮ ಅಧ್ಯಕ್ಷತೆಯಲ್ಲಿ ಚರ್ಚೆ ಮಾಡೋಣ. ಎರಡು ವಿಷಯ ಚರ್ಚೆಯಾಗಬೇಕು. ಜಾತಿ ಮತ್ತು ಧರ್ಮ ಮತ್ತು ಭ್ರಷ್ಟಾಚಾರ. ಇದು ಒಂದು ರೀತಿ ಭ್ರಷ್ಟಾಚಾರದ ಮಾರ್ಗವೇ ಎರಡೂ ವಿಷಯಗಳು ಸಹ ಚರ್ಚೆಯಾಗಲಿ. ಎರಡೂ ವಿಷಯ ಚರ್ಚೆಯಾಗದೇ ಇದ್ದರೆ . . . .

**ಅಧ್ಯಕ್ಷರು:** ಜಾತಿ ಮತ್ತು ಧರ್ಮದ ಬಗ್ಗೆ ಹೋಗಬೇಡಿ. ಆಗವುದೂ ಇಲ್ಲ, ಹೋಗುವುದೂ ಇಲ್ಲ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಏನಾಗುವುದಿಲ್ಲ ಸಾರ್, ಜಾತಿ, ಧರ್ಮಕ್ಕೆ ಕೈ ಹಾಕಿದರೆ ಏನೂ ಆಗುವುದಿಲ್ಲ.

**ಅಧ್ಯಕ್ಷರು:** ಅಷ್ಟು ಸುಲಭವಲ್ಲ ಸ್ವಾಮಿ, ಈ ದೇಶದಲ್ಲಿ, ಈ ಸಮಾಜದಲ್ಲಿ ಜಾತಿ ಕಿತ್ತು ಹಾಕುವುದು, ಧರ್ಮದ ಬಗ್ಗೆ ಮಾತನಾಡುವುದು.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ಅಧ್ಯಕ್ಷರೆ, ಜಾತಿ ಕಿತ್ತು ಹಾಕಿ ಎಂದು ಹೇಳುತ್ತಿಲ್ಲ. ಸುಮ್ಮನೆ ಇರುವುದಕ್ಕೆ ಏನು ಮಾಡಬೇಕೆಂದು ಅಷ್ಟೆ. . .

**ಅಧ್ಯಕ್ಷರು:** ಸುಮ್ಮನೆ ಇರದೇ ಹೋದರೆ ನಿಮ್ಮ ಬೇಳೆಕಾಯಿ ಬೇಯುವುದಿಲ್ಲ. ಸುಮ್ಮನೆ ಇದ್ದರೆ ಬೇಯುವುದಿಲ್ಲ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ನಾವು ನಾಳೆ ಬೆಳಗ್ಗೆ ಕಿತ್ತು ಹಾಕುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸುಮ್ಮನೆಯಾದರೂ ಇರಬೇಕಲ್ಲ.

**ಅಧ್ಯಕ್ಷರು:** ಈಗ ಜಾತಿ. . . .

**ಶ್ರೀ ಜೆ.ಟಿ. ಪಾಟೀಲ್:** ಬಸವಣ್ಣನವರಿಗೆ ಆಗಲಿಲ್ಲ. ಈಗೇನಾಗುತ್ತದೆ.

**ಅಧ್ಯಕ್ಷರು:** ಈಗ ರಮೇಶ್‌ಕುಮಾರ್‌ರವರು ಹೇಳಿದ್ದಾರಲ್ಲ, ಆ ವಿಚಾರದಲ್ಲಿ ಮಾಡೋಣ. ಮಾಡಬೇಕು.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ strengthen ಮಾಡುವುದು ಮತ್ತು ಭ್ರಷ್ಟಚಾರದ ಬಗ್ಗೆ ದೊಡ್ಡ ಚರ್ಚೆಯಾಗಲಿ ಎಂದು ಹೇಳುತ್ತಾ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):** ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ವಂದನಾ ಭಾಷಣಕ್ಕೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಸರ್ಕಾರ ಮಾನ್ಯ ಘನತೆವೆತ್ತ ರಾಜ್ಯಪಾಲರ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ನನ್ನ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಹಲವಾರು ಸುಧಾರಣಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ರಾಜ್ಯದ ಸಮಸ್ತ ನಾಗರೀಕರ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಜನಪರ, ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತ ನೀಡಲು ನನ್ನ ಸರ್ಕಾರ ಬದ್ಧವಾಗಿದೆ ಎಂಬ ಮಾತನ್ನು ಹೇಳಿಸಿದೆ. ಬಹುಶ: ನಾನು ಅಂದುಕೊಳ್ಳುತ್ತೇನೆ. ಇದು ಕೇವಲ ಭರವಸೆ ಮಾತ್ರ, ಆದರೆ ಬದ್ಧತೆ ಏನೂ ಕಾಣುತ್ತಿಲ್ಲ. ಯಾವುದೇ ಯೋಜನೆಗಳು, ಕಾರ್ಯಕ್ರಮಗಳು ಸರ್ಕಾರ ಏನೂ ಘೋಷಣೆ ಮಾಡುತ್ತದೆ, ಅವು ಸುಸೂತ್ರವಾಗಿ ಜಾರಿಗೆ ಬರಬೇಕಾದರೆ ಸಾಕಷ್ಟು ಸಿಬ್ಬಂದಿ ಬೇಕು. ಸರ್ಕಾರವೇ ನಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವ ಕಾಲದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಎಲ್ಲಾ ಇಲಾಖೆಗಳಲ್ಲಿ ಸರಾಸರಿ ಶೇಕಡಾ 40 ರಷ್ಟು ಹುದ್ದೆಗಳು ಖಾಲಿಯಿವೆ ಎಂಬ ಮಾತನ್ನು ಹೇಳಿದ್ದಾರೆ. ಇಷ್ಟೊಂದು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಸರ್ಕಾರದ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಯಾವ ರೀತಿ ಜಾರಿ ಮಾಡಲು ಸಾಧ್ಯ? ಇಂದು ಸರ್ಕಾರ ಹಣವನ್ನು ನಗದಿ ಮಾಡುತ್ತದೆ. ನಿಗದಿಯಾದ ಹಣದಲ್ಲಿ ಎಷ್ಟು ಬಿಡುಗಡೆಯಾಯಿತು, ಬಿಡುಗಡೆಯಾದ ಹಣದಲ್ಲಿ ಎಷ್ಟು ಖರ್ಚಾಯಿತು? ವೆಚ್ಚವಾದ ಹಣದಲ್ಲಿ ಎಷ್ಟು ಜನರಿಗೆ ತಮ್ಮ ಆರ್ಥಿಕ ಶಕ್ತಿಯನ್ನು ವೃದ್ಧಿ ಮಾಡಿಕೊಳ್ಳುವುದಕ್ಕೆ ಸಹಾಯವಾಯಿತು ಎಂಬ ಚರ್ಚೆ ಸರ್ಕಾರದಲ್ಲಿ ಕೂಡ ಆಗಬೇಕಾಗುತ್ತದೆ. ಅದಲ್ಲದೆ ಕೇವಲ ಘೋಷಣೆಯಿಂದ ಇದಾಗಲು ಸಾಧ್ಯವಿಲ್ಲ ಎಂಬುದನ್ನು ಕೂಡ ಹೇಳುತ್ತಾ, ಇಂದು ಸರ್ಕಾರ ಕೂಡಾ ಸೇವೆಗಳು ರೈತರ, ಬಡವರ ಮನೆ ಬಾಗಿಲಿಗೆ ಹೋಗುತ್ತದೆಂಬ ಘೋಷಣೆಯನ್ನು ಮಾಡುತ್ತಿದ್ದಾರೆ. ಆದರೆ ಇವೆಲ್ಲವನ್ನೂ ಮಾಡಲು ಸರ್ಕಾರ ಎಷ್ಟರಮಟ್ಟಿಗೆ ಸಿಬ್ಬಂದಿಯನ್ನು ಕೊಟ್ಟಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಸರ್ಕಾರದಲ್ಲಿ ಆರೋಗ್ಯ ಇಲಾಖೆ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರ ಜೊತೆಗೆ 4ನೇ ದರ್ಜೆಯ ನೌಕರರುಗಳಿಲ್ಲ. ಪ್ರಿನ್ಸಿಪಾಲರೇ ಕಾಲೇಜಿಗೆ ಹೋಗಿ ಬೀಗ ತೆಗೆದು ಕಾಲೇಜನ್ನು ನೋಡಿಕೊಳ್ಳಬೇಕಾದ ಪರಿಸ್ಥಿತಿ ಉದ್ಭವವಾಗಿದೆ. ಹೈಸ್ಕೂಲ್‌ಗಳಲ್ಲಿ ಅದೇ ರೀತಿಯ ಪರಿಸ್ಥಿತಿ. ಅಂದರೆ 4ನೇ ದರ್ಜೆಯ ನೌಕರರನ್ನು ಕೊಡದೆ ಹಿಂದೆ ನಾವೆಲ್ಲಾ ಶಿಷ್ಯರಾಗಿದ್ದಾಗ ಶಿಷ್ಯರೇ ಬೀಗ ತೆಗೆಯುವುದು, ಕಸ ಗುಡಿಸುವ

ಕೆಲಸವನ್ನು ಮಾಡುತ್ತಿದ್ದೆವು. ಆದರೆ ಇಂದು ಯಾರೂ ಆ ರೀತಿ ಮಾಡುವುದಿಲ್ಲ. ಎಲ್ಲಾ ಇಲಾಖೆಯಲ್ಲಿಯೂ ಅಧಿಕಾರಿಗಳಿದ್ದಾರೆ. ಆದರೆ, 3ನೇ ಮತ್ತು 4ನೇ ದರ್ಜೆ ಅಧಿಕಾರಿಗಳು ಯಾವುದೇ ಕಚೇರಿಗಳಲ್ಲಿ ಇಲ್ಲ. ಮೀನುಗಾರಿಕೆ ಇಲಾಖೆ, ಕೃಷಿ ಇಲಾಖೆ ಇರಬಹುದು ಅಧಿಕಾರಿಗಳಿದ್ದಾರೆ. 3 ಮತ್ತು 4ನೇ ದರ್ಜೆ ಅಧಿಕಾರಿಗಳಿಲ್ಲ. ಅದರಿಂದ ಸಾಕಷ್ಟು ತೊಂದರೆಯಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ, ಮಾನ್ಯ ಮಂತ್ರಿಗಳು ಎಲ್ಲಿಯೋ ಹೊರಗೆ ಹೋಗಿದ್ದಾರೆಂದು ಕಾಣುತ್ತದೆ. Water Board, ವಿಶೇಷವಾಗಿ ಕುಡಿಯುವ ನೀರಿಗಾಗಿ ಒಂದು ವಿಭಾಗವನ್ನು ಮಾಡಿದ್ದಾರೆ. ಮುಂಚೆ ಎಷ್ಟೋ ಚೆನ್ನಾಗಿತ್ತು. ಅದಾದ ಮೇಲೆ ಅಲ್ಲಿ AEE ಇದ್ದಾರೆ. ಒಬ್ಬರೇ ಒಬ್ಬರು JE ಇಲ್ಲ, AE ಇಲ್ಲ. ನನ್ನ ಕ್ಷೇತ್ರದಲ್ಲಿ 6 ಹುದ್ದೆಗೆ ಒಬ್ಬರಿದ್ದಾರೆ. 26 ಪಂಚಾಯಿತಿಗಳು ಬರುತ್ತವೆ. ಯಾವುದೇ ಕೆಲಸವಾಗುತ್ತಿಲ್ಲ. ಇದು ಒಂದು ಉದಾಹರಣೆಯನ್ನು ತಮಗೆ ಕೊಟ್ಟೆ. ಅದೇ ರೀತಿ ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ ಮಾಡಿದ್ದಾರೆ. ಬಹುಶ: ಆ ಯೋಜನೆಯಲ್ಲಿ ಜನಸಾಂದ್ರತೆಯ ಆಧಾರದ ಮೇಲೆ ಯೋಜನೆಗೆ ಒಪ್ಪಿಗೆ ಕೊಡುತ್ತಿದ್ದಾರೆ. ಆದರೆ ನಮ್ಮ ಮಲೆನಾಡು ಭಾಗದಲ್ಲಿ ನಮ್ಮ ರಾಜ್ಯದಲ್ಲಿ 11 ಜಿಲ್ಲೆಗಳಿವೆ. ರಾಷ್ಟ್ರಾದ್ಯಂತ ಈಶಾನ್ಯ ಭಾಗದಲ್ಲಿದೆ, ಕೆಲವು ಪಶ್ಚಿಮ ಭಾಗದಲ್ಲಿ ಜನಸಾಂದ್ರತೆ ಕಡಿಮೆ ಇರುವ, ವಿಸ್ತೀರ್ಣ ಹೆಚ್ಚಿರುವ ಭೌಗೋಳಿಕವಾಗಿ ವ್ಯತ್ಯಾಸವಿರುವ ಹಳ್ಳಿಗಳಿವೆ. ಅಂತಹ ಹಳ್ಳಿಗಳಿಗೆ ವಿಶೇಷವಾಗಿ ಕಾನೂನನ್ನು ರೂಪಿಸಿ ಅಲ್ಲಿಯೂ ಕೂಡ ಅವನಿಗೆ ಕುಡಿಯುವ ನೀರಿನ ಹಕ್ಕಿದೆ, ಬದುಕುವ ಹಕ್ಕಿದೆ. ಅಂತಹವರಿಗೂ ಕೂಡ ಅನುಕೂಲವನ್ನು ಕಲ್ಪಿಸುವ ಕಾನೂನು ಬರಬೇಕು. ನನ್ನ ಕ್ಷೇತ್ರದಲ್ಲಿ ಸುಮಾರು 2006–07 ನೇ ಸಾಲಿನಲ್ಲಿ ಸುಮಾರು ಆರುವರೆ ಕೋಟಿ ರೂ. ವೆಚ್ಚಕ್ಕೆ ನೈಸರ್ಗಿಕ ನೀರು. ನಾವೇನು ಭೂಮಿಯಲ್ಲಿ ನೀರು ತೆಗೆಯುವಂತಹುದೇನಿಲ್ಲ. ಸುಮಾರು 70 ಹಳ್ಳಿಗಳಿಗೆ ನೀರು ಕೊಡುವುದಕ್ಕೆ ಅಂದಾಜು ಬಂದರೆ ನನ್ನ ಪರಿಷ್ಕರಣಾ ಅಂದಾಜನ್ನು ಕಳೆದ ವರ್ಷ ಮಾಡಿಸಿ ಸುಮಾರು ಹನ್ನೆರಡುವರೆ ಕೋಟಿ ರೂ.ಗಳಿಗೆ ಕೊಡಿಸಿದ್ದೇನೆ. ನಾನು ಕೂಡ ಒತ್ತಾಯ ಮಾಡುತ್ತಿದ್ದೇನೆ. ಅಧಿಕಾರಿಗಳು ತಮ್ಮದೇ ಆದಂತಹ ಕಾನೂನಿನ ಅಡ್ಡಿ ಇದೆ ಎಂದು ಹೇಳಿ

scheme ಮಾಡುತ್ತಿಲ್ಲ. ಹಾಗಾಗಿ ಮಲೆನಾಡಿಗೆ ವಿಶೇಷವಾಗಿ ಆ scheme ಗಳನ್ನು ಕೊಡಬೇಕೆಂದು ಹೇಳುತ್ತಾ, ಗ್ರಾಮ ವಿಕಾಸ ಯೋಜನೆ . . .

**ಅಧ್ಯಕ್ಷರು:** ಯಾವ ಕಾರಣಕ್ಕೆ ಕೊಡುತ್ತಿಲ್ಲ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ಅಲ್ಲಿ ಏನಾಗಿದೆ ಎಂದರೆ, ಉದಾಹರಣೆಗೆ ಮೈದಾನ ಪ್ರದೇಶದಲ್ಲಿ ಒಂದು ಊರಿನಲ್ಲಿ 200–300 ಮನೆಯಿರುತ್ತದೆ. ಅಲ್ಲಿಗೆ scheme ಆದರೆ ಇವರಿಗೆ estimate ಕಡಿಮೆಯಾಗುತ್ತದೆ. ನಮ್ಮ ಮಲೆನಾಡಿನಲ್ಲಿ ಸುಮಾರು 20 ಮನೆಗೆ 2 ಕಿ.ಮೀ radius ನಲ್ಲಿ 20 ಮನೆಗಳು ಬರುತ್ತವೆ. ಅಂತಹ ಕಡೆ ಜನಸಾಂದ್ರತೆ ಇಲ್ಲ, ವೆಚ್ಚ ಹೆಚ್ಚು ಬರುತ್ತದೆಂಬ ಕಾರಣಕ್ಕೆ ಅದನ್ನು ಅಡ್ಡಿ ಮಾಡುತ್ತಿದ್ದಾರೆ. ಅದಕ್ಕಾಗಿ ವಿಶೇಷ ನಿಯಮಾವಳಿಗಳನ್ನು ರೂಪಿಸಿ ವಿಶೇಷ ಪ್ರಕರಣಗಳೆಂದು ಮಾಡಬೇಕೆಂದು ಒತ್ತಾಯಿಸುತ್ತೇನೆ. ಅದೇ ರೀತಿ ಗ್ರಾಮ ವಿಕಾಸ ಯೋಜನೆಯಲ್ಲಿ ಇತ್ತೀಚೆಗೆ ಆದೇಶ ಹೊರಡಿಸಿದ್ದಾರೆ. 2014–15ನೇ ಸಾಲಿನಲ್ಲಿ ಮೂರು ವರ್ಷದಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಜಾರಿಗೆ ತರಬೇಕೆಂದು. ಅದರಲ್ಲಿ ಏನು ಮಾಡಿದ್ದಾರೆಂದರೆ ಕನಿಷ್ಟ ಜನಸಂಖ್ಯೆಯನ್ನು ಸಾವಿರಕ್ಕೆ ನಿಗದಿ ಮಾಡಿದ್ದು, ನಮ್ಮ ಮಲೆನಾಡು ಭಾಗಕ್ಕೆ ಸಾವಿರ ಜನಸಂಖ್ಯೆ ಬಹಳ ಹೆಚ್ಚಾಗುತ್ತದೆ. ಆದುದರಿಂದ ಕನಿಷ್ಟ 500 ಜನಸಂಖ್ಯೆಯನ್ನು ನಿಗದಿ ಮಾಡಿದರೆ ನಾವು ಎಲ್ಲಾ ಹಳ್ಳಿಗಳಿಗೂ ಯೋಜನೆಯನ್ನು ಜಾರಿ ಮಾಡಬಹುದು. ಸರ್ಕಾರ ನಮ್ಮ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಏಳಿಗೆಗಾಗಿ ಕಾರ್ಯಕ್ರಮಗಳನ್ನು ಜಾರಿಗೆ ಬಂದಿದೆ. ಅದರಲ್ಲಿ ಏನಾಗಿದೆ ಎಂದರೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ಸಾಲವನ್ನು ಮನ್ನಾ ಮಾಡಿದರು. ಅದು ಸ್ವಾಗತಾರ್ಹ ಕಾರ್ಯಕ್ರಮ. ಆದರೆ ಜೊತೆ–ಜೊತೆಯಲ್ಲಿ ಸ್ವಾಭಿಮಾನವನ್ನು ಕೆಣಕುವ ಕೆಲಸ ಅಲ್ಲಿ ಅಗಿದೆ. ಅದನ್ನು ಮಾಡಿದಿರಿ ತಾವು. 2014–15ನೇ ಸಾಲಿಗೆ ಪ್ರತಿ ಕ್ಷೇತ್ರಕ್ಕೆ 22, 30, 40 ಈ ರೀತಿ ಭೌತಿಕ ಗುರಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ನನ್ನ ಕ್ಷೇತ್ರಕ್ಕೆ ಸುಮಾರು 2,800 ಅರ್ಜಿಗಳು ಬಂದಿವೆ. ಅಷ್ಟು ಅರ್ಜಿಗಳು ಬರಲು ಕಾರಣವೇನೆಂದರೆ, ಸಾಲ ಮನ್ನಾ ಮಾಡಿದ್ದೆ ಮೂಲ ಕಾರಣ. ಅವರಿಗೆ guarantee ಆಗಿ ಹೋಯಿತು.

ಇನ್ನೇನು ನಾವು ಲೋನ್ ಕಟ್ಟುವ ಹಾಗಿಲ್ಲ. ಕಟ್ಟುವುದು ಬೇಕಾಗಿಲ್ಲ. ಹೇಗಿದ್ದರೂ ಸರ್ಕಾರ free ಎಂದು ಘೋಷಣೆ ಮಾಡುತ್ತದೆಂದು ಹೇಳಿ ಅರ್ಜಿಗಳು ಜಾಸ್ತಿ ಬಂದಿವೆ. ಆದರೆ, ಭೌತಿಕ ಗುರಿಯನ್ನು ಕಡಿಮೆ ಮಾಡಿದಿರಿ. ದಯಮಾಡಿ ಆ ನಿಟ್ಟಿನಲ್ಲಿ ಹೆಚ್ಚು ಭೌತಿಕ ಗುರಿಯನ್ನು ಸರ್ಕಾರ ಕೊಡಬೇಕಾಗುತ್ತದೆ. ಕೇವಲ ಸ್ವಾವಲಂಬಿ ಜೀವನ ಮುಖ್ಯವಲ್ಲ, ಸ್ವಾಭಿಮಾನಿ ಜೀವನವನ್ನೂ ಕೂಡ ತಾವು ಮಾಡಬೇಕಾಗುತ್ತದೆ. ನಮ್ಮ ಗ್ರಾಮ, ನಮ್ಮ ರಸ್ತೆಯನ್ನು introduce ಮಾಡಿದಿರಿ. 2014–15ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ 20 ಕಿ.ಮೀ ಎಂದು ಮಾಡಿದ್ದೀರಿ.

**ಅಧ್ಯಕ್ಷರು:** ಗಂಗಾಕಲ್ಯಾಣ ಯೋಜನೆಯಲ್ಲಿ ಬೋರ್ ಕೊರೆಯುವ ಕಾರ್ಯಕ್ರಮ ಇದೆಯಲ್ಲ, ಅದು ವಿಳಂಬವಾಗಿದೆ, ಇದುವರೆಗೆ ಆಗುತ್ತಿಲ್ಲ. ನೀವು ಏಕೆ ಅದರ ಬಗ್ಗೆ ಬಾಯೇ ಬಿಡುವುದಿಲ್ಲ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** Correct sir, ತಮ್ಮ ಅಭಿಪ್ರಾಯವನ್ನು ನಾನು ಸ್ವಾಗತ್ತಿಸುತ್ತೇನೆ. ಸಮಾಜ ಕಲ್ಯಾಣ ಸಚಿವರು ಇಂದು ಸದನದಲ್ಲಿ ಇಲ್ಲ. ಮೂರು ವರ್ಷದಿಂದ ಕೊಳವೆ ಬಾವಿಗಳನ್ನು ಕೊರೆಯುತ್ತಿಲ್ಲ, pending ಇದೆ. ಕಾರಣ ಏನೆಂದರೆ, ರಾಜ್ಯಮಟ್ಟದಲ್ಲಿ drilling agency ಯನ್ನು ನಿಗದಿ ಮಾಡಿದ್ದಾರೆ. ಏಕೆ ಜಿಲ್ಲಾ ಮಟ್ಟಕ್ಕೆ, ತಾಲ್ಲೂಕು ಮಟ್ಟಕ್ಕೆ ಕೊಡುತ್ತಿಲ್ಲ? ಪ್ರತಿ ತಾಲ್ಲೂಕಿನಲ್ಲಿ 10–15 ಬೋರ್‌ವೆಲ್ ಮೆಷಿನ್ ಇಟ್ಟುಕೊಂಡಿರುವವರಿದ್ದಾರೆ. ಜಿಲ್ಲಾ ಮಟ್ಟದಲ್ಲಿದ್ದಾರೆ. ಇಲ್ಲಿ ಏನು ಹೊಂದಾಣಿಕೆ ಎಂದು ಗೊತ್ತಿಲ್ಲ? ರಾಜ್ಯಮಟ್ಟದವರು ಬಂದು, ಅವನೇನು ಅವನಿಗೆ ಅನುಕೂಲವಾಗುವ ರೀತಿಯ ದಾರಿಯಲ್ಲಿ ಹೋದರೆ ಮಾತ್ರ ಅವನು ಅಲ್ಲಿಗೆ ಹೋಗಿ ಕೊರೆಯುವುದು. ಸರ್, ಹೆಣ್ಣುಮಕ್ಕಳು ಇಡೀ ಕುಟುಂಬದವರು ಕಾಲು ಹಿಡಿದುಕೊಂಡರೂ, ಇಲ್ಲ ಅಣ್ಣ ನಾವು ದಾರಿ ಮಾಡಿಕೊಡುತ್ತೇವೆ, ಬಾ ಇಲ್ಲಿ ಕೊರಿ ಎಂದರೂ ಹೋಗುವುದಿಲ್ಲ. ಆಮೇಲೆ ಕೇವಲ 100 ಅಡಿ ಕೊರೆದು 300 ಅಡಿ ಕೊರೆದಿದ್ದೇವೆ, ಆದರೂ ನೀರು ಬರುತ್ತಿಲ್ಲ ಎಂದು ದೂರು ಹೇಳುತ್ತಾನೆ. ದಯಮಾಡಿ ನಮ್ಮ ಪರಿಶಿಷ್ಟ ಜಾತಿ commissioner ಯಾರಿದ್ದಾರೆ, Social Welfare Department ಮತ್ತು ನಿಗಮದವರು ಆ ಕಡೆ ಗಮನ ಕೊಡಬೇಕು.

ನಾವು ಒತ್ತಾಯ ಮಾಡಿದೆವು. ಮಾನ್ಯ speaker ರವರು ಹೇಳಿದರು. ಎಲ್ಲಾ ಕೇಳುತ್ತಿರುತ್ತೇವೆ. ಆದರೂ ಏಕೆ ಉದಾಸೀನ ಮಾಡುತ್ತೀರಿ ಎಂಬುದು ನಿಗೂಢವಾಗಿದೆ. ಆ ನಿಟ್ಟಿನಲ್ಲಿ ರಾಜ್ಯಮಟ್ಟದ drilling ಅನ್ನು ಬಿಟ್ಟು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಕ್ಕೆ ಬನ್ನಿ. ಅಲ್ಲಿ ಟೆಂಡರ್ ಕರೆಯಿರಿ. ಯಾರು ಬೇಕಾದರೂ ಕೂಗಲಿ, ಯಾರು ಬೇಕಾದರೂ ಬರಲಿ, ಭ್ರಷ್ಟಾಚಾರಕ್ಕೆ ಅವಕಾಶವಾಗುವುದಿಲ್ಲ. ಆ ನಿಟ್ಟಿನಲ್ಲಿ ಆ ಕೆಲಸವನ್ನು ಮಾಡಬೇಕು. ನಮ್ಮ ಗ್ರಾಮ–ನಮ್ಮ ಯೋಜನೆ ಈ ವರ್ಷದಲ್ಲಿ ಜಾರಿಯಾಗಬೇಕಿತ್ತು. ಇಲ್ಲಿಯವರೆಗೆ ಕ್ರಿಯಾ ಯೋಜನೆಯನ್ನು ತೆಗೆದುಕೊಂಡಿದ್ದನ್ನು ಬಿಟ್ಟರೆ ಇಲ್ಲಿ ತನಕ ಟೆಂಡರ್ ಆಗಿಲ್ಲ. ಯೋಜನೆ ಜಾರಿಯಾಗಿಲ್ಲ. ಅದು carry over ಎಂದು ಹೇಳುತ್ತಿದ್ದಾರೆ. Carry over ಆಗುವುದರಿಂದ ಈ ವರ್ಷದ ಭೌತಿಕ ಗುರಿ ಮತ್ತು . . .

**ಅಧ್ಯಕ್ಷರು:** ಗಂಗಾ ಕಲ್ಯಾಣ ಯೋಜನೆಯ ಕುರಿತು ಕಾನೂನು ಸಚಿವರು ಇಲ್ಲಿಯೇ ಇದ್ದಾರೆ. ಕಾನೂನು ಸಚಿವರೆ, ಅವರು ಹೇಳಿರುವುದನ್ನು ಸ್ವಲ್ಪ ಮಾಡಿ. ಕ್ಯಾಬಿನೆಟ್‌ನಲ್ಲಿ ಅದನ್ನು ಚರ್ಚಿಸಿ, ತೀರ್ಮಾನ ಮಾಡಲು ಬರುವುದಿಲ್ಲವೆ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ನಮ್ಮ ಗ್ರಾಮ – ನಮ್ಮ ರಸ್ತೆ ಯೋಜನೆ 2014–15ನೇ ಸಾಲಿನಲ್ಲಿ ತಾವು ಹೊಸದಾಗಿ 20–20 ಕಿ.ಮೀ ಕೊಟ್ಟಿದ್ದೀರಿ. ಮಾರ್ಚ್ ತಿಂಗಳು ಮುಗಿಯುತ್ತಾ ಬಂತು. ಕ್ರಿಯಾ ಯೋಜನೆ ಕೊಟ್ಟಿದ್ದನ್ನು ಬಿಟ್ಟರೆ ಇನ್ನೂ ಟೆಂಡರ್ ಹಂತಕ್ಕೆ ಬಂದಿಲ್ಲ. ಟೆಂಡರ್ ಮಾಡುವುದು ಯಾವಾಗ? ಅವನಿಗೆ work order ಸಿಗುವುದು ಯಾವಾಗ? ಕೆಲಸ ಪ್ರಾರಂಭ ಮಾಡುವುದು ಯಾವಾಗ? ಕಾಮಗಾರಿ 2015–16ನೇ ಸಾಲಿಗೆ ಹೋಯಿತು. Cary over ಆಯಿತು. ವರ್ಷದ ಯೋಜನೆ ಹೋಯಿತು. ಇದರಿಂದ ಏನು ಪ್ರಯೋಜನ?

**ಶ್ರೀ ಎನ್.ಹೆಚ್. ಕೋನರೆಡ್ಡಿ:** ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಲ್ಲಿ 20 ಕಿ.ಮಿ. ಶಾಸಕರಿಗೆ ಕೊಟ್ಟಿದ್ದಾರೆ. ಒಂದನೇ ವರ್ಷ ಹೋಯಿತು, ಎರಡನೇ ವರ್ಷ ಹೋಯಿತು, ಈಗ ಮೂರನೇ ವರ್ಷಕ್ಕೆ

ಬಂದಿದ್ದಾರೆ. 2015–16 ರದ್ದು ಈಗ ಕೊಡುತ್ತಾರೆ. ಇನ್ನು ಎರಡು ವರ್ಷದ್ದು 40 ಕಿ.ಮಿ. ಕೊಡುತ್ತಾರೋ ಅಥವಾ ಕೇವಲ 20 ಕಿ.ಮಿ. restricted ಎಂದು ಹೇಳಬೇಕು. ಪ್ರತಿ ವರ್ಷ 20 ಕಿ.ಮೀ. ಎಂದು ಘೋಷಣೆ ಆಯಿತು. ಮಾನ್ಯ ಮುಖ್ಯ ಮಂತ್ರಿಗಳು ವಿಶೇಷವಾಗಿ ನಮ್ಮ ಗ್ರಾಮ ನಮ್ಮ ರಸ್ತೆ ಏನಿವೆ ಪ್ರತಿ ವರ್ಷ 20 ಕಿ.ಮಿ. ಆಗುವ ಹಾಗೆ ಕೊಡಬೇಕು.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಆರು ತಿಂಗಳು ನೀವು ಕ್ರಿಯಾ ಯೋಜನೆ ಪಟ್ಟಿ ತೆಗೆದುಕೊಂಡು ಇನ್ನೂ ಜಾರಿಯಾಗಿಲ್ಲ ಏನಾಯಿತು ಎಂದು ಕೇಳುತ್ತಾರೆ. ದಯಮಾಡಿ ಸರ್ಕಾರ ಈ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, PWD ರಸ್ತೆಗಳು ಕೂಡ 2013–14, 2014–15ರಲ್ಲಿ introduce ಮಾಡಿದಂತಹ ಕ್ರಿಯಾ ಯೋಜನೆ ಇನ್ನೂ ಕೂಡ ಜಾರಿಗೆ ಬಂದಿಲ್ಲ. ಅದೂ ಕೂಡ ಮುಂದಕ್ಕೆ ಹೋಗುತ್ತಿದೆ. ಆದರೆ ನೀವು ಇದೆ ಎಂದು ಹೇಳುತ್ತಿದ್ದೀರಿ. ಆದರೆ ಗುಂಡಿ ಮುಚ್ಚುವ ಕೆಲಸ pot hole filling ಗೆ ಒಂದು ಕಿ.ಮಿ. ಗೆ ಒಂದು ಲಕ್ಷ ರೂ. ಕೊಡುತ್ತಾರೆ. ನನ್ನ ನಿಮ್ಮ ಭಾಗದಲ್ಲಿ 10–10 ಗುಂಡಿಗಳು ಒಂದು ಕಿ.ಮಿ.ಗೆ ಸರಿಯಾಗಿ ಗುಂಡಿ ಮುಚ್ಚುವುದಕ್ಕೆ ಐದು ಲಕ್ಷ ರೂ.ಗಳು ಬೇಕು. contractor ಏನು ಮಾಡುತ್ತಾನೆ, ನಮಗೆ ಕೊಟ್ಟಿರುವುದೇ ಒಂದು ಲಕ್ಷ ಎಂದು ಹೇಳಿ, ಯಾವ ರೀತಿಯಲ್ಲಿ ಮಾಡಬೇಕು ಆ ರೀತಿ ಮಾಡುವುದಿಲ್ಲ. ದೂಳಿನ ಮೇಲೆಯೇ ಜೆಲ್ಲಿ ಹಾಕುವುದು, ಡಾಂಬರ್ ಹಾಕುವುದು ಮಾಡುತ್ತಾನೆ ಅದು ಎರಡು ದಿನವೂ ಇರುವುದಿಲ್ಲ. ಇದು ವಸ್ತು ಸ್ಥಿತಿ. ಇಂಜಿನಿಯರ್‌ಗಳಿಗೂ ಸರಿಯಾದ ರೀತಿಯಲ್ಲಿ ಮಾಹಿತಿ ಸಿಗುವುದಿಲ್ಲ. ನಾವೇನು ಮಾಡುವುದು ಒಂದು ಲಕ್ಷ ರೂ. ಕೊಟಿದ್ದಾರೆಂದು ಹೇಳುತ್ತಾರೆ. ಅಲ್ಲಿ ಏನಾಗಿದೆ, 10 ಕಿ.ಮಿ.ಗೆ 10 ಲಕ್ಷ ಕೊಟ್ಟರೆ ಅದು ನಾಲ್ಕು ಕಿ.ಮಿ.ಗೆ ಮುಗಿದು ಹೋಗುತ್ತದೆ. ಇನ್ನು ಆರು ಕಿ.ಮಿ.ಗೆ ನಾವು ನಮ್ಮ grant ಕೊಡಬೇಕು, ಇಲ್ಲ ಬೇರೆ ಕೊಡಬೇಕು. ಇದು ಪರಿಸ್ಥಿತಿ. ದಯಮಾಡಿ ಆ ನಿಟ್ಟಿನಲ್ಲಿ ಸರ್ಕಾರ lenient ಆಗಿ actual ಆಗಿ ಏನು ಖರ್ಚು ಬರುತ್ತದೆ ಅದನ್ನು ಕೊಡಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಕೃಷಿ ಉತ್ಪಾದನೆ ಬಗ್ಗೆ ಕೂಡ

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ತೋಟಗಾರಿಕಾ ಕ್ಷೇತ್ರದಲ್ಲಿ ನಾವು ಮುನ್ನಡೆಯನ್ನು ಸಾಧಿಸುತ್ತಿದ್ದೇವೆಂಬ ಮಾತನ್ನು ಹೇಳುತ್ತಿದ್ದಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:** ಮಾನ್ಯ ಕುಮಾರಸ್ವಾಮಿಯವರೇ, ರೋಡ್ ಬಗ್ಗೆ ಮಾತನಾಡುವಾಗ ಜಿಲ್ಲಾ ಪಂಚಾಯತಿ ರೋಡ್‌ಗಳ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು PWD ಯವರು ಗುಂಡಿ ಮುಚ್ಚುವ ಬಗ್ಗೆ ಒಂದು ಮಾತು ಹೇಳಿದರು. ಜಿಲ್ಲಾ ಪಂಚಾಯತಿ ರೋಡ್‌ಗಳ ಬಗ್ಗೆ ಮೊನ್ನೆ ಸರ್ಕಾರ ಒಂದು circular ಕಳುಹಿಸಿ ಯಾವ ತರಹ ಮಾಡಬೇಕೆಂದು ಹೇಳಿದೆ. ಆ ಕ್ಷೇತ್ರದ ಶಾಸಕರು, ಆ ಭಾಗದ ಎಲ್ಲಾ ಜಿಲ್ಲಾ ಪಂಚಾಯತಿ ಸದಸ್ಯರು, ತಾಲ್ಲೂಕು ಪಂಚಾಯತಿ ಸದಸ್ಯರು ಮತ್ತು ಗ್ರಾಮ ಪಂಚಾಯತಿಯ ಅಧ್ಯಕ್ಷರು ಒಳಗೊಂಡು ಅದನ್ನು ಆ pot hole ಗಳನ್ನು ಮುಚ್ಚುತಕ್ಕಂತಹ ನಿರ್ಣಯ ಮಾಡಬೇಕು. ಅದಕ್ಕೆ ಆ ಕಮಿಟಿ ಮುಂದೆ ಹೋಗಿ ಅಪ್ರೂವಲ್ ತೆಗೆದುಕೊಳ್ಳಬೇಕು. ಅದಕ್ಕೆ ಏನು ಹೇಳಿದ್ದಾರೆಂದರೆ, ಒಂದು ಕಿ.ಮಿ.ಗೆ 7.000 ರೂ.ಗೆ ಮೀರಬಾರದು ಎಂದು ಆದೇಶ ಬಂದಿದೆ. ಒಂದು ಕಿ.ಮಿ. ಗೆ 7,000 ರೂ. ಹೇಗೆ ಖರ್ಚು ಮಾಡುವುದು?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಈ ರೀತಿಯ ಅಭಾಸಗಳು ಬಹಳ ಹೆಚ್ಚಿವೆ. ಸರ್ಕಾರ ಅನುದಾನ ಕೊಡುವುದಕ್ಕೂ ವಾಸ್ತವಿಕತೆ ಹಳ್ಳಿಗಳಲ್ಲಿ ಇರುವುದಕ್ಕೂ ಬಹಳ ವ್ಯತ್ಯಾಸವಿದೆ. ಆ ದುಡ್ಡಿನಲ್ಲಿ ಜಂಗಲ್ ತೆಗೆಯುವುದಕ್ಕಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ಸರ್ಕಾರ ಅಪೆಂಡಿಕ್ಸ್–E ನಲ್ಲಿ ಸುಮಾರು 29 ಕಿ.ಮಿ. ರಸ್ತೆಯನ್ನು 2014–15ನೇ ಸಾಲಿಗೆ ಕೊಟ್ಟಿದೆ. ಅದಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮಾನ್ಯ ಸಚಿವರೇ ಬಂದಿದ್ದರು. ಒಂದು ಒಣಗೂರು ಜನ್ನಾಪುರ ಎಂಬ ರಸ್ತೆ. ಜನ್ನಾಪುರ, ಹುರುಡಿ, ಹಾನಬಾಡ್, ಆನೆಬಾಲ್, ಬಾಕೆರೆವಳ್ಳಿ, ಹೆತ್ತೂರು, ಒಣಗೂರು ನಾಲ್ಕು ಡಿಸೆಂಬರ್ 4ನೇ ತಾರೀಕು ಮಾನ್ಯ ಸಚಿವರೇ ಬಂದು ಗುದ್ದಲಿ ಪೂಜೆ ಮಾಡಿದರು. ಇದುವರೆಗೂ ಕೆಲಸ ಪ್ರಾರಂಭವಾಗಿಲ್ಲ. ಜನ ಏನು ಮಾತನಾಡುತ್ತಾರೆ. ಅಲ್ಲಿ, ನನ್ನ ವಿರುದ್ಧ ಪ್ರತಿಭಟನೆ ಮಾಡುತ್ತಾರೆ, ನಾನು ನಿಮ್ಮ ಮೇಲೆ ಹೇಳಬೇಕು. ಆ

ಮೇಲೆ ಅರ್ಧ ಸ್ವರ ನಿಮ್ಮ ಮೇಲೆ ಹಾಕುತ್ತಾರೆ. ಅಂತಿಮವಾಗಿ ಶಾಸಕನೇ ಜವಾಬ್ದಾರಿ. ಚರಂಡಿ ವಿಷಯಕ್ಕೆ ಮತ್ತೊಂದಕ್ಕೆ MLA ನೇ ಜವಾಬ್ದಾರಿ ಮಾಡುವಾಗ ಇದೇನು ದೊಡ್ಡ ವಿಷಯ ಅಲ್ಲ. ಎರಡೂ ಕಾಲು ತಿಂಗಳಾಯಿತು ಇನ್ನೂ ಕೂಡ ಕೆಲಸ ಪ್ರಾರಂಭವಾಗಿಲ್ಲ. ಮೊನ್ನೆ 27ನೇ ಜನವರಿ ತಿಂಗಳಲ್ಲಿ LE issue ಮಾಡಿದ್ದೇವೆಂದು ಹೇಳುತ್ತಾರೆ. Contractor ಬಂದಿಲ್ಲ. ಹೀಗಾಗಿ ಈ ತರಹದ ಅಭಾಸಗಳು ತುಂಬ ಇವೆ. ಇನ್ನು ಎರಡು ತಿಂಗಳಲ್ಲಿ ಮಳೆ ಪ್ರಾರಂಭವಾಗುತ್ತದೆ. ಎತ್ತಿನ ಹೊಳೆ ಆಗಬೇಕಲ್ಲ, ಎತ್ತಿನ ಹೊಳೆ ಆಗಬೇಕೆಂದರೆ ಮಳೆ ನೀರಲ್ಲ ಶೇಖರಣೆ ಆಗಬೇಕಲ್ಲ. ನಾವು 200, 300, 400 ಇಂಚ್ ಮಳೆ ಬೀಳಿಸಿಕೊಳ್ಳುವವರು ನಾವು. ಇನ್ನು ಎರಡು ತಿಂಗಳಲ್ಲಿ ಮಳೆ ಪ್ರಾರಂಭವಾಗುವುದರಿಂದ ನಮ್ಮ ಭಾಗದಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತಾ, ಹಾಸನದಿಂದ ಅರಕಲಗೂಡು ರಸ್ತೆ ಸುಮಾರು 25 ಕಿ.ಮಿ. ಇದೆ. ನಮ್ಮ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಬಂದರೆ ಕರೆದುಕೊಂಡು ಹೋಗೋಣ ಎಂದು ಇದ್ದೆ. ರಸ್ತೆ ಅಷ್ಟು ವಸ್ಟ್ ಆಗಿದೆ. ನಾಲ್ಕು ತಿಂಗಳುಗಳಿಂದ ಸತತವಾಗಿ ಇಂಜಿನಿಯರ್‌ಗಳಿಗೆ ಹೇಳುತ್ತಿದ್ದೇನೆ. ನಮ್ಮ ಮಾನ್ಯ ಸಭಾಧ್ಯಕ್ಷರು ಮಾದರಿಯಾಗಿದ್ದಾರೆ ನಮಗೆ ಆಗಾಗ ಏನ್ರಿ ಮಾಡುತ್ತೀರಿ ನೀವು ಶಾಸಕರುಗಳು ಎಂದು ಎಚ್ಚರಿಕೆ ಕೊಡುತ್ತಿರುತ್ತಾರೆ. ಏನು ಮಾಡುವುದು ನಾವೇನು ಕಾನೂನು ಕೈಗೆ ತೆಗೆದುಕೊಳ್ಳುವುದಕ್ಕಾಗುತ್ತಾ? ಹೆಚ್ಚೆಂದರೆ ಮೊಬೈಲ್ ಫೋನ್ ಮಾಡಿ ಮಾಡಿ ಸಹವಾಸವೇ ಬೇಡವೆಂದು ಇಂಜಿನಿಯರ್‌ಗಳು ಫೋನ್ ಆಫ್ ಮಾಡಿಕೊಂಡು ಬಿಡುತ್ತಾರೆ. ಏನು ಮಾಡಬಹುದು ನಾವು? ಜನ ನೀವು ಸರಿಯಾಗಿ ಕೇಳುತ್ತಿಲ್ಲವೆಂದು ಹೇಳುತ್ತಾರೆ. ಎಷ್ಟು ಸ್ಟ್ರೈಕ್ ಮಾಡಬಹುದು? ಈ ತರಹದ ಅನೇಕ ಅಭಾಸಗಳಿವೆ. ಆದಷ್ಟು ಬೇಗ ರಸ್ತೆಗಳ ಗುಂಡಿಗಳನ್ನು ಮುಚ್ಚಬೇಕು. ನಮ್ಮ ಮಲೆನಾಡು ಭಾಗದಲ್ಲಿ ಆ ತರಹ ರಸ್ತೆಗಳು ಬಹಳ ಇವೆ. ಎತ್ತಿನ ಹೊಳೆ ಯೋಜನೆ ಬಗ್ಗೆ ಮಾನ್ಯ ಮಂತ್ರಿಗಳಿಗೂ ಮಾತನಾಡಿದ್ದೇನೆ, ಮಾನ್ಯ ಭಾರೀ ನೀರಾವರಿ ಸಚಿವರಿಗೂ ಮಾತನಾಡಿದ್ದೇನೆ. ಆ ಕ್ಯಾಚ್‌ಮೆಂಟ್ ಏರಿಯಾದ 20 ಹಳ್ಳಿಗಳಲ್ಲಿ ಆ ಭಾಗದಿಂದ ನೀರು ಬಂದು

ಈ ಭಾಗಕ್ಕೆ ತುಂಬುತ್ತದೆ. ಏಲಕ್ಕಿ ಬೆಳೆ ಬೆಳೆದಿದ್ದಾರೆ. ಕಟ್ಟೆ ರೋಗ ಮತ್ತು ಕೊಕ್ಕೆ ಕಂದು ಎಂಬ ರೋಗದಿಂದ ಸುಮಾರು ಐದಾರು ವರ್ಷಗಳಿಂದ ಬೆಳೆ ಏನೇನೂ ಉಳಿದಿಲ್ಲ. ಸಕಲೇಶಪುರ ತಾಲ್ಲೂಕಿನ ರೈತರು ಸಹಕಾರ ಬ್ಯಾಂಕುಗಳಲ್ಲಿ ಮಾಡಿರುವಂತಹ ಅಭಿವೃದ್ಧಿ ಸಾಲ ಕೇವಲ 4.5 ಕೋಟಿ ರೂ. ಅಷ್ಟೆ. ಮಾನ್ಯ ಮುಖ್ಯ ಮಂತ್ರಿಗಳು ಈ ಕಡೆ ಗಮನ ಹರಿಸಬೇಕು. ಏಲಕ್ಕಿ ಬೆಳೆ ಕಬ್ಬು, ಅಡಿಕೆ, ದಾಳಿಂಬೆ ಬೆಳೆಯುವ ರೈತರು ಜೋರಾಗಿದ್ದಾರೆ. ನಮ್ಮ ಮಲನಾಡು ಭಾಗದ ಜನ ಸ್ವಲ್ಪ ಮೃದು ಜೋರಾಗಿ ಕೇಳುವುದಿಲ್ಲ. ನೀವೆಲ್ಲ ಬರುವ ಸಮಯಕ್ಕೆ ಅವರೆಲ್ಲಾ ಮನೆ ಸೇರಿಕೊಂಡಿರುತ್ತಾರೆ. ಅವರು ಏನಿಲ್ಲ ಈ ಭಾಗದ ಜನ ಮಧ್ಯ ರಾತ್ರಿ ಆದರೂ ಮಾನ್ಯ ಮುಖ್ಯ ಮಂತ್ರಿಗಳು, ಮಂತ್ರಿಗಳು ಬರುತ್ತಾರೆ ನಾವು ಅರ್ಜಿ ಕೊಡೋಣವೆಂದು ಕಾಯುತ್ತಿರುತ್ತಾರೆ. ಇಲ್ಲಿ ಏಲಕ್ಕಿ ಬೆಳೆ ಬೆಳೆದಿರುವ ಹೊಂಗಿನ ಹಳ್ಳ, ಒಣಗೂರು, ಕೆರೆ ಹಳ್ಳಿ ಈ ಭಾಗದ ಜನ ಆ ಭಾಗದಿಂದಲೇ ನೀರು ಎತ್ತಿನ ಹಳ್ಳಕ್ಕೆ ಬಂದು ಸೇರುವುದು. ಅಲ್ಲಿ ಸುಮಾರು 4.5 ಕೋಟಿ ರೂ. ಸಾಲ ರೈತರ ಮೇಲಿದೆ. ನಮಗೆ BPL card ಕೊಡಿ ಎಂದು ಕೇಳುವ ಮಟ್ಟಕ್ಕೆ ಹೋಗಿದ್ದಾರೆ. ಅಷ್ಟೊಂದು ಬೆಳೆ ಹಾಳಾಗಿ, ನಷ್ಟ ಆಗಿ, ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ಅವರೂ ಕೂಡ ವರದಿ ಕೊಟ್ಟಿದ್ದಾರೆ. ಹೌದು ರೈತರು ಕಂಗಾಲಾಗಿದ್ದಾರೆ, ಇವರ ಸಾಲ ಮನ್ನಾ ಮಾಡಬೇಕೆಂಬ ವರದಿ ಬಂದಿದೆ. ನನ್ನ ಒತ್ತಾಯವೇನೆಂದರೆ, ಕನಿಷ್ಟ.. . .

**ಶ್ರೀ ವೈ.ಎನ್. ರುದ್ರೇಶ್‌ಗೌಡ:** ಮಾನ್ಯ ಅಧ್ಯಕ್ಷರೆ, ಸುಮಾರು ಏಳು ವರ್ಷಗಳಿಂದ ಕೇಳುತ್ತಿದ್ದಾರೆ. ಇದೊಂದು ಮಂಜೂರು ಮಾಡಿ ಕೊಡಿ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ನನ್ನ ಒತ್ತಾಯ ಸುಮಾರು 13,000 ಕೋಟಿ ರೂ. ವೆಚ್ಚದ ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆ ತಾವು ತರುತ್ತಿದ್ದೀರಿ. ರೈತರು ಇವತ್ತು ಎಂತಹ ಸಂಕಷ್ಟದಲ್ಲಿದ್ದಾರೆಂದರೆ, ಇನ್ನು ತಾವು ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭ ಮಾಡಿಲ್ಲ. ಆದರೂ ನಿಮ್ಮ contractor ಹಾಗೂ Engineer ಗಳು ಹೋಗಿ ಅಲ್ಲಿ ಕೆಲಸ ಪ್ರಾರಂಭ ಮಾಡಿದ್ದಾರೆ. ಮಾನವೀಯ ದೃಷ್ಟಿಯಿಂದ ನಾವು ಸುಮ್ಮನಿದ್ದೇವೆ. ಪರಿಸರವಾದಿಗಳು ವಿರೋಧ ಮಾಡುತ್ತಿದ್ದಾರೆ. ನಾವೂ ಕೂಡ ಒಂದು ಮಟ್ಟದಲ್ಲಿ ವಿರೋಧ

ಮಾಡುತ್ತಿದ್ದೇವೆ. ಆದರೆ ಮೂಲಭೂತವಾದ ಅವಕಾಶಗಳನ್ನು ಕಲ್ಪಿಸದೆ ಹೋದಾಗ ನಾವೂ ಕೂಡ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ಇನ್ನೂ ಕೂಡ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಇವತ್ತು ರೈತರು ಆ ಭಾಗದಲ್ಲಿ . . . .

**ಶ್ರೀ ಕೆ.ಆರ್. ರಮೇಶ್ ಕುಮಾರ್:** ಮಾನ್ಯ ಕುಮಾರಸ್ವಾಮಿಯವರೇ, ನೀವು ಹಾಗೆ ಹೇಳಿದರೆ ನಮಗೆ ಕಷ್ಟವಾಗುತ್ತದೆ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಮಾನವೀಯ ದೃಷ್ಟಿಯಿಂದ ನಾವು ನಿಮ್ಮ ಪರವಾಗಿದ್ದೇವೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್:** ನಾಳೆ ಇದೇ ವಾಪಸ್ ಪೇಪರ್‌ನವರು ಬರೆದರೆ ನಾವು ಊರಿಗೆ ಹೋದ ತಕ್ಷಣ ನಮ್ಮನ್ನು ಹಿಡಿದುಕೊಳ್ಳುತ್ತಾರೆ. ಮೂರು ಜನ Land Acquisition Officers post ಮಾಡಿದ್ದಾರೆ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಅಷ್ಟು ಬಿಟ್ಟರೆ ಮುಂದೆ ಏನೂ ಆಗಿಲ್ಲ.

**ಶ್ರೀ ಕೆ.ಆರ್. ರಮೇಶ್ ಕುಮಾರ್:** ದಯಮಾಡಿ ಕೇಳಿ, 23 ಹಳ್ಳಿಗಳ ಪೈಕಿ 12 ಹಳ್ಳಿಗಳ ಪ್ರಪೋಸಲ್ ಈಗಾಗಲೇ Deputy Commissioner ಕಡೆಯಿಂದ Land Acquisition Officer ಗೆ for further proceedings ಗಾಗಿ ಹೋಗಿದೆ. ತುಮಕೂರಿನಲ್ಲಿ Land Acquisition Officer post ಖಾಲಿ ಇದ್ದುದರಿಂದ ಯಾರನ್ನು ಮಾಡಬೇಕೆಂದು ನಿನ್ನೆ ಅಲ್ಲ ಮೊನ್ನೆ ಸಭೆ ಮಾಡಿ ಅಲ್ಲಿಯ Assistant Commissioner ರವರಿಗೇ ಚಾರ್ಜ್ ಕೊಟ್ಟು ಅವರನ್ನೇ Land Acquisition Officer ಎಂದು ಮಾಡಿಸಿದ್ದೇವೆ. ಅಲ್ಲಿಯ ನಮ್ಮ ಸಂಸತ್ ಸದಸ್ಯರು ಮುದ್ದಹನುಮೇಗೌಡರು ಬೈರಗೊಂಡಲು ಹತ್ತಿರ ಜಾಗವನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಜನರ ಹತ್ತಿರ ಮಾತನಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಕಷ್ಟ ಏನೆಂದರೆ, ನೀವು ಈಗ ಹೇಳಿದ್ದನ್ನು ನಾಳೆ ಪತ್ರಿಕೆಯವರು ಅದನ್ನೇ ಅಚ್ಚು ಹಾಕಿದರೆ ಏನೂ ಆಗಿಲ್ಲವಂತೆ ಹೇಳುತ್ತಾರೆ. Progress ಆಗುತ್ತಿದೆ, ನೀವು ಬಹಳ ಉದಾರವಾದಿಗಳು ಬೆಳಗಾಂ ಅಧಿವೇಶನ

ಆದಮೇಲೆ ಮಂತ್ರಿಗಳನ್ನು ನಿಮ್ಮಲ್ಲಿ ಕಳುಹಿಸಿ ಕೊಟ್ಟಿದ್ದೆವು. ನಿಮ್ಮ ಹತ್ತಿರ ಮಾತನಾಡಿದ್ದಾರೆ. ಕೆಲಸ ಮಾಡುವುದಕ್ಕೆ ಬಿಟ್ಟಿದ್ದೀರಿ, ನಿಮ್ಮ ರಸ್ತೆಗಳು ಅದೂ ಇದೂ ಎಲ್ಲ ಮಾಡುವುದಕ್ಕೆ ನಾವೂ ನಿಮ್ಮ ಜೊತೆಯಲ್ಲಿರುತ್ತೇವೆ. ಎತ್ತಿನ ಹೊಳೆಗೆ ಪರಿಸರವಾದಿಗಳು ಅಲ್ಲ ಅವರು ಅವರಿಗೇನು ನೀರಿನ ತೊಂದರೆ ಇಲ್ಲ, ಅವರೆಲ್ಲಾ ಬಾಟಲ್ ನೀರು ಕುಡಿಯುವವರು. ಅವರದೆಲ್ಲಾ ವಿಷಯ ಇಲ್ಲಿ ಎತ್ತುವುದೇ ಬೇಡ. ಅವರಿಗೆಲ್ಲಾ ದೊಡ್ಡಸ್ತನ ಬಂದು ಬಿಡುತ್ತದೆ. ಅವರಿಗೆಲ್ಲಾ ಮಾನವೀಯತೆ ಇಲ್ಲ, ಅವರು ಮನುಷ್ಯರಲ್ಲ. ನಾವು ತೆಗೆದುಕೊಳ್ಳುತ್ತಿರುವುದು ಎಷ್ಟು ನೀರು? ಶೇಕಡ 0.6 ರಷ್ಟು ನೀರು ಅಲ್ಲಿ ಹರಿಯುವ ನೀರಿನಲ್ಲಿ ಕುಡಿಯುವ ನೀರಿಗಾಗಿ ತೆಗೆದುಕೊಳ್ಳುತ್ತಿದ್ದೇವೆ. ಮಾನವೀಯ ಪ್ರಜ್ಞೆ ಇರುವವರು ಯಾರಾದರೂ ವಿರೋಧ ಮಾಡುತ್ತಾರಾ ಅದನ್ನು ತಾವು ದಯಮಾಡಿ ಆ ಒಂದು ಡೈರೆಕ್ಷನ್‌ಗೆ ಬರುವುದು ಬೇಡ.

**ಶ್ರೀ ವೈ.ಎನ್. ರುದ್ರೇಶ್‌ಗೌಡ:** ಎತ್ತಿನ ಹೊಳೆಗೆ 24 TMC ನೀರನ್ನು ಸಕಲೇಶಪುರ ತಾಲ್ಲೂಕಿನವರು ಕೊಡುತ್ತಿದ್ದಾರೆ. ಹಾಗಿರಬೇಕಾದರೆ ಆ ತಾಲ್ಲೂಕಿನವರು ಕೋಲಾರ ಚಿತ್ರದುರ್ಗ ಎಲ್ಲಾ ಕಡೆಗೆ ನೀರು ಕೊಡಬೇಕಾದರೆ ಅವರ ಬೇಡಿಕೆ ಸ್ವಲ್ಪನಾದರೂ ಈಡೇರಿಸಬೇಕಲ್ಲ. ರಸ್ತೆ ಎಲ್ಲ ಹಾಳಾಗಿದೆ. ಅವರ ಬೇಡಿಕೆ ಈಡೇರಿಸಿದರೆ ಒಳ್ಳೆಯದು.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಅದಕ್ಕೆ ನೀವೂ ನಮ್ಮ ಜೊತೆಗಿದ್ದೀರಿ. ಒಂದು ಏನೆಂದರೆ, consent award ತೆಗೆದುಕೊಳ್ಳಬೇಕು. ರೈತರ ಜೊತೆ ಸಮಾಲೋಚನೆ ಮಾಡಿ consent award ಆದರೂ ಕೊಡಬೇಕಲ್ಲ. ಅದನ್ನೂ ಮಾಡುತ್ತಿಲ್ಲ. ಡಿ.ಸಿ.ಯವರು ಬಂದಿಲ್ಲ. ಬರೀ ಕಛೇರಿಗಳನ್ನು ಓಪನ್ ಮಾಡಿ ಅಲ್ಲಿ ಇದ್ದುಬಿಟ್ಟರೆ ಕೆಲಸ ಆಗುವುದಿಲ್ಲ. ಡಿ.ಸಿ. ಯವರು ಬಂದಿಲ್ಲ. ಕೇವಲ ಕಛೇರಿಗಳನ್ನು ಅಲ್ಲಿ open ಮಾಡಿಬಿಟ್ಟರೆ ಅಲ್ಲಿ ಕೆಲಸವಾಗುವುದಿಲ್ಲ. ಆ ದೃಷ್ಟಿಯಿಂದ ನಾನು ಹೇಳತಕ್ಕಂಥದ್ದೇನೆಂದರೆ, ,

**ಶ್ರೀ ಕೆ.ಆರ್. ರಮೇಶ್‌ಕುಮಾರ್:** See, you are a lawyer,

**Sri. H.K. Kumarswamy:** Yes Sir,.

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ಮೊದಲು land survey ಆಗಬೇಕು.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಆಗಿದೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ಸರ್ವೆ ನಂಬರ್ ಸಿಗಬೇಕು, ಖಾತೆದಾರರು ಯಾರು ಎಂದು ಪಟ್ಟಿಯಾಗಬೇಕು. ಅದಾದ ಮೇಲೆ ಅವರಿಗೆ gazette notification ನಲ್ಲಿ 4(1) process ಆಗುತ್ತದೆ. ನೋಡಿ ಈಗಾಗಲೇ survey complete ಆಗುತ್ತಿದೆ. ಸರ್ವೆಯಲ್ಲಿ ಸ್ವಲ್ಪ ಬಾಕಿ ಉಳಿದುಕೊಂಡಿದ್ದರಿಂದ 12 ಜನ ಸರ್ವೆಯರ್‌ಗಳನ್ನು ನಾಲ್ಕು ದಿವಸದೊಳಗೆ ಮಾಡುತ್ತೇವೆಂದು ಮೊನ್ನೆ ಕಂದಾಯ ಸಚಿವರು ಅವರ chamber ನಲ್ಲಿಯೇ ಕರೆದು ಹೇಳಿದ್ದಾರೆ. All the Surveyors would be coming there on deputation for two months. ಒಂದು ತಿಂಗಳೊಳಗಾಗಿ survey complete ಮಾಡದೇ 4(1) ನೋಟಿಫಿಕೇಶನ್ ಹೇಗೆ ಮಾಡುವುದಕ್ಕೆ ಆಗುತ್ತದೆ ಹೇಳಿ. Eveything is in progress.

**ಅಧ್ಯಕ್ಷರು:** ಅವರ apprehension, ಹೆದರಿಕೆ ಏನೆಂದರೆ ನಮ್ಮ ಭೂಮಿಯನ್ನು ನೀವು ಸ್ವಾಧೀನಪಡಿಸಿಕೊಂಡ ಮೇಲೆ ಅದಕ್ಕೆ ದುಡ್ಡು ಕೊಡದೇ ಮುಳುಗಡೆ ಮಾಡಿದರೆ ಏನು ಮಾಡೋದು ಎನ್ನುವುದು ಅವರ ಆತಂಕ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಏಕೆಂದರೆ ಹಿಂದಿನ ಕಹಿ ಅನುಭವಗಳ ಉದಾಹರಣೆ ನಮಗಿದೆಯಲ್ಲಾ ಸಾರ್.

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ಕೋಲಾರದ ಜನರು ಆ ರೀತಿ ಮಾಡುವುದಿಲ್ಲ. ನಾವು ನಮ್ಮ ಒಡವೆಯನ್ನೇ ಕಳೆದುಕೊಳ್ಳುತ್ತೇವೆ, ಅಂಥದ್ದರಲ್ಲಿ ನಿಮ್ಮ ಒಡವೆಗೆ ಬರುವುದಕ್ಕಾಗುತ್ತದೆಯೆ, ಮಾನ್ಯ ಅಧ್ಯಕ್ಷರಿಗೆ ನಮ್ಮ ವಿಚಾರವೇನೆಂದು, ನೀವು ತಿಳಿದುಕೊಂಡಿರುವ ಹಾಗೆಲ್ಲಾ ಆಗುವುದಿಲ್ಲ ಬಿಡಿ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಹಿಂದಿನ ಕಹಿ ಅನುಭವಗಳ ಆಧಾರದ ಮೇಲೆ ಇವತ್ತು ರೈತರು ಪ್ರತಿರೋಧ ಒಡ್ಡಿದ್ದಾರೆ. ಅದಕ್ಕಾಗಿ ಕನಿಷ್ಠ ಅಧಿಕಾರಿಗಳು ಜಾಗಕ್ಕೆ ಬಂದು ಚರ್ಚೆ ಮಾಡಿ consent award ಅನ್ನೇ

ಮಾಡಿಸೋಣ, ಏನೆಂತೆ ಅದರ ಬಗ್ಗೆ ಪ್ರಯತ್ನ ಮಾಡೋಣ. ನೀವು ಕಾನೂನು ಪ್ರಕಾರ ಹೋದರೆ appeal ಹೋಗುತ್ತಾರೆ, ಮತ್ತೊಂದು ಮಗದೊಂದು ಎಂದು ಹೋಗುತ್ತಾರೆ, ಭೂ ಸ್ವಾಧೀನ ಪ್ರಕ್ರಿಯೆ ನಿಂತುಹೋದರೆ, ಆಮೇಲೆ ಹೆಚ್ಚಾಗಿ ಮಾನ್ಯ ರಮೇಶ್‌ಕುಮಾರ್‌ರವರಿಗೂ ಗೊತ್ತು, ಸಾರ್ ಇನ್ನು ಮೂರೇ ತಿಂಗಳು time ಇರುವುದು, ಪುನ: ನೀವು ಆರು ತಿಂಗಳು ಅಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಮೂರು ತಿಂಗಳಲ್ಲಿ ಎಷ್ಟು progress ತೋರಿಸುತ್ತೀರೋ ಅಷ್ಟೆ ಆಗುವುದು. ಅದಕ್ಕಾಗಿ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿಯೇನೆಂದರೆ 13 ಸಾವಿರ ಕೋಟಿ ರೂ.ಗಳನ್ನು ನೀವು ಖರ್ಚು ಮಾಡುತ್ತಿದ್ದೀರಿ. 4500 ಸಾವಿರ ರೂಪಾಯಿ ಸಾರ್ ಏಲಕ್ಕಿ ಬೆಳೆ ಸಾಲ. ಅದನ್ನು ಮೊನ್ನೆ ವಿಶೇಷ ಪ್ರಕರಣವೆಂದ್ನು ಘೋಷಿಸಬೇಕಾಗಿತ್ತು, ಯಾವ ಕಾರಣಕ್ಕಾಗಿ ಎಂದರೆ ಈ ಕಾರಣಕ್ಕಾಗಿ. ಇನ್ನು ಆ ಭಾಗದಲ್ಲಿ development works ಗಳಾದ ರಸ್ತೆಗಳು ಆಗಬೇಕು, ಸೇತುವೆಗಳಾಗಬೇಕು, ಆ ಏರಿಯಾದಲ್ಲಿ ಬರತಕ್ಕಂಥದ್ದು, ಇದಕ್ಕಾಗಿ ಒಂದೈನೂರು ಕೋಟಿ ರೂ.ಗಳಾಗಬಹುದು. ಬನ್ನಿ ನೀವು, ಅಧಿಕಾರಗಳನ್ನು ಕರೆಸಿಕೊಳ್ಳಿ, report ತೆಗೆದುಕೊಳ್ಳಿ, ತಾವೇ ಇದನ್ನು ನೇರವಾಗಿ ಮಾಡಿ ನಮ್ಮದೇನೂ ಇಲ್ಲ, ಏಕೆಂದರೆ ಸಾಕಷ್ಟು ಸಕಲೇಶಪುರ ತಾಲ್ಲೂಕಿನ ಜನರು ಹಿಂದಿನ ಅನೇಕ ಯೋಜನೆಗಳಿಂದ ತತ್ತರಿಸಿಹೋಗಿದ್ದಾರೆ. ರೈಲ್ವೆ ಯೋಜನೆಗಳು ಬಂದಿದೆ, ವಿದ್ಯುತ್ ಯೋಜನೆಗಳು ಬಂದಿವೆ, ಬೇರೆ ಬೇರೆ ಅನೇಕ ಯೋಜನೆಗಳು ಬಂದಿವೆ. ಕಾಡು ಪ್ರಾಣಿಗಳ ಹಾವಳಿ, ಆನೆ ಹಾವಳಿ, ಹೀಗೆ ತಮಗೆಲ್ಲವೂ ಗೊತ್ತಿದೆ ಏನೇನು ನಡೆಯುತ್ತಿದೆಯೆಂದು. ಹೀಗಾಗಿ ದಯಮಾಡಿ ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು, ನೀರಾವರಿ ಸಚಿವರು, ಸಹಕಾರ ಸಚಿವರು ನಮ್ಮ ಏಲಕ್ಕಿ ಬೆಳೆ ಸಾಲ ಮನ್ನಾ ಮಾಡುವುದಕ್ಕೆ ಸಹಾಯ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ಇವತ್ತು ಆ ಭಾಗದಲ್ಲಿ ಈ ಕಸ್ತೂರಿ ರಂಗನ್ ವರದಿ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಒತ್ತುವರಿ ವಿಷಯದಲ್ಲಿಯೂ ಕೂಡ ಸಾಕಷ್ಟು ಚರ್ಚೆಯಾಗಿದೆ. ಈಗ ಕಾನೂನು ಸಚಿವರು ಇಲ್ಲಿಯೇ ಇದ್ದಾರೆ. ಅವರಿಗೆ

ಒಂದು ವಿಚಾರದ ಬಗ್ಗೆ ಕೇಳುತ್ತೇನೆ. ಸಾರ್ ಕಾನೂನಿನಡಿಯಲ್ಲಿಯೇ ಈಗ 2006 ರಲ್ಲಿ ಹೈಕೋರ್ಟ್ ಒಂದು ಆದೇಶವನ್ನು ಕೊಟ್ಟಿತು, ಅಲ್ಲಿಯ ದನಕರುಗಳಿಗೆ, ಜಾನುವಾರುಗಳಿಗೆ ಅಗತ್ಯವಾದ ಜಾಗ ಇಟ್ಟುಕೊಂಡು ನೂರು ಎಕರೆ ಇದ್ದರೆ 30 ಎಕರೆಯನ್ನು ಜಾನುವಾರುಗಳಿಗೆ ಇಡಬೇಕು ಎಂದು ಹೇಳಿದ್ದರು. ಆ ರೀತಿಯಲ್ಲಿ ಕಾನೂನು ಪ್ರಕಾರ ಮಾಡಿದಂಥವು ಕೂಡ ಇನ್ನು pending ನಲ್ಲಿವೆ. ಇನ್ನೂ ಕೂಡ ಅವರಿಗೆ ಸಾಗುವಳಿ ಚೀಟಿ ಕೊಟ್ಟಿಲ್ಲ. ಡಿ.ಸಿ. ಯವರು ಡಿ.ವಿ.ಸಿ.ಗೆ ಪತ್ರ ಬರೆಯುವುದು, ಡಿ.ವಿ.ಸಿ. ಯವರ ವಿವರಣೆ ಕೇಳುವುದು, ಈ ತರಹದ್ದು ನಡೆದಿದೆ. ಇಂಥವುಗಳನ್ನಾದರೂ ತಾವು clear ಮಾಡಿಸಿ. ಕಾನೂನು ಚೌಕಟ್ಟಿನಲ್ಲಿಯೇ ಮಾಡಿದಂಥವುಗಳನ್ನು clear ಮಾಡಿಸಿ. ಈ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಇನ್ನು ಶಿರಾಡಿಘಾಟ್ ರಸ್ತೆ ಇವತ್ತಿನಿಂದ close ಆಗಿದೆ. ಅಲ್ಲಿ ಕೂಡ concrete ರಸ್ತೆ ಮಾಡುವುದಕ್ಕೆ ಹೋಗಿದ್ದಾರೆ. ಈಗ ನಮ್ಮ ಸಾರಿಗೆ ಸಚಿವರು ಸದನದಲ್ಲಿ ಇಲ್ಲ. ಆ ರೋಡ್‌ನಲ್ಲಿ ನಮ್ಮ ಸಕಲೇಶಪುರ ಮಾರ್ಗದಲ್ಲಿ 425 ಮಾರ್ಗಗಳಲ್ಲಿ ಓಡಿಸುತ್ತಿದ್ದೆವು. ಇವತ್ತು ಕೇವಲ 90 ಮಾರ್ಗಗಳಿಗೆ ಇಳಿದಿದೆ. ಎಲ್ಲಾ ಬಸ್‌ಗಳು ಹಾಸನ, ಬೇಲೂರು, ಚಾರ್ಮುಡಿಘಾಟ್ ಮೂಲಕ ಮಂಗಳೂರು ತಲುಪುತ್ತಿವೆ. ಈ ಕಡೆ ಮಡಿಕೇರಿ ಮೂಲಕ ಬರುತ್ತಿವೆ. ನಮ್ಮಲ್ಲಿ ಬರದೇ ಇರುವುದರಿಂದ ನಮ್ಮ ಸಕಲೇಶಪುರದ ಜನರು ಧರ್ಮಸ್ಥಳಕ್ಕೂ ಹೋಗುವಂತಿಲ್ಲ. ಹೋಗವುದಾದರೆ ಹಾಸನಕ್ಕೆ ಬಂದೇ ಹೋಗಬೇಕು. ಇದು ಸಮಸ್ಯೆಯಾಗಿರುವುದು. ಇದರಿಂದಾಗಿ ಹಾಲಿ ಇರತಕ್ಕಂಥ ರಸ್ತೆಯನ್ನು ದುರಸ್ಥಿಪಡಿಸಬೇಕು, ಇದರ ಜೊತೆಗೆ ಬಸ್‌ಗಳ ಮಾರ್ಗಗಳನ್ನು ಹೆಚ್ಚು ಮಾಡಬೇಕು 425 ಬಸ್ ಮಾರ್ಗಗಳು ಏನು ಓಡುತ್ತಿದ್ದವೋ ಅದರಲ್ಲಿ ಸುಮಾರು 70% ನಿಂತುಹೋಗಿವೆ. ಕನಿಷ್ಟ ಅವುಗಳನ್ನು ಹೆಚ್ಚು ಮಾಡಬೇಕೆಂದು ನಾನು ಈ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಇನ್ನು ಆನೆ ಹಾವಳಿ ಬಗ್ಗೆ ನಾನು ಹಿಂದೆಲ್ಲಾ ಬಹಳ ಚರ್ಚೆ ಮಾಡುತ್ತಿದ್ದೆ. ಈಗ ಏಕೋ ಮಾನ್ಯ ಸಚಿವರು ಸುಮ್ಮನಾಗಿ ಬಿಟ್ಟಿದ್ದಾರೆ, ಅದರ ಬಗ್ಗೆ ಅವರು ಹೇಳುತ್ತಿಲ್ಲ. ಈಗಲೂ ಕೂಡ ಸಕಲೇಶಪುರ ತಾಲ್ಲೂಕು ಆಲೂರು

ತಾಲ್ಲೂಕಿನಲ್ಲಿ ಆನೆ ಹಾವಳಿ ಪ್ರತಿ ದಿನ ಹೆಚ್ಚಾಗುತ್ತಿದೆ. ಇದರ ಜೊತೆಗೆ ಬೆಳೆ ನಾಶ ಸಾಕಷ್ಟು ಆಗುತ್ತಿದೆ, ಪ್ರಾಣ ಹಾನಿಯಾಗುತ್ತಿದೆ, ಅದೇನೋ ಆನೆ ಕಾರಿಡಾರ್ ಮಾಡುತ್ತೇವೆಂದರು, ಕಾರಿಡಾರ್ ಆಗಲಿಲ್ಲ. ಆನೆಧಾಮ ಮಾಡುತ್ತೇವೆಂದರು, ಧಾಮವೂ ಇಲ್ಲ, ಕಾರಿಡಾರ್ ಕೂಡ ಇಲ್ಲ. ಇದರಿಂದಾಗಿ ರೈತರು ಮತ್ತೊಮ್ಮೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ದಯಮಾಡಿ ಆ ಕಡೆಗೆ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ಗ್ರಾಮ ಪುನರ್ವಿಂಗಡಣಾ ಸಮಿತಿಯನ್ನು ತಾವು ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೆ, ಅದೆಷ್ಟು ಅವೈಜ್ಞಾನಿಕವಾಗಿದೆಯೆಂದರೆ, ರಾಜಕೀಯ ಪ್ರೇರಿತವೆಂದೇ ನಾನು ಭಾವಿಸುತ್ತೇನೆ. 459 ಹೊಸ ಪಂಚಾಯತಿಗಳನ್ನು ಇವರು create ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರವಾದ ಸಕಲೇಶಪುರ ತಾಲ್ಲೂಕಿನಲ್ಲಿ 26 ಗ್ರಾಮ ಪಂಚಾಯತಿಗಳು ಬರುತ್ತವೆ. ಒಂದೊಂದು ಪಂಚಾಯತಿಗೆ 15 ಕಿ.ಮೀ. ಹೋಗಬೇಕು. ಮಾಲಕರೆಡ್ಡಿಯವರೆ, ಒಂದು ಗ್ರಾಮ ಪಂಚಾಯತಿಯ ವ್ಯಾಪ್ತಿ 15 ಕಿ.ಮೀ. ಇದೆ. ಮೂರು ಸಾವಿರ, ಮೂರೂವರೆ ಸಾವಿರಕ್ಕೆ ಬಹಳ ಹಿಂದೆ ಮಾಡಿದ್ದಾರೆ. ಇಡೀ ರೈತರೆಲ್ಲರೂ ಹೋಗಿ ಮನವಿ ಕೊಟ್ಟಿದ್ದಾರೆ. ಗ್ರಾಮದವರು ಕೊಟ್ಟಿದ್ದಾರೆ. ನಾವು ಕೊಟ್ಟಿದ್ದೇವೆ. ನಮ್ಮನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ನಮ್ಮ ಹಾಸನ ಜಿಲ್ಲೆಯಲ್ಲಿ ಎಂಟು ಪಂಚಾಯತಿಗಳನ್ನು ಹೆಚ್ಚು ಮಾಡಿದ್ದಾರೆ. ಅದರಲ್ಲಿ 4 ಅರಕಲಗೂಡು ತಾಲ್ಲೂಕಿನಲ್ಲಿ ಬರುತ್ತದೆ, 1 ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಬರುತ್ತದೆ. ಇನ್ನು ಎಲ್ಲೂ ಮಲೆನಾಡಿನಲ್ಲಿ ಮಾಡಿಲ್ಲ. ಎಲ್ಲಿ ಮಲೆನಾಡಿನಲ್ಲಿ ಮಾಡಬೇಕಾಗಿತ್ತೋ ಅಲ್ಲಿ ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಆಲೂರು ತಾಲ್ಲೂಕಿನಲ್ಲಿ ಬರತಕ್ಕಂಥ ತಾಳೂರು ಎನ್ನುವ ಒಂದು ಗ್ರಾಮ ಪಂಚಾಯತಿ. ಟಿ.ಗುಡ್ಡೇನಹಳ್ಳಿ ಎಂದು ಇನ್ನೊಂದು ಗ್ರಾಮ ಪಂಚಾಯತಿಯನ್ನು addition ಆಗಿ ಮಾಡಬೇಕೆಂದು ಇಡೀ ರೈತರೆಲ್ಲರೂ strike ಮಾಡಿದ್ದಾರೆ. ಹಿಂದಿನಿಂದಲೂ ಮನವಿಯನ್ನು ಡಿ.ಸಿ. ಯವರಿಗೆ ಕೊಟ್ಟಿದ್ದಾರೆ, ಸಿ.ಇ.ಓ. ರವರಿಗೆ ಕೊಟ್ಟಿದ್ದಾರೆ. ಅವರೂ ಕೂಡ ಸರ್ಕಾರಕ್ಕೆ recommend ಮಾಡಿದ್ದಾರೆ. ಆರ್.ಡಿ.ಪಿ.ಆರ್.ಗೆ proposal ಬಂದಿದೆ. ಅದನ್ನೂ ಕೂಡ ಗಣನೆಗೇ ತೆಗೆದುಕೊಂಡಿಲ್ಲ. ಈ ರೀತಿಯಾದರೆ

ಯಾರ ಅನುಕೂಲಕ್ಕಾಗಿ, ಏತಕ್ಕಾಗಿ ಹೀಗೆ ಮಾಡಿದ್ದೀರಿ. ಗ್ರಾಮ ಪುನರ್ವಿಂಗಡಣೆ ಸಮಿತಿಯ ಉದ್ದೇಶವೇನು? ನೀವು ಕಾಂಗ್ರೆಸ್ ಶಾಸಕರುಗಳೇ ಇರುವಲ್ಲಿ ಹೆಚ್ಚು ಮಾಡಿರುವುದನ್ನು ನೋಡಿದರೆ ಇವತ್ತು ನೂರಕ್ಕೆ ನೂರು ರಾಜಕೀಯ ಪ್ರೇರಿತ ಸಮಿತಿಯೆಂದೇ ನಾನು ಹೇಳಬೇಕಾಗುತ್ತದೆ. ಸಾರ್ ನಾವು ಅಷ್ಟೆಲ್ಲಾ ಕೇಳಿದ್ದೇವೆ, ಮಲೆನಾಡಿನಲ್ಲಿ ಎಲ್ಲಿ ಆಗಬೇಕೋ ಅಲ್ಲಿ ಆಗಿಲ್ಲ. ದಯಮಾಡಿ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿಕೊಳ್ಳಬಾರದು. ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ, ಶ್ರೀ ನಂಜಯ್ಯನಮಠ, ಗ್ರಾಮ ಪಂಚಾಯತಿ ಪುನರ್ವಿಗಡಣೆ ಸಮಿತಿಯ ವರದಿಯನ್ನು ಒಪ್ಪಬಾರದು, ಪುನರ್ವಿಂಗಡಣೆಯನ್ನು ಪುನರ್ ಪರಿಶೀಲಿಸಿ. ಏನು ಇನ್ನೊಂದು ಎಲೆಕ್ಷನ್‌ಗೆ ಹೋದರೆ ಆಗಬಾರದ ವ್ಯತ್ಯಾಸವೇನೂ ಆಗುವುದಿಲ್ಲ. ಇವತ್ತು ಒಂದು ಹಳ್ಳಿ ಇಲ್ಲಿ ಪಂಚಾಯತಿ ಪಕ್ಕದಲ್ಲಿದ್ದರೆ ಈ ಹಳ್ಳಿಯನ್ನು ತೆಗೆದುಕೊಂಡು ಹೋಗಿ 20 ಕಿ.ಮೀ. ದೂರಕ್ಕೆ ಸೇರಿಸಿದ್ದಾರೆ ಹಿಂದೆ, ಇವೆಲ್ಲದರ ಬಗ್ಗೆ ವಿವರಗಳನ್ನು ನಾವು ಕೊಟ್ಟು ತಕರಾರು ಸಲ್ಲಿಸಿದ್ದೇವೆ. ಏನೂ ಗಣನೆಗೆ ತೆಗೆದುಕೊಂಡಿಲ್ಲ. ಆದುದರಿಂದ ಅವೈಜ್ಞಾನಿಕವಾಗಿದೆ. ಪುನಃ ಅದನ್ನು ನೀವು ಪರಿಶೀಲಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಗುರುಪಾಟೀಲ್ ಶಿರವಾಳ:** ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಿದ್ದಾರೆ. ಈಗ ನನ್ನ ಕ್ಷೇತ್ರದಲ್ಲಿ ಹೊಸದಾಗಿ ಒಂದು ಪಂಚಾಯತಿಯನ್ನೂ ಕೂಡ ಮಾಡಲಿಲ್ಲ. ಸುಮಾರು 15 ಹಳ್ಳಿಗಳಲ್ಲಿ 15 ಸಾವಿರ ಜನಸಂಖ್ಯೆ ಇದ್ದರೂ ಕೂಡ ಹಾಗೆಯೇ ಇದೆ. ನಾವೆಲ್ಲಾ ಇದರ ಬಗ್ಗೆ ಶಿಫಾರಸ್ಸು ಮಾಡಿ ನಂಜಯ್ಯನಮಠ್‌ರವರಿಗೆ ಕೊಟ್ಟು ಮಂತ್ರಿಗಳ ಗಮನಕ್ಕೆ ತಂದರೂ ಕೂಡ ಆಗಲಿಲ್ಲ. ಬಹಳ ಅವೈಜ್ಞಾನಿಕವಾಗಿದೆ. ಆದುದರಿಂದ ದಯಮಾಡಿ ಸರ್ಕಾರ ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕು.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ಇನ್ನು ನೀರಾವರಿ ಇಲಾಖೆ ಬಗ್ಗೆ ಹೇಳಬೇಕೆಂದರೆ, ನನ್ನ ಕ್ಷೇತ್ರದಲ್ಲಿ ಬರತ್ತೂರು-ಜನಾರ್ಧನಹಳ್ಳಿ ಸೇತುವೆ ಎಂದು ಇದೆ. ಮೂರು ತಿಂಗಳ ಹಿಂದೆ ನಾನು ಕಾವೇರಿ ನೀರಾವರಿ

ನಿಗಮದ ಎಚಿಡಿ.ಯವರು, ಮಾನ್ಯ ಜಯಪ್ರಕಾಶ್‌ರವರನ್ನು ಮತ್ತು ಇತರ ಚೀಫ್ ಇಂಜಿನಿಯರ್‌ರವರು ಮತ್ತು ಇತರರನ್ನು ನಾನೇ ಅಲ್ಲಿಗೆ ಕರೆದುಕೊಂಡು ಹೋಗಿದ್ದೆ. ಇದು ಅಪ್ಪಚ್ಚು ರಂಜನ್ ಕ್ಷೇತ್ರಕ್ಕೂ ನನ್ನ ಕ್ಷೇತ್ರಕ್ಕೂ ಅದು ಮಧ್ಯ ಬರುತ್ತದೆ. ಅದು ಪ್ರಾರಂಭವಾಗಿ 16 ವರ್ಷವಾಗಿದೆ.

**ಅಧ್ಯಕ್ಷರು:** ಪ್ರಾರಂಭವಾಗಿ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಪ್ರಾರಂಭವಾಗಿ ಹದಿನಾರು ವರ್ಷವಾಗಿದೆ. ಪ್ರಾರಂಭದಲ್ಲಿ ಅದರ estimate 1.5 ಕೋಟಿ. ಈಗ ಅದರ estimate 18 ಕೋಟಿ. ಈಗ ಹಾಕಿರತಕ್ಕಂಥ estrimate ಇನ್ನೂ ಕೂಡ ಅದು ಮುಗಿದಿಲ್ಲ. ಮುಗಿಸಿ ಎಂದು ಹೇಳಿದರೆ ಸಾರ್ ನಾವು ಡಿಸೆಂಬರ್, ಜನವರಿಯಲ್ಲಿ ಶುರು ಮಾಡಿ ಏಪ್ರಿಲ್‌ಗೆ ಮುಗಿಸುತ್ತೇವೆ ಎಂದು ಹೇಳಿದರು. ಇಲ್ಲಿಯವರೆವಿಗೂ ಆ ಕಡೆಗೆ ಗಮನ ಬಂದೇ ಇಲ್ಲ. ನಮ್ಮ ಇಂಜಿನಿಯರ್‌ಗಳೂ ಬಹಳ ಬುದ್ಧಿವಂತರಿದ್ದಾರೆ, ಸಾರ್ ಎರಡ್ಮೂರು ಸಾರಿ ಜಲ್ಲಿ ಹಾಕಿದ್ದರೂ ಕೂಡ ಪುರ್ನವಸತಿ ಹಳ್ಳಿಗಳು ಅಲ್ಲಿ ಇವೆ, ಅವರ ಜೀವನ, ಅವರ ಕಷ್ಟವನ್ನು ನೋಡುವುದಕ್ಕಾಗುವುದಿಲ್ಲ ಬಿಡಿ, ಡಾಂಬರು ಮಾಡಿಕೊಡಿ ಎಂದರೆ ಡಾಂಬರು ಮಾಡುವುದಿಲ್ಲ. ಇಲ್ಲಾ ಸಾರ್ ಜಲ್ಲಿ ಕಿತ್ತುಹೋಗಿದೆ ಎಂದು ಹೇಳಿ ಪುನ: ಜಲ್ಲಿಯನ್ನೇ ಹಾಕುವುದು. ಇನ್ನು formation ಮಾಡುವುದರಲ್ಲಿಯೇ, ಜಲ್ಲಿ ಹಾಕುವುದರಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಡಾಂಬರು ಮಾತ್ರ ಮಾಡುವುದಿಲ್ಲ. Concrete ರಸ್ತೆ ಮಾತ್ರ ಮಾಡುವುದಿಲ್ಲ. ಎಲ್ಲಾ ಅನುಪಯುಕ್ತ ಕೆಲಸಗಳು, ಕಾಮಗಾರಿಗಳೇ ಆಗಿವೆ. ಮಾಲಕರೆಡ್ಡಿಯವರೆ ತಮಗೆ ಅರ್ಥವಾಗುತ್ತದೆ, ಬಾಗಲಕೋಟೆ ಏರಿಯಾದಿಂದ ತಾವು ಬಂದಿರುವುದು.

**ಶ್ರೀ ಎ.ಬಿ. ಮಾಲಕರೆಡ್ಡಿ:** ಯಾದಗೀರ್.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಯಾದಗೀರ್ ಇರಲಿ, ಎಲ್ಲವೂ ಪಕ್ಕಪಕ್ಕದಲ್ಲಿಯೇ connection ಇದೆಯಲ್ಲಾ. ಎಲ್ಲವೂ ಅನುಪಯುಕ್ತ ಕೆಲಸಗಳೇ ಆಗಿವೆ. ಯಾರೋ ಒಬ್ಬರಿಗೆ ಸಹಾಯ ಆಗತಕ್ಕಂಥ ಕೆಲಸಗಳು.

ಈ ರೀತಿ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಈ ಸೇತುವ ಕೆಲಸದ ಬಗ್ಗೆ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಅವರು ಮಾಡಿಸುತ್ತೇನೆಂದು ಹೇಳಿದ್ದಾರೆ. ಈಗ ಅವರು ಇಲ್ಲಿ ಇಲ್ಲ. ಅದನ್ನು ಆದಷ್ಟು ಬೇಗ ಒತ್ತಾಯ ಮಾಡಿ ಆ ಕೆಲಸವನ್ನು ಮೇ ತಿಂಗಳೊಳಗೆ ಕನಿಷ್ಠ ಮುಗಿಸಬೇಕೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ನಮ್ಮ ಕಡೆ ಸುಮಾರು 17 ಶೀತಪೀಡಿತ ಪ್ರದೇಶಗಳ ಹಳ್ಳಿಗಳು ಇವೆ. ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ನಾನೂ ಕೂಡ ಮಂತ್ರಿಯಾಗಿದ್ದೆ, ನಮ್ಮ ರೇವಣ್ಣನವರು ಉಸ್ತುವಾರಿ ಸಚಿವರಾಗಿದ್ದರು. ನಾವೆಲ್ಲರೂ ಒಂದು ಸಾರಿ ಆ ಭಾಗಕ್ಕೆ ಹೋಗಿ ಬಂದಿದ್ದೆವು. ಮೊನ್ನೆ ಎಂ.ಡಿ. ಯವರು ಕೂಡ ಬಂದಿದ್ದರು. ಇವು ಕೂಡ ಹಾಗೆಯೇ ಉಳಿದಿವೆ. ನಮ್ಮ ಡಿ.ವಿ.ಸಿ. ಯವರು ಬರುತ್ತಾರೆ ಸಾರ್, ಅವರು ಯಾವಾಗ ಬರುವುದು ಎಂದರೆ ಫೆಬ್ರವರಿ ತಿಂಗಳಿಗೆ inspection ಮಾಡುವುದಕ್ಕೆ. ನೀರೆಲ್ಲವೂ ಕೆಳಗಡೆ ಹೋಗಿ ಎಲ್ಲವೂ dry ಆಗಿರುತ್ತದೆ. ನಾವು ಅವರಿಗೆ ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಬನ್ನಿ, ಜುಲೈ ತಿಂಗಳಲ್ಲಿ ಬನ್ನಿ, ಅಲ್ಲೆಲ್ಲಾ fodder, ಗೋಣಿಚೀಲ, ತಟ್ಟುಗಳು ಇವೆಲ್ಲವನ್ನೂ ಕೆಳಗಡೆ ಹಾಕಿಕೊಂಡು ಮಲಗಿರುತ್ತಾರೆ, ನೀವು ನೋಡಿಬನ್ನಿ ಎಂದರೆ ಆಗ ಅವರು ಬರುವುದೇ ಇಲ್ಲ. ಈಗ ನೀರೆಲ್ಲವೂ ಹೋಗಿ dry ಆಗಿದೆ. ಈಗ ಹೋಗುತ್ತಾರೆ ಸಾರ್. ಇನ್ನೊಂದು round ಹೋಗುತ್ತಾರೆ. ನಾನು ಇಲ್ಲಿ ಮಾತನಾಡಿದಾಗಲೆಲ್ಲಾ ಅವರು ಬೆಳಿಗ್ಗೆ ಹೋಗುತ್ತಾರೆ. ಇನ್ನು ವರ್ಷ ಪೂರ್ತಿ ಮರೆತುಬಿಡುತ್ತಾರೆ ಸಾರ್.

ಅಧ್ಯಕ್ಷರು: ಅಲ್ಲಿಯ ವಸ್ತುಸ್ಥಿತಿ ಏನಿದೆ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ವಸ್ತುಸ್ಥಿತಿ ಅಲ್ಲಿಯ ನೀರು back water ಆಗಿದೆ ಸಾರ್.

ಅಧ್ಯಕ್ಷರು: ಅಲ್ಲಿ ವಸ್ತುಸ್ಥಿತಿ ಏನಿದೆ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಅಲ್ಲಿ ವಸ್ತುಸ್ಥಿತಿ ಏನೆಂದರೆ ಹೇಮಾವತಿ ಜಲಾಶಯ ಯೋಜನೆ ಹಿನ್ನೀರು ಇರುವಂತಹ 17 ಹಳ್ಳಿಗಳಿಗೆ ಪುರ್ನವಸತಿ ಕಲ್ಪಿಸಬೇಕು ಎಂದು ಹೋರಾಟ ಮಾಡುತ್ತಿದ್ದೇವೆ.

**ಅಧ್ಯಕ್ಷರು:** ಆ ಹಳ್ಳಿಗಳು ಮುಳುಗಡೆಯಾಗಿವೆಯೇ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಮುಳುಗಡೆಯಾಗಿಲ್ಲ, ಅವು seepage villages. ಅದಕ್ಕೆ ಆ ಹಳ್ಳಿಗಳನ್ನು ಸ್ವಾಧೀನ ಮಾಡಿಕೊಂಡು ಪರಿಹಾರ ಕೊಡಿ ಎಂದು ಬಹಳ ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಆದರೆ ಇವರು ಈ ರೀತಿ ಕಾಲ ಕಳೆದುಕೊಂಡು ಮುಂದಕ್ಕೆ ಹೋಗುತ್ತಿದ್ದಾರೆ. ಅದಕ್ಕಾಗಿ ಆ ಹಳ್ಳಿಗಳನ್ನು ಘೋಷಣೆ ಮಾಡಿ, ಅವರಿಗೆ ಶಾಶ್ವತ ಪರಿಹಾರ ಕೊಡಿ ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇವೆ. ಹಾಗಾಗಿ ಯೋಜನೆಯಲ್ಲಿ ಅನುಪಯುಕ್ತ ಕೆಲಸಗಳನ್ನು ಬಿಟ್ಟು ಜನರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅವರು ಮಾತನಾಡುವಂತಹ ಸಂದರ್ಭದಲ್ಲಿ ಕನ್ನಡ ಭಾಷೆ ಬಗ್ಗೆ ಕೂಡ ಹೇಳಿದ್ದಾರೆ. ಮೊನ್ನೆ 21 ನೇ ಕನ್ನಡ ಸಾಹಿತ್ಯ ಸಮ್ಮೇಳನ ಶ್ರವಣಬೆಳಗೊಳದಲ್ಲಿ ತುಂಬಾ ಚೆನ್ನಾಗಿ ಆಯಿತು. ಅದರಲ್ಲಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು, ನಮ್ಮ ಸ್ಥಳೀಯ ಶಾಸಕರಾದ ಮಾನ್ಯ ಸಿ.ಎನ್. ಬಾಲಕೃಷ್ಣರವರು ಎಲ್ಲರೂ ತುಂಬಾ ಶ್ರಮ ವಹಿಸಿ ನಡೆಸಿದ್ದರಿಂದ ಕಾರ್ಯಕ್ರಮ ತುಂಬಾ ಚೆನ್ನಾಗಿ ಆಯಿತು. ನಮ್ಮ ಮಾಜಿ ಪ್ರಧಾನಿಗಳಾದಂತಹ ಮಾನ್ಯ ದೇವೇಗೌಡರು, ಮಾನ್ಯ ಕುಮಾರಸ್ವಾಮಿ ಹಾಗೂ ಮಾನ್ಯ ಯಡಿಯೂರಪ್ಪನವರು ಕೂಡ ಬಂದಿದ್ದರು. ಕಾರ್ಯಕ್ರಮ ತುಂಬಾ ಅಚ್ಚುಕಟ್ಟಾಗಿ ಆಯಿತು. ಆದರೆ ಪ್ರತಿವರ್ಷ ಕೇವಲ ಸಮ್ಮೇಳನಗಳನ್ನು ನಡೆಸುವುದರಿಂದ ಭಾಷೆ ಮುನ್ನಡೆ ಸಾಧಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸುತ್ತೇವೆಂದು ಹೇಳಿದರು. ಆದರೆ ಆ ಭಾಷೆಗೆ ಸಿಗುವಂತಹ ಮಾನ್ಯತೆ, ಔಚಿತ್ಯ ಮತ್ತು ಪ್ರಾಮುಖ್ಯತೆ ಇನ್ನೂ ಕೂಡ ಸಿಕ್ಕಿಲ್ಲ, ಆ ಕೆಲಸವಾಗಬೇಕು ಎನ್ನುವ ಮಾತನ್ನು ಹೇಳುತ್ತೇನೆ. ನಾನು

ಇನ್ನೂ ಅನೇಕ ವಿಚಾರಗಳು ಮಾತನಾಡುವುದಿತ್ತು. ಮಾನ್ಯ ನಂಜಯ್ಯನಮಠ್ ವರದಿಯನ್ನು ವಿರೋಧ ಮಾಡುತ್ತಾ. . . .

**ಅಧ್ಯಕ್ಷರು:** ಈಗ notification ಮಾಡುತ್ತಿದ್ದಾರಲ್ರಿ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ನಾವು ಅದನ್ನೇ ವಿರೋಧ ಮಾಡುತ್ತಿದ್ದೇವೆ. ಈ ಒಂದು ಅವಕಾಶವನ್ನು ಕೇಳಿದ್ದರು.

**ಶ್ರೀ ಸಿದ್ದರಾಮಯ್ಯ:** ನೀವು ವಿರೋಧ ಮಾಡಿದ ಮೇಲೆ ನೀವು ಕೇಳಿದ್ದನ್ನೆಲ್ಲಾ ಹೇಗೆ ಕೊಡುವುದಕ್ಕಾಗುತ್ತದೆ?

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ನಾವು ಕೇಳಿದ್ದೆವು, ಆದರೆ ಕೊಟ್ಟಿಲ್ಲವಲ್ಲ, ನಾವು ಕೇಳಿದ್ದು ಏನೂ ಆಗಿಲ್ಲವಲ್ಲ.

**ಅಧ್ಯಕ್ಷರು:** ಅವರು ಹೇಳುವುದರಲ್ಲಿ ಇವೆ, ನಮ್ಮಲ್ಲಿ ಇವೆ. ಸುಮಾರು ಹತ್ತು-ಹನ್ನೆರಡು ಕಿಲೋಮೀಟರ್ ದೂರದಲ್ಲಿ ಕೆಲವು ಹಳ್ಳಿಗಳು ಇವೆ. ನಾವು ಆಗ ಎರಡೂವರೆ ಸಾವಿರದವರೆಗೂ ಜನಸಂಖ್ಯೆಯಿದ್ದರೆ ಪಂಚಾಯಿತಿ ಮಾಡುವುದಕ್ಕೆ ಅವಕಾಶ ಮಾಡಿದ್ದೆವು. ಈಗ ಅವು 10% ಜಾಸ್ತಿಯಾಗಿವೆ. ಅವರು ಹೇಳುವ ಪ್ರಕಾರ ಎರಡು-ಎರಡೂವರೆ ಸಾವಿರವಾದರೂ ಪರವಾಗಿಲ್ಲ, ಆ ಪರಿಸ್ಥಿತಿಯನ್ನು ನೋಡಿ ಒಂದು ಪಂಚಾಯಿತಿ ಎಂದು ಮಾಡುವುದು ಒಳ್ಳೆಯದು ಎಂದು ಅವರ ಸಲಹೆ ಇದೆ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜಯ್ಯನ ಮಠ್‌ರವರೆ ನಮಗೆ ಇಷ್ಟರೊಳಗೆ ಮಾಡಬೇಕು, ನಮಗೆ ಪ್ರಸ್ತಾವನೆ ಕೊಡಿ ಮತ್ತು ಪತ್ರ ಬರೆದಿದ್ದಾರೆ. ಅವರು ಕೇಳಿರುವುದನ್ನು ಅವರೇ ಜಾರಿ ಮಾಡಲ್ಲ. ಅದಕ್ಕೆ ನಾನು ಇದು ರಾಜಕೀಯ ಪ್ರೇರಿತ ಎಂದು ಹೇಳುತ್ತಿರುವುದು. ಮಾನ್ಯ ಅಧ್ಯಕ್ಷರೆ, ತಾವು ಹೇಳಿ, ಸಕಲೇಶಪುರ ತಾಲ್ಲೂಕು ಮಲೆನಾಡಿನ ದೊಡ್ಡ ಪ್ರದೇಶ. ಅರಕಲಗೂಡು ತಾಲ್ಲೂಕಿನಲ್ಲಿ ಏಳು ಪಂಚಾಯಿತಿಗಳನ್ನು ಹೊಸದಾಗಿ ರಚನೆ ಮಾಡಿದ್ದಾರೆ. ಸಕಲೇಶಪುರದಲ್ಲಿ ಒಂದು ಪಂಚಾಯಿತಿ ರಚನೆ ಮಾಡಿಲ್ಲವೆಂದರೆ ನಾವೇನು ಅರ್ಥ ಮಾಡಿಕೊಳ್ಳಬೇಕು? ಅದಕ್ಕೆ ಮತ್ತೊಮ್ಮೆ

ಪುನರ್ ಪರಿಶೀಲಿಸಿ ಅದನ್ನು ಮಾಡಿಕೊಡಿ ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇವೆ. ಕೊನೆಯದಾಗಿ ನನ್ನ ಭಾಗದಲ್ಲಿ 200 ರಿಂದ 400 ಇಂಚು ಮಳೆ ಬೀಳುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಸಿಕೊಂಡಿದ್ದೇನೆ. ಪ್ರತಿ ವರ್ಷ ಬಿದ್ದೇ ಬೀಳುತ್ತದೆ. ಆ ಭಾಗದಲ್ಲಿ 300 ರಿಂದ 400 ಟಿಎಂಸಿ ನೀರು ಈ ಕಡೆಯ ಡ್ಯಾಂ ಗಳಿಗೆ ಬಂದೇ ಬರುತ್ತದೆ. ಮಳೆ ಬೀಳುವುದರಿಂದ ಪ್ರತಿ ವರ್ಷ ಇಲ್ಲಿನ ರಸ್ತೆಗಳು ಹಾಳಾಗುತ್ತವೆ. ಹಿಂದೆ ಇದ್ದಂಥ ನಮ್ಮ ಬಿಜೆಪಿ ಸರ್ಕಾರದವರು ಪಕ್ಷಪಾತ ಮಾಡಿ ಚಿಕ್ಕಮಗಳೂರು ಮತ್ತು ಕೊಡಗಿಗೆ ವಿಶೇಷ ಅನುದಾನ ಕೊಟ್ಟರು. ಆಗ ಸಕಲೇಶಪುರಕ್ಕೆ ಕೊಡಲಿಲ್ಲ. ದಯಮಾಡಿ ತಾವಾದರೂ ಕೂಡ ಪ್ರತಿ ವರ್ಷ ನೀತಿ ಎಂದು ಘೋಷಿಸಿ ಕನಿಷ್ಟ ನೂರು ಕೋಟಿ ರೂಪಾಯಿಯನ್ನು ಸಕಲೇಶಪುರ ತಾಲ್ಲೂಕು ಮತ್ತು ಕ್ಷೇತ್ರಕ್ಕೆ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಕೊಡಿ ಎಂದು ಒತ್ತಾಯ ಮಾಡುತ್ತೇನೆ.

**ಶ್ರೀ ಬಿ.ಆರ್. ಪಾಟೀಲ್ (ಆಳಂದ):** ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನಗೆ ಸುಮಾರು 30 ವರ್ಷದ ರಾಜಕೀಯ ಅನುಭವದಲ್ಲಿ ನಾನು ಒಂದು ವ್ಯತ್ಯಾಸವನ್ನು ನೋಡುತ್ತಿದ್ದೇನೆ. ರಾಜ್ಯಪಾಲರನ್ನು ಈ ಜಂಟಿ ಅಧಿವೇಶನಕ್ಕೆ-ಕರೆಸಿ ಅವರ ಕಡೆಯಿಂದ ಭಾಷಣ ಮಾಡಿಸುವುದು Artice 171 ಪ್ರಕಾರ ಸಂವಿಧಾನಬದ್ಧವಾಗಿ ನಡೆಯುವುದು ಪರಂಪರೆ ಮತ್ತು ಪದ್ಧತಿ. ಈ ರಾಜ್ಯಪಾಲರ ಭಾಷಣದಲ್ಲಿ ಯಾವ ಸರ್ಕಾರ ಅಧಿಕಾರದಲ್ಲಿರುತ್ತದೆ, ಆಯಾಯ ಸರ್ಕಾರಗಳು, ಆ ಸರ್ಕಾರದ ದಾರಿ, ದಿಕ್ಕು ಮತ್ತು ಯೋಜನೆ ಕಾರ್ಯಕ್ರಮಗಳು highlight ಮಾಡುವುದು ಒಂದು vision document ಎಂದು ನಾನು ಭಾವಿಸಿದ್ದೇನೆ. ಆದರೆ ಇತ್ತೀಚೆಗೆ ರಾಜ್ಯಪಾಲರ ಭಾಷಣದ ಪರಿಯನ್ನು ನೋಡಿದಾಗ, ನಾವು ಹಿಂದೆ ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಹೇಳುವುದನ್ನು ನೋಡಿದರೆ ಇದು performance ಭಾಷಣದ ರೀತಿ ಇರುತ್ತದೆ. ಆದರೆ ದುರ್ದೈವ ಮಾನ್ಯ ರಾಜ್ಯಪಾಲರನ್ನು ಇಲ್ಲಿ ಕರೆಸಿ, ಹಿಂದೆ ಮಾಡಿದ ಸರ್ಕಾರಗಳ performance report ಓದಿಸುವುದು

ಸರಿಯಲ್ಲ. ಇವತ್ತು ರಾಜ್ಯಪಾಲರ ಭಾಷಣವನ್ನು ನಾವು ನೋಡಿದಾಗ ಸರ್ಕಾರದವರು ಹಿಂದೆ ತಾವು ಮಾಡಿದಂತಹ ಅನೇಕ ಕಾರ್ಯಕ್ರಮಗಳನ್ನು ಅವರ ಬಾಯಲ್ಲಿ ಹೇಳಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದರ ಅವಶ್ಯಕತೆ ಇತ್ತೇ?

**ಅಧ್ಯಕ್ಷರು:** ಒಂದು ವೇಳೆ ನಿಮಗೆ ಮರೆತು ಹೋಗಿತ್ತಪ್ಪ, ಅದನ್ನು ನೆನಪು ಮಾಡಿಕೊಡಬೇಕಲ್ಲ.

**ಶ್ರೀ ಬಿ.ಆರ್. ಪಾಟೀಲ್:** ಅಲ್ಲ ಸಾರ್, ನಡೆದು ಬಂದ ದಾರಿ ಮತ್ತು ಮುಂದೆ ಹೋಗುವ ದಿಕ್ಕು, ಇದನ್ನೂ ಹೇಳಬೇಕಲ್ಲ. ಹಿಂದಿನ ವರ್ಷದಲ್ಲಿ ಏನೇನು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿತ್ತು, ಹಿಂದೆ ನಡೆದು ಬಂದ ದಾರಿ ಬಗ್ಗೆ ಹೇಳಿಕೊಳ್ಳಲಿ, ನನ್ನ ಅಭ್ಯಂತರವಿಲ್ಲ. ಈಗ ಮಾರ್ಚ್ ಕೊನೆಯಲ್ಲಿ ಒಂದು ಹೊಸ ಬಜೆಟ್ ಅನ್ನು ಸರ್ಕಾರ ಸದನದಲ್ಲಿ ಮಂಡಿಸುತ್ತಾರೆ, ಅದರ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತದೆ. ಆದರೆ ನನ್ನ ಚಿಂತನೆ ಏನೆಂದರೆ ಹೋದ ಸಲ ಈ ಸರ್ಕಾರ ಏನೇನು ಹೇಳಿತ್ತು, ಅದರ ಬಗ್ಗೆ ನಾವು ಹಿಂದಿನದನ್ನು ನೋಡಿದಾಗ ಸರ್ಕಾರದವರು ಮುಂದೆ ಬರತಕ್ಕಂಥ ದಿನಗಳಲ್ಲಿ ಈ ರಾಜ್ಯದಲ್ಲಿ ನೂರು ಮೊರಾರ್ಜಿ ದೇಸಾಯಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ, ಈ ರಾಜ್ಯದಲ್ಲಿ 178 ಹೈಸ್ಕೂಲ್‌ಗಳನ್ನು ಮತ್ತು ಜೂನಿಯರ್ ಕಾಲೇಜುಗಳನ್ನು ಮಾಡುತ್ತೇವೆ. ಮಾನ್ಯ ಪಶು ಸಂಗೋಪನಾ ಸಚಿವರು ಇಲ್ಲಿಯೇ ಸಚಿವರು ಇಲ್ಲಿಯೇ ಇದ್ದೀರಿ, ತಾವು ಕೂಡ ನೂರು ಪಶುಸಂಗೋಪನಾ ಚಿಕಿತ್ಸಾಲಯಗಳನ್ನು ಗ್ರಾಮೀಣ ಭಾಗದಲ್ಲಿ ತೆರೆಯುತ್ತೇವೆ, ನೀರಾವರಿಯನ್ನು ಇಷ್ಟು ಪ್ರಮಾಣದಲ್ಲಿ ಹೆಚ್ಚಿಗೆ ಮಾಡುತ್ತೇವೆ, Appendix-c ನಲ್ಲಿ ನಾವು ಇಷ್ಟು ಪ್ರಮಾಣದಲ್ಲಿ ಹಣ ಒದಗಿಸುತ್ತೇವೆ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಲ್ಲಿ ಪ್ರತಿ ಕ್ಷೇತ್ರಕ್ಕೆ 20 ಕಿಲೋಮೀಟರ್ ಒದಗಿಸುತ್ತೇವೆ ಎಂದು ಹೇಳಿದ್ದಿರಿ.

**ಶ್ರೀ ವೈ.ಎನ್. ರುದ್ರೇಶ್‌ಗೌಡ:** ಮಾಡಿದ್ದೇವೆ, ಎಲ್ಲವೂ ಮಾಡಿದ್ದೇವೆ.

**ಶ್ರೀ ಬಿ.ಆರ್. ಪಾಟೀಲ್:** ಎಲ್ಲಿ? ಇನ್ನು ಗ್ರಾಮ ವಿಕಾಸ, ಪ್ರತಿ ಕ್ಷೇತ್ರಗಳಿಂದ ಐದೈದು ಗ್ರಾಮಗಳನ್ನು ನೀವು ಸೂಚನೆ ಮಾಡಿ ಎಂದಾಗ ನಾವು

ಮಾಡಿದ್ದೇವೆ. ಈಗ ಮಾರ್ಚ್ ಬಂತು ಇನ್ನು estimate ಒಪ್ಪಿಗೆಯಾಗಿಲ್ಲ, ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿಲ್ಲ, ಯಾವಾಗ ಬರುವುದು, ಯಾವಾಗ ಕೆಲಸ ಮಾಡುವುದು? ಹಾಗಾದರೆ ಸರ್ಕಾರದ ಸಾಧನೆ ಅದು ಹಿಂದೆ ಮಾಡಿದ್ದಿಲ್ಲ, ಮುಂದೆ ಕೂಡ ಮಾಡುವ ಭರವಸೆಯಿಲ್ಲ ಎಂದು ನನಗೆ ಅನಿಸುತ್ತದೆ. ಹಿಂದೆ ಮಾಡಿದ್ದು ಏನಾದರೂ ಮನವರಿಕೆಯಾದರೆ ಮುಂದೆ ಮಾಡುತ್ತಾರೆಂದು ಭರವಸೆ ಬರುತ್ತದೆ. ಆದರೆ ಹಿಂದೆ ಏನೆಲ್ಲಾ ಹೇಳಿದರು, ಅದು ಯಾವುದೂ ಆಗಿಲ್ಲ. ಅನ್ನ ಭಾಗ್ಯ ಯೋಜನೆ ತಂದು, ಅದರಲ್ಲಿ ರಾಗಿ ಮತ್ತು ಜೋಳವನ್ನು ವತರಣೆ ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದರು. ನಾವು ಬಹಳ ಸಂತೋಷ ಪಟ್ಟೆವು. ನಮ್ಮ ಭಾಗದಲ್ಲಿ ಅಕ್ಕಿಯನ್ನು ತಿನ್ನುವುದಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಬಂದಂತಹ ಅಕ್ಕಿಯೆಲ್ಲಾ block market ಗೆ ಹೋಗುತ್ತದೆ. ಇದು ಸರ್ಕಾರಕ್ಕೆ ಗೊತ್ತಿದೆ, ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಏಕೆ ಈ ರೀತಿ ದುಡ್ಡು ಹಾಳು ಮಾಡುತ್ತೀರಿ? ನನಗಂತೂ ಅನುಭವವಿದೆ, ದಯವಿಟ್ಟು ನೀವು ಯಾರಿಂದಲಾದರೂ ವರದಿ ತರಿಸಿಕೊಳ್ಳಿ. ನಿಮ್ಮ ಪಕ್ಷದ ಶಾಸಕರ ಜೊತೆ ಖಾಸಗಿಯಾಗಿ ಮಾತನಾಡಿ ಕೇಳಿ. ನಾನು ಅನ್ನ ಮಾಡುವುದೇನು, ಅಕ್ಕಿಯನ್ನು ತಿನ್ನುವುದೇ ಇಲ್ಲ. ನಮ್ಮ ಮನಗೆ ಒಂದೂಕಾಲು ಕ್ವಿಂಟಾಲ್ ಅಕ್ಕಿ ಪ್ರತಿ ತಿಂಗಳು ಬರುತ್ತದೆ, ನಮಗೆ ಅದನ್ನು ಮನೆಯಲ್ಲಿಟ್ಟುಕೊಳ್ಳುವುದಕ್ಕೆ ಜಾಗವೇ ಇಲ್ಲ. ಅದನ್ನು ಏನು ಮಾಡಬೇಕು? ಅದನ್ನು ಮಾರಾಟ ಮಾಡಿ ಬದುಕುತ್ತೀವಿ. ನಮಗೆ ಅಷ್ಟು ಅಕ್ಕಿ ಬೇಕಾಗಿಲ್ಲ, ನಮಗೆ ಬೇಕಾಗಿರುವುದು ಜೋಳ ಬೇರೆ ಬೇರೆ ಪದಾರ್ಥ ಬೇಕು ಎಂದು ಹೇಳುತ್ತಾರೆ.

**ಅಧ್ಯಕ್ಷರು:** ನಿಮಗೆ ತಿಂಗಳಿಗೆ ಒಂದೂಕಾಲು ಕ್ವಿಂಟಾಲ್ ಅಕ್ಕಿ ಕೊಡುತ್ತಾರೆ, ಅದನ್ನು ಇಟ್ಟುಕೊಳ್ಳುವುದಕ್ಕೆ ಜಾಗವಿಲ್ಲ ಎಂದು ಹೇಳಿದಿರಲ್ಲ, ಅದು ಯಾವ ಊರು ಬಗ್ಗೆ ಹೇಳುತ್ತಿದ್ದೀರಿ?

**ಶ್ರೀ ಬಿ.ಆರ್. ಪಾಟೀಲ್:** ಉತ್ತರ ಕರ್ನಾಟಕದ ಬಗ್ಗೆ ಹೇಳುತ್ತಿದ್ದೇನೆ. ಅದು ನಮ್ಮ ಊರು.

ಅಧ್ಯಕ್ಷರು: ಇದರ ಬಗ್ಗೆ ಸರ್ಕಾರದವರು ನೋಡಿ.

ಶ್ರೀ ಬಿ.ಆರ್. ಪಾಟೀಲ್: ನಾನು ಇಂತಹ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ, ಇದು ವಸ್ತುಸ್ಥಿತಿ. ನಾನು ನಿನ್ನೆ ಕೂಡ ಅವರ ಜೊತೆ ಮಾತನಾಡಿದ್ದೇನೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಭಾರ ಬೀಳುತ್ತದೆ ಹೊರತಾಗಿ ಜನರಿಗೆ ಅನುಕೂಲವಾಗುವುದಿಲ್ಲ. ಮಾನ್ಯ ಆಹಾರ ಸಚಿವರು ಇಲ್ಲಿಯೇ ಇದ್ದಾರೆ.

ಅಧ್ಯಕ್ಷರು: ಅದಕ್ಕೆ ತಾವು ಅಕ್ಕಿ ತಪ್ಪಿಸಿ ಜೋಳ ಕೊಡಬೇಕು ಎಂದು ಹೇಳುತ್ತಿದ್ದೀರಿ.

ಶ್ರೀ ಬಿ.ಆರ್. ಪಾಟೀಲ್: ಈ ಭಾಗದಲ್ಲಿ ರಾಗಿ ತಿನ್ನುವ ಜನ ಇದ್ದಾರೆ, ರಾಗಿ ಕೊಡುವುದಕ್ಕೆ ಒಪ್ಪಿದ್ದೀರಿ. ರಾಗಿ ಉತ್ಪಾದನೆ ಕೂಡ ಈ ವರ್ಷ ತಕ್ಕಮಟ್ಟಿಗೆ ಆಗಿದೆ. ಆದರೆ ಈ ವರ್ಷ ಜೋಳ ಕೊಡುವುದಕ್ಕೆ ಇನ್ನು ಪ್ರಾರಂಭ ಮಾಡಿಲ್ಲ. ಈ ವರ್ಷ ಜೋಳದ ಉತ್ಪಾದನೆ ಕೂಡ ಇಲ್ಲ. ನಾವು ಕಳೆದ ಸಲ ಜೋಳದ ಬೆಲೆ ಮೂರು ಸಾವಿರ ರೂಪಾಯಿ ಮಾಡಿ ಎಂದು ಕೇಳಿದೆವು, ಆದರೆ ಇವರು ಎರಡು ಸಾವಿರ ರೂಪಾಯಿಗೆ ಸೀಮಿತ ಮಾಡಿದರು. ಜೋಳದ ಬೆಳೆಯುವ ವಿಸ್ತೀರ್ಣ ಪ್ರದೇಶ ಕಡಿಮೆಯಾಗುತ್ತಿದೆ. Commercial crop ಬೆಳೆಯುವುದಕ್ಕೆ ಜನ ಜಾಸ್ತಿ ಹೋಗುತ್ತಿದ್ದಾರೆ. ಇದನ್ನು counter ಮಾಡಬೇಕಾದರೆ, ತಾವು ಕೂಡ ಮೂಲಭೂತವಾಗಿ ರಾಗಿ, ಭತ್ತ ಮತ್ತು ಜೋಳಕ್ಕೆ ಹೆಚ್ಚಿನ ಬೆಲೆಯನ್ನು ಕೊಡಬೇಕಾಗುತ್ತದೆ, ಆದರೆ ನೀವು ಕೊಡುತ್ತಿಲ್ಲ. ತಾವು ಮತ್ತೆ ಕೃಷಿ ಭಾಗ್ಯ ಎಂದು ಹೇಳುತ್ತೀರಿ. ಯಾವ ಭಾಗ್ಯ? ಇದ್ದಂಥ ವಿಸ್ತೀರ್ಣ ಪ್ರದೇಶ ದಿನದಿನಕ್ಕೂ ಕಡಿಮೆಯಾಗುತ್ತಿದೆ. ಜನರು ಜೋಳ ಬಿಟ್ಟು ಬೇರೆ ಬೇರೆ commercial crop ಗೆ ಹೋಗುತ್ತಿದ್ದಾರೆ. ನೀವು ಜನರಿಗೆ ಅನ್ನವನ್ನು ಹೇಗೆ ಹಂಚುತ್ತೀರಿ? ಇದು ಸಾಧ್ಯವೇ ಇಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆಂದರೆ, ಕೃಷಿ ಇಲಾಖೆಯವರು

ಬಹಳ ತೀವ್ರಗತಿಯಿಂದ ರಾಗಿ ಮತ್ತು ಜೋಳದ ವಿಸ್ತೀರ್ಣವನ್ನು ಹೆಚ್ಚು ಮಾಡಬೇಕು. ನಾನು ತೊಗರಿಬೇಳೆ ಪ್ರದೇಶದಿಂದ ಬಂದಿದ್ದೇನೆ.

**ಅಧ್ಯಕ್ಷರು:** ವಿಸ್ತೀರ್ಣ ಜಾಸ್ತಿ ಮಾಡುವುದೆಂದರೆ, ಅವರೇ ನೇಗಿಲನ್ನು ತೆಗೆದುಕೊಂಡು ಊಳುವುದೇ?

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಅವರಿಗೆ ರೇಟ್ ಅನ್ನು ಜಾಸ್ತಿ ಕೊಟ್ಟರೆ ಸ್ವಾಭಾವಿಕವಾಗಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯುತ್ತಾರೆ.

**ಅಧ್ಯಕ್ಷರು:** ಹೆಚ್ಚಿಗೆ ಎಂದರೆ ಏನು ಆಧಾರ? ಅವರು ಈಗ ಒಂದು ಆಯೋಗವನ್ನು ಮಾಡಿದ್ದಾರೆ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಈಗ ನಾವು ಜೋಳಕ್ಕೆ ಮತ್ತು ರಾಗಿಗೆ 2,000 ರೂ.ಗಳೆಂದು ನಿಗದಿ ಮಾಡಿದ್ದೇವೆ. ಈ ವರ್ಷ ರಾಗಿ ಕಳೆದ ವರ್ಷಕ್ಕಿಂತ ಮೂರರಷ್ಟು ರಾಗಿ procurement ಆಗುತ್ತಿದೆ. ನಮಗೆ 30,000 ರಿಂದ 40,000 ಮೆಟ್ರಿಕ್ ಟನ್‌ನಷ್ಟು ರಾಗಿ ಬರುತ್ತದೆ. ಆದರೆ ಜೋಳದ ಬಗ್ಗೆ ಅವರು ಹೇಳಿದ ಹಾಗೆ ಮಾರುಕಟ್ಟೆಯ ಬೆಲೆಯೇ ಹೆಚ್ಚಾಗಿದೆ. ಅದು 2,600 ರೂ.ಗಳು, 2,700 ರೂ.ಗಳು ಇರುವುದರಿಂದ ನಮ್ಮ ಕಡೆಗೆ ಹೆಚ್ಚು ಬರುತ್ತಿಲ್ಲ. ನಾವು ಅಷ್ಟು ಹೆಚ್ಚಿನ ಬೆಲೆಗೆ ಸರ್ಕಾರದಿಂದ ಖರೀದಿ ಮಾಡುವುದಕ್ಕೆ ಆಗುವುದಿಲ್ಲ.

**ಅಧ್ಯಕ್ಷರು:** ಅಕ್ಕಿಗೆ ಎಷ್ಟು ಬೆಲೆ ಕೊಡುತ್ತೀರಿ?

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ನಮಗೆ ಕೇಂದ್ರಸರ್ಕಾರದಿಂದ ಅಕ್ಕಿ ಬರುತ್ತಿದೆ.

**ಅಧ್ಯಕ್ಷರು:** ಯಾವ ರೇಟ್‌ನಲ್ಲಿ ಕೊಡುತ್ತಾರೆ?

**ಶ್ರೀ ಬಸವರಾಜ ರಾಯರೆಡ್ಡಿ:** ಮಾನ್ಯ ಅಧ್ಯಕ್ಷರೆ, ಕೇಂದ್ರಸರ್ಕಾರ ಅಕ್ಕಿಯನ್ನು free ಯಾಗಿ ಕೊಡುವುದಿಲ್ಲ. Subsidized rate ನಲ್ಲಿ ಕೊಡುತ್ತಾರೆ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ನಾವು ಹೊರಗಡೆಯಿಂದ ಅಕ್ಕಿಯನ್ನು ಖರೀದಿ ಮಾಡುವುದಿಲ್ಲ. ನಮ್ಮ ರೈತರು ಏನು ಭತ್ತವನ್ನು ಕೊಡುತ್ತಿದ್ದಾರೆ, ಆ ಭತ್ತವನ್ನೇ ಅಕ್ಕಿಯಾಗಿ ಪರಿವರ್ತನೆ ಮಾಡುತ್ತೇವೆ.

**ಅಧ್ಯಕ್ಷರು:** ಆ ರೀತಿ ಪರಿವರ್ತನೆ ಮಾಡಿದರೆ ಎಷ್ಟು ಬೆಲೆಯಾಗುತ್ತದೆ?

**ಶ್ರೀ ದಿನೇಶ್ ಗುಂಡೂರಾವ್:** 22 ರೂ.ಗಳು, 23 ರೂ.ಗಳಾಗುತ್ತದೆ. ಈ ವರ್ಷ ಭತ್ತಕ್ಕೆ 1,600 ರೂ.ಗಳು ಬೆಂಬಲ ಬೆಲೆ ಇದೆ. ಅದನ್ನು ಪರಿವರ್ತನೆ ಮಾಡಿ ತೆಗೆದುಕೊಂಡರೆ 2,200 ರೂ.ಗಳು, 2,300 ರೂ.ಗಳಾಗುತ್ತದೆ.

**ಅಧ್ಯಕ್ಷರು:** ಈಗ ನೀವು ಜೋಳಕ್ಕೆ ಎಷ್ಟು ಕೊಡುತ್ತಿದ್ದೀರಿ?

**ಶ್ರೀ ದಿನೇಶ್ ಗುಂಡೂರಾವ್:** ನಾವು ಅಕ್ಕಿ ಬದಲಾಗಿ ಗೋಧಿ ಕೊಡುತ್ತಿದ್ದೇವೆ.

**ಶ್ರೀ ಶಿವಾನಂದ ಎಸ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಜೋಳಕ್ಕೆ rate declare ಮಾಡಿಲ್ಲ.

**ಅಧ್ಯಕ್ಷರು:** ಮಾಡಿ.

**ಶ್ರೀ ದಿನೇಶ್ ಗುಂಡೂ ರಾವ್:** 2,000 ರೂ.ಗಳನ್ನು declare ಮಾಡಿ ಆಗಿದೆ.

**ಶ್ರೀ ಶಿವಾನಂದ ಎಸ್. ಪಾಟೀಲ್:** ಅದು ಈಗ ಆಗಿದೆ.

**ಶ್ರೀ ದಿನೇಶ್ ಗುಂಡೂರಾವ್:** ಈಗಲ್ಲ, 8 ತಿಂಗಳ ಹಿಂದೆ declare ಆಗಿದೆ.

**ಶ್ರೀ ಶಿವಾನಂದ ಎಸ್. ಪಾಟೀಲ್:** ನೀವು 2,500 ರೂ.ಗಳನ್ನು ಕೊಡುತ್ತೇವೆಂದು ಹೇಳಿದಿರಿ. ನಾವೆಲ್ಲರೂ ಸೇರಿ CLP ಯಲ್ಲಿ ಆಯಿತು.

ನಾವೆಲ್ಲರೂ ಸೇರಿ 2,500 ರೂ.ಗಳನ್ನು ಕೊಡಿ ಎಂದು ಒತ್ತಾಯ ಮಾಡಿದೆವು. ನೀವು ಹೂ ಎಂದು ಹೇಳಿದ್ದೀರಿ, ಆಮೇಲೆ ಕೊಡಲಿಲ್ಲ, ಕೊಡುವಾಗ 2,000 ರೂ.ಗಳನ್ನು announce ಮಾಡಿ ಮುಂದೆ ಏನು ಮಾಡಿದ್ದೀರಿ?

**ಶ್ರೀ ದಿನೇಶ್ ಗುಂಡೂರಾವ್:** 2,000 ರೂ.ಗಳನ್ನು ಮಾಡಿದ್ದೇವೆ.

**ಶ್ರೀ ಶಿವಾನಂದ ಎಸ್. ಪಾಟೀಲ್:** Procurement ಆಗಲಿಲ್ಲ, ಅಲ್ಲಿ ಏನಾಯಿತೆಂದರೆ ನಮಗೆ ಇನ್ನೂ government order ಬಂದಿಲ್ಲವೆಂದು ಅವರು ತೆಗೆದುಕೊಳ್ಳಲಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಆದೇಶ ಮಾಡಿ 8 ತಿಂಗಳುಗಳಾಗಿದೆ. ಆದೇಶ ಬಂದಿಲ್ಲವೆಂದರೆ ಮಾರುಕಟ್ಟೆಯ ಬೆಲೆ ಹೆಚ್ಚಾಗಿರುತ್ತದೆ, ಒತ್ತಯವಿಲ್ಲ, ಒತ್ತಡವಿಲ್ಲ.

**ಅಧ್ಯಕ್ಷರು:** ಆ ರೀತಿಯಲ್ಲ, ಈಗ ಅವರು ಜವಾಬ್ದಾರಿಯುತವಾದಂಥ ಹಿರಿಯ ಶಾಸಕರಾಗಿದ್ದಾರೆ. ಅವರಿಗೆ ಆರ್ಡರ್ ಬಂದಿಲ್ಲವೆಂದರೆ, ಯಾರೋ ಅಧಿಕಾರಿ ಹೇಳಿರುತ್ತಾರೆ. ನಮ್ಮ ಅಧಿಕಾರಿಗಳು ಹೇಗೆ ಇದ್ದಾರೆಂದರೆ, ಅವರಿಗೆ ಸಾಮಾನ್ಯವಾಗಿ ಚಿವುಟಿದರೆ ಏನು ಆಗುವುದಿಲ್ಲ, ತಿವಿದು ಹೇಳಬೇಕು.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಈಗ ಅದೇ ಬೆಲೆಗೆ ನಮಗೆ ರಾಗಿ ಬರುತ್ತಿದೆ. ನಮಗೆ 40,000 ಟನ್ ಹೇಗೆ ಬರುತ್ತಿದೆಯೆಂದರೆ, ರೈತರು ಕೊಡುವುದಕ್ಕೆ ತಯಾರಿದ್ದಾರೆ. ಇಲ್ಲಿ ರೈತರು ಜೋಳ ಕೊಡುವುದಕ್ಕೆ ತಯಾರಿಲ್ಲ.

**ಅಧ್ಯಕ್ಷರು:** ಈಗ open ಮಾಡಿ ಎಂದು ಹೇಳಿದ್ದಾರಲ್ಲಾ.. .. ..

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಅವರಿಗೆ ನಮ್ಮ ಬೆಲೆ ಆಕರ್ಷಣೀಯವಾಗಿಲ್ಲ.

**ಶ್ರೀ ಬಿ.ಆರ್. ಯಾವಗಲ್:** ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ 1,800 ರೂ.ಗಳಂತೆ declare ಮಾಡಿದ್ದರು. ಆದರೆ ಅದನ್ನು ತೆಗೆದುಕೊಳ್ಳುವಂಥದ್ದು ಬಹಳ ನಿಧಾನವಾಯಿತು. ಈಗ 2,000 ರೂ.ಗಳೆಂದು ಹೇಳುತ್ತಿದ್ದಾರೆ, ಆದರೆ

ಈಗ ಸಿಸನ್ ಇದೆ. ಆದಷ್ಟು ಬೇಗೆ procure ಮಾಡುವುದಕ್ಕೆ ಹೇಳಿ, ಸಾಧ್ಯವಾಗುತ್ತದೆ. ಆ ರೇಟಿಗೆ ತೆಗೆದುಕೊಳ್ಳಬೇಕು, ಅದು ಒಳ್ಳೆಯ ಜೋಳ ಸಿಗುತ್ತದೆ, ಪರ್ಯಾಯವಾಗಿ ಎಲ್ಲಾ ಭಾಗದಲ್ಲೂ ಇದನ್ನು ತಿನ್ನುತ್ತಾರೆ.

**ಅಧ್ಯಕ್ಷರು:** ನೋಡಿ, ಆ ರೀತಿ ಮಾಡಿ, ಬೇಗ procure ಮಾಡುವುದಕ್ಕೆ D C. ಗಳಿಗೆ ಹೇಳಿ.

**ಶ್ರೀ ಶಿವಾನಂದ ಎಸ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಇವರು ಅಕ್ಕಿ procure ಮಾಡುವ ಬದಲು, ಜೋಳ procure ಮಾಡಿದರೆ, ಇವರಿಗೆ 300 ರೂ.ಗಳು ಉಳಿಯುತ್ತದೆ.

**ಅಧ್ಯಕ್ಷರು:** ಹೌದು.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ನಮಗೆ ಕೇಂದ್ರಸರ್ಕಾರ ಅಕ್ಕಿಯನ್ನು ಮೂರು ರೂ.ಗಳಿಗೆ ಕೊಡುತ್ತಿದೆ. ನಾನು ಅದನ್ನು ಏಕೆ ತೆಗೆದುಕೊಳ್ಳಬಾರದು?

**ಶ್ರೀ ಶಿವಾನಂದ ಎಸ್. ಪಾಟೀಲ್:** ಇದು ಮಾರವಾಡಿ ವ್ಯಾಪಾರ, ನಾನು ಅದನ್ನೇ ಹೇಳಿದ್ದು. ನಾವು support ಮಾಡುತ್ತೇವೆ.

**ಅಧ್ಯಕ್ಷರು:** ಕೇಂದ್ರಸರ್ಕಾರ free ಯಾಗಿ ಕೊಡುತ್ತದೆಯೇ?

**ಶ್ರೀ ದಿನೇಶ್ ಗುಂಡೂರಾವ್:** 3 ರೂ.ಗಳಂತೆ ಕೊಡುತ್ತಾರೆ.

**ಅಧ್ಯಕ್ಷರು:** ಇಲ್ಲಿ ಜೋಳ 2 ರೂ.ಗಳಿಗೆ ಸಿಕ್ಕರೆ ನೀವು ಏಕೆ ತೆಗೆದುಕೊಳ್ಳಬಾರದು?

**ಶ್ರೀ ದಿನೇಶ್ ಗುಂಡೂರಾವ್:** ಅದು 22 ರೂ.ಗಳಿದೆ, 3 ರೂ.ಗಳೆಲ್ಲಿ, 23 ರೂ.ಗಳೆಲ್ಲಿ?

**ಅಧ್ಯಕ್ಷರು:** ಅದು ಆ ರೀತಿಯಲ್ಲ, ಒಂದು ಕೆ.ಜಿ.ಗೆ 3 ರೂ. ಗಳಾಗುತ್ತದೆ. ಈಗ 2,000 ರೂ.ಗಳೆಂದರೆ.. ..

**ಶ್ರೀ ದಿನೇಶ್ ಗುಂಡೂರಾವ್:** ಕ್ವಿಂಟಾಲ್‌ಗೆ 2,000 ರೂ.ಗಳಾಗುತ್ತದೆ, ಒಂದು ಕೆ.ಜಿ.ಗೆ 20 ರೂ.ಗಳಾಯಿತು.

**ಅಧ್ಯಕ್ಷರು:** ಒಂದು ಕೆ.ಜಿ.ಗೆ 3 ರೂ.ಗಳು ಆಗುತ್ತದೆಯೆಂದರೆ ಕ್ವಿಂಟಾಲ್‌ಗೆ ಎಷ್ಟು ಆಯಿತು?

**ಶ್ರೀ ದಿನೇಶ್ ಗುಂಡೂರಾವ್:** ಕ್ವಿಂಟಾಲ್ ಎಂದರೆ 100 ಕೆ.ಜಿ.ಯಾಗುತ್ತದೆ.

**ಅಧ್ಯಕ್ಷರು:** ಹೌದು, ಎಷ್ಟಾಗುತ್ತದೆ?

**ಶ್ರೀ ದಿನೇಶ್ ಗುಂಡೂರಾವ್:** 300 ರೂ.ಗಳಾಯಿತು.

**ಅಧ್ಯಕ್ಷರು:** 300 ರೂ.ಗಳಾಯಿತು, ಈಗ ಅವರು ಕ್ವಿಂಟಾಲ್‌ಗೆ 200 ರೂ.ಗಳಂತೆ ಕೊಡಲು ತಯಾರಿದ್ದಾರಲ್ಲಾ.. .

**ಶ್ರೀ ದಿನೇಶ್ ಗುಂಡೂರಾವ್:** ಅವರು ಒಂದು ಕ್ವಿಂಟಾಲ್‌ಗೆ 2,500 ರೂ.ಗಳು ಹೇಳುತ್ತಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ:** ಮಾನ್ಯ ಮಂತ್ರಿಯವರೆ, ದಯಮಾಡಿ ಕೇಂದ್ರ ಸರ್ಕಾರ 29 ಲಕ್ಷ ಕುಟುಂಬಗಳಿಗೆ ಮಾತ್ರ ಕೊಡುತ್ತಿದೆ. ನೀವು ಒಂದು ಕೋಟಿ ಕಾರ್ಡ್‌ಗಳನ್ನು ಕೊಟ್ಟಿದ್ದೀರಿ. ಇನ್ನು 71 ಲಕ್ಷ ಕಾರ್ಡ್‌ಗಳಿಗೆ ನಮ್ಮ ಭಾಗಗಳಿಗೆ ಖರೀದಿ ಮಾಡಿದರೆ ನಿಮಗೆ ಹಣ ಉಳಿತಾಯವಾಗುತ್ತದೆಂದು ಹೇಳಿದರು.

**ಅಧ್ಯಕ್ಷರು:** ಮಾನ್ಯ ಬಸವರಾಜ ರಾಯರೆಡ್ಡಿಯವರೆ, ಅವರು ಕೇಂದ್ರಸರ್ಕಾರದವರು 29 ಲಕ್ಷ ಕುಟುಂಬಗಳಿಗೆ ಕೊಡುತ್ತಾರೆ, ಅದು free ಯಾಗಿ ಕೊಡುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:** ಮಾನ್ಯ ಅಧ್ಯಕ್ಷರೆ, ಅದು free ಅಲ್ಲ, ಕೇಂದ್ರಸರ್ಕಾರದಲ್ಲಿ subsidized rate ನಲ್ಲಿ ಕೊಡುತ್ತಾರೆ. ನಾನು ಅದನ್ನೇ

ಹೇಳುತ್ತಿರುವಂಥದ್ದು, ಅವರು ಇನ್ನು 71 ಲಕ್ಷ ಕುಟುಂಬಗಳ ಲೆಕ್ಕದಲ್ಲಿ ಜೋಳವನ್ನು ಖರೀದಿ ಮಾಡಲಿ.

**ಅಧ್ಯಕ್ಷರು:** ಅಷ್ಟೆ.

**ಶ್ರೀ ಜೆ.ಟಿ. ಪಾಟೀಲ್:** ಮಾನ್ಯ ಆಹಾರ ಮಂತ್ರಿಗಳೆ, ತಾವು ರೈತರ ಸಹಾಯಕ್ಕೆ ಬರುತ್ತಿರೊ, ಇಲ್ಲ ಮಾರವಾಡಿ ಲೆಕ್ಕ ಹೇಳುತ್ತಿರೋ? ತಾವು ಮಾರವಾಡಿ ಲೆಕ್ಕ ಹೇಳಬೇಡಿ, ದಯಮಾಡಿ ರೈತರ ಸಹಾಯಕ್ಕೆ ಬನ್ನಿ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಈಗ ನಾವು ಖರೀದಿ ಮಾಡುತ್ತಿರುವಂಥದ್ದನ್ನು ಹೇಳುತ್ತೇನೆ. ಕೇಂದ್ರ ಸರ್ಕಾರದಿಂದ ಅಕ್ಕಿಯನ್ನು ಖರೀದಿ ಮಾಡುತ್ತಿದ್ದೇವೆ. ಅದು ಒಂದು ಕೆ.ಜಿ.ಗೆ 3 ರೂ.ಗಳಾಗುತ್ತದೆ.

**ಶ್ರೀ ವೈ.ಎನ್. ರುದ್ರೇಶ್‌ಗೌಡ:** ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಕೊಡುತ್ತಿರುವ ಬೆಂಬಲ ಬೆಲೆಯನ್ನು ಹಿಂದೆ ಯಾವ ಸರ್ಕಾರವೂ ಕೊಟ್ಟಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:** ಗೋಧಿಯನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿ ಮಾಡುತ್ತಿದ್ದೇವೆ. ಅದು FCI auction ನಲ್ಲಿ ಖರೀದಿ ಮಾಡುತ್ತಿದ್ದೇವೆ, ಅದು ಒಂದು ಕೆ.ಜಿ.ಗೆ 18 ರೂ.ಗಳು ಆಗುತ್ತದೆ.

**ಅಧ್ಯಕ್ಷರು:** ಹೌದು.

**ಶ್ರೀ ದಿನೇಶ್ ಗುಂಡೂರಾವ್:** ಒಂದು ಕ್ವಿಂಟಾಲ್‌ಗೆ 1,800 ರೂ.ಗಳಾಗುತ್ತದೆ. ಈಗ ರಾಗಿ ಮತ್ತು ಜೋಳಕ್ಕೆ ಕ್ವಿಂಟಾಲ್ 2,000 ರೂ.ಗಳಂತೆ ಇಟ್ಟಿದ್ದೇವೆ. ಅದು 200 ರೂ.ಗಳನ್ನು ಹೆಚ್ಚಿಗೆ ಮಾಡಿದ್ದೇವೆ. ಅದರಲ್ಲಿ ನಮಗೆ ನಷ್ಟವಾಗುತ್ತದೆ. ಆದರೂ ಕೂಡ ರಾಗಿ ಮತ್ತು ಜೋಳಕ್ಕೆ ಹೆಚ್ಚು ಬೆಲೆಯನ್ನು ಕೊಡೋಣವೆಂದು 2,000 ರೂ.ಗಳನ್ನು ಮಾಡಿದ್ದೇವೆ. ಈಗ ಅವರು 2,000 ರೂ.ಗಳು ಸಾಕಾಗುವುದಿಲ್ಲ, ಇನ್ನು ಹೆಚ್ಚು ಮಾಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:** ಮಾನ್ಯ ಆಹಾರ ಮಂತ್ರಿಗಳೆ, ಇದು ಲಾಭ, ಹಾನಿ ಬಗ್ಗೆ ಆಲೋಚನೆ ಮಾಡುವುದಾದರೆ.. .

**ಶ್ರೀ ದಿನೇಶ್ ಗುಂಡೂರಾವ್:** ಲಾಭ, ಹಾನಿ ಪ್ರಶ್ನೆ ಬರುವುದಿಲ್ಲ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:** ತಾವು ಲಾಭ, ಹಾನಿ ಬಗ್ಗೆ ಆಲೋಚನೆ ಮಾಡುವುದಾದರೆ, ನಮ್ಮ ಭಾಗಕ್ಕೆ ಕೊಡುವಂಥ ಅಕ್ಕಿಯನ್ನು ಹೊರಗಡೆ ಕೊಟ್ಟು ಅದರ ಬದಲಿಗೆ ಜೋಳವನ್ನು ಖರೀದಿ ಮಾಡಿ.

**ಶ್ರೀ ಬಸವರಾಜ ರಾಯರೆಡ್ಡಿ:** ಇವರು ಸರ್ಕಾರದ ಹಣವನ್ನು ಅನಾವಶ್ಯಕವಾಗಿ ವ್ಯಯ ಮಾಡುತ್ತಿದ್ದಾರೆ. ಇವರು ಅಕ್ಕಿಯನ್ನು ಖರೀದಿ ಮಾಡುವ ಅವಶ್ಯಕತೆ ಇಲ್ಲ.

**ಶ್ರೀ ಬಿ.ಆರ್. ಯಾವಗಲ್:** ಮಾನ್ಯ ಅಧ್ಯಕ್ಷರೆ, 1,100 ರೂ.ಗಳಿಗೆ ತೆಗೆದುಕೊಳ್ಳುತ್ತಿದ್ದಾರೆ.

(ಗೊಂದಲ)

**ಶ್ರೀ ಸಿ.ಎನ್. ಬಾಲಕೃಷ್ಣ:** ಮಾನ್ಯ ಆಹಾರ ಮಂತ್ರಿಯವರಲ್ಲಿ ಒಂದು ವಿನಂತಿ ಏನೆಂದರೆ, ನಮ್ಮ ಚನ್ನರಾಯಪಟ್ಟಣದ ಎ.ಪಿ.ಎಂ.ಸಿ. ಯಾರ್ಡ್‌ಗೆ visit ಮಾಡಿದ್ದೀರಿ. ಆ ನಮ್ಮ ರೈತರು ರಾಗಿಯನ್ನು ಏನು ಸರಬರಾಜು ಮಾಡಿದ್ದರು, ಅವರಿಗೆ ಹಣವನ್ನು ಕೊಡುವಲ್ಲಿ ವಿಳಂಬವಾಗಿದ್ದು, ಸುಮಾರು ಒಂದು ಕೋಟಿ ರೂ.ಗಳು ಬಾಕಿ ಇತ್ತು. ನಾವು ತಾವು ಬಂದಾಗ ವಿನಂತಿ ಮಾಡಿದ್ದೆ, ಅದು delay ಆಗಿದೆ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಕೊಡುತ್ತೇವೆ. ಆ ಬಗ್ಗೆ ನಿನ್ನೆಯೂ ಮಾತನಾಡಿದ್ದೇವೆ, ತಕ್ಷಣವೇ ಆ ಹಣ ಬಿಡುಗಡೆಯಾಗುತ್ತದೆ.

**ಅಧ್ಯಕ್ಷರು:** ಅಯಿತು, ನಾಳೆ ಕಳುಹಿಸಿಕೊಡುತ್ತಾರೆ, ಬಿಡಿ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಈಗ ರಾಗಿಗೋಸ್ಕರ, ಜೋಳಕ್ಕೋಸ್ಕರವೇ ನಾವು ಎಲ್ಲಾ ಏಜೆನ್ಸಿಗೂ 45 ಕೋಟಿ ರೂ.ಗಳಂತೆ ಬಿಡುಗಡೆ ಮಾಡಿದ್ದೇವೆ. ತಾವು ರಾಗಿಯದ್ದು ಮತ್ತೆ ಇನ್ನು ಏನಾದರೂ ಹಣ ಬಾಕಿ ಇದ್ದರೆ, ಇವತ್ತು ಸಾಯಂಕಾಲದೊಳಗೆ ಬಿಡುಗಡೆ ಮಾಡುತ್ತೇವೆ.

**ಶ್ರೀ ಸಿ.ಎನ್. ಬಾಲಕೃಷ್ಣ:** ಮಾನ್ಯ ಅಧ್ಯಕ್ಷರೆ, ಚನ್ನರಾಯಪಟ್ಟಣದಲ್ಲಿ ಒಂದು ಕೋಟಿ ರೂ.ಗಳ ಬಾಕಿ ಇದೆ.

**ಶ್ರೀ ಟಿ.ಬಿ. ಜಯಚಂದ್ರ:** ಆ ಹಣವನ್ನು ಇವತ್ತೇ ಬಿಡುಗಡೆ ಮಾಡುತ್ತೇವೆ, ಈಗಲೇ ತೀರ್ಮಾನ ಮಾಡುತ್ತೇವೆ.

**ಅಧ್ಯಕ್ಷರು:** ಆಯಿತು, very good. ಮಾನ್ಯ ಬಿ.ಆರ್. ಪಾಟೀಲ್‌ರವರೆ, ಹೇಳಿ.

**ಶ್ರೀ ಟಿ.ಬಿ. ಜಯಚಂದ್ರ:** ನಾವು ಈಗ ರಾಗಿಗೆ 20 ಜೋಳಕ್ಕೆ 20 ಎಂದು ಮಾಡಿದ್ದೇವೆ. ಈಗ ರಾಗಿಗೆ ಸಾಕಷ್ಟು procurement ಬರುತ್ತಿದೆ, ಜೋಳದ್ದು ಬರುತ್ತಿಲ್ಲ.

**ಅಧ್ಯಕ್ಷರು:** ಈಗ ಅವರು ಬರುತ್ತದೆಂದು ಹೇಳಿದರಲ್ಲಾ.. ..

**ಶ್ರೀ ಟಿ.ಬಿ. ಜಯಚಂದ್ರ:** ಅವರು ಬರುವುದಕ್ಕೆ ಪ್ರಾರಂಭವಾಗುತ್ತದೆ.

**ಅಧ್ಯಕ್ಷರು:** ಅವರು procurement ತಕ್ಷಣ ಪ್ರಾರಂಭ ಮಾಡಿದರೆ ತಕ್ಷಣ ಬರುತ್ತದೆಂದು ಹೇಳುತ್ತಿದ್ದರೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, procurement ಪ್ರಾರಂಭ ಮಾಡಿದ್ದೇವೆ.

**ಶ್ರೀ ಜೆ.ಟಿ. ಪಾಟೀಲ್:** ಜೋಳದ್ದು ಇನ್ನು ಪ್ರಾರಂಭ ಮಾಡಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** procurement ಪ್ರಾರಂಭ ಮಾಡಿದ್ದೇವೆ. ಆದರೆ ಅಲ್ಲಿ harvest ಆಗುತ್ತಿಲ್ಲ. ಹಾಗಾಗಿ ಮಾಲದಂಡಿ ಜೋಳ ಇನ್ನು ಮೇಲೆ ಬರುವಂಥದ್ದು.

**ಅಧ್ಯಕ್ಷರು:** ಆಯಿತು, ಇನ್ನು ಮೇಲೆ ಮಾಡಿ.

**ಶ್ರೀ ಟಿ.ಬಿ. ಜಯಚಂದ್ರ:** ನಾವು ಯಾವುದೇ ರೀತಿಯಲ್ಲೂ ಹಣಕ್ಕೆ ತೊಂದರೆ ಇಲ್ಲದ ರೀತಿ ಬಿಡುಗಡೆ ಮಾಡುತ್ತೇವೆ.

**ಶ್ರೀ ಜೆ.ಟಿ. ಪಾಟೀಲ್:** ಈಗ ಜೋಳ ಬರುವುದಕ್ಕೆ ಪ್ರಾರಂಭವಾಗಿದೆ. ಖರೀದಿ ಕೇಂದ್ರಗಳನ್ನು ಬೇಗ ಪ್ರಾರಂಭ ಮಾಡಿ.

**ಅಧ್ಯಕ್ಷರು:** ಮಾನ್ಯ ಮಂತ್ರಿಗಳೆ, ಮಾನ್ಯ ಶಿವನಂದ ಪಾಟೀಲ್‌ರವರು ಏನು ಹೇಳಿದರೆಂದರೆ, ಇವತ್ತಿನವರೆಗೂ purchase centre open ಮಾಡಿಲ್ಲವೆಂದು ಹೇಳಿದರು.

**ಶ್ರೀ ಶಿವಾನಂದ ಎಸ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಮಾಡಿಲ್ಲ. ನೀವು ಹೋದ ವರ್ಷ complete ಆಗಿ FCI ನಿಂದ ಒಂದು ಕ್ವಿಂಟಾಲ್ ಅನ್ನು procure ಮಾಡಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** ಹೋದ ವರ್ಷ procurement ಆಗಿಲ್ಲ, ನಾನು ಒಪ್ಪುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಹೋದ ವರ್ಷ ನಾನೇ ಬಿಜಾಪುರಕ್ಕೆ ಹೋಗಿದ್ದೆ, ನಾನೇ ಮೀಟಿಂಗ್ ಮಾಡಿದೆ. ಎಲ್ಲಾ ರೈತರನ್ನು ಕರೆಸಿದೆ, ದಯವಿಟ್ಟು ಜೋಳವನ್ನು ಕೊಡಿ, 1,800 ರೂ.ಗಳನ್ನು ಮಾಡಿದ್ದೇವೆಂದು ಎಲ್ಲಾ ಹೇಳಿದೆ, ಒಂದು ಕೆ.ಜಿ. ಜೋಳ ಕೂಡ ಬಂದಿಲ್ಲ.

**ಶ್ರೀ ಶಿವಾನಂದ ಎಸ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಮಾರುಕಟ್ಟೆಯಲ್ಲೆ 2,200 ರೂ.ಗಳಿದ್ದಾಗ, ಇವರು 1,800 ರೂ.ಗಳಿಗೆ ಕೊಡುವುದಕ್ಕೆ ಯಾರಾದರೂ ಕೊಡುವುದಕ್ಕೆ ಮೂರ್ಖರೇ?

**ಅಧ್ಯಕ್ಷರು:** ಆಯಿತು ಬಿಡಿ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ಇಲ್ಲಿ ಸಮಸ್ಯೆ ಇರುವುದು, ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಿರುವುದರಿಂದ ನಮ್ಮ ಹತ್ತಿರ ರೈತರು ಬರುವುದಕ್ಕೆ ತಯಾರಿಲ್ಲ. ಅಷ್ಟೆ ಸಮಸ್ಯೆ ಇರುವುದು. ನಾವು procurement centre ಮಾಡಿದರೂ ಕೂಡ ನಮ್ಮ ಈ ಬೆಲೆಗೆ ಅವರು ಬರುವುದಿಲ್ಲ. ಅದು ನಿಜವಾಗಿ ಇರುವಂಥ ಸಮಸ್ಯೆ.

**ಶ್ರೀ ಎನ್.ಹೆಚ್. ಕೋನರೆಡ್ಡಿ:** ತಾವು 2,000 ರೂ.ದರ ನಿಗದಿ ಮಾಡಿದ್ದೀರಿ, ಇನ್ನು ಸ್ವಲ್ಪ ದಿವಸಗಳಲ್ಲಿ ಜೋಳ ಬೆಳೆಯುವುದನ್ನು ನಿಲ್ಲಿಸುತ್ತಾರೆ.

**ಶ್ರೀ ಶಿವಾನಂದ ಎಸ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ನಾವು ಜೋಳಕ್ಕೆ ಏಕೆ ಪ್ರೋತ್ಸಾಹ ಕೊಡಿ ಎಂದು ಹೇಳುತ್ತಿದ್ದೇವೆಂದರೆ ಕಣಕಿ ಬರುತ್ತದೆ, ಮತ್ತು ದನಗಳಿಗೆ ಫಾಡರ್ ಸಿಗುತ್ತದೆ. ಅದಕ್ಕೆ ನಾವು ಜೋಳಕ್ಕೆ ಬೆಂಬಲ ಬೆಲೆ ಕೊಡಿ ಎಂದು ಹೇಳುವುದು, ಇಲ್ಲದಿದ್ದರೆ ನಮ್ಮಲ್ಲಿ ಜೋಳ ಬೆಳೆಯುವುದಿಲ್ಲ, ಕಣಕಿ ಸಿಗುವುದಿಲ್ಲ.

**ಅಧ್ಯಕ್ಷರು:** ಮಾನ್ಯ ಸಚಿವರೆ, ಈಗ ಹೇಗಿದ್ದರೂ ಒಂದು ಆಯೋಗವನ್ನು ಮಾಡಿದ್ದೀರಿ, ಅದು ಬರುವುದಕ್ಕೆ ಮುಂಚಿತವಾಗಿ ಅವರಿಗೆ ಲಾಭದಾಯಕ ಬೆಲೆ ಕೊಡಬೇಕೆಂಬ ಬಗ್ಗೆ ನಿಮ್ಮ principle ಪ್ರಕಾರ ನಿಗಧಿ ಮಾಡಬೇಕೆಂದು ಇದೆ. ಈ ಬಗ್ಗೆ ಬೇಗ ಆ ದರವನ್ನು ನಿಗಧಿ ಮಾಡಿ ಅದನ್ನು ನೀವು ಒಪ್ಪಿಕೊಂಡರೆ ಆ ಪ್ರಕಾರ procurement ಮಾಡಿಕೊಳ್ಳಿ. ಈಗ ಒಂದು ಆಯೋಗವನ್ನು ಮಾಡಿದ್ದಾರೆ. ಅವು ಎಲ್ಲಿ ಕುಳಿತಿದ್ದಾರೆ ನೋಡಿ.

**ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರಗಳ ಸಚಿವರು):** ಈ ಸಲ ನಾವು ಭತ್ತಕ್ಕೆ ಪ್ರೋತ್ಸಾಹಧನವನ್ನು ಕೊಟ್ಟಿರುವುದಿಲ್ಲ. ಆದರೂ ಕೂಡ ಭತ್ತವು ಬರುತ್ತಿದೆ. ನಮ್ಮ ರಾಜ್ಯಸರ್ಕಾರದಿಂದ ರಾಗಿಗೆ 400.00 ರೂಪಾಯಿಗಳ ಪ್ರೋತ್ಸಾಹಧನವು ಬರುತ್ತಿದೆ ಆದರೂ ಕೂಡ ಬರುತ್ತಿಲ್ಲ. ಇನ್ನು ಹೆಚ್ಚು ಮಾಡಿ ಎಂದ ಹೇಳಿದರೆ ಈ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ ಆರ್ಥಿಕ ಪರಿಣಾಮವನ್ನು ಸಹ ನಾವು ನೋಡಬೇಕಾಗುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ:** 71 ಲಕ್ಷ ಕಾರ್ಡಿನವರಿಗೆ ಅಕ್ಕಿಯನ್ನು ಮಾರ್ಕೆಟ್‌ನಲ್ಲಿ ಹೆಚ್ಚಿನ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುತ್ತಾರೆ. ಅದರ ಬದಲಿಗೆ ಜೋಳವನ್ನು ಕೊಂಡುಕೊಳ್ಳಲಿ ಎಂದು ನಾನು ಹೇಳುತ್ತಿದ್ದೇನೆ.

**ಅಧ್ಯಕ್ಷರು:** Very Good, very good.

**ಶ್ರೀ ಶಿವಾನಂದ ಎಸ್ ಪಾಟೀಲ್:** ಜೋಳವನ್ನು ಕೊಳ್ಳುವುದರಿಂದ ದನಕರುಗಳು ಬದುಕುತ್ತವೆ. ಒಂದು ಟ್ರಾಕ್ಟರ್ ಕಣಿಕೆಯನ್ನು ತರಬೇಕಾದರೆ 2,000 ರೂಪಾಯಿಗಳನ್ನು ಕೊಡಬೇಕಾಗುತ್ತದೆ.

**ಅಧ್ಯಕ್ಷರು:** ಮಾನ್ಯ ಶಿವಾನಂದ ಪಾಟೀಲ್‌ರೆ ನೀವು ಒಂದು ಮಾತನ್ನು ಕೇಳಿ. ಸರ್ಕಾರದವರು ಮಾರ್ಕೆಟ್‌ಗೆ ಪ್ರವೇಶ ಮಾಡುವುದರಿಂದ ಪದಾರ್ಥದ ಬೆಲೆಯು ತಾನೆತಾನಾಗಿ ಏರುತ್ತದೆ. ಇಲ್ಲಿ ಎರಡು advantage ಗಳು ಇವೆ. ಈಗ ಜನರಿಗೆ ಊಟಕೋಸ್ಕರ ಪಡಿತರ ಚೀಟಿಯವರಿಗೆ ಕೊಡುವುದಕ್ಕೆ ಒಂದು ಭಾಗವಿದ್ದರೆ ಸರ್ಕಾರ ಪ್ರವೇಶ ಮಾಡುವುದರಿಂದ ಬೆಲೆಯು ಜಾಸ್ತಿಯಾಗುತ್ತದೆ ಇದು ಇನ್ನೊಂದು ಭಾಗವು ಸಹ ಇದೆ. ಆ ದೃಷ್ಟಿಯಿಂದ 3.00 ರೂಪಾಯಿಗೆ ಒಂದು ಕೆ.ಜಿ.ಯಂತೆ ಕೊಡಿ. ಅವರಿಗೆ ಯಾಕೆ ಕೊಡುತ್ತೀರಿ, 2.00 ರೂಪಾಯಿ ಒಂದು ಕೆಜಿಯ ಪ್ರಕಾರ ಕೊಡಿ ಅವರಿಗೆ.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಶಿವಾನಂದ ಪಾಟೀಲ್‌ರವರೆ, Food Security Act ಕೇಂದ್ರದಿಂದ ಪಾಸ್ ಆಯಿತು ಎಂದು ಈ ಸರ್ಕಾರದವರು ಬಚಾವ್ ಆಗಿದ್ದಾರೆ. ಈ ಸರ್ಕಾರದವರು ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದಾರಲ್ಲಾ, ಆ Food Security Act ರಕ್ಷಣೆಗೆ ಬಂತು ಎಂದು ಹೇಳಿ ಇವರು ಹೇಳುತ್ತಿದ್ದಾರೆ. ಇಲ್ಲಿ ನನ್ನ ಸಮಸ್ಯೆ ಎಂದರೆ Food ಅಂದರೆ ಏನು? Food Security Act ನಲ್ಲಿ ಅಕ್ಕಿಯಿಂದ ಹಿಡಿದು ಅಕ್ಕಿ, ರಾಗಿ ಜೋಳ ಎಲ್ಲವೂ ಇಲ್ಲಿ Food ಆಗಿದೆ. ಇವರು ಕೇವಲ ಅಕ್ಕಿಗೆ ಮಾತ್ರ ಗಮನವನ್ನು ಕೊಟ್ಟು ರಾಗಿ ಮತ್ತು ಜೋಳದ ಕಡೆಗೆ ಗಮನವನ್ನು ಕೊಡದೆ ಹೋದರೆ ಹಾಗಾದರೆ ಆಹಾರದ ಮೇಲೆ ಆಕ್ರಮಣ ಆಗುವುದಿಲ್ಲವೆ? ನಮ್ಮ ಆಹಾರ ಪದ್ಧತಿಯ ಪ್ರಕಾರ ಇವರು .....

**ಅಧ್ಯಕ್ಷರು:** ಆಕ್ರಮಣವಾಗುತ್ತದೆ. ಈಗ ಜೋಳವನ್ನು ತಿನ್ನುವಂತಹ ವ್ಯಕ್ತಿಗೆ ಅಕ್ಕಿಯನ್ನು ಕೊಟ್ಟು ನಾವು ತಿನ್ನಿಸುವುದಕ್ಕಾಗುವುದಿಲ್ಲವೆಂದು ನನಗೆ ಅರ್ಥವಾಗುತ್ತದೆ. ನೀವು ಹೇಳುವುದರಲ್ಲಿ ಒಂದು ಅರ್ಥವಿದೆ. ದಯವಿಟ್ಟು

ಈಗ ರಾಗಿಗೆ ಹೇಗೆ ಮಾಡಿದ್ದಾರೆ ಅದೇ ರೀತಿಯಾಗಿ ಜೋಳಕ್ಕೂ ಸಹ ಮಾಡಬೇಕು.

**ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ:** ಅವರು ಹೇಳುವುದು ನೂರಕ್ಕೆ ನೂರರಷ್ಟು ಸತ್ಯ. ಈಗ ಆಕ್ರಮಣ ಆಗಿಬಿಟ್ಟಿದೆ. ಏನಾಗಿದೆ ಎಂದರೆ ಜೋಳವನ್ನು ಮಾರ್ಕೆಟ್‌ನಲ್ಲಿ ಬೆಳೆಯತಕ್ಕಂತಹ ರೈತರುಗಳು ಇಲ್ಲ. ಮಾರ್ಕೆಟ್‌ನಲ್ಲಿ ಜೋಳದ ಕೊರತೆ ಇದೆ. ಈ ಕೊರತೆ ಏತಕ್ಕಾಗಿ ಆಗಿದೆ ಎಂದರೆ ಅದಕ್ಕೆ ಸರಿಯಾದಂತಹ ಬೆಲೆ ಸಿಗುತ್ತಿಲ್ಲ. ನಾವು ಇಲ್ಲಿ Food Security ಯ ಸಂಬಂಧ ಅಕ್ಕಿಯನ್ನು ಮತ್ತು ಗೋಧಿಯನ್ನು ಸಹ ಕೊಡುತ್ತೇವೆ. ಇಲ್ಲಿ ಹೆಚ್ಚಿನ ಜನರು ಅಕ್ಕಿ ಮತ್ತು ಗೋಧಿಯನ್ನು ತಿನ್ನುವುದಕ್ಕೆ ಪ್ರಾರಂಭ ಮಾಡಿಬಿಟ್ಟಿದ್ದಾರೆ. ಈಗ ನಾವು ಅವರಿಗೆ MSP ಕೊಟ್ಟು ರೈತರಿಗೆ ಬೆಂಬಲಬೆಲೆಯನ್ನು ಕೊಟ್ಟು ಅವರಿಗೆ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಟ್ಟರೆ ಜೋಳ ಬೆಳೆಯುತ್ತಾರೆ...... ಒಂದು ಎಕರೆಯಲ್ಲಿ ಜೋಳವನ್ನು ಎಷ್ಟು ಬೆಳೆಯುತ್ತಾನೆ. ಒಣ ಬೇಸಾಯದಲ್ಲಿ ಚೆನ್ನಾಗಿ ಜೋಳವನ್ನು ಬೆಳೆದರೆ 6 ರಿಂದ 8 ಕ್ವಿಂಟಾಲ್ ಬೆಳೆಯುತ್ತಾನೆ ಅದು ಇಷ್ಟು ಬರುವುದು. ನೀರಾವರಿ ಇದ್ದಾಗ 14 ರಿಂದ 15 ಕ್ವಿಂಟಾಲ್ ಜೋಳವನ್ನು ಬೆಳೆಯುತ್ತಾನೆ. ನೀವು ಇದನ್ನು ಭತ್ತಕ್ಕೆ ಹೋಲಿಕೆ ಮಾಡಿದರೆ ಹೇಗೆ? 30 ಕ್ವಿಂಟಾಲ್‌ವರೆಗೂ ಬೆಳೆಯುತ್ತಾನೆ. ಇಲ್ಲಿ fodder ಸಿಗುತ್ತದೆ. ಇದರಿಂದ ಪಶುಸಂಗೋಪನೆಗೂ ಕೂಡ ಸಹಾಯವಾಗುತ್ತದೆ. ಅದಕ್ಕಾಗಿ ಎಲ್ಲಾ ದೃಷ್ಟಿಕೋನವನ್ನು ಇಟ್ಟುಕೊಂಡು ಸಹಾಯ ಮಾಡಬೇಕಾಗಿದೆ. ಇದು ಒಂದು ಕಡೆಯ ದೃಷ್ಟಿಯಿಂದ ಹೇಳುವುದಲ್ಲ. ಇದನ್ನು ಮಾಡುವಂತಹದ್ದು ಆಗಬೇಕಾಗಿದೆ. ಈ ಬಗ್ಗೆ ನಾವು ಹೋದವರ್ಷ ಒತ್ತಾಯವನ್ನು ಮಾಡಿದೇವೆ. ಹೋದ ವರ್ಷ ಅವರು ಬಂದು ಒಪ್ಪಿದರು. ಪೂಜೆಯನ್ನು ಸಹ ಮಾಡಿದ್ದೇವೆ. ಪೂಜೆ ಮಾಡಿ ಸ್ವಲ್ಪ procurement ಸಹ ಮಾಡಿದ್ದೇವೆ. 4ನೇ ದಿವಸ ಅಲ್ಲ 5ನೇ ದಿವಸ ಎಪಿಎಂಸಿಯಲ್ಲಿ procurement ಮಾಡುವಂತಹ ಜಾಗಕ್ಕೆ ಬೀಗವನ್ನು ಹಾಕಿಬಿಟ್ಟರು. ಏಕೆಂದರೆ ಗುಣಮಟ್ಟದ ಜೋಳ ಬರುತ್ತಿಲ್ಲವೆಂದು ಹೇಳಿ ಬೀಗ ಹಾಕಿಬಿಟ್ಟಿದ್ದಾರೆ.

**ಶ್ರೀ ದಿನೇಶ್ ಗುಂಡೂರಾವ್:** ಮಾನ್ಯ ಅಧ್ಯಕ್ಷರೆ, ನಾವು procure ಮಾಡದೇ ಇದ್ದರೆ.........

(ಗೊಂದಲ)

**ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ:** ಒಂದು ನಿಮಿಷ, ನಾನು ಮಾತನಾಡುತ್ತೇನೆ. I am coming to your support.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಕಾರಜೋಳರವರು ಹೇಳಿರುವಂತೆ ಇವರ ಹತ್ತಿರ ದುಡ್ಡಿಲ್ಲ. ದುಡ್ಡಿಲ್ಲದ ಕಾರಣದಿಂದ ಖರೀದಿ ಮಾಡುತ್ತಿಲ್ಲ.

(ಗೊಂದಲ)

**ಅಧ್ಯಕ್ಷರು:** ಎಲ್ಲರೂ ನಿಂತುಕೊಂಡು ಮಾತನಾಡಿದರೆ ಆಗುತ್ತದೆಯೇ? ಅವರು ಏನು ಹೇಳುತ್ತಾರೆ ಕೇಳಿ.

**ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ:** ನಾನು ಪೂರ್ತಿ ಹೇಳಿ ಮುಗಿಸುತ್ತೇನೆ. ಏತಕ್ಕಾಗಿ confuse ಆಯಿತು ಎಂದರೆ ಮಾರ್ಕೆಟ್‌ಗೆ fresh ಆಗಿ ಹೊಸ ಜೋಳ ಬಂತು. ಅದರ ಜೊತೆಗೆ ಹೋದ ವರ್ಷ ಇಟ್ಟಂತಹ ಜೋಳ, ಹಗೆ ಬಿದ್ದ ಜೋಳ ಎಂದು ಹೇಳುತ್ತೇವೆಲ್ಲಾ ಅದು ಸಹ ಮಾರ್ಕೆಟ್‌ಗೆ ಬರುವುದಕ್ಕೆ ಪ್ರಾರಂಭವಾಯಿತು. ಅದಕ್ಕಾಗಿ ಇವರು stop ಮಾಡಿದರು. ಅದನ್ನು ಸಹ ನೀವು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿಬಿಟ್ಟಿದ್ದರೆ ಏನಾಗುತ್ತಿತ್ತು ಎಂದರೆ ರೈತರಿಗೆ ನಿಮ್ಮ ಮೇಲೆ ವಿಶ್ವಾಸ ಬರುತ್ತಿತ್ತು. ಮುಂದಿನ ವರ್ಷ ನಾವು ಬೆಳೆದಿರುವ ಜೋಳಕ್ಕೆ ಬೆಲೆ ಬರುತ್ತದೆ ಎಂದು ಇರುತ್ತಿದ್ದರು.

**ಅಧ್ಯಕ್ಷರು:** ಈಗ ಏನು ಮಾಡಬೇಕು ಅದನ್ನು ಹೇಳಿ.

**ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ :** ಅದಕ್ಕೆ ಈ ಸಾರಿ ಹಳೆ ಜೋಳ ಇರಲಿ ಹೊಸ ಜೋಳ ಇರಲಿ procure ಮಾಡುವುದಕ್ಕೆ ಪ್ರಾರಂಭ ಮಾಡಬೇಕು.

**ಶ್ರೀ ದಿನೇಶ್ ಗುಂಡೂರಾವ್:** ಬಿಜಾಪುರ ಮತ್ತು ಬಾಗಲಕೋಟೆಯು ಜೋಳವನ್ನು ಬೆಳೆಯುವಂತಹ ಪ್ರಮುಖವಾದಂತಹ ಎರಡು ಜಿಲ್ಲೆಗಳಾಗಿವೆ. ಈ ಅಧಿವೇಶನ ಅದ ಮೇಲೆ ನಾನೇ ಭೇಟಿ ಕೊಡುತ್ತೇನೆ. ಯಾವ ತಾಲ್ಲೂಕುಗಳಲ್ಲಿ ಹೆಚ್ಚು ಬೆಳೆಯುತ್ತಾರೆ ನಾನು ಹೋಗಿ ವಿಸಿಟ್ ಕೊಡುತ್ತೇನೆ. ಅವರು ಎಷ್ಟು ಬೆಳೆದು ಕೊಡುತ್ತಾರೆಂದು ನೋಡೋಣ. ಅವರಿಗೆ ನಾನು ಸ್ಪಷ್ಟೀಕರಣವನ್ನು ಕೊಡುತ್ತೇನೆ. ನಾವು ಕಳೆದ ವರ್ಷ 7 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಖರೀದಿ ಮಾಡಿದ್ದೇವೆ. ಅದನ್ನು ನಾವು ರೈತರಿಂದ ತೆಗೆದುಕೊಂಡಿದ್ದೇವೆ. 20,000 ಕ್ವಿಂಟಾಲ್ ಹೆಚ್ಚುಕಡಿಮೆ ರಾಗಿಯನ್ನು ಸಹ ಖರೀದಿ ಮಾಡಿದ್ದೇವೆ. ನಾವು procurement center ನಿಂದ 2 ಲಕ್ಷದಷ್ಟು ಭತ್ತವನ್ನು ಸಹ ಖರೀದಿ ಮಾಡಿದ್ದೇವೆ. ಇವರ ಜೋಳವನ್ನು ನಾವು ಏತಕ್ಕಾಗಿ ತೆಗೆದುಕೊಳ್ಳುವುದಿಲ್ಲ? ಏಕೆಂದು ಹೇಳಿದರೆ, ಅಲ್ಲಿ ಹೆಚ್ಚು ಜೋಳವನ್ನು ಬೆಳೆಯುತ್ತಿಲ್ಲ, ಬಹುಶ: ಈ ಬೆಲೆ ಅವರಿಗೆ ಹೆಚ್ಚು ಲಾಭದಾಯಕವಾಗಿ ಆಗಿಲ್ಲ. ಅದಕ್ಕೋಸ್ಕರ ಅವರು ಕೊಟ್ಟಿಲ್ಲ. ಅವರು ಅದನ್ನು ಕೊಡುವುದಕ್ಕೆ ತಯಾರಾಗಿದ್ದರೆ ನಾವು ದಾಖಲೆಯ ಪ್ರಮಾಣದಲ್ಲಿ ನಾವು ಹೋದ ವರ್ಷ ಎಲ್ಲಾ ಪ್ರಮಾಣದ ಬೆಳೆಯನ್ನು ಖರೀದಿ ಮಾಡಿದ್ದೇವೆ. ಈ ವರ್ಷವು ಸಹ ತೆಗೆದುಕೊಳ್ಳುತ್ತೇವೆ ನಾನು ಸಹ ಅಲ್ಲಿಗೆ ಹೋಗಿ ಭೇಟಿ ಕೊಡುತ್ತೇನೆ.

**ಅಧ್ಯಕ್ಷರು:** O.K.

**ಶ್ರೀ ಬಿ.ಆರ್. ಪಾಟೀಲ್:** ಈ ಬಗ್ಗೆ ಒಳ್ಳೆಯ ಚರ್ಚೆಯಾಯಿತು. ನಮ್ಮ ಶಿವಾನಂದ ಪಾಟೀಲರು ಮತ್ತು ನಾಡಗೌಡರು ಹೇಳುತ್ತಾರಲ್ಲಾ ಈ ಸಾರಿ ಜೋಳದ ಉತ್ಪಾದನೆ ಕಡಿಮೆಯಾಗುತ್ತಿದೆ. ಮೊದಲೇ ಇದು ಉತ್ಪಾದನೆಯಾಗುತ್ತಿರಲಿಲ್ಲ. ಅದರಲ್ಲಿಯೂ ಬೆಲೆಯನ್ನು ಸಹ ನೀವು 2,000 ಕೊಡುತ್ತಿದ್ದಿರೆಂದರೆ ಖಂಡಿತವಾಗಿಯೂ ಜೋಳ ಮತ್ತು ಇವರಿಗೆ ಸಿಗುವುದಿಲ್ಲ. ಈ ಬಗ್ಗೆ ನಾವು ಒತ್ತಾಯವನ್ನು ಮಾಡುತ್ತಿದ್ದೇವೆ. 3,000 ರೂಪಾಯಿಯಂತೆ ಒಂದು ಕ್ವಿಂಟಾಲ್‌ಗೆ ತಾವು ಬೆಲೆಯನ್ನು ಕೊಡಲೇಬೇಕು.

ಅಧ್ಯಕ್ಷರು: ಅವರು ಏನು ಅಭಿಪ್ರಾಯವನ್ನು ಹೇಳುತ್ತಾರೆ ಅದನ್ನು ಕೇಳಿ.

ಶ್ರೀ ಬಿ.ಆರ್. ಪಾಟೀಲ್: ಇಲ್ಲದೆ ಇದ್ದರೆ ನಿಮ್ಮ ಕೇಂದ್ರಕ್ಕೆ ಯಾರು ಜೋಳವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಈ ಪಾರಂಪಾರಿಕ ಆಹಾರಪದ್ಧತಿ ಮುಂದುವರಿಯಬೇಕು ಮತ್ತು ಈ ಜೋಳ ಮತ್ತು ರಾಗಿ ಬೆಳೆಗಾರರಿಗೆ ಅನುಕೂಲ ಮಾಡಿಕೊಡಬೇಕು ಈ ಬಗ್ಗೆ ವಿಸ್ತೀರ್ಣವನ್ನು ಜಾಸ್ತಿ ಮಾಡಬೇಕಾದರೆ ಬೆಲೆಯನ್ನು ಜಾಸ್ತಿ ಮಾಡಲೇಬೇಕು. ಇಲ್ಲದೆ ಇದ್ದರೆ ಮುಂದಿನ ದಿವಸಗಳಲ್ಲಿ ಜೋಳ ಸಿಗುವುದಿಲ್ಲ. ಮಾನ್ಯ ನಾಡಗೌಡರು ಈ ಆಹಾರಪದ್ದತಿಯ ಬಗ್ಗೆ ಹೇಳಿದರು. ಈ ಜೋಳ ಸಿಗದೆ ನಮ್ಮ ಕಡೆ ಆಲಸಿಗಳಿಗೆ ಅಕ್ಕಿ ಆಹಾರವಾಗಿಬಿಟ್ಟಿದೆ. ಏನಿಲ್ಲ ಅಕ್ಕಿಯನ್ನು ಬಿಸಿ ನೀರಿನಲ್ಲಿ ಕುದಿಸುವುದು, ತಿನ್ನುವುದು, ಹೊರಡುವುದು. ಬರೀ ಅನ್ನ ತಿನ್ನುವುದರಿಂದ ಆರೋಗ್ಯಕ್ಕೆ ಒಳ್ಳೆಯದಲ್ಲ. ಇಲ್ಲಿ ನಮ್ಮ ಪದ್ಧತಿಯೇ ಬೇರೆಯಾಗಿದೆ. ಅದೇ ಪ್ರಕಾರ ಇವತ್ತು ಸಮಸ್ಯೆ ಏನಾಗಿದೆ ಎಂದರೆ ಈ ಹೊಸ ಹುಡುಗಿಯರಿಗೆ ರೊಟ್ಟಿ ಮಾಡುವುದೇ ಗೊತ್ತಾಗುತ್ತಿಲ್ಲ. ನಮ್ಮ ಕಡೆ ರೊಟ್ಟಿ ಮಾಡುವ ಮೆಷಿನ್‌ಗಳು ಬಂದಿದೆ. ಇಲ್ಲಿ ಬೆಂಗಳೂರಿನಲ್ಲಿ ಎಲ್ಲಾ ಕಡೆ ನೋಡಿ ರೊಟ್ಟಿಯನ್ನು ಮೆಷಿನ್‌ನಿಂದ ಮಾಡುತ್ತಾರೆ. ಅವುಗಳು ಕೈಯಿಂದ ಬಡಿದಂತಹ ರೊಟ್ಟಿಗಳಲ್ಲ. ಮುಂದೆ ಸರ್ಕಾರದವರು skill development ನಲ್ಲಿ ರೊಟ್ಟಿ ಮಾಡುವಂತಹ training ಕೊಡಬೇಕಾಗುತ್ತದೆ ಆ ಪರಿಸ್ಥಿತಿ ನಿಮಗೆ ಬರಬಹುದು. ಮಾನ್ಯ ಹೆಚ್.ಕೆ. ಪಾಟೀಲ್‌ರವರು training ಕೊಡುವುದನ್ನು ಶುರು ಮಾಡಿದರೆ ಇನ್ನೊಂದಿಷ್ಟು employment ಕೊಡಬಹುದು. ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ ಇವತ್ತು Food Security ಎಂದು ಹೇಳಿದಾಗ ಪ್ರತಿ ಕುಟುಂಬಕ್ಕೆ ಇವರು ದ್ವಿದಳ ಆಹಾರವನ್ನು ಕೊಡುವುದು mandatory ಆಗಿ ಎರಡು ಕಿಲೋಗಳನ್ನು ಕೊಡಬೇಕು. ಎಲ್ಲಿಂದ ತಾವು ಕೊಡುತ್ತೀರಿ. ಆ ಸುದ್ದಿಯೇ ಇಲ್ಲ. ನಾವು ನಮ್ಮ ಭಾಗದಲ್ಲಿ ತೊಗರಿಯನ್ನು ಬೆಳೆಯುತ್ತೇವೆ.

**ಶ್ರೀ ಬಸವರಾಜ ರಾಯರೆಡ್ಡಿ:** ಅವರು ಹೇಳುತ್ತಿರುವುದು, Government of India ಏನು Food Security Act ತೆಗೆದುಕೊಂಡು ಬಂತಲ್ಲ ಅದರಲ್ಲಿ ಪ್ರತಿ ಕುಟುಂಬಕ್ಕೆ staple food plus ಅದರಲ್ಲಿ ದ್ವಿದಳ ಧಾನ್ಯಗಳನ್ನು ಪ್ರತಿ ಕುಟುಂಬಕ್ಕೆ ಕೊಡಬೇಕು ಎಂದು ಇದೆ.

**ಶ್ರೀ ಬಿ.ಆರ್. ಪಾಟೀಲ್:** ಅದರಿಂದಲೇ ಶಕ್ತಿ ಸಿಗುವುದು.

**ಶ್ರೀ ಬಸವರಾಜ ರಾಯರೆಡ್ಡಿ:** ಆ ದ್ವಿದಳ ಧಾನ್ಯಗಳನ್ನು ನೀವು ಕೊಡುತ್ತಿಲ್ಲ. ನೀವು ಬರೀ ಅಕ್ಕಿಯನ್ನು ಕೊಡುತ್ತಿದ್ದೀರೆಂದು ನೀವು ಹೇಳುತ್ತಿರುವುದು ತಾನೇ?

**ಶ್ರೀ ಬಿ.ಆರ್. ಪಾಟೀಲ್:** ಹೌದು. ಅದಕ್ಕಾಗಿ ಆಹಾರದ ಮೇಲೆ ಆಕ್ರಮಣವಾಗುತ್ತಿದೆ. ನಮಗೆ ಯಾವುದು ಬೇಕೋ ಅದನ್ನು ಕೊಡುತ್ತಿಲ್ಲ. ಬೇಕಾಗಿಲ್ಲದಿರುವುದನ್ನು ನೀವು ಭರಪೂರವಾಗಿ ಕೊಡುತ್ತಿದ್ದೀರಿ.

**ಶ್ರೀ ಬಸವರಾಜ ರಾಯರೆಡ್ಡಿ:** Food Security Act ನಲ್ಲಿ ಇದೆ. It is mandatory.

**ಶ್ರೀ ಬಿ.ಆರ್. ಪಾಟೀಲ್:** ಇವರು ಒಂದು ರೂಪಾಯಿಗೆ ಒಂದು ಕಿ.ಲೋ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ ಮೇಲೆ ಆದೇಶಗಳು ಬಂದು ನಮ್ಮ ತಹಶೀಲ್ದಾರ್ ಮತ್ತು ಡಿ.ಸಿ.ಗಳಿಗೆ ಅವರು ಬಂದಿರುವಂತಹ ಅಕ್ಕಿಯನ್ನು ಎಲ್ಲಿಡಬೇಕೆಂದು ಇವರು ಓಡಾಡುವುದಕ್ಕೆ ಪ್ರಾರಂಭ ಮಾಡಿದರು. ನೀವು ಏತಕ್ಕಾಗಿ ಓಡಾಡುತ್ತಿದ್ದೀರಿ ಎಂದು ನಾವು ಕೇಳಿದಾಗ ಅವರು ನಮಗೆ ಜಾಗವಿಲ್ಲ ಮಠಗಳು ಮತ್ತು ಅಲ್ಲಿ ಇಲ್ಲಿ ಇಡುತ್ತಿದ್ದೇವೆಂದು ಹೇಳಿದರು. ಸಮಸ್ಯೆ ಅಷ್ಟೊಂದು ಆಗಿದೆ. ಒಂದು ವೇಳೆ ಬೇಕಾದಂತಹ ಆಹಾರಪದ್ಧತಿಯನ್ನು ನಮ್ಮಲ್ಲಿ ತಂದುಬಿಟ್ಟರೆ ಖಂಡಿತವಾಗಿಯೂ ಜನರಿಗೆ ಅನುಕೂಲವಾಗುತ್ತದೆ.

**ಅಧ್ಯಕ್ಷರು:** ಈಗಾಗಲೇ 2 ಗಂಟೆಯಾಗಿದೆ.

**ಶ್ರೀ ಬಿ.ಆರ್. ಪಾಟೀಲ್:** ತೊಗರಿ ವಿಷಯ ಹೇಳುವುದಕ್ಕೆ ಬರುತ್ತೇನೆ. ಹೋದ ವರ್ಷ ತಾವು ತೊಗರಿ ಬೋರ್ಡಿಗೆ ಖರೀದಿ ಮಾಡುವುದಕ್ಕೆ 5000 ದಂತೆ ಆದೇಶವನ್ನು ಕೊಟ್ಟಿದ್ದೀರಿ. ಇಷ್ಟು ಹಣ ಕೊಡುತ್ತಾರೆಂದು ರೈತರುಗಳು ಖುಷಿಯಾಗಿ ಹೋಗಿ ಆ ಖರೀದಿ ಕೇಂದ್ರಗಳಲ್ಲಿ ಹೆಸರನ್ನು ಬರೆಸಿ ಬಂದರು. ಇವತ್ತು ಸುಮಾರು 32,000 ಚೀಲ ಅಲ್ಲಿ registration ಆಯಿತು. ಆದರೆ ಅಲ್ಲಿ ಕೇವಲ 2000 ಚೀಲ ಮಾತ್ರ ಖರೀದಿ ಮಾಡಿರುವುದು. 30,000 ಚೀಲ ಇವರು ಖರೀದಿಯನ್ನೇ ಮಾಡಲಿಲ್ಲ. ಇವರ ಹತ್ತಿರ ದುಡ್ಡಿಲ್ಲ. ಸುಮ್ಮನೆ ಇವರು ತೊಗರಿ ಬೋರ್ಡ್ ಮಾಡಿದ್ದೇವೆಂದು ಜನರಿಗೆ ಹೇಳಿದರು. ತೊಗರಿಬೋರ್ಡಿನಿಂದ ನಾವು ಇಷ್ಟನ್ನು ಖರೀದಿ ಮಾಡುತ್ತೇವೆಂದು ಹೇಳಿದರು. ಇದರಿಂದ ರೈತರಿಗೆ ಇಷ್ಟು ಅನುಕೂಲವಾಗುತ್ತದೆ. ನೀವು ತೊಗರಿಬೋರ್ಡಿಗೆ ಎಲ್ಲಿ ದುಡ್ಡನ್ನು ಕೊಡಲೇ ಇಲ್ಲ. ಈ ವರ್ಷ ...

**ಅಧ್ಯಕ್ಷರು:** ತೊಗರಿ ಬೋರ್ಡಿಗೆ ಸರ್ಕಾರದಿಂದ ದುಡ್ಡು ಕೊಡಲಿಲ್ಲವಾ?

**ಶ್ರೀ ಬಿ.ಆರ್. ಪಾಟೀಲ್:** ಕೊಡಲೇ ಇಲ್ಲ. ಅದು Private market ಗೆ ಎಲ್ಲಾ ಹೋಗಿ ಬಿಟ್ಟಿತ್ತು.

**ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೆ, No, No, ಆ ರೀತಿ ಹೇಳುವುದು ಬೇಡ. ತೊಗರಿ ಮಂಡಳಿಯ ಮುಖೇಣ ನಾವು purchase ಮಾಡಿದ್ದೇವೆ. ಕೇಂದ್ರಸರ್ಕಾರವು ನಿಗಧಿ ಮಾಡುವುದಕ್ಕಿಂತ ಹೆಚ್ಚಾಗಿ ಪ್ರೋತ್ಸಾಹ ಧನವೆಂದು 4300 ರೂಪಾಯಿಗಳಿತ್ತು ನಾವು 7000 ರೂಪಾಯಿಗಳೆಂದು ಮಾಡಿದೆವು. ನಾವು ಅಷ್ಟನ್ನು ಸಹ procurement ಮಾಡಿದ್ದೇವೆ. ಇದಕ್ಕಾಗಿ ಒಂದು limitation ಕೂಡ ಇತ್ತು. ಅಷ್ಟನ್ನೂ ನಾವು procurement ಮಾಡಿದೆವು. ನಮಗೊಂದು limitation ಇತ್ತು. Government of India ದವರು stop ಮಾಡುವ time ಗೆ correct ಆಗಿ ಮಾಡಿದ್ದರು. ಆದರೂ ಕೂಡ ಸಾಕಷ್ಟು ಜನರ ಬೇಡಿಕೆ ಇತ್ತು. ಕೊಳ್ಳಬೇಕಾಗಿತ್ತು ಎನ್ನುವುದಿತ್ತು.

ಕೊಳ್ಳುವುದಕ್ಕಾಗುವುದಕ್ಕಾಗಲಿಲ್ಲ. ನಾವೇನು ಕಾಲಮಿತಿ ಹಾಕಿದ್ದೆವು, ಅದರಲ್ಲಿ ಕೊಂಡಿದ್ದೇವೆ. ಹಣ ಕೊಟ್ಟಿದ್ದೇವೆ. ಹಣ ಯಾವುದೂ ಕೂಡ ಇಲ್ಲ.

**ಶ್ರೀ ಬಿ.ಆರ್. ಪಾಟೀಲ್:** ಇದು ಸತ್ಯಕ್ಕೆ ದೂರವಾದುದು. ಹಣದ ಕೊರತೆಯಿಂದ ನಾವು ಅಲ್ಲಿ ಅನುಭವಿಸಿದ್ದೇವೆ. ತೊಗರಿ Board ಇರುವುದೇ ಕಲಬುರಗಿಯಲ್ಲಿ.

**ಶ್ರೀ ಟಿ.ಬಿ. ಜಯಚಂದ್ರ:** ಕೇಳಿ. ನಾನೇ cabinet sub-committee chairman ಆಗಿದ್ದೇನೆ. ಹಣ ಯಾವುದೂ ಬಾಕಿ ಇಲ್ಲ. ಆಕಸ್ಮಾತ್ ಇದ್ದಿದ್ದೇ ಆದರೆ ನಾನು ಈಗಲೇ ಹೇಳಿದ ಹಾಗೆ, ರಾಗಿ ವಿಚಾರದಲ್ಲೂ ಕೂಡ ಇವತ್ತು ಸಾಯಂಕಾಲದೊಳಗೆ ಬಿಡುಗಡೆ ಮಾಡುತ್ತೇನೆ.

**ಶ್ರೀ ಬಿ.ಆರ್. ಪಾಟೀಲ್:** ನೀವು ಏಕೆ ತೊಗರಿಯನ್ನು ಖರೀದಿ ಮಾಡಲಿಲ್ಲ?

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್:** ರೈತರು ಬಂದು ಹೆಸರು register ಮಾಡಿದ್ದರು.

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್:** ನೀವೇಕೆ ಖರೀದಿ ಮಾಡಲಿಲ್ಲ?

(ಗೊಂದಲ)

**ಶ್ರೀ ಟಿ.ಬಿ. ಜಯಚಂದ್ರ:** ಕಳೆದ ವರ್ಷ procurement ಮಾಡಿದ್ದೆಲ್ಲಕ್ಕೂ ಹಣ ಬಿಡುಗಡೆ ಮಾಡಿದ್ದೇವೆ. ಯಾವುದೂ ಬಾಕಿ ಇಲ್ಲ. ಆದರೆ, ಈ ವರ್ಷವೂ ಕೂಡ procurement ಮಾಡಬೇಕೆಂದು ಹೇಳುತ್ತಿದ್ದಾರೆ. 4,300, 4,350, 4,400 ರೂಪಾಯಿ ಏನೋ ಈಗ procurement ಮಾಡಿದ್ದಾರೆ. Last time ನಾವು ಪ್ರೋತ್ಸಾಹಧನ ಕೊಟ್ಟಿದ್ದರಿಂದ ಸುಮಾರು 60–70 ಕೋಟಿ ರೂಪಾಯಿ ನಮಗೆ loss ಕೂಡ ಆಯಿತು. ಹಾಗಾಗಿ, ಪ್ರೋತ್ಸಾಹ ಬೇಡ. ಈ

ಸಾರಿ ಸಾಕಷ್ಟು production ಬರುತ್ತಿದೆ. ಆದರೆ, ಪ್ರತಿ ಸಾರಿಯೂ ಕೂಡ ನಷ್ಟವಾಗುತ್ತದೆ. ನಾವು ಹೇಳಬೇಕೆಂದರೆ, ಆವರ್ತ ನಿಧಿಯಿಂದ 1 ಸಾವಿರ ಕೋಟಿ ರೂಪಾಯಿಗಳಲ್ಲಿ ಹೆಚ್ಚು ಕಡಿಮೆ ನಮಗೆ 600–700 ಕೋಟಿ ರೂಪಾಯಿಗಳೆಷ್ಟು loss ಆಗುವಂಥ ಪರಿಸ್ಥಿತಿಯಲ್ಲಿದೆ. ದಯಮಾಡಿ, ನೀವು ಅದನ್ನೂ ಅರ್ಥಮಾಡಿಕೊಳ್ಳಿ. ಇದೆಲ್ಲಕ್ಕೂ ಕಾರಣವಾಗಿದ್ದು ಎಂದರೆ, ಕೇಂದ್ರ ಸರ್ಕಾರ ಹಿಂದಕ್ಕೆ ಹೋಗಿದ್ದೇ ಕಾರಣ. ಮೆಕ್ಕೆಜೋಳದ ವಿಚಾರದಲ್ಲಿ ನಾವು procurement ಮಾಡುವುದಿಲ್ಲ, ಅದನ್ನೇ PDS ನಲ್ಲಿ ಉಪಯೋಗಿಸಿ ಎಂದು condition ಹಾಕಿದ್ದರು. ನಾವು ಮಾನ್ಯ ಮುಖ್ಯಮಂತ್ರಿಯವರು, ಆಹಾರ ಮಂತ್ರಿಯವರು ಎಲ್ಲರೂ ಕೂಡ ಹೋಗಿ ಕೇಂದ್ರದ ಮಂತ್ರಿಗಳನ್ನು procurement ಮಾಡಿ ಎಂದು ನೋಡಿದ್ದೆವು. ಅದಕ್ಕೆ ಯಾವುದೇ ರೀತಿಯಲ್ಲೂ ಸಡಿಲ ಮಾಡಿಲಿಲ್ಲ. ಕೇಂದ್ರದ ನಮ್ಮ ಎಲ್ಲ ಮಂತ್ರಿಗಳ ಜೊತೆಯಲ್ಲೂ ಕೂಡ ನಾವು correspond ಮಾಡಿದ್ದೇವೆ. ಅವರೂ ಕೂಡ ಪ್ರಯತ್ನಪಟ್ಟಿದ್ದಾರೆ. ಆದರೆ, ಏನೂ ಆಗಲಿಲ್ಲ. ಆದರೆ, ಎಲ್ಲೋ ಒಂದು ಕಡೆಗೆ procurement ಮಾಡದೇ ಇರುವುದನ್ನು policy ಯಿಂದ Government of India ವಾಪಸ್ ಹೋಗಿದ್ದ ಕಾರಣ ಇದೆಲ್ಲದಕ್ಕೂ ಕಾರಣವಾಯಿತು.

**ಅಧ್ಯಕ್ಷರು:** O.K. ಪೂರೈಸಿ.

**ಶ್ರೀ ಬಿ.ಆರ್. ಪಾಟೀಲ್** ಪೂರೈಸುವುದಲ್ಲ ಸಾರ್. ನಡುವೆ ಬಹಳ ಜನ ಮಾತನಾಡಿದರು. ಬಹಳಷ್ಟು ವಿಷಯಗಳು ಹೊರಬಂದವು.

**ಶ್ರೀ ಕೆ. ಶಿವಮೂರ್ತಿ:** ಪಾಟೀಲರೆ, Food Security Act ಬಗ್ಗೆ ನಾನು ಕೊಟ್ಟೆ. Food transportation and distribution ಇದರ ಬಗ್ಗೆ Act ನಲ್ಲಿರುವುದನ್ನು ತಮಗೆ ಕೊಟ್ಟಾಗ ತಾವು ಅದನ್ನು ನೋಡಿದಿರಿ, ಓದಿದಿರಿ. Food depot ಗಳಿವೆಯಲ್ಲ. ಅವು ಶಕ್ತಿವಂತರ ಕೈಯಲ್ಲಿ ಕೇಂದ್ರೀಕೃತವಾಗಿವೆ. ಕೆಲವೇ ಊರುಗಳಲ್ಲಿ ಕೇಂದ್ರೀಕೃತವಾಗಿವೆ. Food transportation ಆಗಿ delivery ಆಗಿ distribution ಆಗಬೇಕಾದರೆ, ಅಲ್ಲಿರತಕ್ಕಂಥ ಪ್ರದೇಶದ ಜನರಿಗೆ ಕೂಲಿಕಾರರು, ಬಡವರಿಗೆ Act ನಲ್ಲಿ ವ್ಯವಧಾನ ಮಾಡಿದ್ದಾರಲ್ಲ

ಅದನ್ನು ಜಾರಿ ಮಾಡಲಿಕ್ಕೆ ತಾವು ಆದೇಶ ಕೊಡಬೇಕು. ಇಲ್ಲವೆಂದರೆ ನಮಗೆ ಅನ್ಯಾಯವಾಗುತ್ತದೆ. ಕೂಲಿ ಮಾಡತಕ್ಕಂಥ ಜನ.

ಅಧ್ಯಕ್ಷರು: ಜಯಚಂದ್ರರವರೆ, ಇಲ್ಲಿ ಅನ್ಯಾಯವಾಗುತ್ತಿದೆ, ಸರಿ ಮಾಡಿ.

ಶ್ರೀ ಕೆ. ಶಿವಮೂರ್ತಿ: ಜಯಚಂದ್ರರವರೆ, ಏನು ಹೇಳುತ್ತೀರಿ ಹೇಳಿ.

ಅಧ್ಯಕ್ಷರು: ಚರ್ಚೆ ಮಾಡುವ ಕಾಲದಲ್ಲಿ ಅವನ್ನೆಲ್ಲ ಪ್ರಸ್ತಾಪ ಮಾಡಿ ಹೇಳಿ, ಅವರು ಉತ್ತರ ಕೊಡುತ್ತಾರೆ. ನೀವು ಮಧ್ಯೆ ಮಧ್ಯೆ ಎದ್ದು ಉತ್ತರ ಹೇಳಿ ಎಂದರೆ ಹೇಗಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: ಅವರು ಈಗಾಗಲೇ CLP ಯಲ್ಲೂ ಕೂಡ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಗಮನದಲ್ಲಿದೆ. Distribution ಸರಿಯಾಗಿ ಆಗುತ್ತಿಲ್ಲ.

ಅಧ್ಯಕ್ಷರು: CLP ಯೊಳಗೆ ಮಾತನಾಡುವಾಗ ಧ್ವನಿ ಜಾಸ್ತಿ ಇರಬೇಕು. ಆಗ ಇವರು ಬಗ್ಗುತ್ತಾರೆ. ಇಲ್ಲದಿದ್ದರೆ ಬಗ್ಗುತ್ತಾರೆಯೇ?

ಶ್ರೀ ಟಿ.ಬಿ. ಜಯಚಂದ್ರ: ಗಮನದಲ್ಲಿದೆ.

ಶ್ರೀ ಬಿ.ಆರ್. ಪಾಟೀಲ್: ಚರ್ಚೆಯ ದಿಕ್ಕು ತಪ್ಪುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ: ಅವರು ಕೇಳಿರುವುದೇನೆಂದರೆ, ಸರ್ಕಾರದಿಂದ ಈಗಾಗಲೇ Deputy Commissioner ಗಳಿಗೆ Fair Price Depot points ಅನ್ನು ಮಾಡಿ ನೀವು ಆದಷ್ಟು increase ಮಾಡಿ ಎಂದು ಪ್ರತಿ ಜಿಲ್ಲೆಯ Deputy Commissioner ಗೂ ಕೂಡ ಹೇಳಿದ್ದೇವೆ. ದಯಮಾಡಿ, ಶಾಸಕರೆಲ್ಲರೂ ಕೂಡ ಒತ್ತಾಯ ಮಾಡಿ ಯಾವ ಯಾವ ಭಾಗಕ್ಕೆ Fair Price Depot ಬೇಕಾಗುತ್ತದೆ ಎನ್ನುವುದನ್ನು ಒತ್ತಾಯ ಮಾಡಿ ಅಲ್ಲಿ create ಮಾಡಿಸಿ, recruitment ಮಾಡಿಸತಕ್ಕಂಥ ಕೆಲಸ ಮಾಡಬೇಕು. Recruitment in the sense, ಅದನ್ನು allot ಮಾಡತಕ್ಕಂಥ ರೀತಿಯಲ್ಲಿ ಮಾಡಬೇಕು. ಈಗಾಗಲೇ ನಮ್ಮ ಕಡೆಯಿಂದ clearance ಕೊಟ್ಟಾಗಿದೆ.

ಶ್ರೀ ಕೆ. ಶಿವಮೂರ್ತಿ: ಹೊಸದಾಗಿ depot ಗಳನ್ನು ಕೊಡುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ: ಹೌದು. ಹೊಸದಾಗಿ depot ಕೊಡಬೇಕು ಎಂದು ತೀರ್ಮಾನ ಮಾಡಿ, ಆ ಪ್ರಕಾರವೇ ಈಗಾಗಲೇ Deputy Commissioner ಗಳಿಗೆ ಹೇಳಿ ಈಗಾಗಲೇ ಅವರು final ಮಾಡುತ್ತಿದ್ದಾರೆ. ನೀವು ನೋಡಿಕೊಳ್ಳಿ.

ಅಧ್ಯಕ್ಷರು: ಆಯಿತು, ಬೇಗ ಹೇಳಿ.

ಶ್ರೀ ಬಿ.ಆರ್. ಪಾಟೀಲ್: ಶಿವಮೂರ್ತಿಯವರು ಹೇಳಿದಹಾಗೆ, ಖಾಸಗಿ ಜನರೇನಿದ್ದಾರೆ, warehouse ಗಳಿವೆಯಲ್ಲ, ಅವರ ಕೈಯಲ್ಲಿ ಜಾಸ್ತಿ ಗೋದಾಮುಗಳು ಇವೆ. ಸರ್ಕಾರದಲ್ಲಿ ನಿಮ್ಮಲ್ಲಿ ಇದನ್ನು ಇಟ್ಟುಕೊಳ್ಳವುದಕ್ಕೆ ವ್ಯವಸ್ಥೆಯೇ ಇಲ್ಲ. ಈಗಿನ ವ್ಯವಸ್ಥೆಯಲ್ಲಿ ನೀವು ಇದನ್ನು double ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಆ ಕಾರಣಕ್ಕಾಗಿಯೇ, Fair Price Depot ಗಳನ್ನು ಕೊಡಬೇಕಾದಾಗ NGO ಗಳಿರಬಹುದು, ಸ್ತ್ರೀಶಕ್ತಿ ಸಂಘಗಳಿರಬಹುದು ಈ ರೀತಿಯಾಗಿರತಕ್ಕಂಥ, co-operative institutions ಇರಬಹುದು ಅವರಿಗೆ ಕೊಡಬೇಕೆನ್ನತಕ್ಕಂಥ priority fix ಮಾಡಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್: ಇಟ್ಟುಕೊಳ್ಳುವುದಕ್ಕೆ ಅವರಿಗೆ ಜಾಗವೇ ಇಲ್ಲ, ಅವರು ವಿತರಣೆ ಮಾಡಬಹುದು. ಅವರಿಗೆ ಕೊಟ್ಟರೆ ಇಟ್ಟುಕೊಳ್ಳುವುದಕ್ಕೆ ಜಾಗವಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: Individual ಕೊಡುವುದಕ್ಕೆ ಹೋದರೆ black market ನವರಿಗೆ ಕೊಡುತ್ತೀರಿ ಎಂದು ಹೇಳುತ್ತೀರಿ. ಆದರೆ, ಸಹಕಾರಿ ಸಂಸ್ಥೆಗಳಿಗೆ ನಾವು encourage ಮಾಡಬೇಕಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್: Warehouse Corporation or Food Corporation of India ಅವರಿಂದ ನೀವು ಇಟ್ಟುಕೊಳ್ಳಬೇಕು.

**ಶ್ರೀ ಟಿ.ಬಿ. ಜಯಚಂದ್ರ:** ಅವರ ಹತ್ತಿರ ಅಷ್ಟೊಂದು ಶಕ್ತಿ ಇದೆಯೋ, ಇಲ್ಲವೋ, ಶಕ್ತಿ ಇದ್ದರೆ...

**ಅಧ್ಯಕ್ಷರು:** ಏನು ಮಾಡಬೇಕು ಹೇಳಿ.

**ಶ್ರೀ ಟಿ.ಬಿ. ಜಯಚಂದ್ರ:** ಅವರಿಗೆ procurement ಮಾಡುವುದಕ್ಕೆ ಕಷ್ಟವಾಗುತ್ತಿದೆ.

**ಅಧ್ಯಕ್ಷರು:** ಆಯಿತು ಬಿಡಿ.

**ಶ್ರೀ ಟಿ.ಬಿ. ಜಯಚಂದ್ರ:** ಅವರಿಗೆ ಶಕ್ತಿ ಇದ್ದರೆ, ಕೊಡುವುದಕ್ಕೆ ನಮಗೇನೂ ತೊಂದರೆ ಇಲ್ಲ. ಅವರ ಕೈಯಲ್ಲಾಗುವುದಿಲ್ಲ. ಸಹಕಾರಿ ಸಂಸ್ಥೆಗಳೇನಿವೆ, ಅವರು ಮುಂದೆ ಬಂದರೆ, ಆ ರೀತಿಯಾದ association ಗಳು ಬಂದರೆ, priority ಮೇಲೆ ಅವರಿಗೆ ಕೊಡುತ್ತೇವೆ. ಅವರಿಗೆ ಕೊಡಬೇಕೇ ವಿನ: individual ಕೊಡಬಾರದೆಂಬುದೇ ನಮ್ಮ ತೀರ್ಮಾನ.

**ಶ್ರೀ ಕೆ. ಶಿವಮೂರ್ತಿ:** ಸಹಕಾರಿ ಸಂಸ್ಥೆಗಳೇ ಅಲ್ಲಿಲ್ಲ.

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್:** ನನ್ನ ಸಮಯವೇ ಜಾಸ್ತಿ ಹಾಳಾಗುತ್ತಿದೆ.

**ಶ್ರೀ ಟಿ.ಬಿ. ಜಯಚಂದ್ರ:** ಸ್ತ್ರೀಶಕ್ತಿ ಸಂಘಗಳಿಲ್ಲವೇ? ಅವರೂ ಕೂಡ....

(ಗೊಂದಲ)

**ಶ್ರೀ ಕೆ. ಶಿವಮೂರ್ತಿ:** ಅವೂ ಇಲ್ಲ. ಸಹಕಾರಿ ಸಂಸ್ಥೆಯಿಂದ ದೂರ ಇಡತಕ್ಕಂಥ . . .

**ಅಧ್ಯಕ್ಷರು:** ಬೇಗ ಹೇಳಿ.

**ಶ್ರೀ ಬಿ.ಆರ್. ಪಾಟೀಲ್:** ಬೇಗ ಎಂದರೆ ಹೇಗೆ ಸಾರ್? ಮಾನ್ಯ ಸಚಿವರೆ ತಮಗೆ ಸರಿಯಾಗಿ ಮಾಹಿತಿ ಇಲ್ಲ ಎನಿಸುತ್ತದೆ. ಈ ವರ್ಷ ತೊಗರಿ ಇಳುವರಿಯಲ್ಲಿ ಬಹಳ ಕಡಿಮೆಯಾಗಿದೆ. ವಾತಾವರಣ, ಮಳೆ ವೈಫಲ್ಯ ಈ

ಕಾರಣಕ್ಕಾಗಿ ಆಗಿದೆ. ನೀವು ಮೊದಲೇ ತೊಗರಿ ಖರೀದಿ ಇಲ್ಲಿಯವರೆಗೆ ಶುರು ಮಾಡಲೇ ಇಲ್ಲ, private market ನವರು ಬಂದು ತೆಗೆದುಕೊಂಡು ಹೋದರು. ಇವತ್ತಿನವರೆಗೆ ನೀವು rate ಕೂಡ declare ಮಾಡಿಲ್ಲ. ತೊಗರಿ Board ಮಾಡಿದ್ದೀರಿ. Skeleton body, ಅದಕ್ಕೆ ಮಾಂಸ ಇಲ್ಲ, ರಕ್ತ ಇಲ್ಲ, ಚೈತನ್ಯವಿಲ್ಲ. ತೊಗರಿ ಬೋರ್ಡ್‌ಗೆ ಮೊನ್ನೆ ಒಬ್ಬರು ಅಧ್ಯಕ್ಷರನ್ನು ಮಾಡಿದ್ದೀರಿ. ಅವರು ತೊಗರಿ ಬೋರ್ಡ್ ಕಛೇರಿಯಲ್ಲಿ ಕುಳಿತು ನೊಣ ಹೊಡೆಯಬೇಕು. ಅವರಿಗೇನೂ ಕೆಲಸವೇ ಇಲ್ಲ. ಜವಾಬ್ದಾರಿಯೂ ಇಲ್ಲ. ನೀವು ಹಣವನ್ನೂ ಕೊಟ್ಟಿಲ್ಲ. ಇವತ್ತಿನವರೆಗೆ ಸರ್ಕಾರದವರು ಒಂದು ಕಾಳು ತೊಗರಿ ಖರೀದಿ ಮಾಡಿದ್ದೇವೆಂದು ಹೇಳಲಿ? ಈ ತರಹ ತೊಗರಿ ಬೋರ್ಡ್ ಮಾಡಿ, ಕನಿಷ್ಠ 6 ಸಾವಿರ ರೂಪಾಯಿಗಳನ್ನಾದರೂ ಕೂಡ ನೀವು ತೊಗರಿಗೆ ಬೆಂಬಲ ಬೆಲೆ ಕೊಟ್ಟು ನೀವು ಖರೀದಿ ಶುರು ಮಾಡಿ ಎಂದು ನಾವು ಕೇಳಿದ್ದೇವೆ. ಈ ಸಲ ನೀವು ಒಂದು ಚೀಲವನ್ನೂ ಖರೀದಿ ಮಾಡಲಿಲ್ಲ. ಹಾಗಾದರೆ, ತೊಗರಿ ಬೋರ್ಡ್ ಏಕಿರಬೇಕು?

**ಶ್ರೀ ಟಿ.ಬಿ. ಜಯಚಂದ್ರ:** ಈ ಸಾರಿ rate ಕೂಡ MSP ಗಿಂತ ಜಾಸ್ತಿ ಇತ್ತು. ನಾವು ಮಧ್ಯ ಪ್ರವೇಶ ಮಾಡಿ ಪ್ರೋತ್ಸಾಹ ಧನ ಕೊಡಬೇಕು. ಕನಿಷ್ಠ 1 ಸಾವಿರ ರೂಪಾಯಿ ಕೊಟ್ಟರೂ ಕೂಡ ಅದಕ್ಕಿಂತ ಜಾಸ್ತಿ market ನಲ್ಲಿದ್ದದ್ದರಿಂದ ನಾವು procurement ಮಾಡಿಲ್ಲ. ಆದರೆ, ನಮ್ಮ MSP rate ಗೆ procurement ಮಾಡುವುದಕ್ಕೆ ನಾವು ಯಾವತ್ತೂ ತಯಾರಾಗಿದ್ದೇವೆ. ಆದರೆ, ಅಷ್ಟು market ಗೆ product ಬರುತ್ತಿರಲಿಲ್ಲ.

**ಶ್ರೀ ಬಿ.ಆರ್. ಪಾಟೀಲ್:** ಇಲ್ಲ. ನೀವು 6 ಸಾವಿರ ರೂಪಾಯಿ ಬೆಲೆ ಘೋಷಣೆ ಮಾಡಿದರೆ. .

**ಶ್ರೀ ಟಿ.ಬಿ. ಜಯಚಂದ್ರ:** ಘೋಷಣೆ ಮಾಡಿದ್ದರೆ ಬರುತ್ತಿತ್ತು. ನಾವು ಕಳೆದ ವರ್ಷ 700 ರೂಪಾಯಿ ಪ್ರೋತ್ಸಾಹ ಧನವನ್ನು ಕೊಟ್ಟು ಸುಮಾರು 60–70 ಕೋಟಿ ರೂಪಾಯಿ ನಷ್ಟವೂ ಕೂಡ ಆಯಿತು. ಆದರೆ, ನಾವು ರೈತರ ವಿಚಾರದಲ್ಲಿ ನಷ್ಟ ಎನ್ನತಕ್ಕಂಥ ಪ್ರಶ್ನೆ ಇಲ್ಲ. ನಾವು ಧೈರ್ಯವಾಗಿ ಭರಿಸಿದ್ದೇವೆ.

ಆದರೆ, ಈ ವರ್ಷ ಏನಾಯಿತೆಂದರೆ, ನಮಗೆ ಕೇಂದ್ರ ಸರ್ಕಾರ ವಾಪಸ್ ಹೋಗಿದ್ದೇ ಮೂಲ ಕಾರಣವಾಯಿತು. ದಯಮಾಡಿ, ಅದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಬಿ.ಆರ್. ಪಾಟೀಲ್:** ಸಾರ್, ಈ ವಿಷಯದಲ್ಲಿ ನಮಗೂ ಗೊತ್ತಿದೆ. ಇದೇ ಹೊತ್ತಿನಲ್ಲಿ ಕೇಂದ್ರದವರೂ ಕೂಡ ಹೊರಗಡೆಯಿಂದ ಬೇಳೆಕಾಳುಗಳನ್ನು ಆಮದು ಮಾಡಿಕೊಂಡರು. Market ನಲ್ಲಿ ಬಿದ್ದು ಹೋಯಿತು. ಒಂದು ವೇಳೆ ನೀವು 6 ಸಾವಿರ ರೂಪಾಯಿ ಬೆಲೆ ಘೋಷಣೆ ಮಾಡಿದ್ದರೆ ಇಡೀ ರೈತರಿಗೆ ಅನುಕೂಲವಾಗುತ್ತಿತ್ತು. ತೊಗರಿ ಬೋರ್ಡ್‌ಗೆ ಚಾಲನೆ ಇರುತ್ತಿತ್ತು.

**ಅಧ್ಯಕ್ಷರು:** ನಿಮಗೆ ಎಷ್ಟು ಹೊತ್ತು ಬೇಕು?

**ಶ್ರೀ ಬಿ.ಆರ್. ಪಾಟೀಲ್:** ನಾನು ಇನ್ನೂ ಮಾತನಾಡುವುದಕ್ಕೇ ಶುರು ಮಾಡಿಲ್ಲ. ಅಪರೂಪಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನಾನೇನೂ ಬೇರೆ ವಿಷಯಗಳನ್ನು ಮಾತನಾಡುತ್ತಿಲ್ಲ. ನಾನು ಮಾತನಾಡುವಾಗ ಇಷ್ಟು ಜನ ....

**ಅಧ್ಯಕ್ಷರು:** ನಾನು ಹೇಳಿಬಿಡುತ್ತೇನೆ, ಕೇಳಿ ಈಗ ಮುಂದಕ್ಕೆ ಹಾಕಿ 3 ಗಂಟೆಗೆ ನಾವು ಸೇರುತ್ತೇವೆ. ಇಂದು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ನಾವು ಸಾಯಂಕಾಲ 4 ಗಂಟೆಯೊಳಗೆ ಪೂರೈಸಬೇಕು. ಇನ್ನು ಯಾರ್‍ಯಾರು ಇದ್ದಾರೋ ಎಲ್ಲರಿಗೂ ಅವಕಾಶ ಮಾಡಿಕೊಡಬೇಕಾಗುತ್ತದೆ.

**ಶ್ರೀ ಬಿ.ಆರ್. ಪಾಟೀಲ್:** ನಾನು ಮುಗಿಸುತ್ತಿದ್ದೆ. ನಡುವೆ ನಡುವೆ ಬಹಳ ಜನ contribute ಮಾಡಿದರು. ಅದು ಸರ್ಕಾರಕ್ಕೆ ಅನುಕೂಲವಾಯಿತು.

**ಅಧ್ಯಕ್ಷರು:** ಬೇಡ.

**ಶ್ರೀ ಬಿ.ಆರ್. ಪಾಟೀಲ್:** ನಾನೇನೂ ಜಾಸ್ತಿ ಸಮಯ ತೆಗೆದುಕೊಂಡಿಲ್ಲ ಸಾರ್. ನಾನು ಮಾತನಾಡುವಾಗ ಅನೇಕ ಜನ ಮಾತನಾಡಿದರು. ಹಾಗಾಗಿ, ಸಮಯ ಹೋಯಿತು.

**ಅಧ್ಯಕ್ಷರು:** ಈಗ ಸಮಯ 2.15 ಆಗುತ್ತಾ ಇದೆ. ಮತ್ತೆ ನಾವು ಸೇರಬೇಕಾಗುತ್ತದೆ.

**ಶ್ರೀ ಬಿ.ಆರ್. ಪಾಟೀಲ್:** ಬೇಕಾದರೆ ತಾವು adjourn ಮಾಡಿ. ಊಟವಾದ ಮೇಲೆ ನನಗೆ 10 ನಿಮಿಷ time ಕೊಡಿ.

**ಅಧ್ಯಕ್ಷರು:** ಹಾಗೆ ಮಾಡೋಣ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 9 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

**(ಸದನವು ಪುನ: ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)**

**ಉಪಾಧ್ಯಕ್ಷರು:** ಮಾನ್ಯ ಬಿ.ಆರ್. ಪಾಟೀಲ್‌ರವರೇ, ತಾವು ಮಾತನಾಡಿ.

**ಶ್ರೀ ಬಿ.ಆರ್. ಪಾಟೀಲ್ (ಆಳಂದ):** ಮಾನ್ಯ ಉಪಾಧ್ಯಕ್ಷರೆ, ಈ ಮುಂಚೆ ಆಹಾರಧಾನ್ಯಗಳ ಉತ್ಪಾದನೆ, ಶೇಖರಣೆ ಬಗ್ಗೆ ಮಾತನಾಡುತ್ತಿದ್ದೆ. ಈ ವಿಷಯದ ಬಗ್ಗೆ ಬಹಳ ಜನ ಶಾಸಕ ಮಿತ್ರರು ಧ್ವನಿಗೂಡಿಸಿ ನನಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇವತ್ತಿನದಿವಸ ಆಹಾರ ಪದಾರ್ಥಗಳ ಬಗ್ಗೆ ನಾವು ಗಂಭಿರವಾಗಿ ಚಿಂತೆ ಮಾಡಬೇಕಾಗಿದೆ. ಮಾನ್ಯ ಜಯಚಂದ್ರ ಸಾಹೇಬರು ಇಲ್ಲಿರುವುದರಿಂದ ಒಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ರಾಯಚೂರು ಮತ್ತು ಕೆಲವು ಭಾಗದಲ್ಲಿ ಅಪೌಷ್ಟಿಕತೆಯ ಸಮಸ್ಯೆ ಗಂಭೀರವಾಗಿದೆ ಎಂಬ ಬಗ್ಗೆ ನಾವು ಬೆಚ್ಚು ಬೀಳಿಸುವ ಪರಿಸ್ಥಿತಿ ಬಂದಿದೆ. ಈ ವಿಷಯದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಕೂಡ suo–motu ಪಿಟಿಷನ್ ದಾಖಲಾಗಿ ಈ ಬಗ್ಗೆ ಚರ್ಚೆ ಕೂಡ ನಡೆಯುತ್ತಿದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೂ ಸಹ ನೋಟಿಸ್ ಕೊಟ್ಟಿದ್ದಾರೆ. ಇವತ್ತಿನದಿವಸ ಅಪೌಷ್ಟಿಕತೆ ಪರಿಸ್ಥಿತಿ ಗಂಭೀರವಾಗಿದೆ. ಆದರೆ, ಇಲ್ಲಿ ಕೆಲವು ಸಮಸ್ಯೆಗಳು ಇವೆ.

ಸಮಸ್ಯೆಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಇವತ್ತು ಬೆಳಿಗ್ಗೆ ತೊಗರಿಬೇಳೆ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಆದರೆ, ತಮಗೆ ಆಶ್ಚರ್ಯವೆನಿಸಬಹುದು ಅದೇನೆಂದರೆ, 4 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ತೊಗರಿಬೆಳೆ ಬೆಳೆಯತಕ್ಕಂಥದ್ದು ಕಡಿಮೆ ಆಗಿದೆ. ಮನುಷ್ಯನಿಗೆ ಪ್ರೋಟಿನ್ ಆಹಾರ ಬೇಕೇ ಬೇಕು. Staple food ಆಗಿರುವ ರಾಗಿ, ಅಕ್ಕಿ, ಗೋಧಿಯನ್ನು ನಾವು ಎಷ್ಟೇ ತಿಂದರು ಕೂಡ ಪ್ರೋಟಿನ್ ಯುಕ್ತ ಆಹಾರ ಬೇಕೇ ಬೇಕು. ಆದರೆ, ಇವತ್ತು ತೊಗರಿ ಬೆಳೆ ನಾಲ್ಕು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುವ ವಿಸ್ತೀರ್ಣ ಕಡಿಮೆ ಆಗಿದೆ ಎಂದರೆ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಲೇ ಬೇಕಾಗುತ್ತದೆ. ಏಕೆಂದರೆ, ಈಗಾಗಲೇ ನಮ್ಮ ದೇಶದಲ್ಲಿ ಬೇಳೆಕಾಳು ಮತ್ತು ಎಣ್ಣೆಕಾಳು ಇವತ್ತಿಗೂ ಸಹ ಕಡಿಮೆ ಇದೆ. ಆದ್ದರಿಂದ, ಪ್ರತಿವರ್ಷ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಆದರೆ ಬೇಳೆಕಾಳುಗಳನ್ನು ಬೆಳೆಯುವಂಥ ರೈತರು ನಮ್ಮಲ್ಲಿದ್ದಾರೆ. ಆದರೆ, ಅವರಿಗೆ ಪ್ರೋತ್ಸಾಹ ಇಲ್ಲ. ಅವರಿಗೆ ಪ್ರೋತ್ಸಾಹ ಕೊಡದೆ ಇರುವುದರಿಂದ ಈ ವರ್ಷ ನಾಲ್ಕು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬೆಳೆಯತಕ್ಕಂಥದ್ದು ಕಡಿಮೆ ಆಗಿದೆ. ಇದೇ ರೀತಿಯಾದರೆ ಮುಂದೆ ಇದೂ ಕೂಡ ಜಾಸ್ತಿ ಆಗಬಹುದು. ಆದ್ದರಿಂದ, ತಾವು ದಯಮಾಡಿ ಬಹಳ ಎಚ್ಚರಿಕೆ ವಹಿಸಬೇಕು. ಈ ಒಂದು ಕಾರಣದಿಂದ ನಾನು ತೊಗರಿ ಬೋಡ್ ಬಗ್ಗೆ ಮಾತನಾಡಿದ್ದೇನೆ. ಈ ವರ್ಷ ತಾವು ತೊಗರಿಯನ್ನು ಖರೀದಿ ಮಾಡಲಿಲ್ಲ. ತೊಗರಿ ಬೋರ್ಡ್ ಅನ್ನು ತಾವು ಪ್ರಾರಂಭ ಮಾಡಿದ್ದೀರಿ. ತೊಗರಿಯನ್ನು ಖರೀದಿ ಮಾಡಬೇಕೆಂಬುದು ಅದರ ಉದ್ದೇಶವಾಗಿದೆ ಮತ್ತೆ ತೊಗರಿ ಮಾರಾಟ ಮಾಡಲು ರೈತರು ತಯಾರಿದ್ದಾರೆ. ಆದರೆ, ಅದರ ಬೆಲೆಯನ್ನು ತಾವು ಘೋಷಣೆ ಮಾಡಿಲ್ಲ. ಕೃಷಿ ಬೆಲೆ ಆಯೋಗದವರು 4950 ರೂಪಾಯಿ ಶಿಫಾರಸ್ಸು ಮಾಡಿದ್ದಾರೆ. ಇವತ್ತಿನದಿವಸ ಮಾರುಕಟ್ಟೆಯಲ್ಲಿ ತೊಗರಿ 4500 ಮತ್ತು 5500 ರೂಪಾಯಿ ದರ ಇದೆ. ನೀವು ಕೃಷಿ ಬೆಲೆ ಆಯೋಗದ ಬಗ್ಗೆ ಬಹಳ ದೊಡ್ಡ ಮಾತನ್ನು ಹೇಳುತ್ತಿದ್ದೀರಿ. ಆದ್ದರಿಂದ, ನಾನು ಕೇಳುವುದೇನೆಂದರೆ, ಕೃಷಿ ಬೆಲೆ ಆಯೋಗದ ಎಷ್ಟು ಶಿಫಾರಸ್ಸುಗಳನ್ನು ನೀವು ಮಾನ್ಯ ಮಾಡಿದ್ದೀರಿ ಎಂದು

ಹೇಳಿ. ನೀವು ರಚನೆ ಮಾಡಿರುವ ಕೃಷಿ ಬೆಲೆ ಆಯೋಗ ತೊಗರಿಬೇಳೆಗೆ 5,950 ಸರಾಸರಿ 6,000 ನಿಗದಿ ಮಾಡಿದೆ. ನಾವು ಕೂಡ ಅಷ್ಟನ್ನೆ ಕೇಳಿದ್ದೆವು. ಅಂದರೆ, 6000 ರೂಪಾಯಿ ಬೆಂಬಲ ಬೆಲೆಯನ್ನು ಕೊಟ್ಟು ಖರೀದಿಯನ್ನು ಪ್ರಾರಂಭ ಮಾಡಿ ಎಂದು ನಾವು ಸಹ ಕೇಳಿದ್ದೆವು. ಆದರೆ, ಈ ವರ್ಷ ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಲಿಲ್ಲ ಮತ್ತೆ ಅದಕ್ಕೆ ದುಡ್ಡನ್ನು ಸಹ ಕೊಟ್ಟಿಲ್ಲ. ಇವತ್ತಿನದಿವಸ ರೈತರು ತೊಗರಿ ಬೇಳೆಯನ್ನು ಬಿಟ್ಟು ಹತ್ತಿ ಮತ್ತು ಸೋಯಾಬೀನ್ ಬೆಳೆಗೆ ಹೋಗುತ್ತಿದ್ದಾರೆ. ಏಕೆಂದರೆ, ಲಾಭ ಇಲ್ಲವೆಂದರೆ ಅವರು ಬೇರೆ ಕಡೆಗೆ ಹೋಗುತ್ತಾರೆ. ಅವರನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ, ಈ ಬೇಳೆಕಾಳು ಉತ್ಪಾದನೆ ಕಡಿಮೆ ಆದರೆ ಮತ್ತೆ ಅಪೌಷ್ಠಿಕತೆ ಸಮಸ್ಯೆ ನಮ್ಮಲ್ಲಿ ಬಹಳ ಗಂಭೀರವಾಗಿ ಉದ್ಭವವಾಗುತ್ತದೆ. ಇವತ್ತು ಬೆಳಿಗ್ಗೆ Food Security Act ಬಗ್ಗೆ ಚರ್ಚೆ ಆಯಿತು. ಆಂಧ್ರಪ್ರದೇಶದಲ್ಲಿ ಒಂದು ಪಡಿತರ ಕುಟುಂಬಕ್ಕೆ ಎರಡು ಕಿ.ಲೋ. ಬೇಳೆಕಾಳನ್ನು ಕಡ್ಡಾಯವಾಗಿ ಕೊಡತಕ್ಕಂಥದನ್ನು ಆಂಧ್ರಪ್ರದೇಶದ ಸರ್ಕಾರ ಮಾಡಿದೆ. ಆದ್ದರಿಂದ, ಅದನ್ನು ಇಲ್ಲಿ ನಾವೇಕೆ ಮಾಡಬಾರದು? ಇದನ್ನು ಮಾಡುವುದಕ್ಕೆ ನಾವೇನು ಬೇಡವೆಂದು ಹೇಳಿಲ್ಲ. ಏಕೆಂದರೆ ನಮ್ಮಲ್ಲಿ ಅಪೌಷ್ಠಿಕತೆ ಸಮಸ್ಯೆ ಕಾಡುತ್ತಿರುವಾಗ ಬೇಳೆಕಾಳನ್ನು ಕೊಡತಕ್ಕಂಥದು ಆಗಲೇ ಬೇಕಾಗುತ್ತದೆ. ಈ ರೀತಿಯಾದರೆ ಬೇಳೆಕಾಳು ಉತ್ಪಾದನೆ ಕೂಡ ಜಾಸ್ತಿ ಆಗುತ್ತದೆ.

**ಉಪಾಧ್ಯಕ್ಷರು:** ಬೇಳೆ ಕೊಡುವುದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗಿ decision ಆಗಿರಬೇಕು.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ಮತ್ತು ಪಶುಸಂಗೋಪನೆ ಇಲಖೆ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ಚರ್ಚೆ ಆಗಿದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಹಿನ್ನೆಲೆಯಲ್ಲಿ ನಾಳೆ ಬೆಳಿಗ್ಗೆ 10 ಗಂಟೆಗೆ ಸಚಿವ ಸಂಪುಟದ ಉಪ ಸಮಿತಿಯನ್ನು ನಾನು ಕರೆದಿದ್ದೇನೆ. ತಾವು ಹೇಳತಕ್ಕಂಥ ಮಾತು ಅಕ್ಷರಶ: ಸತ್ಯ. Crop diversification ಏಕೆಂದರೆ, profit ಇಲ್ಲದೆ ಇರುವಾಗ ಹೊಸ ಬೆಳೆಯನ್ನು ಪರ್ಯಾಯ ಬೆಳೆಯನ್ನಾಗಿ

ಬೆಳೆಯುವುದಕ್ಕೆ ರೈತರು ಹೋಗುತ್ತಾರೆ. ಅದರಿಂದ ಅಪೌಷ್ಟಿಕತೆ ಬಗ್ಗೆ ಇತರೆ ವಿಚಾರಗಳಿಗೆ ಹೊಡೆತ ಬೀಳುತ್ತದೆ. ಅದಕ್ಕೆ ನಾವು ಏನು ಮಾಡಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುವುದಾದರೆ, ನಾನು ಶಿಕಾರಿಪುರದ ಅಳಿಯನಾಗಿರುವುದರಿಂದ ಅಲ್ಲಿನ ವಿಷಯ ನನಗೆ ಗೊತ್ತಿದೆ. ಶಿಕಾರಿಪುರವನ್ನು ಭತ್ತದ ಖಣಜ ಎಂದು ಕರೆಯಲಾಗುತ್ತಿತ್ತು. ಆದರೆ, ಇವತ್ತಿನದಿವಸ ಇಡೀ ಶಿಕಾರಿಪುರ ತಾಲ್ಲೂಕಿನಲ್ಲಿ ಅಲ್ಲೊಂದು ಇಲ್ಲೊಂದು ಎಕರೆ ಬಿಟ್ಟರೆ ಅಲ್ಲಿ ಯಾರೂ ಕೂಡ ಭತ್ತವನ್ನು ಬೆಳೆಯುತ್ತಿಲ್ಲ. ಅಲ್ಲಿ ಎಲ್ಲರೂ ಮೆಕ್ಕೆಜೋಳವನ್ನು ಬೆಳೆಯುತ್ತಿದ್ದಾರೆ. ನಮಗೆ ಮುಖ್ಯವಾಗಿ ಬೇಕಾಗಿರತಕ್ಕಂಥ ಆಹಾರ ಪದಾರ್ಥದ ಉತ್ಪಾದನೆ ಕುಂಠತವಾಗುತ್ತಿದೆ. ಅದಕ್ಕೆ ಎಲ್ಲೋಒಂದು ಕಡೆ ಪ್ರೋತ್ಸಾಹ ಕೊಡತಕ್ಕಂಥದ್ದನ್ನು ಅಂದರೆ ನ್ಯಾಯವಾದಂಥ ಬೆಲೆಯನ್ನು ಕೊಡಬೇಕೆಂಬ ಉದ್ದೇಶದಿಂದ ಕೃಷಿ ಬೆಲೆ ಆಯೋಗವನ್ನು ನಾವು ಮಾಡಿದ್ದೇವೆ. ಅದರ ಜೊತೆಗೆ ನಮಗೆ ಬಂದಿರತಕ್ಕಂಥ ದೊಡ್ಡ ಸಮಸ್ಯೆ ಏನೆಂದರೆ, ಕೇಂದ್ರ ಸರ್ಕಾರದಿಂದ ನಮಗೆ ಪ್ರೋತ್ಸಾಹಧನ ಬಾರದೆ ಇರುವುದರಿಂದ ನಾವೆಲ್ಲ ಸ್ವಲ್ಪ ಹಿಂಜರಿಯುವುದಕ್ಕೆ ಕಾರಣವಾಗಿದೆ. ಕಾರಣ ಎಂದರೆ ಸಾಕಷ್ಟು financial burden ಆಗುತ್ತಿದೆ. 1000 ಕೊಟಿ ರೂಪಾಯಿ ಆವರ್ತನಿಧಿಯಲ್ಲಿ ಈಗ ನಮ್ಮ ಹತ್ತಿರ 200 ಕೋಟಿ ಇದೆ. 800 ಕೋಟಿ ಕೊಡಲಾಗಿದೆ. ಇದರಿಂದ ಕಷ್ಟವಾಗುತ್ತದೆ. ಏಕೆಂದರೆ, 8 ಲಕ್ಷ ಕ್ವಿಂಟಾಲ್‌ನಷ್ಟು ನಾವು ಮೆಕ್ಕೆಜೋಳವನ್ನು ಕೊಂಡುಕೊಂಡಿದ್ದೇವೆ. ಅದಕ್ಕೆ overheads ಮತ್ತೆ ಇತರೇ problems ಇವೆ.

**ಶ್ರೀ ಬಸವರಾಜ ರಾಯರೆಡ್ಡಿ:** ಮಾನ್ಯ ಸಚಿವರೇ, ಒಂದು ನಿಮಿಷ. ಕೊಪ್ಪಳ ಜಿಲ್ಲೆಯಲ್ಲಿ ಮೆಕ್ಕೆ ಜೋಳವನ್ನು ಅತ್ಯಂತ ಹೆಚ್ಚು ಪ್ರಮಾಣದಲ್ಲಿ ರೈತರು ಬೆಳೆಯುತ್ತಾರೆ. ಅಲ್ಲಿ ಎಷ್ಟು ಮೋಸವಾಗುತ್ತಿದೆ ಎಂದರೆ, ಒಬ್ಬ ರೈತ ಒಂದು ಸಾರಿಗೆ 20 ಕ್ವಿಂಟಲ್ ಮಾರಾಟ ಮಾಡುತ್ತಾನೆ. ಒಂದು ಎಪಿಎಂಸಿ ಯಲ್ಲಿ ಸುಮಾರು 1000 ಕ್ವಿಂಟಲ್ ಖರೀದಿ ಆಗಿದ್ದರೆ ಮತ್ತೆ ಮುಂದಿನ ವಾರ 1000 ಕ್ವಿಂಟಲ್ ಬರುತ್ತದೆ. ಅಂದರೆ, ವ್ಯಾಪಾರಸ್ಥರು ಅದನ್ನೇ ಪುನಃ

circulate ಮಾಡುತ್ತಾರೆ. ಸರ್ಕಾರ ಟಾರ್ಗೆಟ್‌ನ್ನು ನಿಗದಿ ಮಾಡಿರುವುದರಿಂದ ಅವರು ಅದನ್ನೇ circulate ಮಾಡಿ ದುಡ್ಡು ಹೊಡೆಯುತ್ತಿದ್ದಾರೆ. ಅಂದರೆ, ಇಲ್ಲಿಯೂ ಕೂಡ ಮೋಸ ಮಾಡುತ್ತಿದ್ದಾರೆ. ಎ.ಪಿ.ಎಂ.ಸಿ.ಯಲ್ಲಿ ಏನು ಖರೀದಿ ಆಗಿರುತ್ತದೆ ಅದು ಹೊರಕ್ಕೆ ಹೋಗುತ್ತದೆ ಮತ್ತೇ next day ಮತ್ತೊಬ್ಬ ರೈತನ ಹೆಸರಲ್ಲಿ ಅದೇ ವಾಪಸ್ಸು ಬರುತ್ತದೆ. ಖರೀದಿ ಮಾಡುವುದಕ್ಕೆ ಸರ್ಕಾರ ಏನು ಲಿಮಿಟ್ ಹಾಕಿರುವುದು ಸರಿ ಇದೆ.

**ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ:** ಮಾನ್ಯ ಉಪಾಧ್ಯಕ್ಷರೆ, ಈಗ ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ 2 ತಿಂಗಳ ನಂತರ ಪುನ: ಮಾರುಕಟ್ಟೆಗೆ ತರಬಹುದು. ಆನಂತರ MSP stop ಆಗುತ್ತದೆ. ಅವರು ಹೇಳಿದ ಹಾಗೆ rotation ಯಾವಾಗ ಆಗುತ್ತದೆ ಎಂದರೆ, MSP ಮೇಲೆ ನಾವು ಖರೀದಿ ಮಾಡುವುದಕ್ಕೆ ತಡವಾದಾಗ ಆಗುತ್ತದೆ. ಆದ್ದರಿಂದ, ಅವರು ಹೇಳುವುದು ನಿಜವಾಗಿದೆ. ರೈತರಿಂದ ವ್ಯಾಪಾರಸ್ಥರು ಖರೀದಿ ಮಾಡಿರುತ್ತಾರೆ. ಆಗ ಈ ರೀತಿ ಆಗುತ್ತದೆ. ಆದ್ದರಿಂದ, ನಾವು ಯಾವಾಗಲೂ ಏನು ಮಾಡಬೇಕೆಂದರೆ ನಾವು ಮುಂಚಿತವಾಗಿಯೇ ಖರೀದಿಯನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ಅದನ್ನು avoid ಆಗುತ್ತದೆ. Government of India ದ ಗೈಡ್‌ಲೈನ್ಸ್ ಕೂಡ cutoff date ಅನ್ನು ಕೊಟ್ಟಿರುತ್ತಾರೆ. ಆ ಪ್ರಕಾರ ನಾವು ಮಾಡಲೇಬೇಕಾಗುತ್ತದೆ. Re-circulate ಆಗಬಾರದೆಂಬ ಉದ್ದೇಶದಿಂದಲೇ ಈ ರೀತಿ ಮಾಡಿದ್ದಾರೆ.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬಂದಿಲ್ಲವೆಂಬುದನ್ನು ಒಪ್ಪಬೇಕಾಗುತ್ತದೆ. ಆದರೆ, agriculture is a state subject. ಕೇಂದ್ರದಿಂದ ನೀವು ನಿರೀಕ್ಷೆ ಮಾಡಿ. ಆದರೆ, ಕೇಂದ್ರ ಸರ್ಕಾರ ಒಂದು ವೇಳೆ ಸಹಾಯ ಮಾಡದೆ ಇದ್ದರೆ ನಾವು ಅಸಹಾಯಕರಾಗಿ ರೈತರಿಗೆ ಅನ್ಯಾಯ ಮಾಡುವುದಕ್ಕೆ ಆಗುವುದಿಲ್ಲ. ನಾವು ರೈತರಿಗೆ ರಕ್ಷಣೆ ಮತು ಬೆಂಬಲ ಕೊಡಬೇಕಾಗುತ್ತದೆ. ಆ ಕೆಲಸವನ್ನು ರಾಜ್ಯ ಸರ್ಕಾರ ಜವಾಬ್ದಾರಿ ತೆಗೆದುಕೊಂಡು ಮಾಡಬೇಕಾಗುತ್ತದೆ. ಬರೀ ಕೇಂದ್ರ ಸರ್ಕಾರದ ಮೇಲೆ ನೆಪ ಹಾಕಿ, ಕೇಂದ್ರ ನಮಗೆ ಏನು ಸಹಾಯ

ಮಾಡಿಲ್ಲವೆಂದು ಕೈಚೆಲ್ಲಿ ಕೊಡುವುದು ಸರ್ಕಾರದ ಲಕ್ಷಣ ಅಲ್ಲ ಮತ್ತೆ ಇದೂ ಸರಿ ಕೂಡ ಅಲ್ಲ. ರಾಜ್ಯ ಸರ್ಕಾರದವರು ಇದನ್ನು ಮಾಡಲೇಬೇಕಾಗುತ್ತದೆ. ಏಕೆಂದರೆ, ಕೃಷಿ ವಲಯ ಇವತ್ತು ಉದ್ಯೋಗವನ್ನು ಕೊಡತಕ್ಕಂಥ ಅತ್ಯಂತ ದೊಡ್ಡ ಕ್ಷೇತ್ರವಾಗಿದೆ. ಅನೇಕ ಸಮಸ್ಯೆಗಳನ್ನು ಇದರಲ್ಲಿ ಬಗೆಹರಿಸಬಹುದು. ಅಂದರೆ, ಕೆಲಸ ಕೊಡುವಂಥ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಹಾಗೆಯೇ, ಅಪೌಷ್ಟಿಕತೆ, ಆಹಾರದ ಕೊರತೆ ಮತ್ತು ಇನ್ನೂ ಅನೇಕ ಸಮಸ್ಯೆಗಳು ಇಲ್ಲಿಂದ ಪ್ರಾರಂಭವಾಗುತ್ತದೆ. ಆದ್ದರಿಂದ, ಕೃಷಿವಲಯದಿಂದಲೇ ನಾವು ಪರಿಹಾರವನ್ನು ಕಂಡುಹಿಡಿಯಬೇಕಾಗುತ್ತದೆ. 2013–14ರಲ್ಲಿ ಸಾದಭತ್ತ ಲೆವಿ, ರಾಗಿ, ಜೋಳ, ತೊಗರಿ, ಕೊಬ್ಬರಿ ಮತ್ತು ಟೊಮೋಟೊಗೆ ಬೆಂಬಲ ಬೆಲೆ ಇದೆ. ಟೊಮೋಟೊಗೆ ರಾಜ್ಯ ಸರ್ಕಾರದವರು ಬೆಂಬಲ ಬೆಲೆ ಕೊಟ್ಟಿದ್ದೀರಿ. ಆದರೆ, ಕೇಂದ್ರದವರು ಕೊಡಲಿಲ್ಲ. ಆದರೆ, ಈ ವರ್ಷ ನೀವು ಯಾವುದಕ್ಕೂ ಸಹ ಬೆಂಬಲ ಬೆಲೆ ಕೊಡಲಿಲ್ಲ. ಹೀಗಿರುವಾಗ ಕೃಷಿ ಬೆಲೆ ಆಯೋಗವನ್ನು ಏತಕ್ಕೆ ಮಾಡಿದ್ದೀರಿ? ಕೃಷಿ ಆಯೋಗ ಮಾಡಿ ಊರ ತುಂಬಾ ಎಲ್ಲಾ ಬ್ಯಾನರ್ ಮತ್ತು ಕಟೌಟ್ಸ್‌ಗಳು, ಕೃಷಿಯ ಬಗ್ಗೆ ರೈತರ ಭಾರಿ ಉದ್ಧಾರವಾಯಿತು ಎಂದು ಜನ ತಿಳಿದುಕೊಳ್ಳುತ್ತಿದ್ದಾರೆ. ಇವತ್ತು ಜೋಳ ಒಂದು ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಕಡಿಮೆ ಆಗಿದೆ. ಜೋಳ ಮೊದಲೇ ಸಿಗುತ್ತಿಲ್ಲ, ಜೋಳದ ವಿಸ್ತೀರ್ಣ ಕಡಿಮೆ ಆಗುತ್ತಿದೆ. ಈ ವರ್ಷ ನೋಡಿದರೆ ಒಂದು ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಕಡಿಮೆ ಆಗಿದೆ. ಇದು ಬಹಳ ಆತಂಕಕಾರಿ ವಿಷಯ. ದಯಮಾಡಿ ನಾವು ಬೆಳಗ್ಗೆ ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ ಹೇಳಿದೆವು. 2000 ರೂ.ಗಳಿಗೆ ಒಂದು ಕ್ವಿಂಟಾಲ್ ಜೋಳ ಯಾರು ಕೂಡ ಕೊಡುವುದಿಲ್ಲ. ಗರಿಷ್ಠ 3000 ರೂ.ಗಳಿಗೆ ಒಂದು ಕ್ವಿಂಟಾಲ್ ಖರೀದಿ ಮಾಡುವುದಕ್ಕೆ ಬಂದರೆ ಮಾತ್ರ ನಿಮಗೆ ಜೋಳ ಸಿಗುತ್ತದೆ. ಇಲ್ಲದಿದ್ದರೆ ನಿಮಗೆ ಮಾರ್ಕೆಟ್‌ನಲ್ಲಿ ಜೋಳ ಸಿಗುವುದಿಲ್ಲ. ಮಂತ್ರಿಗಳು ಹೇಳಿದ ಹಾಗೆ ವಿಸ್ತೀರ್ಣ ದಿನೇದಿನೇ ಕಡಿಮೆ ಆಗಿ ಜೋಳ ಎನ್ನುವುದು ಬೆಲೆ ಕೊಡದೇ ಹೋದರೆ ಮಾಯವಾಗುವಂಥ ಸಾಧ್ಯತೆ ಇದೆ. ದಯಮಾಡಿ ನೀವು ರಾಗಿಗೆ 2000 ರೂ.ಗಳನ್ನು ಕೊಟ್ಟಿದ್ದೀರಿ ಅದಕ್ಕೂ

ಬೇಕಾದರೆ ಹೆಚ್ಚಿಗೆ ಕೊಡಿ. ಆದರೆ ಜೋಳಕ್ಕೆ ಮಾತ್ರ 3000 ರೂ.ಗಳನ್ನು ನೀವು ಕೊಡದೇ ಹೋದರೆ ಜೋಳ ಮುಂದೆ ನಿಮಗೆ procurement ಮಾಡುವುದಕ್ಕೆ ಸಿಗುವುದಿಲ್ಲ ಮತ್ತು ಊಟಕ್ಕೆ ಕೂಡ ಸಿಗುವುದಿಲ್ಲ. ಅಂತಹ ಒಂದು ಗಂಭೀರ ಪರಿಸ್ಥಿತಿ ಬಂದು ಒದಗುತ್ತದೆ. ಇನ್ನು ಒಂದೆರಡು ವಿಷಯಗಳು ಇವೆ. ಈ ವಿಷಯದಲ್ಲಿ ಅನೇಕ ಜನರು ಬೆಳಕು ಚೆಲ್ಲುತ್ತಿದ್ದಾರೆ. ಬಹಳ ಸಂತೋಷ. ಏಕೆಂದರೆ, ನಾವು ಮೂಲ ಸಮಸ್ಯೆಗೆ ಹೋಗಿದ್ದೇವೆ. ತಾವು ಹೋದ ವರ್ಷ 1000 ಕೋಟಿ ರೂ.ಗಳನ್ನು ಆವರ್ತನಿಧಿಗೆ ಕೊಟ್ಟಿದ್ದೇವೆಂದು, ಅದು ತೊಗರಿ ಬೆಳೆಗೂ ಕೂಡ ಅಪ್ಲೈ ಆಗುತ್ತದೆಂದು ಹೇಳಿದಿರಿ. ದಯಮಾಡಿ ತಾವು ಅಂಕಿ ಸಂಖ್ಯೆಗಳನ್ನು ಹೇಳಬಹುದು. ಯಾವ್ಯಾವ ಬೆಳೆಗೆ ಎಷ್ಟೆಷ್ಟು ಆವರ್ತನಿಧಿಯನ್ನು ಉಪಯೋಗ ಮಾಡಿಕೊಂಡಿರಿ. ಜಾಸ್ತಿ ಆವರ್ತನಿಧಿ ಖರ್ಚಾದದ್ದು ಮೆಕ್ಕೆಜೋಳಕ್ಕೆ, ಏಕೆಂದರೆ ಮೆಕ್ಕೆಜೋಳದಿಂದ ಪೌಲ್ಟ್ರಿ ಫಾರ್ಮ್ ಲಾಬಿ ಇದೆ. ರೈತರಿಂದ ಯಾವುದು ಲಾಬಿ ಇಲ್ಲ. ನಾವು ತೊಗರಿ ತಂದಿರುವುದನ್ನು ಹೆಸರು ನೊಂದಾಯಿಸಿ ಹೋದರೂ ಕೂಡ ಅವರದ್ದು ಖರೀದಿ ಮಾಡಲಿಲ್ಲ. ಮೆಕ್ಕೆಜೋಳ ಏಕೆ ಖರೀದಿ ಮಾಡಿದರು ಎಂದರೆ, poultry ಲಾಬಿ ಇದೆ. Total production ದಲ್ಲಿ 47% poultry feeding ಗೆ ಹೋಗುತ್ತದೆ. ಅದು ಬಹಳ ದೊಡ್ಡ ಲಾಬಿ ಇದೆ. ಹಾಗಾಗಿ ಇವತ್ತು ನೀವು ನಿಜವಾಗಿ ಯಾರಿಗೆ ರಕ್ಷಣೆ ಮಾಡಬೇಕು ಎನ್ನುವುದನ್ನು ಬಿಟ್ಟು ಯಾರಿಗೆ ಅವಶ್ಯಕತೆ ಇಲ್ಲ ಈ poultry ಲಾಬಿಗಳಿಗೆ ರಕ್ಷಣೆ ಮಾಡುವುದಕ್ಕೆ ಹೆಚ್ಚು ದುಡ್ಡು ಕೊಟ್ಟಿರಿ. ತೊಗರಿಗೆ ನೀವು ದುಡ್ಡು ಕೊಡಲಿಲ್ಲ. ಇವತ್ತು ಕೂಡ ಕೃಷಿ ಬೆಲೆ ಆಯೋಗದ ಬಗ್ಗೆ ಎಷ್ಟೊಂದು ಹೇಳಿಕೊಳ್ಳುತ್ತಿದ್ದೀರಿ ನಾನು ಕೇಳುತ್ತೇನೆ. 5950 ರೂ.ಗಳನ್ನು ತೊಗರಿ ಬೆಳೆಯನ್ನು ಖರೀದಿ ಮಾಡುವುದಕ್ಕೆ ಕೃಷಿ ಬೆಲೆ ಆಯೋಗ ಶಿಫಾರಸ್ಸು ಮಾಡಿದೆ. ನೀವು rate declare ಮಾಡಿದರೆ ನನಗೆ 100 ಕ್ಕೆ 100 ಭರವಸೆ ಇದೆ. ತೊಗರಿ ಕೇಂದ್ರಕ್ಕೆ ಬಂದು ಜನ ಮಾರಾಟ ಮಾಡುತ್ತಿದ್ದರು. ನೀವು ತೊಗರಿ ಕೇಂದ್ರ ಪ್ರಾರಂಭ ಮಾಡಲಿಲ್ಲ. ದುಡ್ಡು ಕೊಡಲಿಲ್ಲ. ಹಾಗಾಗಿ ತೊಗರಿ ಮಾರುವವರು private ನಲ್ಲಿ ಮಾರಾಟ ಮಾಡಿಕೊಂಡು ಹೋದರು. ರೈತರಿಗೆ

5400, 5200 ರೇಟ್ ಸಿಕ್ಕಿದೆ. ನೀವು ಕೃಷಿ ಬೆಲೆ ಆಯೋಗದ ಶಿಫಾರಸ್ಸಿನಂತೆ ರೇಟ್ ಫಿಕ್ಸ್ ಮಾಡಿದ್ದರೆ ಇವತ್ತು ರೈತರಿಗೆ ಸರಾಸರಿ 5950 ರೂ.ಗಳು ಸಿಗುತ್ತಿತ್ತು. ಕನಿಷ್ಠ 6000 ರೂ.ಗಳ ಬೆಂಬಲ ಬೆಲೆ ಸಿಗುತ್ತಿತ್ತು. ನಿಮ್ಮ procurement ಕೂಡ ಜಾಸ್ತಿ ಆಗುತ್ತಿತ್ತು. ಮುಂದಿನ ವರ್ಷ ತೊಗರಿ ಬೆಳೆ ಬೆಳೆಯುವ ಪ್ರದೇಶ ಕೂಡ ಜಾಸ್ತಿ ಆಗುತ್ತಿತ್ತು. ಇವತ್ತು ತೊಗರಿ ಬೆಳೆಯುವುದನ್ನು ಕೈಬಿಡುವಂಥ ಪರಿಸ್ಥಿತಿಗೆ ರೈತರು ಬಂದಿದ್ದಾರೆ. ಇದಕ್ಕೆ ನೀವು ಆವರ್ತನಿಧಿ ಎಂದು ಹೇಳಿದಿರಿ ಇದು 100 ಕೋಟಿ ರೂ.ಗಳಲ್ಲಿ ಆಗುವುದಿಲ್ಲ. ಇದಕ್ಕೆ 5000 ಕೋಟಿ ರೂ.ಗಳ ಆವರ್ತನಿಧಿ ಮಾಡಿ. ನೀವು ಒಂದು mechanism ಅನ್ನು set up ಮಾಡಿ. ಕೃಷಿ ಬೆಲೆ ಆಯೋಗ ಯಾವ್ಯಾವ ಬೆಳೆಗಳಿಗೆ ಶಿಫಾರಸ್ಸು ಮಾಡುತ್ತದೆ. ಆ ಶಿಫಾರಸ್ಸು ಮಾಡಿದ ಆಧಾರದ ಮೇಲೆ ನಿಮ್ಮ ಹತ್ತಿರ ಎಷ್ಟು ಹಣ ಇದೆ ಆ ಹಣದ ಲಭ್ಯತೆಯ ಆಧಾರದ ಮೇಲೆ ಯಾವ್ಯಾವ ಬೆಳೆಗಳಿಗೆ ಎಷ್ಟೆಷ್ಟು ಬೆಂಬಲ ಬೆಲೆ ಕೊಟ್ಟು ಖರೀದಿ ಮಾಡಬೇಕು. 5000 ಕೋಟಿ ರೂ.ಗಳನ್ನು ಆವರ್ತನಿಧಿಗೆ ಇಟ್ಟರೆ ಮಾತ್ರ mechanism ಆಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಮತ್ತೆ ಈ poultry ಲಾಬಿ ಅವರು ಜಾಸ್ತಿ ಲಾಭ ಮಾಡಿಕೊಂಡು ಹೋಗುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಒಂದು ನಿಮಿಷ ಪಾಟೀಲರೆ, ತಾವು ಭಾಷಣ ಮಾಡುವುದಕ್ಕಾಗಿ ಹೇಳುತ್ತೀರೆಂದರೆ ನನ್ನದೇನು ಆಕ್ಷೇಪಣೆ ಇಲ್ಲ.

ಶ್ರೀ ಬಿ.ಆರ್. ಪಾಟೀಲ್: ನನಗೆ ಭಾಷಣ ಮಾಡುವ ಚಟ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಆದರೆ ತಾವು ಹೇಳುವಷ್ಟು ಸರ್ಕಾರದಿಂದ ಆಗಬೇಕಲ್ಲ. ನಾನು ಏಕೆ ಹೇಳುತ್ತೇನೆಂದರೆ, ನಿಮ್ಮ ಸಲಹೆ ಒಳ್ಳೆಯದು. ಆದರೆ ನೀವು 5000 ಕೋಟಿ ರೂ.ಗಳನ್ನು ಮಾಡಿ ಎಂದರೆ ಎಲ್ಲಿಂದ ಹಣ ತರುತ್ತೀರಿ. 2000 ಕೋಟಿ ರೂ.ಗಳು ಎಂದರೆ ಸರ್ಕಾರ..

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಹೋದ ವರ್ಷ ಮಾನ್ಯ ಸಚಿವರು 1000 ಕೋಟಿ ರೂ.ಗಳನ್ನು ಇಟ್ಟಮೇಲೆ ಪೂರ್ತಿ ಖರ್ಚು ಮಾಡಿದರೂ ಸಹ ನಿಮಗೆ ದುಡ್ಡು ಸಾಕಾಗಲಿಲ್ಲ,. ನಿಮಗೆ ದುಡ್ಡು ಕಡಿಮೆ ಬಿದ್ದಿದೆ. ತೊಗರಿ ಮಾರುಕಟ್ಟೆಗೆ ಏನು ಬಂತು ಸಂಪೂರ್ಣವಾಗಿ ಅದನ್ನು ನೀವು ಖರೀದಿ ಮಾಡಿದ್ದರೆ ನಿಮಗೆ ಈ ದುಡ್ಡು ಸಾಕಾಗುತ್ತಿರಲಿಲ್ಲ. ಅದಕ್ಕಾಗಿ ಒಂದು mechanism ಅನ್ನು set up ಮಾಡಿ. ಕೃಷಿ ಬೆಲೆ ಆಯೋಗ ಮಾಡಿದಿರಿ, ಬಹಳ ಸಂತೋಷ. ರೈತರಿಗೆ ಬೆಂಬಲ ಬೆಲೆ ಸಿಗಬೇಕು. ಬೆಲೆ ಸಿಗಬೇಕಾದರೆ ಹಣದ ಲಭ್ಯತೆ ಇರಬೇಕಲ್ಲವೆ? ಈ mechanism set up ಆಗಿಲ್ಲ. ಕೃಷಿ ಬೆಲೆ ಆಯೋಗದವರು ಬಹಳ ವಿಷಯಗಳ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಎಷ್ಟು ಶಿಫಾರಸ್ಸುಗಳನ್ನು ತಾವು ಒಪ್ಪಿಕೊಂಡಿದ್ದೀರಿ. ಇಲ್ಲದಿದ್ದರೆ ಕೃಷಿ ಬೆಲೆ ಆಯೋಗ ಏಕೆ ಮಾಡಿದಿರಿ. ಕೃಷಿ ಬೆಲೆ ಆಯೋಗ ಮಾಡಿದ್ದೇವೆಂದು ಇಷ್ಟು ಪ್ರಚಾರ ಪಡೆದು ಕೃಷಿ ಬೆಲೆ ಆಯೋಗದವರು ಅನೇಕ ಶಿಫಾರಸ್ಸುಗಳನ್ನು ಮಾಡಿದರೂ ಕೂಡ ನೀವು ಶಿಫಾರಸ್ಸುಗಳನ್ನು ಒಪ್ಪದೆ ಬರೀ ಅದರ ಪ್ರಚಾರ ಮಾಡಿದರೆ ರೈತರಿಗೆ ಅದರಿಂದ ಏನು ಲಾಭವಾಗಲಿಲ್ಲ. ಅದಕ್ಕಾಗಿ ದಯಮಾಡಿ ಉತ್ಪಾದನೆ ಜಾಸ್ತಿ ಆಗಬೇಕು, ಶೇಖರಣೆ ಆಗಬೇಕು ಮತ್ತು ಅದಕ್ಕೆ ಯೋಗ್ಯವಾದ ಬೆಲೆ ಸಿಗಬೇಕು. ಈ mechanism ನಿಮಗೆ set up ಆಗಬೇಕಾದರೆ ಆವರ್ತನಿಧಿಗೆ ನೀವು 5000 ಕೋಟಿ ರೂ.ಗಳನ್ನು ತೆಗೆದಿಟ್ಟರೆ ಇಡೀ ಕೃಷಿ ವಲಯ ರಕ್ಷಣೆಗೆ ಒಳಗಾಗುತ್ತದೆ. ತಮ್ಮ ಒಟ್ಟು ಬಜೆಟ್ 1.38 ಲಕ್ಷ ಕೋಟಿ ರೂ.ಗಳು. ಕೃಷಿ ಅತ್ಯಂತ ದೊಡ್ಡ ವಲಯ ಇದಕ್ಕೆ ನೀವು 5000 ಕೋಟಿ ರೂ.ಗಳನ್ನು ಆವರ್ತನಿಧಿಗೆ ಇಡದೇ ಹೋದರೆ ಇವೆಲ್ಲವನ್ನು ಹೇಗೆ ಇಟ್ಟುಕೊಂಡು ರಕ್ಷಣೆ ಮಾಡುತ್ತೀರಿ, ಈ ಹಣದಲ್ಲಿ ಸಾಧ್ಯವಿಲ್ಲ. ಇವತ್ತು ಸರ್ಕಾರದವರು ಏನು ಆಹಾರದ ಒಂದು crisis ಇದೆ ಇದನ್ನು ಬಗೆಹರಿಸಬೇಕಾದರೆ ಒಂದು ದಿಡ್ಡವಾದಂಥ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಹೆಚ್.ಕೆ. ಪಾಟೀಲರು ಬಂದರು ಬಹಳ ಸಂತೋಷವಾಯಿತು. ಈಗ ಕುಡಿಯುವ ನೀರಿನ ಸಮಸ್ಯೆ, ಬಜೆಟ್‌ನಲ್ಲಿ ಈಗ

ತಾವು ಎಷ್ಟೆಷ್ಟು ಅನುದಾನವನ್ನು ಸರ್ಕಾರದವರು ಕೊಡುತ್ತೀರಿ ಯಾವ್ಯಾವುದಕ್ಕೆ ಖರ್ಚು ಮಾಡುತ್ತೀರಿ ಎನ್ನುವುದನ್ನು ನಾವು ಕಾದು ನೋಡುತ್ತಿದ್ದೇನೆ. ಆದರೆ ತಾವು ಬಹಳ ಆತ್ಮವಿಶ್ವಾಸದಿಂದ ಹೇಳುತ್ತೀರಿ. ಈ ವರ್ಷ ಎಲ್ಲರಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ, ಸರ್ಕಾರ ಎಂದ ಮೇಲೆ ಮಾಡಬೇಕು ಅದು ಸರ್ಕಾರದ ಜವಾಬ್ದಾರಿ ತಮ್ಮ ಕರ್ತವ್ಯವನ್ನು ತಾವು ಮಾಡಿ. ಆದರೆ ನನ್ನ ಆತಂಕ ಏನೆಂದರೆ, ಪ್ರತಿ ವರ್ಷ recurring expenditure 2000 ಕೋಟಿ ರೂ.ಗಳನ್ನು ನಾವು ಕುಡಿಯುವ ನೀರಿನ ವ್ಯವಸ್ಥೆಗೋಸ್ಕರ ಮಾಡುತ್ತೇವೆ. I may be wrong or right. ಇದನ್ನು ವರ್ಷವು ಖರ್ಚು ಮಾಡುತ್ತೇವೆ. ಇದು ಬರೀ ಒಂದು ವರ್ಷದ್ದು ಅಲ್ಲ. ಇದು ಪ್ರತಿ ವರ್ಷ ಜಾಸ್ತಿ ಆಗುತ್ತಿದೆ. ಏಕೆಂದರೆ, ಮಾರ್ಚ್‌ನಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ Task Force Committee meeting ನಲ್ಲಿ ಸೇರುತ್ತೇವೆ. ಏನಾದರೂ ಮಾಡಿ ನೀರಿನ್ನು ಸರ್ಕಾರ ಕೊಡಬೇಕು. ತಾವು ದುಡ್ಡು ಕೊಡುವುದಕ್ಕೆ ತಯಾರಾಗಿದ್ದೀರಿ ಕೊಡುತ್ತೇವೆ. ಆದರೆ ಎಷ್ಟು ವರ್ಷದಿಂದ ಸರ್ಕಾರದ ಖಜಾನೆಯಿಂದ ದುಡ್ಡು ಕೊಟ್ಟು ಈ ತರಹ ಸಂಘರ್ಷವನ್ನು ಮಾಡುವುದು. Ground water ಇವತ್ತು ಇಲ್ಲ. ಈ ಅಂತರ್ಜಲ ಮಟ್ಟವನ್ನು ನಾವು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಪಡುವುದಿಲ್ಲವೋ? ಅಲ್ಲಿಯವರೆಗೆ ನೀವು ಕುಡಿಯುವುದಕ್ಕೆ ನೀರು ಕೊಡುವುದಕ್ಕೆ ಸಾಧ್ಯತೆಗಳು ಇಲ್ಲ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ನನ್ನ ಹತ್ತಿರ ಮೊನ್ನೆ ವೈಜ್ಞಾನಿಕವಾಗಿ ಲೆಕ್ಕ ಕೂಡ ಹೇಳುತ್ತಿದ್ದರು. ಶೇಕಡಾ 100 ರಷ್ಟು ನೀರಿನಲ್ಲಿ 97% ನೀರು ಸರೋವರದಲ್ಲಿದೆ. ಒಂದು ಅಂಶ ಅಂತರ್ಜಲ ಇದೆ, ಒಂದು ಅಂಶ surface water ಇದೆ, ಒಂದು ಅಂಶ ಹವಾಮಾನದಲ್ಲಿದೆ ಎಂದು ತಾವು ಹೇಳಿದಿರಿ.

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ಆವತ್ತು ನಾನು ತಪ್ಪು ಹೇಳಿದೆನೋ ನೀವು ತಪ್ಪು ಕೇಳಿಸಿಕೊಂಡಿರೋ ಗೊತ್ತಿಲ್ಲ. ಒಟ್ಟು ಜಗತ್ತಿನೊಳಗೆ in universe ಎಷ್ಟು ನೀರು ಇದೆ ಅದರೊಳಗೆ 3% ಮಾತ್ರ ಈ ಭೂಮಿ ಮೇಲೆ ಇದೆ. ಸಮುದ್ರ, ನದಿ, ಹಳ್ಳಿಕೊಳ್ಳ, ಬ್ಯಾರೇಜ್, ಡ್ಯಾಂ ಎಲ್ಲಾ ಕೂಡಿ including

underground water, it is only 3%. 97% is in the humidity. Sky whatever you call it. ನಾವು ಇಷ್ಟೆಲ್ಲಾ ಮಂಗಳಯಾನ ಮಾಡಿದ್ದರೂ ಸಹಿತ ಇದರಲ್ಲಿಯೇ 3% ನೀರಿನಲ್ಲಿ ಮಾತ್ರ ಹುಡುಕಾಡುತ್ತಿದ್ದೇವೆ. ಸಿಗುತ್ತಿಲ್ಲ. ಇಷ್ಟು ಕಡಿಮೆ ಆಯಿತು, ಇಷ್ಟು ಜಾಸ್ತಿ ಆಯಿತು. ಮಾನ್ಯ ರಾಯರೆಡ್ಡಿಯವರಿಗೆ ನಮಗೆ ತೀಕ್ಷ್ಣವಾಗಿರತಕ್ಕಂಥ ವಾದ ವಿವಾದ ನಡೆಯುತ್ತಿರುತ್ತದೆ. ಅವರು ನೀರು ಎಲ್ಲಿಂದ ತರುತ್ತೀರಿ ಎನ್ನುತ್ತಾರೆ. ವೈಜ್ಞಾನಿಕವಾಗಿರತಕ್ಕಂಥ ವಾದ. 97% ಏನು ನೀರು ಇದೆ ಅದನ್ನು ನಾವು ಹೇಗೆ harvest ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಗಂಭೀರವಾದ ಚಿಂತನೆ ಆಗಬೇಕಾಗಿದೆ, ವೈಜ್ಞಾನಿಕವಾಗಿ ಆಗಿದೆ. ವಿಜ್ಞಾನಿಗಳು ಸುಮ್ಮನೆ ಕುಳಿತಿದ್ದಾರೆ ಏನು ಆಗಿಲ್ಲ technology ಏನು ಇಲ್ಲವೆಂದು ಇಲ್ಲ. Cloud seeding is so successful in more than 65% countries. ಆದರೆ ಅದನ್ನು ನಮ್ಮ country ಬಳಕೆ ಮಾಡುತ್ತಿಲ್ಲ. ನಾವು ಒಂದೆರಡು ಸಾಲ ಮಾಡಿದ್ದೇವೆ ಅದು ಇರಲಿ. ಅಂತಹ technology ಯನ್ನು ನಾವು argument ನಲ್ಲಿ ಹೇಳುತ್ತಿರುತ್ತೇವೆ. ಆ technology ಇನ್ನು ಅಷ್ಟು viable ಆಗಿಲ್ಲ. Water making.., ನೀರು ತಯಾರು ಮಾಡಬಹುದು ಅಂದರೆ ಸಾಮಾನ್ಯವಾಗಿ ಅದು ಹೇಗೆ ಸಾಧ್ಯವಾಗುತ್ತದೆ ಅದು ದೇವರು ಮಾಡುವ ಕೆಲಸ ಎಂದು ಅನ್ನುತ್ತಾರೆ. ಅದರೆ ವಾಸ್ತವಿಕವಾಗಿ humidity ಮುಖಾಂತರ, atmosphere ಮುಖಾಂತರ ನೀರನ್ನು ತಯಾರು ಮಾಡುವಂಥದ್ದು, ಆದರೆ ಇಲ್ಲಿಯವರೆಗೆ ಏನಿತ್ತು, water ಅನ್ನು condense ಮಾಡಿ ನೀರನ್ನು ಮಾಡುತ್ತಿದ್ದರು. ಅದು ಸ್ವಲ್ಪ costly ಆಗುತ್ತಿತ್ತು. ಈಗ ಆ ನೀರನ್ನು ಸಣ್ಣ machine ನೊಳಗೆ capture ಮಾಡಿ ಒಳಗೆ clouds ಅನ್ನು form ಮಾಡಿ, seeding ಮಾಡಿ ಅದರ ಮೂಲಕ ಇವತ್ತು viable units ಆಗುತ್ತಿವೆ. ಒಂದು ಲೀಟರ್ ನೀರನ್ನು ತಯಾರು ಮಾಡುವಂತಹ ಸಂದರ್ಭದಲ್ಲಿ 60 ಪೈಸೆಗಿಂಥ ಕಡಿಮೆ ಖರ್ಚು ಬರುತ್ತಿದೆ. ಅಂದರೆ ಇವತ್ತಿನ technology, ನಾಳೆ ಇನ್ನೂ ಕಡಿಮೆಯಾಗಬಹುದು. ನಮ್ಮ ಮೊಬೈಲ್ ಬಂದಾಗ ಯಾವ ರೀತಿ ಇತ್ತು ಎಂದು ನೋಡುತ್ತಿದ್ದೆವು. ಈಗ ಅದಕ್ಕಿಂಥ ಕಡಿಮೆ ಆಗಬಹುದು. ಆದ್ದರಿಂದ ಇವೆಲ್ಲಾ ವಾಸ್ತವಿಕ ಪರಿಸ್ಥಿತಿಯ ಹಿನ್ನೆಲೆಯೊಳಗೆ ನಾವು ಯಾರೂ ನೀರಿನ

ಸಲುವಾಗಿ ಗಾಬರಿ, panic ಆಗಬೇಕಾಗಿಲ್ಲ. ಆದರೆ ನಮ್ಮ ಪ್ರಯತ್ನಗಳು, ಶ್ರಮಪಡಬೇಕಾಗಿರುವುದು, ಖರ್ಚು ಮಾಡಬೇಕಾಗಿರುವುದು, ಶಿಸ್ತು ಅಳವಡಿಸಿಕೊಳ್ಳಬೇಕಾಗಿರುವುದನ್ನು ಮಾಡೋಣ.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೆಚ್.ಕೆ. ಪಾಟೀಲ್‌ರವರ ಕನಸು ನನಸಾದರೆ ಬಹಳ ಸಂತೋಷ. ಏಕೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ನೀರಿನ ಸಮಸ್ಯೆ ಬಗ್ಗೆ ಬಹಳ ಆಳವಾಗಿ ಅಧ್ಯಯನ ಮಾಡಿ ಎಲ್ಲೋ ದಾರಿ ತಪ್ಪಿದ್ದಾರೆ ಎಂದು ನನಗಿಸುತ್ತಿದೆ. ನಾವು ಚಿಕ್ಕವರಿದ್ದಾಗ ಈ ನೀರು ಮಾರಾಟವಾಗುತ್ತದೆ ಎನ್ನುವ ಕಲ್ಪನೆಯನ್ನೂ ಮಾಡಿರಲಿಲ್ಲ. ಕುಡಿಯುವ ನೀರು ಮಾರಾಟವಾಗುತ್ತದೆಯೇ ಎಂದು ತಿಳಿದುಕೊಂಡಿದ್ದೆವು. ಇವತ್ತು ಕುಡಿಯುವ ನೀರಿನ ಮಾರಾಟ ಹಳ್ಳಿ ಹಳ್ಳಿಗೂ ಬಂದಿದೆ. ನೀರು ಅದು ಯಾವುದೇ ಬೆಲೆ ಇಲ್ಲದೇ ಎಲ್ಲರಿಗೂ ಕೂಡ ಉಪಲಬ್ಧವಾಗುವಂಥದ್ದು. ಗಾಳಿ, ನೀರು ಬೆಳಕು ಇವೆಲ್ಲಾ ನಿಸರ್ಗ ಕೊಡುವಂತಹ ಒಂದು ಪ್ರಕ್ರಿಯೆ. ಆದರೆ ಇವತ್ತು ನೀರು ಸಿಗುತ್ತಿಲ್ಲ. ನೀರು ಸಿಗದೇ ಇರುವ ಕಾರಣಕ್ಕಾಗಿ ಅನೇಕ ಸಮಸ್ಯೆಗಳನ್ನು ನಾವು ಎದುರಿಸುತ್ತಿದ್ದೇವೆ. ನೀರಿಗಾಗಿ ಅನೇಕ ಗೊಂದಲಗಳು ನಿರ್ಮಾಣವಾಗಿವೆ. ಹಳ್ಳಿಗಳಲ್ಲಿ ತಮಗೆ ಗೊತ್ತಿರಬೇಕು. ನೀರು ಬಂದಾಗ ನಾ ಮುಂದು, ನೀ ಮುಂದು ಎಂದು ಅನೇಕ ಕಡೆ ಹೊಡೆದಾಟ, ಬಡೆದಾಟಗಳು ಆಗಿವೆ. ಜಗಳ ಮಾಡಿರುವುದನ್ನು ಪೊಲೀಸರಿಗೆ ನಾವೇ ಹೇಳುತ್ತೇವೆ. ನೀರಿಗೋಸ್ಕರ ಸಾಮಾನ್ಯವಾಗಿ ಸಮಸ್ಯೆ ಇಲ್ಲ. ಬಹುಶ: ನೀರಿನ ಸಮಸ್ಯೆಯ ಬಗ್ಗೆ ಕೆಲವರೆಲ್ಲಾ ಭವಿಷ್ಯ ನುಡಿದಿದ್ದಾರೆ. ಮುಂದೆ ಯಾವುದಾದರೂ ಮಹಾಯುದ್ಧ ಆದರೆ ಅದು ನೀರಿಗಾಗಿ ಮೂರನೇ ಮಹಾಯುದ್ಧ ಆಗಬಹುದು ಎನ್ನುವ ಒಂದು ಭವಿಷ್ಯವನ್ನು ನುಡಿಯುತ್ತಿದ್ದಾರೆ. ಏಕೆಂದರೆ ನಾವು ಈಗಾಗಲೇ ಅಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ನಮಗೂ ತಮಿಳುನಾಡಿಗೂ ನೀರಿನ ಸಮಸ್ಯೆ ಇದೆ, ನಮಗೂ ಗೋವಾಕ್ಕೂ ಸಮಸ್ಯೆ ಇದೆ, ನಮಗೂ ಆಂಧ್ರಪ್ರದೇಶಕ್ಕೂ ಇದೆ, ನಮಗೂ ಬಾಂಗ್ಲಾದೇಶಕ್ಕೂ ಇದೆ, ಈ ರೀತಿ ನೀರಿನ ಸಮಸ್ಯೆಗಳು ಜಾಗತಿಕವಾಗಿ ಉದ್ಭವವಾದ ಮೇಲೆ, ನಾವೂ ನೀವೆಲ್ಲಾ ಇಸ್ರೇಲ್ ದೇಶಕ್ಕೆ ಹೋಗಿದ್ದೇವೆ. ಮಾನ್ಯ ಸಚಿವರು ನೀರನ್ನು

ಕೊಡಿಸಬೇಕೆನ್ನುವ ಸದುದ್ದೇಶವನ್ನು ಇಟ್ಟುಕೊಂಡಿದ್ದಾರೆ ಅದನ್ನು ನಾವು ಮೆಚ್ಚುತ್ತೇವೆ ಹಾಗೂ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇವೆ. ಆದರೆ ನೀವು ಒಬ್ಬರೆ ನೀರನ್ನು ಕೊಡಿಸುವುದಕ್ಕೆ ಆಗುವುದಿಲ್ಲ. ನಿಮ್ಮ ಜೊತೆ ಅನೇಕ ಜನ ಕೈಗೂಡಿಸಬೇಕಾಗುತ್ತದೆ. ಜಲಾನಯನ ಇಲಾಖೆಯವರು ನಿಮ್ಮ ಜೊತೆ ಬೆಂಬಲಿಸಿ ಕೆಲಸ ಮಾಡಬೇಕಾಗುತ್ತದೆ. ಅರಣ್ಯ ಇಲಾಖೆಯವರು ನಿಮ್ಮ ಜೊತೆ ಇರಬೇಕಾಗುತ್ತದೆ. Mines and Geology Department ನವರು ನಿಮ್ಮ ಜೊತೆ ಇರಬೇಕಾಗುತ್ತದೆ. ಸಣ್ಣ ನೀರಾವರಿ ಇಲಾಖೆ, ಭಾರೀ ಮತ್ತು ಮಧ್ಯಮ ನೀರಾವರಿ ಇಲಾಖೆಗಳು ಇರಬೇಕಾಗುತ್ತದೆ. ಈ ಒಟ್ಟಾರೆ ಎಲ್ಲಾ ಇಲಾಖೆಗಳು ಸೇರಿ ಕುಡಿಯುವುದಕ್ಕೆ ಎಷ್ಟು ನೀರು ಬೇಕು ಮತ್ತು ನೀರಾವರಿಗೆ ನೀರು ಎಷ್ಟು ಬೇಕು ಎಂದು ಒಂದು ಯೋಜನೆಯನ್ನು ಮಾಡಿ. ನೀರಾವರಿಗೆ ನೀರನ್ನು ನಾವು ಎಷ್ಟು ಪ್ರಮಾಣದಲ್ಲಿ ಹೇಗೆ ಉಪಯೋಗ ಮಾಡಬೇಕೆನ್ನುವುದನ್ನು ಯಾವತ್ತೋ ಲೆಕ್ಕ ತಪ್ಪಿದ್ದೇವೆ. ಉದಾಹರಣೆಗೆ ಹೇಳುವುದಾದರೆ, UKP, ನಮ್ಮ ಭಾಗಕ್ಕೆ ಬಹಳ ದೊಡ್ಡ ಯೋಜನೆಯಾಗಿ ಬಂದಿತು. UKP ಯಲ್ಲಿ this is only or the lift irrigation ಎಂದು ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ UKP ಪ್ರಾರಂಭದಲ್ಲಿ violation ಆಯಿತು. Irrigation Department ನವರು ನೋಡಲಿಲ್ಲ. ಈ ಕಡೆ ಕೃಷಿ ಇಲಾಖೆಯವರು ನೋಡಲಿಲ್ಲ. ಕಾಡಾದವರು ನೋಡಲಿಲ್ಲ. ಇವತ್ತು ಇಡೀ ನೀರು ಎಷ್ಟು ಮುಂದೆ ಹರಿದು ಬರಬೇಕಾಗಿತ್ತು, ಅಷ್ಟು ನೀರು ಯಾವತ್ತೂ ಬರುವುದಿಲ್ಲ. ನಾನು ಹೇಳುವ ಉದ್ದೇಶವೇನೆಂದರೆ, ಇವತ್ತು ನೀರಿನ ದುರುಪಯೋಗ ಕೂಡ ಆಗುತ್ತಿದೆ. ನನಗೆ ಒಂದೊಂದು ಬಾರಿ ಅನಿಸುತ್ತದೆ, ಯಾರಾದರೂ ಇಸ್ರೇಲ್‌ನವರು ನಮ್ಮ ದೇಶಕ್ಕೆ ಬಂದರೆ, ಇಲ್ಲಿನ ಪರಿಸ್ಥಿತಿ ನೋಡಿ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅಷ್ಟು ನೀರಿನ misuse ಆಗುತ್ತಿದೆ. Water mechanism ಅನ್ನು set up ಮಾಡದಿದ್ದರೆ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ದಯಮಾಡಿ ಮಾನ್ಯ ಹೆಚ್.ಕೆ. ಪಾಟೀಲ್‌ರವರೆ ತಾವು ಒಂದು ಮಹತ್ವಾಕಾಂಕ್ಷೆ ಯೋಜನೆಯನ್ನು ಹೇಳಿದಿರಿ. ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆರೆಗಳ ಹೂಳನ್ನು ಎತ್ತುವಂಥದ್ದು. ಬಹಳ ಸಂತೋಷ. ನನಗೆ ಬಹಳ

ಖುಷಿಯಾಯಿತು. ಏಕೆಂದರೆ ನಾವು ಅಣ್ಣಾ ಹಜಾರೆಯವರಿಂದ ಪ್ರೇರಣೆ ಪಡೆದುಕೊಂಡು ಬಂದಿದ್ದೇವೆ. ರಾಜೇಂದ್ರಸಿಂಗ್‌ನವರನ್ನು ನೋಡಿ ಪ್ರೇರಣೆ ಪಡೆದುಕೊಂಡು ಬಂದಿದ್ದೇವೆ. ನಾವು ತಾವು ಹೇಳಿದ ಪ್ರಕಾರ ಒಂದು ಪಂಚಾಯಿತಿಯಲ್ಲಿ ಗಾಂಧಿ ಜಯಂತಿ ದಿವಸ ಹೋಗಿ ಗುದ್ದಲಿ ಪೂಜೆ ಮಾಡಿ ಕೆರೆ ಹೂಳು ಎತ್ತುವಂತಹ ಕಾರ್ಯವನ್ನು ಮಾಡಿಕೊಂಡು ಬಂದಿದ್ದೇವೆ. ನಾನು ಪ್ರತಿ ಬಾರಿ ಕೆ.ಡಿ.ಪಿ ಮೀಟಿಂಗ್‌ನಲ್ಲಿ ಎಲ್ಲಾ PDO, ಅಧಿಕಾರಿಗಳನ್ನು ಕೇಳಿದರೆ ಎಲ್ಲಿಯೂ ಕೂಡ ಹೂಳೆತ್ತುವಂತಹ ಕಾರ್ಯ ಪ್ರಗತಿಯಲ್ಲಿ ಇಲ್ಲ. ಆಟದ ಮೈದಾನ ಸ್ವಲ್ಪ ಮಾಡಿದ್ದಾರೆ. ಆದರೆ ನಮಗೆ ಬಹಳ ಮೂಲಭೂತವಾಗಿ ಬೇಕಾದದ್ದು ಯಾವುದು? ಕೆರೆಗಳ ಹೂಳನ್ನು ಎತ್ತುವುದು. ತಾವು ಮಂತ್ರಿಗಳಾಗಿ ಸ್ಪಷ್ಟವಾದಂತಹ ಆದೇಶವನ್ನು ಕೊಟ್ಟರೂ ಕೂಡ ಅಧಿಕಾರಿಗಳು ಈ ಕೆಲಸ ಮಾಡುವುದಿಲ್ಲ. ಏಕೆ ಮಾಡುವುದಿಲ್ಲ? ಬಹುಶ: ಇದರ್ಲಿ ಲಾಭ ಇರುವುದಿಲ್ಲ. ಈ ರೀತಿ ತಾವು ನೀರಿನ ಬಗ್ಗೆ ಏನು ಕಾಳಜಿ ವಹಿಸಿದ್ದೀರಿ ಅದು practical ಆಗಿ ಆಗುತ್ತಿಲ್ಲ. ಬೆಳಗ್ಗೆ ಬಹಳ ಸ್ವಾರಸ್ಯಕರವಾದ ಚರ್ಚೆ ಆಯಿತು ಮಾನ್ಯ ಉಪಾಧ್ಯಕ್ಷರೆ ತಾವು ಇರಲಿಲ್ಲ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಬಹಳ ದೊಡ್ಡ ಕನಸನ್ನು ಕಂಡಿದ್ದಾರೆ. ನಮ್ಮ ಹಳ್ಳಿಗಳಲ್ಲಿ toilet ನಡೆಸುವುದರ ಜೊತೆಗೆ, shower ಮತ್ತು shampoo ಕೊಡುತ್ತೇವೆ ಎಂದು ಹೇಳಿದ್ದೀರಿ ಬಹಳ ಸಂತೋಷ. Shampoo packet, kit ಕೊಡಬಹುದು, shower ಕೊಡಬಹುದು, ನೀರನ್ನು ಎಲ್ಲಿಂದ ಕೊಡುತ್ತೀರಿ? ನೀರು ಇದ್ದರೆ ತಾನೆ shampoo ಹಚ್ಚಿ, shower ನಲ್ಲಿ ತೊಳೆದುಕೊಳ್ಳಬಹುದು, dryer ನಲ್ಲಿ ಒಣಗಿಸಿಕೊಳ್ಳಬಹುದು. ಇಲ್ಲದಿದ್ದರೆ shampoo ಹಚ್ಚಿ ಒಣಗಿಸಿಕೊಳ್ಳಬೇಕಾಗುತ್ತದೆ. ದಯಮಾಡಿ ವಾಸ್ತವಿಕತನವನ್ನು ತಿಳಿದುಕೊಳ್ಳೋಣ. ನೀರಿನ ಸಮಸ್ಯೆಯನ್ನು ಗಂಭೀರವಾಗಿ ಗಮನಿಸದೇ ಹೋದರೆ ಇವತ್ತು ನೀವು ನೀರನ್ನು ಒದಗಿಸಲು ಸಾಧ್ಯವಾಗುವುದಿಲ್ಲ ಮತ್ತು ಪ್ರತಿವರ್ಷ ಕುಡಿಯುವ ನೀರಿಗಾಗಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದರೂ ಸಹ ನಮಗೆ ಆರೋಗ್ಯಕರವಾದ ನೀರನ್ನು ಕೊಡಲು ಸಾಧ್ಯವಿಲ್ಲ. ದಯಮಾಡಿ ಅಂತರ್ಜಲವನ್ನು ಹೆಚ್ಚು ಮಾಡುವಂಥದ್ದು ಮಾಡಬೇಕು.

ಕೇಂದ್ರ ಸರ್ಕಾರದವರು Regulation and Control of Ground Water Act ಎಂದು Model Act ಅನ್ನು ಕಳುಹಿಸಿದೆ. ತಮಗೂ ಗೊತ್ತಿದೆ. ನಮ್ಮ ಕರ್ನಾಟಕ ಸರ್ಕಾರಕ್ಕೂ ಬಂದಿದೆ. ಇವತ್ತಿನವರೆಗೂ ಅದನ್ನು ಸದನದಲ್ಲಿ ತಂದಿಲ್ಲ. ಬೇರೆ ಬೇರೆ ರಾಜ್ಯಸರ್ಕಾರದವರು ಮಾಡಿದ್ದಾರೆ. ಏಕೆ ನಮ್ಮ ಸರ್ಕಾರದವರು Regulation and Control of Ground Water ಎಂದು ಮಾಡಬಾರದು? ಇದನ್ನು ನೀವು ಮಾಡಲೇಬೇಕಾಗುತ್ತದೆ.

**ಉಪಾಧ್ಯಕ್ಷರು:** ಮಾನ್ಯ ಬಿ.ಆರ್. ಪಾಟೀಲ್‌ರವರೆ ಒಂದು ನಿಮಿಷ. ಮಾನ್ಯ ಸಚಿವರೆ, ರಾಜಸ್ಥಾನದಲ್ಲಿ water conservation ಬಗ್ಗೆ ಒಂದು special provision ಅನ್ನು ಮಾಡಿದ್ದಾರೆ. ಅವರು ಏನು ಸಲಹೆ ಮಾಡಿದರು ಆ model ಅನ್ನು ಸ್ವಲ್ಪ adopt ಮಾಡಿ.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಕಾನೂನು ಸಚಿವರು ಕೂಡ ಇಲ್ಲೇ ಇದ್ದಾರೆ. ಒಂದು Act ಇದೆ. ನಾನು ಹಿಂದೆ ಮಾನ್ಯ ಸುರೇಶ್‌ಕುಮಾರ್‌ರವರಿಗೆ ಹೇಳಿದ್ದೆ. ಕೇಂದ್ರ ಸರ್ಕಾರದಿಂದ Regulation and control of Ground Water Act ಎಂದು model act ಬಂದಿದೆ. ಅದನ್ನು ನಮ್ಮ ಸರ್ಕಾರದವರು ಇನ್ನೂ ತಂದಿಲ್ಲ..

**ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ನಾವೂ ಸಹ ಕಾನೂನನ್ನು ತಂದಿದ್ದೇವೆ, ರೂಲ್ಸ್ ಮಾಡಿದ್ದೇವೆ.

**ಶ್ರೀ ಬಿ.ಆರ್. ಪಾಟೀಲ್:** ಆದರೆ ಅವು effective ಆಗಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** ಅದು effective ಅಲ್ಲ. ಅದನ್ನು ಮಾಡುವುದಕ್ಕೆ ಹೋದರೆ ಜನ ಬಡಿಗೆ ಎತ್ತುಕೊಂಡು ಬರುತ್ತಾರೆ ಎಂದು ಎಲ್ಲರೂ ಹೆದರುತ್ತಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ:** ಮಾನ್ಯ ಸಚಿವರೆ, ಸರ್ಕಾರಿ ಆದೇಶ ಹೊರಡಿಸಲಾಗಿದೆ. ಉದಾಹರಣೆಗೆ ಕುಷ್ಟಗಿಯಲ್ಲಿ ಆಗಿದೆ. . . .

**ಶ್ರೀ ಟಿ.ಬಿ. ಜಯಚಂದ್ರ:** ಅದು ಜಾರಿಗೆ ಬಂದಿದೆ. ಜಾರಿಯಲ್ಲಿ ಇಲ್ಲವೆಂದು ಅಲ್ಲ. ಆದರೆ ಅದಕ್ಕೆ ಬಹಳ ವಿರೋಧ ಬರುತ್ತಿದೆ. ಅದೇ problem.

**ಶ್ರೀ ಬಸವರಾಜ ರಾಯರೆಡ್ಡಿ:** ನೀವು ಬೋರ್‌ವೆಲ್ ಹಾಕುವಂತೆಯೇ ಇಲ್ಲ.

**ಶ್ರೀ ಬಿ.ಆರ್. ಪಾಟೀಲ್:** ತಮಗೂ ಅನುಭವವಿದೆ. ಈಗ ಶಾಸಕರುಗಳಿಗೆ ನಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ದೇವರಾಜ ಅರಸು ನಿಗಮದಿಂದ, ಅಂಬೇಡ್ಕರ್ ನಿಗಮದಿಂದ, ಬೇರೆ ಬೇರೆ ಫಲಾನುಭವಿಗಳಿಗೆ ಬೋರ್‌ವೆಲ್ ಹಾಕಿಸಿ, ಪಂಪ್‌ಸೆಟ್ ಹಾಕಿಸಿ ಅವರಿಗೆ ಆರ್ಥಿಕ ಶಕ್ತಿ ಕೊಡಬೇಕು ಎನ್ನುವಂಥದ್ದು. ಆದರೆ ನಾವು ಅಕ್ಕಪಕ್ಕದಲ್ಲಿ ಚಿಕ್ಕಚಿಕ್ಕ ಹುಡುವಳಿದಾರರು ಇರುತ್ತಾರೆ. ಅವರೆಲ್ಲರಿಗೂ ಕೊಟ್ಟುಬಿಡುತ್ತೇವೆ. ಒಂದು ವರ್ಷದಲ್ಲಿ ಎಲ್ಲಾ dry ಆಗುತ್ತದೆ. ನಾವು ಹಾಕಿದಂತಹ ಸರ್ಕಾರದ ದುಡ್ಡೂ ಕೂಡ waste. ಫಲಾನುಭವಿಗಳಿಗೆ ಒಂದು ರೂಪಾಯಿ ಕೂಡ ಲಾಭ ಇಲ್ಲ. ಆದರೆ ನಾವು ವಿಧಾನಸೌಧದಲ್ಲಿ ಸರ್ಕಾರದ ಲೆಕ್ಕದಲ್ಲಿ ನಾವು ಇಷ್ಟು ಜನ ಫಲಾನುಭವಿಗಳಿಗೆ ಇಷ್ಟು ದುಡ್ಡು ಕೊಟ್ಟಿದ್ದೇವೆ, ಇಷ್ಟು ಜನರು ಅದರಲ್ಲಿ ಜೀವನ ಮಾಡುತ್ತಿದ್ದಾರೆ, ಎಂದು ಹೇಳುತ್ತೇವೆ. ವಾಸ್ತವಿಕವಾಗಿ ನೋಡಿದರೆ, ಎಲ್ಲಿಯೂ ground water ಇಲ್ಲ. ನೀವು ಎಷ್ಟು ಮಾಡುವುದಕ್ಕೆ ಸಾಧ್ಯತೆ ಇದೆ? Ground water ಕೊಟ್ಟು ಆರ್ಥಿಕವಾಗಿ ಸಬಲೀಕರಣ ಮಾಡಬಹುದು, ಕುಡಿಯುವುದಕ್ಕೆ ನೀರು ಕೊಡಬಹುದು, ನೀರಾವರಿಗೆ ನೀರು ಕೊಡಬಹುದು. ಆದರೆ ತಾವು ಏನು ಈ ಹವಾಮಾನದಿಂದ ನೀರನ್ನು ಹೀರಿ ಕುಡಿಯುವುದಕ್ಕೆ ನೀರನ್ನು ಕೊಡುತ್ತೇವೆ ಎಂದು ಹೇಳಿದಿರಲ್ಲಾ ಅದು ಅವಾಸ್ತವಿಕವಾಗುತ್ತದೆ. ದಯಮಾಡಿ ಇನ್ನೊಂದು ಬಾರಿ ತಾವು ಚರ್ಚೆ ಮಾಡಿ.

**ಶ್ರೀ ಹೆಚ್.ಕೆ. ಪಾಟೀಲ್:** ಅರ್ಧರ್ಧ ತಿಳಿದುಕೊಳ್ಳಬಾರದು, ಅರ್ಧರ್ಧ ಮಾತನಾಡಬಾರದು.

**ಶ್ರೀ ಬಿ.ಆರ್. ಪಾಟೀಲ್:** ನಾನು ಪೂರ್ತಿ ತಿಳಿದುಕೊಂಡಿದ್ದೇನೆ. ತಾವು ಹೇಳಿದ ಮೇಲೆ ಅನೇಕ ಜನ ಪರಿಸರವಾದಿಗಳ ಜೊತೆಗೆ, ವಿಜ್ಞಾನಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಇದು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

**ಶ್ರೀ ಹೆಚ್.ಕೆ. ಪಾಟೀಲ್:** ನಾನು ಏನು ಕನಸಿನಲ್ಲಿ ಬಂದಿದ್ದನ್ನು ಹೇಳುತ್ತಿದ್ದೇನೆ ಎಂದು ತಾವು ತಿಳಿದುಕೊಂಡಿದ್ದೀರಾ?

**ಶ್ರೀ ಬಿ.ಆರ್. ಪಾಟೀಲ್:** ಇಲ್ಲ. ನಿಮ್ಮ ಪಕ್ಕದಲ್ಲಿ ಕುಳಿತುಕೊಂಡು ಮಾತನಾಡಿದ್ದೇನೆ.

**ಶ್ರೀ ಹೆಚ್.ಕೆ. ಪಾಟೀಲ್:** ರಷ್ಯಾ, ಜಪಾನ್, ಅಮೇರಿಕಾ ದೇಶಕ್ಕೆ ಹೋಗಿ ನೋಡಿ. ಅಲ್ಲಿ ನಾವು sight seeing ಅನ್ನು ಹೋಗಿ ನೋಡುತ್ತೇವೆ. ಇದನ್ನು ನಾವು ನೋಡಬೇಕು. ಅವರು ಇವುಗಳನ್ನು ಮಾಡಿರಲಿಲ್ಲವೆಂದರೆ, ನಮಗೂ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಕೈ ಚೆಲ್ಲಿ ಕುಳಿತುಕೊಳ್ಳುತ್ತಿದ್ದೆವು. ರಷ್ಯಾದ premier ಅನ್ನು ಮೆರವಣಿಗೆಯೊಳಗೆ ತೆಗೆದುಕೊಂಡು ಹೋಗುವ ಮುಂದೆ ಅಲ್ಲಿ ಮಳೆ ಬಹಳ, ಬಂದರೆ ಬಹಳ ಜೋರಾಗಿ ಬರುತ್ತದೆ. ಮಳೆ ಆ 10.ಕಿ.ಮೀ ಏರಿಯಾದೊಳಗೆ ಬರಬಾರದೆಂದು ಅಲ್ಲಿ ಬರಬಹುದಾದಂತಹ ಮಳೆಯನ್ನು 10 ಕಿ.ಮೀ.ನಿಂದ ಆ ಕಡೆ ಮಳೆ ಆಗುವಂತೆ ಮಾಡಿರುತ್ತಾರೆ. ನಿಮಗೆ ಇದೊಂದು ಸಣ್ಣ ಉದಾಹರಣೆ ಕೊಟ್ಟೆ. ಅದಕ್ಕೆ ಇವುಗಳತ್ತ ನಮ್ಮ ಗಮನಹರಿಯಬೇಕಾಗಿದೆ. ದುರ್ದೈವ, ನಿಮ್ಮಂತಹ progressive thinkers ಎಂದು ಏನಿದ್ದೀರಿ, the Lohia time has gone. Now you will have to come with scientific temperament.

**ಶ್ರೀ ಬಿ.ಆರ್. ಪಾಟೀಲ್:** Now Kejriwal time has come.

**ಶ್ರೀ ಹೆಚ್.ಕೆ. ಪಾಟೀಲ್:** ಆ Science ಅನ್ನು technology ಅನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಬಿ.ಆರ್. ಪಾಟೀಲ್:** I am very much relevant to the Scientific approach ನನಗೆ ಬಹಳ ಜನ ಪರಿಸರವಾದಿಗಳ ಜೊತಗೆ ಸಂಪರ್ಕ ಮತ್ತು ಸಂವಾದಗಳನ್ನು ಮಾಡುತ್ತೇನೆ. ಚರ್ಚೆ ಮಾಡುತ್ತೇನೆ. ದಯಮಾಡಿ ತಮಗೆ ರಷ್ಯಾದಲ್ಲಿ....

**ಶ್ರೀ ಬಸವರಾಜ ರಾಯರೆಡ್ಡಿ:** ಮಾನ್ಯ ಪಾಟೀಲ್‌ರವರೆ, some time you have to accept the fictions.

**ಶ್ರೀ ಬಿ.ಆರ್. ಪಾಟೀಲ್:** ಅದೇನೆಂದು ನಮಗೆ ಗೊತ್ತಾಗುವುದಿಲ್ಲ. ಈ fixing ಮತ್ತು fiction ನಮಗೆ ಗೊತ್ತಾಗುವುದಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):** ಆ ಸಂಪತ್ತನ್ನು ನೋಡಿರುತ್ತಾರಲ್ಲಾ, ಹೊರದೇಶದ ಆ ವೈಭವೀಕೃತ ಬದುಕನ್ನು ನೋಡಿರುತ್ತಾರಲ್ಲಾ ಅದು ನಮ್ಮ ದೇಶಕ್ಕೆ ಸಾಧ್ಯವಿಲ್ಲ ಎಂದು ತಾವು ತಿಳಿದುಕೊಂಡಿದ್ದೀರಾ? ಭಾರತದ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಟಿ.ವಿ.ಯನ್ನು ತೆಗೆದುಕೊಂಡು ಬಂದಾಗ ಮತ್ತು ಪ್ರಧಾನ ಮಂತ್ರಿಗಳಾಗಿದ್ದ ದಿ. ರಾಜೀವ್ ಗಾಂಧಿಯವರು ಮೊಬೈಲ್ ಅನ್ನು ತೆಗೆದುಕೊಂಡು ಬಂದಾಗ ಈ ಮೊಬೈಲ್ ಅನ್ನು ಯಾರು ಉಪಯೋಗ ಮಾಡುತ್ತಾರೆ ಇದು ಯಾರಿಗೆ ಇದು ಶ್ರೀಮಂತರಿಗೆ ಉಪಯೋಗವಾಗುತ್ತದೆ ಎಂದರು ಇದು ಹೌದಾ? ಅದೇ ರೀತಿಯಾಗಿ ಬದಲಾವಣೆ ನೀರಿನೊಳಗೆ, ಜನರ ಬದುಕಿನೊಳಗೆ, ಜನರ ಬದುಕಿನ ಗುಣಮಟ್ಟದೊಳಗೆ, ತೋರಿಸಬೇಕಾಗಿರುವುದು ನಮ್ಮ ಮತ್ತು ನಿಮ್ಮ ಕರ್ತವ್ಯವಾಗಿರುತ್ತದೆ.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಹೆಚ್.ಕೆ. ಪಾಟೀಲ್‌ರವರಿಗೆ ಬಹಳ ಪ್ರೀತಿಯಿಂದ ಸ್ನೇಹ ಇದೆ. ಅದು ಬರಿ ತಿರುಕನ ಕನಸು ಆಗಬಾರದು. ಕನಸು ನನಸಾಗುವಂತಹ ಕನಸು ಇರಬೇಕು. ಅದು ತಿರುಕನ ಕನಸು ಆದರೆ ಉಪಯೋಗವಿಲ್ಲ. ತಿರುಕನ ಕನಸಿನ ಬಗ್ಗೆ ಹಾಡು ಹೇಳುತ್ತಿದ್ದವಲ್ಲಾ...

**ಶ್ರೀ ಬಸವರಾಜ ರಾಯರೆಡ್ಡಿ:** ಈಗ ಅದು ನನಸಾಗುತ್ತದೆ. The days are changed. ಅದಕ್ಕೆ ನಾನು ನಿಮಗೆ ಹೇಳಿದ್ದು.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಜಾರ್ಜ್‌ರವರು ಇಲ್ಲಿಯೇ ಇದ್ದಾರೆ. ನಾವೆಲ್ಲರೂ International Youth Festival ಗೆಂದು Russia ಗೆ ಹೋಗಿದ್ದೇವು. ಅವತ್ತು ನಾವು ಮಾಸ್ಕೋ ಸಿಟಿಯಲ್ಲಿ ಜನಸಂಖ್ಯೆ 80 ಲಕ್ಷ ಇದ್ದರು. ಅಲ್ಲಿ 80 ಲಕ್ಷ ಮರಗಳು ಸಹ ಇತ್ತು. ಅಂದರೆ ಪರಿಸರದ ಬಗ್ಗೆ ಎಷ್ಟು balance ಅನ್ನು ಇಡುತ್ತಾರೆ ಎನ್ನುವುದಕ್ಕೆ ಅದೊಂದು ಉದಾಹರಣೆ. ನೀವು ರಷ್ಯಾದ ಉದಾಹರಣೆಯನ್ನು ಇಲ್ಲಿ ಕೊಟ್ಟು ಏನು ಮಾಡುವುದಕ್ಕಾಗುವುದಿಲ್ಲ.

**ಶ್ರೀ ಜೆ.ಟಿ. ಪಾಟೀಲ್:** ಮಾನ್ಯ ಬಿ.ಆರ್. ಪಾಟೀಲ್‌ರವರೆ, ಯಾವುದೇ ಅನುಭವಗಳನ್ನು ಅನುಭವಿಸಲಾರದೆಯೇ ಅದರ ಮೇಲೆ definition ಕೊಡಬಾರದು. ಏಕೆಂದರೆ, ನೀವು ಏನು ಅನುಭವಿಸಿಲ್ಲ ಆ ಬಗ್ಗೆ definition ಕೊಡುವುದಕ್ಕೆ ಹೊರಟಿದ್ದೀರಿ. ಆದರೆ ಅವರು ಕಣ್ಣಾರೆ ನೋಡಿದ್ದಾರೆ ಮತ್ತು ಅನುಭವಿಸಿದ್ದಾರೆ ಅದನ್ನು ಅವರು ಹೇಳುವುದಕ್ಕೆ ಹೊರಟಿದ್ದಾರೆ.

**ಶ್ರೀ ಬಿ.ಆರ್. ಪಾಟೀಲ್:** ನಾವು ಕೂಡ 30–35 ವರ್ಷದಿಂದ ಬಂದಿದ್ದೇವೆ. ನಿಮ್ಮ ಹಾಗೆ ಬಹಳ ಜನರು ವಿಧಾನಸೌಧಕ್ಕೆ ಬರುವುದಕ್ಕೆ ಆಗಿಲ್ಲ. ನಾವು ಅನೇಕ ಸಲ ಸೋಲನ್ನೇ ಉಂಡಿದ್ದೇವೆ. ಆದರೆ ನಮಗೆ ಅನುಭವ ಜಾಸ್ತಿ ಇದೆ.

**ಶ್ರೀ ಹೆಚ್.ಕೆ. ಪಾಟೀಲ್:** ನೀವು ಈ fiction ಈ ಹಳ್ಳಿ ಮಂದಿ ಅವರಿಗೆ ಏನು ಬರುವುದಿಲ್ಲ ಅವರಿಗೆ ಏನು ತಿಳಿಯುತ್ತದೆ ಇದೆಲ್ಲವನ್ನು ಬಿಟ್ಟುಬಿಡಿ. ನಾನು ಒಂದು ಸೆಕೆಂಡ್ ಹೇಳುತ್ತೇನೆ ತಾವು ಕೇಳಿ. ಶುದ್ಧ ಕುಡಿಯುವ ನೀರಿನ ಬಗ್ಗೆ ನಾವೆಲ್ಲರೂ ಆಂದೋಲನವನ್ನು ಪ್ರಾರಂಭ ಮಾಡಿದೆವು. ನಾವು ಹೇಗೆ ಆಂದೋಲನವನ್ನು ಪ್ರಾರಂಭ ಮಾಡಿದೆವು ತಾವು ರಾಜೇಂದ್ರಸಿಂಗ್‌ರವರ ಜೊತೆಯಲ್ಲಿ ಮಾಡಿದ್ದೀರೀ ಹಾಗೆ ಶುದ್ಧ ಕುಡಿಯುವ ನೀರನ್ನು ನಾವು ಜನರಿಗೆ ಕೊಡಬೇಕು. ಪ್ರಧಾನಮಂತ್ರಿಯವರು ಕುಡಿಯುವ

ನೀಇನ ಗುಣಮಟ್ಟದ, ಚಲನಚಿತ್ರನಟರಾದ ಅಮಿತಾಬಚ್ಚನ್ ಮತ್ತು ಐಶ್ವರ್ಯರೈ ಕುಡಿಯುವ ನೀರನ್ನು, ಕ್ರಿಕೆಟ್ ಆಟಗಾರನಾದ ಶ್ರೀ ಸಚಿನ್ ತೆಂಡಲ್ಕೂರ್‌ರವರು ಕುಡಿಯುವ ನೀರನ್ನು ನಮ್ಮ ರೋಷನ್ ಬೇಗ್ ಸಾಹೇಬರವರು ಕುಡಿಯುವ ನೀರನ್ನು ಆ ಗುಣಮಟ್ಟದ ನೀರನ್ನು ನಾವು ಜನರಿಗೆ ಮುಟ್ಟಿಸಬೇಕೆಂದು ಮಾತನಾಡಿದ್ದೇವೆ. ಇವತ್ತು it has become a reality. Why? Because of technology, because of the commitment of the Government ನಾವು 2500 ಹಳ್ಳಿಗಳಿಗೆ ಮುಟ್ಟಿಸಿರಬಹುದು. ಅದನ್ನು ನಾವು ಎಲ್ಲಾ ಹಳ್ಳಿಗಳಿಗೂ ಮುಟ್ಟಿಸಬೇಕು. ಆ ಕಡೆಗೆ ನಮ್ಮ ಶ್ರಮ ಇರಬೇಕು. ಶುದ್ಧ ನೀರು ಏನು ಇದು ಹಳ್ಳಿಗರಿಗೆ ಸಾಧ್ಯವಿಲ್ಲ ಎನ್ನುವುದು ಇತ್ತು ಇವತ್ತು ಎರಡು ವರ್ಗ ಸೃಷ್ಟಿಯಾಗಿದೆ. ಮಾನ್ಯ ಬಿ.ಆರ್. ಪಾಟೀಲ್‌ರವರೆ ತಾವು socialist ಇದನ್ನು ತಾವು ಗಮನಿಸಬೇಕು. ನಮಗೆ ಗೊತ್ತಿದೆಯೋ ಇಲ್ಲವೋ ಈ ಶುದ್ಧ ನೀರನ್ನು ಕುಡಿಯುವವರು ಒಂದು ವರ್ಗವಾದರೆ ಅದು ಶ್ರೀಮಂತರ ವರ್ಗ, ಅಧಿಕಾರದಲ್ಲಿರುವವರು, ಅವಕಾಶದಲ್ಲಿರುವವರು, ಈ ಒಂದು ವರ್ಗ. ಅವರುಗಳು ಶುದ್ಧವಾದ ನೀರನ್ನೇ ಕುಡಿಯುತ್ತಾರೆ. ಇನ್ನೊಂದು ಹಳ್ಳಿಯಲ್ಲಿರುವಂತಹ ದುಡಿಯುವ ವರ್ಗ ಇದೆಯಲ್ಲಾ ಅವರು ಯಾವ ನೀರನ್ನು ಕುಡಿಯುತ್ತಾರೆ? ಹರವಿ ನೀರು, ಹೊಂಡದ ನೀರು ಕುಡಿಯುತ್ತಾರೆ ಹಳ್ಳದ ನೀರು ಕುಡಿಯುತ್ತಾರೆ, ಕೆರೆಯ ನೀರನ್ನು ಕುಡಿಯುತ್ತಾರೆ. ನಮ್ಮ ನವಲಗುಂದ ನರಗುಂದ ಮತ್ತು ಸವದತ್ತಿಯ ಕಡೆಗೆ ಬನ್ನಿ ಆ ನೀರಿನೊಳಗಡೆ ಹೀಗೆ ಕೈ ಹಿಡಿದರೆ ಆ ನೀರಿನಲ್ಲಿ ಹುಳ ಇರುತ್ತದೆ. ಈ ಬಗ್ಗೆ ನಿಮಗೆ ಗೊತ್ತಿದೆ. ಆ ಕೆರೆಯ ನೀರನ್ನು ಕುಡಿಯುವವರಿಗೆ ನಾರನ್ನು ಹಾಕಿದ್ದವಾ, ಆ ನಾರನ್ನು ಕಡ್ಡಿಗೆ ಸುತ್ತಿಕೊಂಡು ಹೋಗುತ್ತಿದ್ದೇವು ಅದೇ ಕಾಲಿನಲ್ಲಿಯೇ ಕೆರೆಗೆ ಹೋಗುತ್ತಿದ್ದರು ಇದು ಹೌದೋ ಅಲ್ಲವೋ? ಅಂತಹ ಒಂದು ವರ್ಗ ಐತೇ. ಆ ವರ್ಗ ಮತ್ತು ಈ ವರ್ಗ ಎಂದು ಎರಡು ವರ್ಗಗಳು ಆಗಿದೆ. ಇವತ್ತು ಶ್ರೀಮಂತ ಮತ್ತು ಬಡವ ಎಂದು ಇಲ್ಲ. ಶುದ್ಧ ನೀರು ಕುಡಿಯುವವನು ಒಬ್ಬ, ಅಶುದ್ಧವಾದ ಕಚ್ಚಾ ನೀರನ್ನು ಕುಡಿಯುವವ ಇನ್ನೊಬ್ಬ ಕಚ್ಚಾ ನೀರು ಕುಡಿಯುವವನು ಏನು ಇದ್ದಾನೆ ಅವನಿಗೆ ಶುದ್ಧ ನೀರು ಕುಡಿಸುವಂತಹ

ಜವಾಬ್ದಾರಿ ಈ ಸದನಕ್ಕೆ ಇದೆ. ನನ್ನ ಮೇಲೆ ಎಷ್ಟು ಜವಾಬ್ದಾರಿ ಇದೆ ಅದಕ್ಕಿಂತ ಹೆಚ್ಚು ನಿಮ್ಮ ಮೇಲೆ ಇದೆ. ಈ ಸದನ ಮತ್ತು ಈ ಸರ್ಕಾರ ಜನರ ಮೇಲೆ ಇದೆ.

**ಶ್ರೀ ಬಿ.ಆರ್. ಪಾಟೀಲ್:** ಬಹಳ ಸಂತೋಷ.

**ಉಪಾಧ್ಯಕ್ಷರು:** ಮಾನ್ಯ ಪಾಟೀಲ್‌ರವರೆ ತಾವು conclude ಮಾಡಿ ಈಗ ಬಹಳ ಟೈಮ್ ಆಗಿದೆ. ನಾನು ಬೇರೆಯವರು ಮಾತನಾಡುವುದಕ್ಕೆ ಕರೆಯಬೇಕಾಗಿದೆ.

**ಶ್ರೀ ಬಿ.ಆರ್. ಪಾಟೀಲ್:** ನಾನು ಒಂದೇ ಒಂದು ಮಾತನ್ನು ಹೇಳಬೇಕಾಗುತ್ತದೆ. ನಾವು ಹೋದ ವರ್ಷ ಬೇಸಿಗೆಯಲ್ಲಿ ಏನು ಟ್ಯಾಂಕರ್‌ಗಳಲ್ಲಿ ನೀರು ಕೊಟ್ಟಿದ್ದೇವೆ ಅದೇ ದುಡ್ಡನ್ನು ಮೊನ್ನೆ ಮೊನ್ನೆಯವರೆವಿಗೂ ತಾವು ಕೊಟ್ಟಿದ್ದೀರಿ. ತಾವು ಈಗ ರಷ್ಯಾದ ಮಾತನ್ನು ಹೇಳುತ್ತಿದ್ದೀರಿ.

**ಶ್ರೀ ಹೆಚ್.ಕೆ. ಪಾಟೀಲ್:** Bogus Tanker bill ಕೊಟ್ಟಿರುವವರಿಗೆ ಕೊಟ್ಟಿರುವುದಿಲ್ಲ. ಆದರೆ ...

**ಶ್ರೀ ಬಿ.ಆರ್. ಪಾಟೀಲ್:** Task Force ನ ಅಧ್ಯಕ್ಷರಾಗಿ ಕೆಲಸ ಮಾಡಿದ್ದೇವೆ. ನಾವು ಮಾಡಿರುವುದನ್ನು scrutiny ಮಾಡುವುದಕ್ಕೆ ನಿಮಗೆ ಅನುಮಾನವೇ? ಹಾಗಾದರೆ ನಾವು ಅಪ್ರಾಮಾಣಿಕರೇ?

**ಶ್ರೀ ಹೆಚ್.ಕೆ. ಪಾಟೀಲ್:** Task Force ನವರು ಏನು recommend ಮಾಡಿದ್ದೀರಿ ಅ ಎಲ್ಲಾ ಬಿಲ್ಲುಗಳನ್ನು ಚುಕ್ತಾ ಮಾಡಲಾಗಿದೆ. ಬೇಕಾದರೆ ಈ ಬಗ್ಗೆ ತಾವು ಚೆಕ್ ಮಾಡಿಕೊಳ್ಳಿ.

**ಶ್ರೀ ಬಿ.ಆರ್. ಪಾಟೀಲ್:** ತಾವು ಅಮೇರಿಕಾದ ಬಗ್ಗೆ ಮಾತನ್ನು ಹೇಳಿದರೆ ಇಲ್ಲಿ ನಾವು ಹೋದ ವರ್ಷ ಟ್ಯಾಂಕರ್ ಮೂಲಕ ನೀರು ಕೊಟ್ಟಿರುವುದಕ್ಕೆ ಹಣವನ್ನು ನೀವು ಮೊನ್ನೆಯವರೆವಿಗೂ ಕೊಟ್ಟಿರುವುದಿಲ್ಲ. ದಯಮಾಡಿ ವಾಸ್ತವಿಕತೆಯ ಬಗ್ಗೆ ಮಾತನಾಡೋಣ. ತಾವು ಏನು

ತಂತ್ರಜ್ಞಾನವನ್ನು ತರಬೇಕೆಂದು ಹೇಳುತ್ತಿದ್ದೀರಿ ಸಂತೋಷ. ಆದರೆ ecological imbalance ಆದರೆ ಬಹಳ ದೊಡ್ಡ ಅನಾಹುತವಾಗುತ್ತದೆ. ನೀವು ನಮ್ಮ ಸಮಸ್ಸೆಗಳಿಗೆ ಪರಿಹಾರವನ್ನು ಕೇವಲ ತಂತ್ರಜ್ಞಾನದ ಮುಖಾಂತರ ಹೇಳಿದರೆ ಆಗುವುದಿಲ್ಲ. ಈ ನಿಸರ್ಗದ ಸಮತೋಲನವನ್ನು ನಾವು ಕಾಪಾಡಿಕೊಳ್ಳಬೇಕಾಗುತ್ತದೆ.

**ಉಪಾಧ್ಯಕ್ಷರು:** ಮಾನ್ಯ ಪಾಟೀಲ್‌ರವರೆ ತಾವು ಒಂದು ನಿಮಿಷ ಕೇಳಿ. ತಾವು ಇನ್ನು 5 ನಿಮಿಷದಲ್ಲಿ ಚರ್ಚೆಯನ್ನು ಮುಗಿಸಬೇಕು.

**ಶ್ರೀ ಬಿ.ಆರ್. ಪಾಟೀಲ್:** Yes Sir. ನಿಸರ್ಗದ ಸಮತೋಲನವನ್ನು ಸಹ ಕಾಪಾಡಬೇಕಾಗುತ್ತದೆ. ತಾವು ನಮ್ಮೆಲ್ಲರನ್ನು training ಗೆ ಕರೆದಿದ್ದೀರಿ. Nature will provide need, not greed ಎಂದು ಅಲ್ಲಿ ಒಂದು ಬೋರ್ಡ್ ಅನ್ನು ಹಾಕಿದ್ದೀರಿ. ಈ ಮಾತನ್ನು ಮಹಾತ್ಮಾ ಗಾಂಧೀಜಿಯವರು ಹೇಳಿದ್ದರು. ನೀವು ಇವತ್ತಿನದಿವಸ ನಿಸರ್ಗದ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಮೊನ್ನೆ ಮೊನ್ನೆ ಆಲಿಕಲ್ಲು ಮಳೆ ಬಿದ್ದು ಅತಿವೃಷ್ಟಿ ಅನಾವೃಷ್ಟಿ ecological imbalance ಕೂಡ ನಾವು ಎದುರಿಸಬೇಕಾಗುತ್ತದೆ. ಅದಕ್ಕೆ ಸರ್ಕಾರ ಏನು ಮಾಡುವುದಕ್ಕಾಗುವುದಿಲ್ಲ. ತಾವು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಈ ಸದನದಲ್ಲಿ Minor Irrigation ಮಂತ್ರಿಗಳು ಇಲ್ಲ. ಅವರಿಗೆ 900 ಕೋಟಿ ರೂಪಾಯಿಗಳನ್ನು ಕೇಳಿದ್ದರು. ಮಾನ್ಯ ಮುಖ್ಯಮಂತ್ರಿಯವರು ದೆಹಲಿಗೆ ಬಂದಾಗ ನಾನು ಅವರನ್ನು ಸಹಜವಾಗಿ ಭೇಟಿಗೆ ಹೋದಾಗ ನಮ್ಮ ರಾಜ್ಯದ ಒಬ್ಬ Senior IAS Officer ಇವತ್ತು Water Resources Minister ಯಲ್ಲಿದ್ದಾರೆ. ಅವರು ಒಂದು ಸೌಜನ್ಯದ ಭೇಟಿ ಮಾಡಿದರು. ಅವರು ಬಂದಾಗ accelerated irrigation programme ಕೇಂದ್ರದಿಂದ ಸಾಕಷ್ಟು ಹಣವನ್ನು ಕೊಡುತ್ತೇವೆ. ದಯಮಾಡಿ ತಾವು budget ನಲ್ಲಿ project ಮಾಡಿ ಕೇಂದ್ರಕ್ಕೆ ಸಲ್ಲಿಸಿ ನಾವು ಎಷ್ಟು ದುಡ್ಡಾದರೂ ಸಹ ಕೊಡುತ್ತೇವೆ ನಮ್ಮ ಹತ್ತಿರ ದುಡ್ಡಿನ ಲಭ್ಯತೆ ಇದೆ ಎಂದು ಹೇಳಿದರು. Minor Irrigation ನವರು ಹೋದ ಸಾರಿ ಸುಮಾರು 900 ಕೋಟಿ ರೂಪಾಯಿಗಳನ್ನು ಕೇಳಿದ್ದರು. ಅವರಿಗೆ ಕೇವಲ 200 ಕೋಟಿ

ರೂಪಾಯಿಗಳನ್ನು ಮಾತ್ರ ಕೊಟ್ಟರು. ಏಕೇ ನೀವು ಕೇಂದ್ರದವರು 75% ಕೊಡುತ್ತಾರೆ ನೀವು 25% ಹಾಕಿ ಎಲ್ಲೆಲ್ಲಿ ಕೆರೆಗಳು ಆಗುತ್ತವೆ, ಕೆರೆಕಟ್ಟೆ, ಡ್ಯಾಂಗಳು, ಎಲ್ಲವನ್ನು ನೀವು ಮಾಡಿಕೊಳ್ಳಿ ಇದರಿಂದಾಗಿ ಅಂತರ್ಜಲ ಹೆಚ್ಚಾಗುತ್ತದೆ. ಕುಡಿಯುವುದಕ್ಕೆ ನೀರು ಹೆಚ್ಚಾಗುತ್ತದೆ, ಒಕ್ಕಲುತನಕ್ಕೆ ನೀರು ಹೆಚ್ಚಿಗೆ ಆಗುತ್ತದೆ. ಇದರಿಂದಾಗಿ ಉತ್ಪಾದನೆಯ ಸಹ ಜಾಸ್ತಿಯಾಗುತ್ತದೆ. ಈ mechanism ಅನ್ನು ನೀವು ಮಾಡದೆ ಹೋದರೆ ನೀವು ನೀರನ್ನು ಕುಡಿಸುವುದಕ್ಕಾಗುವುದಿಲ್ಲ ಮತ್ತು ಕೃಷಿಯನ್ನು ಸಹ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಅಂತಹ ಗಂಭೀರವಾದ ಸಮಸ್ಯೆಗೆ ತಾವು ಗಮನಹರಿಸಬೇಕೆಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ಹೇಳುವುದಾದರೆ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ನಾವೆಲ್ಲರೂ ನಾನು ಮತ್ತು ಬಸವರಾಜ ರಾಯರೆಡ್ಡಿಯವರು ಸೇರಿ ಮೊನ್ನೆ ದಿವಸ Board meeting ಸೇರಿದ್ದೇವು. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರು ಸಂತೋಷ. ಮಾನ್ಯ ಮುಖ್ಯಮಂತ್ರಿಗಳೆ, ಈಗ ನಾನು ಕೊನೆ ವಿಷಯವನ್ನು ಹೇಳುವುದಕ್ಕೆ ಬಂದಿದ್ದೇನೆ. ಮಾನ್ಯ ರೋಷನ್ ಬೇಗ್ ಸಹೇಬರೆ, ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇದಕ್ಕಾಗಿ ಸರ್ಕಾರದಿಂದ ಅನುದಾನವನ್ನು ಕೊಡುತ್ತಿದ್ದೀರಿ. ಅಲ್ಲಿ ಕೆಲಸ ನಡೆಯುತ್ತಿದೆ ಆದರೆ ಆಡಳಿತ ಮಂಡಳಿಯು ಇದೆಯಲ್ಲಾ ಅದರ ಅಧ್ಯಕ್ಷರು, ಕಾರ್ಯದರ್ಶಿ ಈ ಸಂಬಂಧ ಡಾ|| ಎ.ಬಿ. ಮಾಲಕರೆಡ್ಡಿಯವರು ತಮ್ಮ ಅನುಭವದ ಮಾತನ್ನು ಹೇಳಿದರು. ಯಾರ್‍ಯಾರು ಅವರು ಆರೋಗ್ಯ ಸಚಿವರಾಗಿದ್ದಾಗ ಒಂದು ಪ್ರತ್ಯೇಕ ರಾಜ್ಯದ secretary ಗಳಾಗಿದ್ದರು ಅವರೆಲ್ಲರೂ ಬಹುಶ: ಈಗ dictator ಗಳಾಗಿರುತ್ತಾರಂತೆ. ನೀವು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದ್ದೀರಿ. ಈಗಲೂ ಕೂಡ ನಮ್ಮ HKRDB Secretary ಅವರು ಎಲ್ಲಾ plan ಅನ್ನು ರೆಡಿಮಾಡಿಕೊಂಡು ಬರುತ್ತಾರೆ. ನಮ್ಮ ಅಧ್ಯಕ್ಷರು ಬಹಳ ಉತ್ತಮರು ಅವರು ಏನು ನೋಡುವುದಿಲ್ಲ ಏನು ಮಾತನಾಡುವುದಿಲ್ಲ ಏನು ಕೇಳುವುದಿಲ್ಲ, ಏನು ಮಾಡುವುದಿಲ್ಲ. ಅಂತಹವರನ್ನು ಅಧ್ಯಕ್ಷರನ್ನಾಗಿ ಅಲ್ಲಿಗೆ ತಂದು ಕೂರಿಸಿದ್ದೀರಿ. ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ

ಮಂಡಳಿಯ ಅಧ್ಯಕ್ಷರು ನಾವು ಈ ವಿಚಾರಕ್ಕೆ ಸಂಬಂಧಿಸಿದಂತೆ ಏನು ಮಾಡಬೇಕೆಂದು ಸುಸ್ತಾಗಿದ್ದೇವೆ. ಬೋರ್ಡ್ ಮೀಟಿಂಗ್, ಜನರಲ್ ಬಾಡಿನಲ್ಲಿಯೂ ಸಹ ಮೀಟಿಂಗ್ ಆಯಿತು. ಅವರಿಗೆ ಪ್ರದೇಶವು ಗೊತ್ತಿಲ್ಲ ಅಭಿವೃದ್ಧಿಯ ಬಗ್ಗೆಯೂ ಸಹ ಗೊತ್ತಿರುವುದಿಲ್ಲ. ಮಾನ್ಯ ಉಪಾಧ್ಯಕ್ಷರೆ ಈಗ ನಾವು ಏನು ಮಾಡೋಣ? ನೀವು ಈ ಮಂಡಳಿಗೆ ಅನುದಾನವನ್ನು ಕೊಟ್ಟರೂ ಸಹ ಅದು ಖರ್ಚಾಗುತ್ತಿಲ್ಲ. ತಾವೇನು 1,000 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿದ್ದೀರಿ, ಆ ಹಣವು ಮಾರ್ಚಿಯವರೆಗೂ ಖರ್ಚಾಗುತ್ತಿಲ್ಲ. ಏಕೆಂದರೆ, ಅಲ್ಲಿ ಏನು ಒಂದು streamline ಆಗಿರುವುದಿಲ್ಲ. ದಯಮಾಡಿ ತಾವು HKRDB ಮಾಡಿದ್ದೀರಲ್ಲಾ, ಇದು ಒಂದು ಉತ್ತಮವಾದಂತಹ ದಾರಿಯಲ್ಲಿ ಹೋಗಬೇಕಾದರೆ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡುವಂತಹದ್ದು ಈ ಬಗ್ಗೆ ತಾವು ಗಂಭೀರವಾಗಿ ವಿಚಾರ ಮಾಡಬೇಕು. ಇದು ಈ system ನಿಂದಾಗುವುದಿಲ್ಲ. ಅವರಿಗೆ ಕಲ್ಬುರ್ಗಿ ಬಿಟ್ಟರೆ ಬೇರೆ ಪ್ರದೇಶ ಗೊತ್ತಿಲ್ಲ. ಅಂತಹವರನ್ನು ಈ ಮಂಡಳಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಇಂತಹ ಅಧ್ಯಕ್ಷರನ್ನು ನಾವು ಇಟ್ಟುಕೊಂಡು ಹೈದರಾಬಾದ್-ಕರ್ನಾಟಕ ಅಭಿವೃದ್ಧಿಯನ್ನು ಹೇಗೆ ಮಾಡುವುದಕ್ಕೆ ಸಾಧ್ಯ? ದಯಮಾಡಿ ಈ ಮಂಡಳಿಯ ಅಧ್ಯಕ್ಷರನ್ನು ಬದಲಾವಣೆ ಮಾಡಿ ಬೇರೆ ಯಾರಾದರೂ ಕ್ರಿಯಾಶೀಲರನ್ನು ನಿಮ್ಮ ಪಾರ್ಟಿಯವರೆ ಮಂತ್ರಿಗಳನ್ನಾಗಿ ಮಾಡಿ ಅದಕ್ಕೆ ಒಂದು ಚಾಲನೆಯನ್ನು ಕೊಡಿ. ಜನರು ಏನು ನಿರೀಕ್ಷೆಯನ್ನು ಮಾಡುತ್ತಿದ್ದಾರೆ. ಆ ಪ್ರಕಾರ ಈ ಯೋಜನೆಯಿಂದ ಜನರಿಗೆ ಅನುಕೂಲವಾಗಲಿ ಎನ್ನುವಂತಹ ಮಾತನ್ನು ಹೇಳುತ್ತೇನೆ.

**ಶ್ರೀ ಉಮೇಶ್ ವಿ. ಕತ್ತಿ:** 371 (ಜೆ) ಅಧ್ಯಕ್ಷರು ಕೇಳುವುದಿಲ್ಲ. ನೀವು ಕೇಳುವುದಿಲ್ಲ. ಸ್ವಲ್ಪ ಆ ಕಡೆ ಲಕ್ಷ್ಯ ಕೊಡಿ. ಅಧ್ಯಕ್ಷರನ್ನು ಮಾಡಿದ್ದೀರಿ ಅವರಿಗೆ ಕಿವಿ ಕೇಳುವುದಿಲ್ಲ. ಅವರಿಗೆ ಅರ್ಥವಾಗುವುದಿಲ್ಲ. 371(ಜೆ) ಬಂದಿದ್ದ ಅವರಿಗೆ ಗೊತ್ತಿಲ್ಲ. ಇಲ್ಲಿ ನೀವು ಕೇಳುತ್ತಿಲ್ಲ. ಯಾರಾದರೂ ಒಬ್ಬರು ಕೇಳಬೇಕು.

ಶ್ರೀ ಬಿ.ಆರ್. ಪಾಟೀಲ್: ಅದಕ್ಕೆ ಉಮೇಶ್ ಕತ್ತಿ separate ರಾಜ್ಯ ಮಾಡೋಣ ಎಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಕತ್ತಿಯವರೆ, ಬಹಳಷ್ಟು ಜನ ಕಿವಿ ಕೇಳಿಸದಿರುವವರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದರು.

ಶ್ರೀ ಉಮೇಶ್ ವಿ. ಕತ್ತಿ: ಆಗಿದ್ದರು, but ಇವತ್ತಿನ ಮುಖ್ಯಮಂತ್ರಿಗಳಿಗೆ ಕಿವಿ ಕೇಳಿಸುತ್ತದೆ. ಕಣ್ಣು ಕಾಣಿಸುತ್ತದೆ.

ಶ್ರೀ ಬಿ.ಆರ್. ಪಾಟೀಲ್: ಹಿಂದೆ ಆಗಿದ್ದರು ಎಂದು ಹೇಳಿ ಅದಕ್ಕೆ ಈಗ ಮಾಡಿ ನಮಗೇಕೆ ನೀವು punishment ಕೊಡುತ್ತಿದ್ದೀರಿ. ಹಿಂದೆ ಆದದ್ದು ಅವರು ಅನುಭವಿಸಿದರು. ನಾವೇಕೆ ಅನುಭವಿಸಬೇಕು? ನಾವೇನು ಪಾಪ ಮಾಡಿದ್ದೇವೆ. ದಯಮಾಡಿ ಹಾಗೆ ನೋಡಿದರೆ ಬಹಳ ಜನರಿಗೆ ಕಿವಿ ಕೇಳಿಸುವುದಿಲ್ಲ. ಕೆಲವರು ಕಿವಿ ಕೇಳಿಸಿದರೂ ಕೇಳಿಸದ ಹಾಗೆ ನಾಟಕ ಮಾಡುತ್ತಾರೆ ಅದಕ್ಕೇನು ಮಾಡುತ್ತೀರಿ?

ಉಪಾಧ್ಯಕ್ಷರು: ಪಾಟೀಲರೆ time ಆಯಿತು. ನೀವು ಮಾತನಾಡಲಿಕ್ಕೆ ಶುರು ಮಾಡಿ ಒಂದು ಗಂಟೆಯಾಯಿತು.

ಶ್ರೀ ಬಿ.ಆರ್. ಪಾಟೀಲ್: ಇಲ್ಲ ಸರ್, ನಾನು ಒಂದು ಗಂಟೆ ಸಮಯ ಮಾತನಾಡಿಲ್ಲ, ನಡುವೆ ಬಹಳ ಜನ ಮಾತನಾಡಿದ್ದಾರೆ. ನಾನು ಮಾತನಾಡಿಲ್ಲ.

ಉಪಾಧ್ಯಕ್ಷರು: ಅರ್ಧ ಗಂಟೆ ಮಾತನಾಡಿದ್ದೀರಿ.

ಶ್ರೀ ಬಿ.ಆರ್. ಪಾಟೀಲ್: ಉಪಾಧ್ಯಕ್ಷರೆ, HKRDB ಇದಕ್ಕೆ ಒಂದು streamline ಮಾಡಿ ಇದಕ್ಕೆ ಒಂದು ವ್ಯವಸ್ಥಿತ ರೂಪದಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಒಂದು ಮಾತನ್ನು ಹೇಳುತ್ತೇನೆ. ತೆಲಂಗಾಣಕ್ಕೆ 371 ಕಲಂಗೆ ಅವಕಾಶ ಮಾಡಿಕೊಟ್ಟಿದ್ದರು. ಇಷ್ಟಾದರೂ ಕೂಡ ಹೈದರಾಬಾದ್‌ನಿಂದ ಕೇವಲ 100 ಕಿ.ಮೀ. ಅಂತರದಲ್ಲಿರುವಂಥ ತೆಲಂಗಾಣ ಪ್ರತ್ಯೇಕ ರಾಜ್ಯವಾಯಿತು. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ ಈಗಲೇ ನಾವು ಎಚ್ಚರಿಕೆ

ವಹಿಸಬೇಕು. 371(ಜೆ) ಅದರ ಲಾಭ ನಿಜವಾಗಿಯೂ ಜನರಿಗೆ ಮುಟ್ಟದೇ ಹೋದರೆ ಅದರ ಪರಿಣಾಮ ಬಹಳ ಕೆಟ್ಟದ್ದಾಗುತ್ತದೆ. ಆ ಎಚ್ಚರಿಕೆಯಿಂದ ಇವತ್ತು ಕ್ರಿಯಾಶೀಲರಾಗಿ ನಾವು ಕೆಲಸ ಮಾಡುವುದಕ್ಕೆ ಮುಂದಾದರೆ ನಿಜವಾಗಿ ನಮ್ಮ ಪ್ರದೇಶಕ್ಕೆ ಅನುಕೂವಾಗುತ್ತದೆ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪಾಧ್ಯಕ್ಷರು:** ರೇವಣ್ಣನವರು ಎಷ್ಟು ಹೊತ್ತು ಮಾತನಾಡುತ್ತೀರಿ ಎಂದು ನೀವೇ ಸಮಯ ನಿಗದಿ ಮಾಡಿಬಿಡಿ.

**ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):** ನಾವು ಮಾತನಾಡುವುದೇ ಅಪರೂಪ, ಅಂಥದ್ದರಲ್ಲಿ ನೀವು ಬೇಡವೆಂದರೆ ನಾನು ಸುಮ್ಮನೆ ಕುಳಿತುಕೊಂಡುಬಿಡುತ್ತೇನೆ.

ಮಾನ್ಯ ಉಪಾಧ್ಯಕ್ಷರೆ, ದಿನಾಂಕ 02–02–2015 ರಂದು ರಾಜ್ಯಪಾಲರಿಂದ ಸವಿಸ್ತಾರವಾಗಿ ಸುಮಾರು 23 ಪುಟಗಳಷ್ಟು ಭಾಷಣವನ್ನು ಓದಿಸಿಬಿಟ್ಟಿದ್ದಾರೆ. ಸುಮಾರು 49 ಅಂಶಗಳನ್ನು ಅವರ ಭಾಷಣದಲ್ಲಿ ಹೇಳಿದ್ದಾರೆ. ನಾನು ತಮ್ಮ ಗಮನಕ್ಕೆ ತರುವುದು ಇಷ್ಟೇ. ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಸಚಿವರಾಗಿದ್ದಾರೆ. 2014–15 ರಲ್ಲಿ ಬಜೆಟ್‌ನಲ್ಲಿ ಇಟ್ಟಿರುವಂಥ ಹಣ ಇವತ್ತು ಸುಮಾರು 1 ಲಕ್ಷದ 20 ಸಾವಿರ ಕೋಟಿ ರೂಪಾಯಿಗಳು. ಅದರಲ್ಲಿ ಸುಮಾರು ಕೃಷಿ ವಲಯಕ್ಕೆ 3,779 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇರೀತಿ ತೋಟಗಾರಿಕೆಗೆ 1,434 ಕೋಟಿ ರೂಪಾಯಿಗಳಿರಬಹುದು. ಪಶುಸಂಗೋಪನಾ ಇಲಾಖೆಗೆ 1,750 ಕೋಟಿ ರೂಪಾಯಿಗಳಿರಬಹುದು ಮತ್ತು ರೇಷ್ಮೆ ಇಲಾಖೆ, ಮೀನುಗಾರಿಕೆ, ಸಹಕಾರಿ ಕ್ಷೇತ್ರಕ್ಕೆ 660 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನೀರಾವರಿಗೆ ಸುಮಾರು 11,000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಲ್ಲದೇ ಪ್ರಾಥಮಿಕ ಶಿಕ್ಷಣಕ್ಕೆ 17,000 ಕೋಟಿ ರೂಪಾಯಿಗಳು, ಉನ್ನತ ಶಿಕ್ಷಣಕ್ಕೆ 3,880 ಕೋಟಿ ರೂಪಾಯಿಗಳು ಮತ್ತೆ ಗ್ರಾಮೀಣಾಭಿವೃದ್ಧಿಗೆ ಸುಮಾರು 9,360 ಕೋಟಿ ರೂಪಾಯಿಗಳಿರಬಹುದು, ಆಹಾರ ಇಲಾಖೆಗೆ 4,000 ಕೋಟಿ

ರೂಪಾಯಿಗಳಿರಬಹುದು. ಈ ರೀತಿ ಸುಮಾರು 1 ಲಕ್ಷದ 20 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಮಾರ್ಚ್ ತಿಂಗಳಿನಲ್ಲಿ 2015–16 ನೇ ಸಾಲಿನ ಬಜೆಟ್ ಅನ್ನು ಮತ್ತೆ ಮಂಡನೆ ಮಾಡುತ್ತಾರೆ. ದಯಮಾಡಿ ಈ 1 ಲಕ್ಷ 20 ಸಾವಿರ ಕೋಟಿ ರೂಪಾಯಿಗಳಲ್ಲಿ ಯಾವ್ಯಾವ ಇಲಾಖೆಗಳಿಗೆ ಎಷ್ಟೆಷ್ಟು ಖರ್ಚಾಗಿದೆ ಎಂದು ಹೇಳಬಹುದೆ? ಇಲಾಖಾವಾರು ನಮಗೆ ಬಿಡುಗಡೆ ಮಾಡಿಬಿಟ್ಟರೆ ಅನುಕೂಲವಾಗುತ್ತದೆ. ಕೆಲವು ಇಲಾಖೆಗಳಲ್ಲಿ ಇನ್ನು ಆದೇಶವನ್ನೇ ಬಿಡುಗಡೆ ಮಾಡಿಲ್ಲ. ಇಟ್ಟಂಥ ಯೋಜನೆಗಳನ್ನು ಜಾರಿಗೊಳಿಸಲಿಕ್ಕೆ ಇವತ್ತಿನವರೆಗೆ ಆದೇಶ ಹೊರಟಿದೆಯೇ ಕೇಳಿ. ಉದಾಹರಣೆಗೆ ಹೇಳುವುದಾದರೆ ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ. ವಿದ್ಯೆಯಿಂದ ಸ್ವತಂತ್ರರಾಗಿ. ಈಗ ಇವತ್ತು 9,405 ಸರ್ಕಾರಿ ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅದೇರೀತಿ ಸರ್ಕಾರಿ ಪ್ರೌಢಶಾಲೆಯಲ್ಲಿ 1,137 ಹುದ್ದೆಗಳು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಳು 1230. ಒಟ್ಟು ಸುಮಾರು 12000 ಹುದ್ದೆಗಳು ಖಾಲಿ ಇವೆ. Primary education ಇವತ್ತೇನಾಗಿದೆ? Primary education ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣವಾಗಿ ಮುಚ್ಚುವಂಥ ಪರಿಸ್ಥಿತಿ ಬಂದಿದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಸರ್ಕಾರ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಲಿಕ್ಕಾಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ಜನ convent ಗೆ ಹೋಗುವ ಪರಿಸ್ಥಿತಿ ಇದೆ. Convent ನಲ್ಲಿ ಸೇರಿಸಬೇಕಾದರೆ ಕನಿಷ್ಠ 50 ಸಾವಿರದಿಂದ 1 ಲಕ್ಷ ರೂಪಾಯಿಗಳು donation ಕಟ್ಟಬೇಕು. ಇವತ್ತು ಅಂಥ ಪರಿಸ್ಥಿತಿ ಇದೆ. ಪ್ರಾಥಮಿಕ ಶಿಕ್ಷಣಕ್ಕೆ ಏಕೆ ಒತ್ತು ಕೊಡುತ್ತಿಲ್ಲ, ಪ್ರೌಢಶಾಲೆಗಳಿರಬಹುದು, ಕೆಲವು ಕಡೆ ಕಟ್ಟಡಗಳೇ ಇಲ್ಲ. ಈ ನಬಾರ್ಡ್‌ನಲ್ಲಿ ಕಟ್ಟಡ ತೆಗೆದುಕೊಂಡು ಕಂಟ್ರಾಕ್ಟರ್ ಯಾರೆಂದು ಗೊತ್ತಿಲ್ಲ. ಇವತ್ತಿನವರೆಗೆ ಕಟ್ಟಡವೇ ಪ್ರಾರಂಭವಾಗಿಲ್ಲ. ಒಂದು ಕ್ಷೇತ್ರಕ್ಕೆ 40.00 ಲಕ್ಷ ರೂಪಾಯಿಗಳೆಂದು ಕೊಟ್ಟಿದ್ದಾರೆ ಅದೂ ಕೂಡ ಪ್ರಾರಂಭವಾಗಿಲ್ಲ. ಶಾಸಕರ ಅನುದಾನವೆಂದು ತೆಗೆದುಕೊಂಡರು. ಶಿಕ್ಷಣ ಸಚಿವರು ಸದನದಲ್ಲಿದ್ದಾರೆ, ಪರಿಸ್ಥಿತಿ ಯಾವುದು ಇದೆ ಎಂಬ ಶಿಕ್ಷಣ ಇಲಾಖೆಯ ಬಗ್ಗೆ ಸಚಿವರು ಗಮನ ಹರಿಸಲಿ ಎಂದು

ಹೇಳುತ್ತಿದ್ದೇನೆ. ಇವತ್ತು fill up ಮಾಡುತ್ತೇವೆಂದು ತಾವು ಹೇಳುತ್ತೀರಿ. 2014 ಕ್ಕೆ entire 9000 ಶಿಕ್ಷಕರನ್ನು ನೇಮಿಸುತ್ತೇವೆ. ಪ್ರೌಢಶಾಲೆಗೆ 1337 ಶಿಕ್ಷಕರನ್ನು ನೇಮಿಸುತ್ತೇವೆ. 1000 ಚಿಲ್ಲರೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಉಪನ್ಯಾಸಕರ ಹುದ್ದೆಗಳಿಗೆ ನೇಮಿಸುತ್ತೇವೆಂದು ಹೇಳುತ್ತೀರಿ. ಇವರ ನೇಮಕಾತಿ ಮಾಡಲಿಕ್ಕೆ ಏನು ತೊಂದರೆಯಾಗಿದೆ? ಹಳ್ಳಿಯಲ್ಲಿರುವ ಮಕ್ಕಳು ಓದಬಾರದೆಂದು ಏನಾದರೂ ಇದೆಯೇ?

**ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿದ್ದರಲ್ಲಿ ಅರ್ಧ ಭಾಗ ಸತ್ಯವಿದೆ. Vacancy ಇವೆ. ಆ ನಿಟ್ಟಿನಲ್ಲಿ ನಾವು ಈಗಾಗಲೇ TET exam ಮಾಡಿದ್ದೇವೆ. CET ಗೆ ಈಗಾಗಲೇ notice ಕಳುಹಿಸುತ್ತಿದ್ದೇವೆ. ಬಹುಶಃ 15 ದಿವಸ ಅಥವಾ ಒಂದು ತಿಂಗಳಿನಲ್ಲಿ CET exam ಆಗುತ್ತದೆ. CET exam ಆದ ತಕ್ಷಣ direct recruitment ಆಗುತ್ತದೆ. ಸುಮಾರು 11,000 ಕ್ಕೆ ಸರ್ಕಾರ ಈಗಾಗಲೇ ಒಪ್ಪಿಗೆ ಕೊಟ್ಟಿದೆ. ಜೂನ್ 1ನೇ ತಾರೀಖಿನೊಳಗೆ ಅಷ್ಟು ಜನ ಕಾರ್ಯಾರಂಭ ಮಾಡುತ್ತಾರೆ. ಮತ್ತೆ ಎಲ್ಲಿ vacancy ಇದೆ. ಸುಮಾರು 17 ರಿಂದ 18 ಸಾವಿರ ಜನರನ್ನು ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದೇವೆ. ಹಿಂದೆ ಏನು ಭಯಾನಕ ಸೃಷ್ಟಿ ಇತ್ತು ಅದು ಈಗ ಇಲ್ಲ. ಯಾರೂ ಜೂನ್ 1 ನೇ ತಾರೀಖಿನಿಂದ ಮಾರ್ಚ್ 31ನೇ ತಾರೀಖಿನೊಳಗೆ ಯಾರು retire ಆಗುತ್ತಾರೆ ಅದನ್ನು ಅವರ ಉಳಿದ ಶೈಕ್ಷಣಿಕ ಅವಧಿಯಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಅವರಿಗೆ ಸಂಬಳ ಕೊಟ್ಟು ಅವರನ್ನು ಮುಂದುವರೆಸಲಿಕ್ಕೆ ಕೂಡ ನಾವು ಆದೇಶವನ್ನು ಮಾಡಿದ್ದೇವೆ. ಹಿಂದೆ ಏನೂ ಭಯಾನಕ ಸೃಷ್ಟಿ ಇತ್ತು ಅದು ಈಗ ಇಲ್ಲ. ಜೂನ್ 1ನೇ ತಾರೀಖಿನಿಂದ ಇಷ್ಟು ನೇಮಕಾತಿಗಳು ನಡೆಯುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಮತ್ತೊಂದು 40.00 ಲಕ್ಷ ರೂಪಾಯಿಗಳು ಆರ್ಥಿಕ ಇಲಾಖೆಯಲ್ಲಿ SSA ಯಿಂದ transfer ಮಾಡಿ ಎಂದು ಕೊಟ್ಟಿದ್ದರು. ಅದು ZP ಗೆ ಹೋಗಿ amount ಜಮಾ ಆಗಿತ್ತು. ಅದನ್ನು withdraw ಮಾಡಿಸಿದ್ದೇವೆ. ಅದನ್ನು DC Office ಮೂಲಕ ಕೊಡಬೇಕೆಂದು ನಾನು ನಿರ್ದೇಶನ ಕೊಟ್ಟಿದೆ. ಇನ್ನೊಂದು

ಐದಾರು ದಿವಸಗಳಲ್ಲಿ ಆ ಎಲ್ಲಾ amount ಕೂಡ submit ಆಗುತ್ತದೆ. ಅದಕ್ಕೆ ಆರ್ಥಿಕ ಇಲಾಖೆ ಸಹ ಸಮ್ಮತಿ ಕೊಟ್ಟಿದೆ.

**ಶ್ರೀ ಹೆಚ್.ಡಿ. ರೇವಣ್ಣ:** 40.00 ಲಕ್ಷ ರೂಪಾಯಿಗಳನ್ನು ಕೇವಲ ರಿಪೇರಿಗೆ ಎಂದು ಕೊಡುವುದು ಬೇಡ. ಬೇಕಿದ್ದರೆ ಹೊಸ building ಕಟ್ಟಿದ್ದರೆ ಕಟ್ಟಲಿ ಬಿಡಿ. ಕೆಲವು ಕಡೆ ರಿಪೇರಿಗೆ ಕೊಡುವುದನ್ನು ಕೊಡಿ. ನಾನೇನು ಬೇಡವೆನ್ನುವುದಿಲ್ಲ. ಕೆಲವು ಶಾಸಕರು ಹೊಸ building ಕಟ್ಟಿದ್ದರೆ ಕೊಡಿ ನಮಗೆ ತೊಂದರೆ ಏನಿಲ್ಲ. ಅದರಲ್ಲಿ ಒಂದು condition ಹಾಕಿಬಿಟ್ಟಿದ್ದೀರಿ.

**ಶ್ರೀ ಕಿಮ್ಮನೆ ರತ್ನಾಕರ್:** ನಾನೇನು ಹೇಳುತ್ತೇನೆಂದರೆ ಅದನ್ನೇ ಮಾಡಬೇಕೆಂದಿಲ್ಲ. ಕುಡಿಯುವ ನೀರಿಲ್ಲ, ಶೌಚಾಲಯ ಇಲ್ಲವೆಂದು ಇಡೀ ರಾಜ್ಯಾದ್ಯಂತ complaint ಇರುವುದು. ಅದಕ್ಕೆ ನಾವು ಆದ್ಯತೆಯನ್ನು ಕೊಡಿ ಎಂದು ಕೊಟ್ಟಿದ್ದೇವೆ. ಆದ್ಯತೆ ಮೇಲೆ ಕುಡಿಯುವ ನೀರು, ಶೌಚಾಲಯ, ದುರಸ್ತಿ ಆ ಸಮಸ್ಯೆಗಳಾವುವು ಇಲ್ಲದಿದ್ದರೆ ಕಟ್ಟಡ ಕಟ್ಟಲಿಕ್ಕೆ ಕೊಡಬಹುದು. ಸುಮ್ಮನೆ ಒಂದು ಆದ್ಯತೆಯನ್ನು ಕೊಟ್ಟಿದ್ದೇವೆ. It is only a choice ನಮ್ಮ preference ಏನೆಂದರೆ ಕುಡಿಯುವ ನೀರು ಇಲ್ಲದೇ ಕಟ್ಟಡ ಕಟ್ಟಿಕೊಂಡು ಏನು ಮಾಡುವುದು ಎಂದು. Second choice ನೀರು ಇಲ್ಲವೆಂದ ಮೇಲೆ ಶೌಚಾಲಯವಿದ್ದರೂ ಏನು ಉಪಯೋಗವಾಗುವುದಿಲ್ಲ. ಆದ್ದರಿಂದ ಆದ್ಯತೆ ಮೇಲೆ ಅದಕ್ಕೆ ಕೊಡಿ ಎಂದು ಮಾನದಂಡವನ್ನು ಸುಮ್ಮನೆ fix ಮಾಡಿದ್ದೇವೆ.

**ಶ್ರೀ ಹೆಚ್.ಡಿ. ರೇವಣ್ಣ:** ಕುಡಿಯುವ ನೀರಿಗೆ, ಶೌಚಾಲಯಕ್ಕೆ ಕೊಡುವುದಕ್ಕೆ ನಾವು ಬೇಡವೆನ್ನುವುದಿಲ್ಲ. ಆದರೆ ಕೆಲವು ಕಡೆ ಶೌಚಾಲಯ ಹಾಗು ಕುಡಿಯುವ ನೀರಿನ ವ್ಯವಸ್ಥೆ ಇರುವ ಕಡೆಯಲ್ಲಾದರೂ building ಕಟ್ಟಲಿಕ್ಕೆ ಅವಕಾಶ ಕೊಡಿ ಎಂದು ಮನವಿ ಮಾಡುತ್ತಿದ್ದೇನೆ. ಇವತ್ತು ಪ್ರಾಥಮಿಕ ಶಿಕ್ಷಣ ಕುಸಿದು ಹೋಗುತ್ತಿದೆ. ಏಕೆಂದರೆ ನೀವು ಆದರ್ಶ ಶಾಲೆ ಎಂದು ತೆಗೆಯುತ್ತಿದ್ದೀರಿ. ಆದರ್ಶ ಶಾಲೆಯಲ್ಲಿ ಶಿಕ್ಷಕರು ಇದ್ದಾರೆಯೇ? ನಮ್ಮಲ್ಲಿ ಒಂದು ಆದರ್ಶ ಶಾಲೆ ಇದೆ. 100 ಕ್ಕೆ 90% ನಷ್ಟು ಶಿಕ್ಷಕರೆ ಇಲ್ಲ. ಅದಕ್ಕೆ ಆದರ್ಶ ಶಾಲೆ ಎಂದರೆ ಅರ್ಥವೇನು ಎಂದು ದಯಮಾಡಿ

ಮಂತ್ರಿಗಳು ಹೇಳಿ. ಆದರ್ಶ ಶಾಲೆ ಎಂದು ಏಕೆ ಮಾಡಿದ್ದೀರಿ? ತಾಲ್ಲೂಕಿಗೆ ಒಂದು ಆದರ್ಶ ಶಾಲೆ ಎಂದರೆ ಅದರಲ್ಲಿ 7ನೇ ತರಗತಿಯಲ್ಲಿ 90–95% ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಒಂದು exam ಇಟ್ಟು, ಪರೀಕ್ಷೆಯಲ್ಲಿ pass ಆಗಿರುವ ವಿದ್ಯಾರ್ಥಿಗಳು ಅಲ್ಲಿ ಬಂದು ಸೇರುವುದು. ಈ ಆದರ್ಶ ಶಾಲೆಯಲ್ಲಿರುವ ಮಕ್ಕಳ ಪರಿಸ್ಥಿತಿ ಏನಾಗಿದೆ ಎಂದರೆ ಅವರ ತಂದೆ ತಾಯಿ ದುಡ್ಡು ಕೊಟ್ಟು ಶಿಕ್ಷಕರನ್ನು ನೇಮಿಸುವ ಪರಿಸ್ಥಿತಿ ಬಂದುಬಿಟ್ಟಿದೆ. ಇಂತಹ ಆದರ್ಶ ಶಾಲೆ ಏತಕ್ಕೋಸ್ಕರ ಬೇಕು? ಬಿಡಿ. ಇದನ್ನು ಯಾವಾಗಲಾದರೂ ಕಿತ್ತು ಹಾಕಿ. ಇಂತಹ ಆದರ್ಶ ಶಾಲೆಗಳಿಗೆ ದುಡ್ಡು ಕೊಡುವುದಕ್ಕೆ ಏನು ಕಷ್ಟ? ಶಿಕ್ಷಕರ ನೇಮಕಾತಿ ಮಾಡುವುದಕ್ಕೆ ಏನು ಕಷ್ಟ? ಅಲ್ಲಿ Science Teacher ಇದ್ದಾರೆಯೇ ಅಥವಾ Maths Teacher ಇದ್ದಾರೆಯೇ ಎಂದು ಕೇಳಿ ಬೇಕಾದರೆ ಕೇಳಿ ತಿಳಿದುಕೊಳ್ಳಿ, ನಾನು ಹೇಳುತ್ತಿದ್ದೇನೆ ಎಂದಲ್ಲ. ನನಗೆ ತಿಳಿದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ಆದರ್ಶ ಶಾಲೆಯಿರಬಹುದು, ಮೊರಾರ್ಜಿ ಶಾಲೆಯಿರಬಹುದು, ಇವುಗಳಲ್ಲಿ ಬಡವರ ಮಕ್ಕಳು ಓದುತ್ತಾರೆ. ಬೇರೆ ಮಕ್ಕಳು ಅಂದರೆ ದುಡ್ಡು ಇರುವವರು ಮಕ್ಕಳು convent ಗೆ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಓದುತ್ತಾರೆ. ಆದ್ದರಿಂದ, ದಯಮಾಡಿ ಕೂಡಲೇ ಇದಕ್ಕೆ ಶಿಕ್ಷಕರ ನೇಮಕಾತಿ ಮಾಡಬೇಕೆಂದು ನಾನು ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ನಮ್ಮ ಉನ್ನತ ಶಿಕ್ಷಣ ಮಂತ್ರಿಗಳು ಇಲ್ಲಿಯೇ ಇದ್ದಾರೆ. ದಯಮಾಡಿ, First Grade college ಗಳಿರಬಹುದು ಅಥವಾ Engineering College ಇರಬಹುದು, ಅಲ್ಲಿಯ teachers ಬಗ್ಗೆ ಗಮನಹರಿಸಿ. ನಮ್ಮ ಹಾಸನದಲ್ಲಿ ಒಂದು Engineering College ಇದೆ. ಆ Engineering College ನಲ್ಲಿ ಇವತ್ತಿಗೂ ಸಹ ಮೂಲಭೂತ ಸೌಕರ್ಯವಿಲ್ಲದೇ, ಮಲೆನಾಡು ಇಂಜಿನಿಯರಿಂಗ್ ಕಾಲೇಜುಗಳಿಗೆ ಹೋಗಿ ಓದುತ್ತಿದ್ದಾರೆ, ಮೆಕಾನಿಕಲ್ ಇಂಜನಿಯರಿಂಗ್ ಇರಬಹುದು, ಅವರೆಲ್ಲಾ ಪ್ರೈವೇಟ್ ಕಾಲೇಜು ಆದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿಗೆ ಹೋಗುತ್ತಿದ್ದಾರೆ. AICT norms ಪ್ರಕಾರ ನೀವು ಮೂಲಭೂತ ಸೌಕರ್ಯ ಒದಗಿಸಬೇಕಲ್ಲವೇ? ಪ್ರಾರಂಭವಾಗಿ ಏಳು

ವರ್ಷವಾದರೂ ಇಂತಹ ಕಾಲೇಜುಗಳಿಗೆ ಮೂಲಭೂತ ಸೌಕರ್ಯ ಕೊಡುವುದಕ್ಕಾಗಿಲ್ಲ. ಮಾನ್ಯ ದೇಶಪಾಂಡೆ ಸಾಹೇಬರು ಹಿರಿಯರಿದ್ದಾರೆ. ಅವರ ಬಗ್ಗೆ ನಮಗೆ ಗೌರವವಿದೆ. ಅವರು ಇದ್ದು ನಮಗೆ ಈ ತರಹ ಆಗುತ್ತದೆಯೆಲ್ಲಾ? ಅರು ಒಂದು ಎರಡು ವರ್ಷಗಳಾಯಿತು. ಈ ತರಹ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು...

**ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):** ಮಾನ್ಯ ರೇವಣ್ಣನವರೆ, ನಿಮಗೆ ಸಮಾಧಾನ ಮಾಡುವುದು ನಮಗೆ ಕಷ್ಟ.

**ಶ್ರೀ ಹೆಚ್.ಡಿ. ರೇವಣ್ಣ:** ನನಗೆ ಸಮಾಧಾನ ಮಾಡಬೇಡಿ ಸರ್, ಹುಡುಗರಿಗೆ ಸಮಾಧಾನ ಮಾಡಿ ಅಷ್ಟೆ.

**ಶ್ರೀ ಆರ್.ವಿ. ದೇಶಪಾಂಡೆ:** ಕೇಳಿ. ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರಿ ಕಾಲೇಜುಗಳಲ್ಲಿ ಇನ್ನೂ ಸುಧಾರಿಸಬೇಕು. ಅದರ ಬಗ್ಗೆ ಯಾವುದೇ ವಾದವಿಲ್ಲ. ಆದರೆ, ನಾವು ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿ ತೆಗೆದುಕೊಂಡ ನಂತರ ಶಿಕ್ಷಣ ಇಲಾಖೆಗೆ ಹೆಚ್ಚಿನ ಒತ್ತು ಕೊಟ್ಟು, ಇವತ್ತು ಎಷ್ಟು ಸಾಧ್ಯತೆಯಿದೆ, Polytechnic College ಗಳಿಗೆ ಈ ವರ್ಷದಿಂದ ಏನು ಹಣ ಕೊಡುತ್ತಿದ್ದೇವೆ, ಮುಂದಿನ ವರ್ಷದಿಂದ ಅಷ್ಟು ದುಡ್ಡು ಬೇಡ. ಅಷ್ಟು infrastructure ಅನ್ನು Polytechnic College ಗಳಲ್ಲಿ build up ಮಾಡುತ್ತಿದ್ದೇವೆ. ನಬಾರ್ಡ್‌ನಿಂದ addition ಆಗಿ ಹಣ ತೆಗೆದುಕೊಳ್ಳುತ್ತಿದ್ದೇವೆ. ಡಿಗ್ರಿ ಕಾಲೇಜುಗಳಲ್ಲಿ ಸ್ವಲ್ಪ ಸಮಸ್ಯೆಯಿದೆ. ಆದರೂ ಸಹ extra ಆಗಿ ಈ ವರ್ಷ ಡಿಗ್ರಿ ಕಾಲೇಜುಗಳಿಗೆ ಸ್ವಲ್ಪ ಸಮಸ್ಯಯಿದೆ. ಆದರೂ ಸಹ extra ಆಗಿ ಈ ವರ್ಷ ಡಿಗ್ರಿ ಕಾಲೇಜುಗಳಿಗೆ ಮೂಲಭೂತ ಸೌಕರ್ಯಕ್ಕೋಸ್ಕರ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರ ಲಾಭ ನಿಮಗೂ ಆಗಿದೆ. ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಅದು ನನಗಲ್ಲ. 100 ಕೋಟಿ ರೂಪಾಯಿಗಳನ್ನು ಈ ವರ್ಷ ವಿಶೇವಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ತಾವು ಸೇರಿ ಕೊಟ್ಟಿದ್ದೀರಿ. ಅದಕ್ಕೆ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದರ ಬಗ್ಗೆ ನನಗೇನೂ ಇಲ್ಲ. Building ಗಳಿಗೆ ಇವತ್ತು ಪ್ರಥಮ ದರ್ಜೆ ಕಾಲೇಜು ಇರಬಹುದು, ಪಾಲಿಟೆಕ್ನಿಕ್ ಕಾಲೇಜುಗಳಿರಬಹುದು, ಇಂಜಿನಿಯರಿಂಗ್ ಕಾಲೇಜುಗಳಿರಬಹುದು ಇವುಗಳಿಗೆ ತಾವು 100 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ನಿಜಕ್ಕೂ ಸಂತೋಷದ ವಿಷಯ. ಅದೂ ಶಿಕ್ಷಣ ಇಲಾಖೆಯಿಂದ . .

ಶ್ರೀ ಆರ್.ವಿ. ದೇಶಪಾಂಡೆ: ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ನಮ್ಮ Engineering Government College ಗಳಲ್ಲಿ Civil Lab ಇರಲಿಲ್ಲ ಹಾಗೂ Mechanical Lab ಇರಲಿಲ್ಲ. ಇವುಗಳಿಗೆ Karnataka Examination Authority ಯಿಂದ 26 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಟೆಂಡರ್ ಮಾಡಿ ಎಲ್ಲಾ Government Engineering College ಗಳಲ್ಲಿ Civil Labs ಹಾಗೂ Mechanical Labs ಆಗುತ್ತಿವೆ, ಅದನ್ನು ತಾವು ತಿಳಿದುಕೊಳ್ಳಿ. Polytechnics ಬಗ್ಗೆ ನನಗೆ ಗೊತ್ತಿದೆ. ನೀವು ಏನು ಹೇಳುತ್ತಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ನೂರಕ್ಕೆ ನೂರು ಆಗಿದೆ ಎಂದು ಹೇಳುವುದಕ್ಕೆ ನಾನು ರೆಡಿಯಿಲ್ಲ. ಆದರೆ ಅದರ ಬಗ್ಗೆ ನಮಗೂ ಚಿಂತನೆಯಿದೆ. ಗುಣಮಟ್ಟದ ಶಿಕ್ಷಣ ಸಿಗಬೇಕು. ಒಳ್ಳೆಯ ಮೂಲಭೂತ ಸೌಕರ್ಯಗಳು ಇರಬೇಕು. Affordable education ಇರಬೇಕು. ಹಾಗಾಗಿ ಮೂರು ವರ್ಷಗಳಿಂದ ಯಾವುದೇ ಕಾಲೇಜುಗಳಲ್ಲಿ fees ಅನ್ನು ಸಹಿತ ಹೆಚ್ಚು ಮಾಡಿಲ್ಲ. ನೀವು ಅಲ್ಲಿಂದ ನಾವು ಮಾಡಿರುವ ಈ ಕೆಲಸವನ್ನು ಮೆಚ್ಚಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಒಂದು ನಿಮಿಷ. ಡಿಗ್ರಿ ಕಾಲೇಜುಗಳಿಗೆ ತಾವು ಹಣ ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳು. ಆದರೆ, ಅವಶ್ಯಕತೆಗೆ ತಕ್ಕಂತೆ ಹಣವನ್ನು ಬಿಡುಗಡೆ ಮಾಡಬೇಕೆಂದು ಮನವಿ ಮಾಡುತ್ತೇವೆ. ಈಗ ಎಲ್ಲಿ ಒತ್ತಡ ಜಾಸ್ತಿಯಿರುತ್ತದೆ ಅಂತಹ ಕಡೆಗಳಲ್ಲಿ ಹೆಚ್ಚಿನ ಹಣ ಬಿಡುಗಡೆ

ಮಾಡುವುದು, ಒತ್ತಡ ಇಲ್ಲದೇ ಇರುವ ಕಡೆಗಳಲ್ಲಿ ಕಡಿಮೆ ಕೊಡತಕ್ಕಂತಹದ್ದು ಆಗಬಾರದು. ಅವಶ್ಯಕತೆಯಿರುವ ಕಡೆಗಳ ಬಗ್ಗೆ ನೀವು ಲಿಸ್ಟ್ ತರಿಸಿಕೊಳ್ಳಿ. ಇಡೀ ರಾಜ್ಯದ ಲಿಸ್ಟ್ ತರಿಸಿಕೊಂಡು ಎಲ್ಲಿ ಅವಶ್ಯಕತೆಯಿದೆ, ಎಲ್ಲಿ ಬೇಡಿಕೆಯಿದೆ ಅಲ್ಲಿ ಜಾಸ್ತಿ ಬಿಡುಗಡೆ ಮಾಡಿ. ದಯಮಾಡಿ ಮಾಡಿ.

**ಶ್ರೀ ಆರ್.ವಿ. ದೇಶಪಾಂಡೆ:** ಹಣ ಬಿಡುಗಡೆ ಮಾಡುವುದು ನಮ್ಮ ವಿಧಾನಸೌಧದಿಂದ ಆಗುವುದಿಲ್ಲ. ನಾವು ಹಣ Commissioner ಗೆ ಕಳುಹಿಸುತ್ತೇವೆ. ಅಲ್ಲಿ 4–5 ಏಜೆನ್ಸಿಗಳು ಕೆಲಸ ಮಾಡುತ್ತಿವೆ. Housing Board ಇದೆ, RITES ಸಂಸ್ಥೆಯಿದೆ, PWD ಇದೆ, ಮತ್ತೊಂದು ಅಂದರೆ Land Army ಇದೆ. ಅವರಿಗೆ Commissioner ನಿಂದ ಹಣ ಹೋಗುತ್ತದೆ. ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅನ್ಯಾಯವಾಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ.

**ಶ್ರೀ ಹೆಚ್.ಡಿ. ರೇವಣ್ಣ:** ಈಗ college building ಗಳಿಗೆ ಕೊಟ್ಟಿದ್ದೀರಿ, ನನಗೆ ಸಂತೋಷ. ಆದರೆ, ಇಂಜಿನಿಯರಿಂಗ್ ಕಾಲೇಜು ಬಂದು ಏಳು ವರ್ಷಗಳಾಯಿತು. ಅಲ್ಲಿ desk ಇದೆಯೇ ಸರ್? ಆ desk ಗಳನ್ನು ನಾನು ಸಾರ್ವಜನಿಕರಿಂದ ಕೊಡಿಸಿದ್ದೇನೆ. Computer ಇಲ್ಲ, ಸಾರ್ವಜನಿಕರಿಂದ ನಾನು 50 computer ಗಳನ್ನು ಕೊಡಿಸಿದ್ದೇವೆ. ನಾವು ಹೇಳುವುದು ಏನೆಂದರೆ, ಮೂಲಭೂತ ಸೌಕರ್ಯಗಳನ್ನು ಏನು ಬೇಕೋ ಅದನ್ನು ಕೊಡಿ. . . ಈಗ ಒಂದು ಪಕ್ಷ building ಇಲ್ಲದೇ ಹೋದರೂ ಪರವಾಗಿಲ್ಲ.

**ಶ್ರೀ ಆರ್.ವಿ. ದೇಶಪಾಂಡೆ:** ರೇವಣ್ಣನವರೆ, ನೀವು ಸರ್ಕಾರಿ ಆಜ್ಞೆಗಳನ್ನು ನೋಡಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ನಾನು ನೋಡಿದ್ದೇನೆ ಸರ್.

**ಶ್ರೀ ಆರ್.ವಿ. ದೇಶಪಾಂಡೆ:** ಈ ಬಾರಿ ಮಾನ್ಯ ಮುಖ್ಯಮಂತ್ರಿಗಳು furniture ಸಲುವಾಗಿ extra 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ಇನ್ನೂ ಆರ್ಡರ್ issue ಆಗಿಲ್ಲ ಸರ್.

ಶ್ರೀ ಆರ್.ವಿ. ದೇಶಪಾಂಡೆ: Order issue ಆಗಿ ಎರಡು ತಿಂಗಳುಗಳಾಯಿತು. ನೀವು ನೋಡುವುದಿಲ್ಲವೇ? ನಿಮಗೆ ಆ ಆರ್ಡರ್ ಕಡೆ ಎಲ್ಲಿ ಕಡೆ ಎಲ್ಲಿ ಲಕ್ಷ್ಯವಿರುತ್ತದೆ? 10 ಕೋಟಿ ರೂಪಾಯಿಗಳನ್ನು furniture ಗಾಗಿ ಕೊಟ್ಟಿದ್ದಾರೆ. ಎರಡು ಕೋಟಿ ರೂಪಾಯಿಗಳಲ್ಲಿ books ಗೆ ಎಂದು ಕೊಟ್ಟಿದ್ದೇವೆ. Centralized purchase ಮಾಡುತ್ತಿದ್ದೇವೆ. Transparent ಆಗಿ e-tender ಮುಖಾಂತರ ಮಾಡುತ್ತಿದ್ದೇವೆ. ಹಾಗಾಗಿ books ಬಗ್ಗೆ ಹಾಗೂ furniture ಬಗ್ಗೆ ಟೆಂಡರ್ ಮಾಡಿದ್ದಾರೆ. ಆದರೆ, ಪ್ರತಿಯೊಂದು ಕಾಲೇಜಿಗೆ ಏನು ಕೊಡಬೇಕು, ಎಲ್ಲಾ 411 ಕಾಲೇಜುಗಳಿಗೆ allocation ಮಾಡಿದ್ದಾರೆ. ಬೇಕಾದರೆ ನಾನು ನಿಮಗೆ oders ಅನ್ನು ಕಳುಹಿಸುತ್ತೇನೆ. Computers ಗಳನ್ನು ಪಾರದರ್ಶಕವಾಗಿ ಖರೀದಿಸಲು ಅನುಮತಿ ತೆಗೆದುಕೊಳ್ಳಬೇಕಾಗಿದೆ. ಅನುಮತಿ ಬಂದಿದೆ. ಪಾಲಿಟೆಕ್ನಿಕ್‌ಗಳಲ್ಲಿ ಹಾಗೂ ಡಿಗ್ರಿ ಕಾಲೇಜುಗಳಿಗೂ ಸಹ ಕಂಪ್ಯೂಟರ್ ಕೊಡುವ ವ್ಯವಸ್ಥೆಯಾಗುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ: ಆಮೇಲೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ Atrender ಗಳಿಲ್ಲ. ದಯಮಾಡಿ Attender ಗಳನ್ನು ಹಾಕಬೇಕು. ಏಕೆಂದರೆ, ಅಲ್ಲಿ ಕಸ ಗುಡಿಸುವವರು ಇಲ್ಲದಂತಹ ಪರಿಸ್ಥಿತಿಯಾಗಿದೆ. ಆ ವಿದ್ಯಾರ್ಥಿಗಳ ಕೈಯಲ್ಲಿಯೇ ಕಸ ಗುಡಿಸುವ ಕೆಲಸ ಮಾಡಿಸುತ್ತಿದ್ದಾರೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುವ rank students ಬಂದು ಕಸ ಗುಡಿಸುವ ಪರಿಸ್ಥಿತಿ ಕಾಲೇಜುಗಳಲ್ಲಿ ಆಗಿದೆ. ಅದು ಆಗಬಾರದು.

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್): ಮಾನ್ಯ ದೇಶಪಾಂಡೆಯವರೆ, ಮಾನ್ಯ ರೇವಣ್ಣನವರು PWD Minister ಆಗಿದ್ದರು. ಇವತ್ತು ಅವರ constituency ಗೆ ಹೋಗಿ ನೋಡಿದರೆ ಎಲ್ಲಾ highway ಗಳೇ ಇವೆ. ನಾವು ಯಾವ ರಸ್ತೆಯಲ್ಲಿ ಹೋಗಬೇಕು ಎಂಬುದು ಗೊತ್ತಾಗುವುದಿಲ್ಲ. ಆ ಪರಿಸ್ಥಿತಿಯಲ್ಲಿದೆ. ಆ ರೀತಿಯಾಗಬೇಕು ಎಂಬುದು ಅವರ ಆಸೆಯಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಸರ್ ಈಗ . .

**ಶ್ರೀ ಆರ್.ವಿ. ದೇಶಪಾಂಡೆ:** 224 ಕ್ಷೇತ್ರಗಳಲ್ಲಿಯೂ ಆಗಬೇಕಲ್ಲವೇ? ಆ ತರಹದ ಸದಿಚ್ಛೆ ಇರಬೇಕು. 224 ಕ್ಷೇತ್ರಗಳಲ್ಲಿಯೂ ಆ ಪ್ರಕಾರ ಆಗಬೇಕು ಎಂಬ ಸದಿಚ್ಛೆ ಇರಬೇಕು. ಅದು ನಮ್ಮ ಸರ್ಕಾರದ ಗುರಿ. ಆ ಪ್ರಕಾರ ನಾವು ಹೆಜ್ಜೆ ಹಾಕುತ್ತಿದ್ದೇವೆ.

**ಶ್ರೀ ಹೆಚ್.ಡಿ. ರೇವಣ್ಣ:** ಸರ್ ಹೊಳೆನರಸೀಪುರಕ್ಕೆ highway ಮಾಡಿ ಎಂದು ನಾನು ಹೇಳುತ್ತಿಲ್ಲ. ರಾಜ್ಯಾದ್ಯಂತ ಮಾಡಲು ನಾನು ಏನೂ ಬೇಡವೆಂದು ಹೇಳಿಲ್ಲ. ಈಗ ಉದಾಹರಣೆಗೆ AICT ಗೆ ಸಂಬಂಧಿಸಿದಂತೆ ಬೆಳಗಾಂನ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ 300 ಕೋಟಿ ರೂಪಾಯಿಗಳ ಹಣವಿದೆ. ಆ FD ಯಲ್ಲಿ ಹಾಕಿದ್ದರು. ಮೊನ್ನೆ income tax ನ ವರು ಏನು ಮಾಡಿದ್ದಾರೆ ಎಂದರೆ, 40% ದುಡ್ಡು ಹಿಡಿದು ಹಾಕಿದ್ದಾರೆ. ಅದರ ಬದಲು ಈ ಕಾಲೇಜುಗಳಿಗಾದರೂ ಆ ದುಡ್ಡು ಕೊಡಬಹುದಾಹಗಿತ್ತಲ್ಲವೇ? 300 ಕೋಟಿ ರೂಪಾಯಿಗಳ ಹಣವನ್ನು FD ಯಲ್ಲಿ ಇಟ್ಟಿದ್ದೀರಿ. ಆ 300 ಕೋಟಿ ರೂಪಾಯಿಗಳನ್ನು FD ಇಡುವುದರ ಬದಲು ನಮಗೆ ಕೊಡಬಹುದಾಗಿತ್ತು. ಈಗ income tax ನವರು ಅದನ್ನು ತೆಗೆದುಕೊಂಡು ಹೋದರು. ಈಗ ಏನಾಯಿತು? ಈಗ ಹೋಗಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗಾದರೂ ಅನುಕೂಲವಾಗುತ್ತಿತ್ತು ಅಲ್ಲವೇ? ಆ ದುಡ್ಡು 300 ಕೋಟಿ ಸುಮ್ಮನೆ ಈಗ ಏನಾಯಿತು ಎಂದರೆ income tax ಗೆ ಹೋಯಿತು. ಈಗ ಅವರು 40% ಹಿಡಿಯುತ್ತಾರೋ ಅಥವಾ 50% ಹಿಡಿಯುತ್ತಾರೋ ಗೊತ್ತಿಲ್ಲ. ಅದು ಏನು ಪೂರ್ತಿ ದುಡ್ಡು ಅವರೇ ತೆಗೆದುಕೊಂಡು ಹೋದರೋ ಏನೋ ಗೊತ್ತಿಲ್ಲ. ನಮ್ಮಲ್ಲಿ 20 ಇಂಜಿನಿಯರಿಂಗ್ ಕಾಲೇಜುಗಳಿರಬಹುದು, ಒಂದೊಂದು ಕಾಲೇಜಿಗೆ ಮೂಲಭೂತ ಸೌಕರ್ಯಕ್ಕೋಸ್ಕರ ಎಂದು 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಆ ದುಡ್ಡು ಆದರೂ ವಿನಿಯೋಗವಾಗುತ್ತಿತ್ತು ಎಂಬ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇದರಲ್ಲಿ ನನ್ನದೇನೂ personal ಏನಿಲ್ಲ. ಎಲ್ಲಾ ಕಾಲೇಜುಗಳಿಗೂ ಮೂಲಭೂತ ಸೌಕರ್ಯವಿರಬೇಕು ಎನ್ನುವ ಭಾವನೆಯಿಂದ ತಮಗೆ ಹೇಳುತ್ತಿದ್ದೇನೆ. ಮತ್ತೆ ಇದು ಅಲ್ಲದೇ, ಕೆಲವು ಕಾಲೇಜುಗಳಲ್ಲಿ ಡಿಗ್ರಿಗಳನ್ನು ಅಂದರೆ

ಇಂಜಿನಿಯರಿಂಗ್ ಕಾಲೇಜುಗಳಿರಬಹುದು ಅಥವಾ ಪಾಲಿಟೆಕ್ನಿಕ್ ಕಾಲೇಜುಗಳಿರಬಹುದು, ಕೆಲವು ಕೋರ್ಸ್‌ಗಳನ್ನು ಮಾಡಬೇಕಾಗುತ್ತದೆ. ಕೆಲವು ಸರ್ಕಾರಿ ಕಾಲೇಜುಗಳಲ್ಲಿ ಕೇವಲ 3–4 ಕೋರ್ಸ್‌ಗಳಿವೆ. ಅದನ್ನು ದಯಮಾಡಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯಕತೆ ಇರುವ ಕೋರ್ಸ್ ಆರಂಭಿಸಿ. ಉದಾಹರಣೆಗೆ Master Degree ಇಲ್ಲವೇ ಇಲ್ಲ. ಅದನ್ನು ಮಾಡಿ. ಏಕೆಂದರೆ, ಖಾಸಗಿ ಕಾಲೇಜುಗಳವರಿಗೆ ಏನಾಗಿದೆ ಎಂದರೆ, ಒಂದು ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟ್ ತೆಗೆದುಕೊಳ್ಳಬೇಕು ಎಂದರೆ, ಬೆಂಗಳೂರಿನಲ್ಲಿ ಕೆಲವು ಕಾಲೇಜುಗಳಲ್ಲಿ ಇಂಜಿನಿಯರಿಂಗ್ ಸೀಟ್‌ಗೆ ರೂ.40–50 ಲಕ್ಷಗಳನ್ನು ಮಾಡಿದ್ದಾರೆ. ಇಂಜಿನಿಯರಿಂಗ್ ಸೀಟ್ ಕೊಡಲು ಇಷ್ಟು ದುಡ್ಡು ತೆಗೆದುಕೊಳ್ಳುತ್ತಾರೆ. ಮೆಡಿಕಲ್ ಸೀಟ್ ಹಾಳು ಬಿದ್ದು ಹೋಗಲಿ. ಇವತ್ತು ಆ ಪರಿಸ್ಥಿತಿ ಆಗಿ ಹೋಗಿದೆ. ಸರ್.ಸರ್.ವಿ. ಕಾಲೇಜಿನಲ್ಲಿ ನೀವು 30 ಲಕ್ಷ ರೂಪಾಯಿಗಳನ್ನು ಕೊಡಬೇಕು. ಕೇಳಿ ಬೇಕಾದರೆ 30 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಕೊಡುತ್ತಾರಾ ಎಂದು ಕೇಳಿ. ಆದ್ದರಿಂದ ನಾನು ಹೇಳುವುದು ಏನೆಂದರೆ, ಇಂಜಿನಿಯರಿಂಗ್ ಕಾಲೇಜುಗಳಿಗೆ ಕೆಲವು ಹೊಸ ಕೋರ್ಸ್‌ಗಳನ್ನೂ ಕೊಡಬೇಕಾಗುತ್ತದೆ. ಆಮೇಲೆ section ಗಳನ್ನು ಜಾಸ್ತಿ ಮಾಡಿ. Demand ಇರುವಂತಹವುಗಳಿಗೆ ಒಂದೊಂದು section ಜಾಸ್ತಿ ಮಾಡಿ. ಖಾಸಗಿಯವರನ್ನು ಮಟ್ಟಾ ಮಾಡುವುದಕ್ಕೆ ಮಾಡಿ, ನಿಮ್ಮ ಹತ್ತಿರ ಬಿಲ್ಡಿಂಗ್‌ಗಳಿವೆ. ಆಮೇಲೆ evening college ಗಳನ್ನು ತೆರೆಯಿರಿ. Evening college ಗಳನ್ನು ತೆರೆಯುವುದರಿಂದ. . .

**ಶ್ರೀ ಆರ್.ವಿ. ದೇಶಪಾಂಡೆ:** ನೀವು evening college ಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ ಹೌದಲ್ಲವೇ? Evening college ಗಳ ಪ್ರಸ್ತಾವನೆ ಬಗ್ಗೆ ನಾವು AICT ಗೆ ಕಳುಹಿಸಿದ್ದೇವೆ. AICT ಯಿಂದ ಈಗ ಮಂಜೂರಾತಿ ಬರಬಹುದು. ಮಂಜೂರಾತಿ ಬಂದ ನಂತರ ಪ್ರಾರಂಭ ಮಾಡುತ್ತೇವೆ. ಏಕೆಂದರೆ, Technical Colleges ಅಂದರೆ Diploma ಇರಬಹುದು, Engineering College ಇರಬಹುದು, Polytechnic College ಕಾಲೇಜು ಇರಬಹುದು, ನಮಗೆ ನೇರವಾಗಿ start ಮಾಡುವುದಕ್ಕೆ permission

ಕೊಡಲಿಕ್ಕೆ ಆಗುವುದಿಲ್ಲ. ಅದಕ್ಕೆ ನಿಮ್ಮ Principal ಮುಖಾಂತರ AICT ಗೆ ಅವರು application ಹಾಕಬೇಕಾಗುತ್ತದೆ, ಯಾವ courses ಪ್ರಾರಂಭ ಮಾಡುತ್ತೇವೆ ಎಂದು ಹೇಳಬೇಕಾಗುತ್ತದೆ. ಅವರು inspection ಮಾಡಿ ಎಲ್ಲಾ ಅನುಮತಿ ಕೊಡುತ್ತಾರೆ. Evening colleges ಗೆ ಅನುಮತಿ ಬರುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಹೇಳುವುದು ಏನೆಂದರೆ, Technical Director ಗೆ ನೀವು ಕಟ್ಟುನಿಟ್ಟಾದ ಸೂಚನೆ ಕೊಡಬೇಕು. ನಾನು ಕೇವಲ ಹಾಸನ college ಒಂದೇ ಕೇಳುತ್ತಿಲ್ಲ. General ಆಗಿ ಈ ರಾಜ್ಯದಲ್ಲಿ ಎಲ್ಲಿ ಮೂಲಭೂತ ಸೌಕರ್ಯಗಳಿವೆಯೋ ಅಂತಹ ಕಾಲೇಜುಗಳಲ್ಲಿ evening college ಪ್ರಾರಂಭಿಸಲು ಅನುಮತಿ ಕೊಡಿ. ಅದನ್ನು ಮಾಡುವುದರಿಂದ ಕೆಲವು ವಿದ್ಯಾರ್ಥಿಗಳು ಬೆಳಗ್ಗೆ ಬೇಕಾದರೆ ಗಾರ್ಮೆಂಟ್ಸ್ ಫ್ಯಾಕ್ಟರಿಗಳಿಗೆ ಹೋಗಿ ಕೆಲಸ ಮಾಡಿ ಸಾಯಂಕಾಲ ಬೇಕಾದರೆ ಇಂಜಿನಿಯರಿಂಗ್ ಓದುವಂತಹ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ನಾನು ಮನವಿ ಮಾಡುತ್ತಿದ್ದೇನೆಯೇ ಹೊರತು ಬೇರೆ ಉದ್ದೇಶವೇನಿಲ್ಲ. ದಯಮಾಡಿ ಆ Principal ಗಳಿಗೆ ಕಟ್ಟುನಿಟ್ಟಾದ ಸೂಚನೆ ಕೊಡಬೇಕಾಗುತ್ತದೆ. Last year ತಾವು ಅನುಮತಿ ಕೊಡಿಸಿದ್ದೀರಿ. ಅನುಮತಿ ಕೊಟ್ಟರೂ ಸಹ AICT ಮುಂದೆ ಅರ್ಜಿ ಹಾಕಲಿಲ್ಲ. ಅರ್ಜಿ ಹಾಕದೇ ಇರುವುದರಿಂದ ಕಾಲೇಜಿಗೆ ಮಂಜೂರಾತಿ ದೊರೆಯಲಿಲ್ಲ. 25ನೇ ತಾರೀಖಿನೊಳಗೆ ಅರ್ಜಿ ಹಾಕಬೇಕೆಂದು ಸರ್ಕಾರದ ಆದೇಶವಿದೆ. ಎಲ್ಲಾ Principal ಗಳಿಗೆ ದಯಮಾಡಿ ಒಂದು ಸೂಚನೆ ಕೊಟ್ಟು ಎಲ್ಲೆಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿಗೆ, evening college ಗಳಿಗೆ ಅವಶ್ಯಕತೆಯಿದೆ ಅಲ್ಲೆಲ್ಲಾ ಅದನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಲು Director (Technical Education) ರವರಿಗೆ ಸರ್ಕಾರದಿಂದ ಸೂಚನೆ ಕೊಡಬೇಕು ಎಂದು ತಮ್ಮ ಮುಖೇನ ಮನವಿ ಮಾಡುತ್ತೇನೆ. ಇದನ್ನು ಮಾಡಿದರೆ ಬಡವರ ಮಕ್ಕಳಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. First Grade College ಗಳಲ್ಲಿ ಇವತ್ತು M.Com, M.Sc., MBA ಎಲ್ಲಾ ಕಡೆ ಶುರುವಾಗಿದೆ. ಇವತ್ತು MBA seat ಪಡೆಯಬೇಕೆಂದರೆ ಖಾಸಗಿ ಕಾಲೇಜುಗಳಲ್ಲಿ ಎರಡರಿಂದ ಮೂರು ಲಕ್ಷ ರೂಪಾಯಿಗಳನ್ನು ಕಟ್ಟಬೇಕು.

ಬಾಲಕೃಷ್ಣರವರು ಐದು ಲಕ್ಷದ ರೂ.ಗಳವರೆಗಿದೆಯೆಂದು ಹೇಳುತ್ತಿದ್ದಾರೆ. ಅಲ್ಲಿ lectures appointment ಇಲ್ಲ, lectures appointment ಮಾಡುವುದಕ್ಕೆ ಏನಾದರೂ ತೊಂದರೆ ಇದೆಯೇ? ತಾವು ಹಿರಿಯವರಾಗಿದ್ದೀರಿ ಇದನ್ನು ದಯಮಾಡಿ ಹೇಳಬೇಕು.

**ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):** ನೀವು ಯಾವ ಜಗತ್ತಿನಲ್ಲಿದ್ದೀರೆಂದು ನನಗೆ ಗೊತ್ತಾಗುತ್ತಿಲ್ಲ. ದಯವಿಟ್ಟು ನೀವು ಕುಳಿತುಕೊಳ್ಳಿ, ನೀವು ಬಹಳ prompt, ಅಭಿವೃದ್ಧಿಯಲ್ಲಿ ಸಾಕಷ್ಟು ಅಭಿರುಚಿ ತೆಗೆದುಕೊಳ್ಳುತ್ತೀರೆಂದು ನನಗೆ ಗೊತ್ತು. 1298 lectures recruitment ಮಾಡಬೇಕೆಂದು CET ಮುಖಾಂತರ notification ಮಾಡಿದ್ದೇವೆ. ಮೊದಲನೆಯದಾಗಿ notification ಆಗಿ 8–10 ದಿನಗಳಾಯಿತು. ಎರಡನೆಯದಾಗಿ ಇನ್ನೂ 863 ಅಥವಾ 865 ಲೆಕ್ಚರರ್ಸ್ ನೇಮಕಾತಿ ಮಾಡಿಕೊಳ್ಳಬೇಕೆಂಬ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ಒಪ್ಪಿಕೊಂಡಿದ್ದು, ಅಲ್ಲಿಂದ ಕ್ಯಾಬಿನೇಟ್‌ಗೆ ಹೋಗಿ ಅಲ್ಲಿ ಅನುಮತಿ ತೆಗೆದುಕೊಂಡ ನಂತರ ನೇಮಕಾತಿ ಆಗುತ್ತದೆ. 1298 lectures recruitment process ಪ್ರಾರಂಭವಾಗಿದೆ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ:** ಮಾನ್ಯ ಸಚಿವರೆ, ಆಯ್ಕೆ ಆದ ನಂತರ postings counselling ಅನ್ನು ದಯಮಾಡಿ ಅವರಿಗೆ ಕೊಡುವುದಕ್ಕೆ ಹೋಗಬೇಡಿ ಸರ್ಕಾರವೇ ಮಾಡಲಿ. ನೀವು ಅವರಿಗೇನಾದರೂ ಕೊಟ್ಟರೆ C & D grade ಕಾಲೇಜುಗಳಿಗೆ ಯಾರು ಬರುವುದಿಲ್ಲ ಎಲ್ಲಾ ಮೈಸೂರು, ಬೆಂಗಳೂರು, ಹುಬ್ಬಳ್ಳಿಯಲ್ಲಿಯೇ ರೌಂಡ್ ಹಾಕುತ್ತಾರೆ. ವಿದ್ಯಾರ್ಥಿಗಳಿಗೆ ಸಹಾಯವಾಗಬೇಕು ಎನ್ನುವ ಹಾಗಿದ್ದರೆ ನೀವೇ postings ಕೊಡಿ counselling ಅವರಿಗೆ ಕೊಡಬೇಡಿ. Through Counselling ಹಂಚಿಕೆ ಮಾಡಲು ಅವರಿಗೆ ಅವಕಾಶ ಕೊಡಬೇಡಿ. ಇಲ್ಲವಾದರೆ ಏನು ಪ್ರಯೋಜನವಾಗುವುದಿಲ್ಲ 2200 ಜನ influence ತೆಗೆದುಕೊಂಡು ಬೆಂಗಳೂರು, ಮೈಸೂರು ಇಲ್ಲೇ ರೌಂಡ್ ಹಾಕುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ: ನಮ್ಮ ಇಲಾಖೆಯಲ್ಲಿ ಕೌನ್ಸಿಲಿಂಗ್ ಇರಲಿಲ್ಲ. ಕೌನ್ಸಿಲಿಂಗ್ ಅನ್ನು ನಾನೇ ಮಾಡಿಸಿದ್ದು ಏಕೆಂದರೆ, ನಾವು ಜವಾಬ್ದಾರಿ ತೆಗೆದುಕೊಂಡ ಹಲವಾರು ವರ್ಷಗಳು ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದೇನೆ. ನಾನು ಎಷ್ಟು ವರ್ಗಾವಣೆ ಮಾಡಬೇಕು, 800 ರಿಂದ 900 ವರ್ಗಾವಣೆ ಮಾಡಿಸಿರಬಹುದು. ನಾನೇನು ಮಾಡಿದೆಯೆಂದು ನನಗೆ ಕಣ್ಣಲ್ಲಿ ನೀರು ಬಂತು. ಯಾರಿಗೆ ಪ್ರಭಾವವಿಲ್ಲ, ಯಾರಿಗೆ ಪರಿಚಯವಿಲ್ಲ, ಯಾರು ಅಂಗವಿಕಲರಿದ್ದಾರೆ, ಯಾರು ವಿಧವೆಯರಿದ್ದಾರೆ ಅವರು ನಮ್ಮನ್ನು approach ಆಗುವುದಿಲ್ಲ. ಹಾಗಾಗಿ ನಾನೇ ಇದು ಬಹಳ ಪಾರದರ್ಶಕವಾಗಿ ಲಿಮಿಟೆಡ್ 3%, 4% ಆಗಲಿ ಎಂಬ ಉದ್ದೇಶದಿಂದ ಕೌನ್ಸಿಲಿಂಗ್ ಮಾಡಿದ್ದೇವೆ. ಈ ವರ್ಷ ನೋಡಿ minimum transfers ಆಗಿದೆ. ಪ್ರಾಧ್ಯಾಪಕನಾಗಿ ಕೆಲಸ ಮಾಡುವುದಕ್ಕೆ ಹೋದರೆ ಆತ ಕನಿಷ್ಠ 4–5 ವರ್ಷಗಳು ಕೆಲಸ ಮಾಡಬೇಕೋ, ಬೇಡವೋ ಹೇಳಿ. ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಅವನು ವಾಪಸ್ಸು ಬರಬೇಕಾದರೆ ಏನು ಮಾಡುವುದಕ್ಕೆ ಸಾಧ್ಯ? ಕಳೆದ ಬಾರಿ ಉತ್ತರ ಕರ್ನಾಟಕದಿಂದ ಬಹಳಷ್ಟು ಜನ ಲೆಕ್ಚರಲ್ಸ್ ಈ ಕಡೆಯೆಲ್ಲಾ ಬಂದುಬಿಟ್ಟರು. ಹಾಗಾಗಿ ಆ ಕಾಲೇಜುಗಳು ಬಂದ್ ಆಗುವುದಕ್ಕೆ ಪ್ರಾರಂಭವಾಯಿತು. ನೀವು ಹೇಳಿದ ವಿಷಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ ಅಥವಾ ಮೈಸೂರು ಸಿಟಿ ನೋಡುವುದಕ್ಕಿಂತ ಮೊದಲು ಹಳ್ಳಿಗಳಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ ಎಲ್ಲೆಲ್ಲಿ ಕಾಲೇಜುಗಳಿವೆ ಅಲ್ಲಿ ನೇಮಕಾತಿ ಮಾಡುವುದು ಯೋಗ್ಯವೆಂಬ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: B.Com, BBM ಗೆ ಬಹಳ ಡಿಮ್ಯಾಂಡ್ ಇದೆ. ದಯಮಾಡಿ section ಗಳನ್ನು ಮತ್ತು College ಗಳನ್ನು ಜಾಸ್ತಿ ಮಾಡಿಯೆಂದು ಮನವಿ ಮಾಡುತ್ತಿದ್ದೇನೆ. ನಾನು general ಆಗಿ ಹೇಳುತ್ತಿದ್ದೇನೆ. Commerece ಅನ್ನು ಸ್ವಲ್ಪ ಜಾಸ್ತಿ ಮಾಡಿ ಏಕೆಂದರೆ ಕೆಲವು ಕಡೆ ಬೇಡಿಕೆ ಜಾಸ್ತಿಯಿದೆ. ಅದಲ್ಲದೆ M.Sc., M.Com ಗೆ PHD ವ್ಯಾಸಂಗ ಮಾಡಿರುವವರು ಆಗಬೇಕೆಂಬ ನಿಯಮವಿದೆ. ಅದನ್ನು fill up ಮಾಡಬೇಕೆಂದು ತಮ್ಮಲ್ಲಿ

ಮನವಿ ಮಾಡುತ್ತೇನೆ. ಏಕೆಂದರೆ master degree ತೆಗೆದುಕೊಳ್ಳುವಾಗ lecturers ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಕೃಷಿ ಇಲಾಖೆ ಬಗ್ಗೆ ಹೇಳಬೇಕೆಂದರೆ ರೈತರು ನಮ್ಮ ಬೆನ್ನೆಲುಬು ಎಂದು ಎಲ್ಲರೂ ಹೇಳುತ್ತೇವೆ. ಕೃಷಿ ಇಲಾಖೆಯಲ್ಲಿ ನೂರಕ್ಕೆ 40% ರಷ್ಟು ಹುದ್ದೆಗಳು ಖಾಲಿಯಿವೆ. ಕೃಷಿಯಿರಬಹುದು, ತೋಟಗಾರಿಕೆಯಿರಬಹುದು, ರೇಷ್ಮೆ ಇಲಾಖೆಯಿರಬಹುದು, ಪಶುಸಂಗೋಪನೆ ಇಲಾಖೆಯಿರಬಹುದು, ಪಶುಸಂಗೋಪನಾ ಮಂತ್ರಿಗಳು ಕೂಡ ಇಲ್ಲಿದ್ದಾರೆ. ನಿಮ್ಮ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಖಾಲಿಯಿವೆ ಎಂದು ಹೇಳಿ ಸಚಿವರೆ, ಎಷ್ಟು ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆ ಖಾಲಿಯಿವೆ? ಈ ಹುದ್ದೆಗಳಿಗೆ ಅರ್ಜಿ ಹಾಕುವವರಿಲ್ಲ. ಪಶುಸಂಗೋಪನಾ ಸಚಿವರೆ ತಮ್ಮ ಊರಿಗೆ ಒಂದು ಕಾಲೇಜನ್ನು ತೆಗೆದುಕೊಳ್ಳಿ ನಾನೇನು ಬೇಡವೆಂದು ಹೇಳುವುದಿಲ್ಲ. ನಾಲ್ಕು ಕಾಲೇಜುಗಳನ್ನು extra ಮಾಡಿ ತೊಂದರೆಯೇನಾಗಿದೆ? ಇಂದು ತಮಿಳುನಾಡನಿಂದ ವೈದ್ಯರನ್ನು ಕರೆಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಪಶುಸಂಗೋಪನಾ ಇಲಾಖೆ ಒಂದರಲ್ಲೇ ಸುಮಾರು 350 ಹುದ್ದೆಗಳು ಖಾಲಿಯಿವೆ, ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಏನು ತೊಂದರೆ ಆಗಿದೆ? ಇವತ್ತು 20,000 ರೂ. ಸಂಬಳವೆಂದು ಯಾರು ವೈದ್ಯರು ಸಿಗುತ್ತಿಲ್ಲ, ನಿಮ್ಮ ಮಗನನ್ನು 20,000 ರೂ.ಗಳ ಸಂಬಳಕ್ಕೆ ಕಳುಹಿಸುತ್ತೀರಾ ಎಂದು ಮಾನ್ಯ ಅಧ್ಯಕ್ಷರು ನಿನ್ನೆ ಅವರನ್ನೇ ಕೇಳಿದರು. ದೇವೆಗೌಡರ ಸ್ವಂತ ಊರಿನಲ್ಲೇ ವೈದ್ಯರನ್ನು ಹಾಕಿ ಐದು ವರ್ಷಗಳಾಯಿತು. ನಾವೇನು ಪಾಪ ಮಾಡಿದ್ದೇವೆಂದು ಗೊತ್ತಿಲ್ಲ. ವೈದ್ಯರಿಗೆ ಇಷ್ಟೊಂದು ಡಿಮ್ಯಾಂಡ್ ಆಗಿರುವುದಕ್ಕೆ ಕಾರಣವೇನು? ಮುಖ್ಯಮಂತ್ರಿಗಳ ಮತ್ತು ಕಾನೂನು ಇಲಾಖೆಯ ಮಂತ್ರಿಗಳ ಮಾತನ್ನು ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಕೇಳುವುದಿಲ್ಲವೇ? ಮಾನ್ಯ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳು ಹೇಳದರು ಕೂಡ ಹಣಕಾಸು ಇಲಾಖೆಯಲ್ಲಿ clear ಆಗುವುದಿಲ್ಲವೆಂದರೆ ಕಾರಣವೇನು? 20,000 ರೂ.ಗಳ ಸಂಬಳಕ್ಕೆ ಯಾವ ವೈದ್ಯರು ಬರುತ್ತಾರೆ. 70,000–80,000 ರೂ.ಗಳವರೆಗೆ ಸಂಬಳವನ್ನು ಜಾಸ್ತಿ ಮಾಡಿ, ಅವರ ಬೇಡಿಕೆ ಏನಿದೆ ನೋಡಿ. ಕಾನೂನು ರೀತಿಯೇ ಮಾಡಿ ಕಾನೂನನ್ನು ಬಿಟ್ಟು ಮಾಡಿ ಎಂದು ನಾನು ಹೇಳುವುದಿಲ್ಲ.

ಒಟ್ಟಿನಲ್ಲಿ ನಮಗೆ ವೈದ್ಯರು ಬೇಕು. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಮಾಡಿದ ನಂತರ ಅವಶ್ಯಕವಿರುವ ಮೂಲಭೂತ ಸೌಕರ್ಯವನ್ನು ಒದಗಿಸಬೇಕು.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ, ಪಶುಸಂಗೋಪನೆ, ಮಾನವ ಹಕ್ಕುಗಳ ಸಚಿವರು):** ರೇವಣ್ಣರವರೆ, ಪಶುಸಂಗೋಪನಾ ಇಲಾಖೆಯಲ್ಲಿ 350 ಹುದ್ದೆಗಳು ಖಾಲಿಯಿರುವುದು ನಿಜ. ಖಾಲಿಯಿರುವ 350 ಹುದ್ದೆಗಳನ್ನು ಈ ಬಾರಿ ನೇಮಕಾತಿ ಮಾಡಬೇಕೆಂಬ ಉದ್ದೇಶದಿಂದ special rules ಅನ್ನು ಕೂಡ ನಾವು ಮಾಡಿದ್ದೇವೆ. ಬಹುಶಃ ಆದಷ್ಟು ಬೇಗ ಮಾಡುತ್ತೇವೆ. Special rules ಗೋಸ್ಕರ ಕಾಯುತ್ತಿದ್ದು, ACS ರವರ ಅಧ್ಯಕ್ಷತೆಯಲ್ಲಿ Special rules ಆಗಿದೆ. Rules Cabinet ಗೆ ಬಂದು publish ಆದ ತಕ್ಷಣ recruitment ಮಾಡುತ್ತೇವೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾಲ್ಕೈದು ಕಾಲೇಜುಗಳನ್ನು ಮಾಡುವುದಕ್ಕೆ ಏನು ತೊಂದರೆ? ಶಿರಾದಲ್ಲೇ ಮಾಡಿ. ನಾವು ಬೇಡವೆನ್ನುವುದಿಲ್ಲ. ನಿಮಗೆ ಒಳ್ಳೆಯದಾಗುತ್ತದೆ, ಜನರು ಮತವನ್ನು ಹಾಕುತ್ತಾರೆ.

**ಶ್ರೀ ಟಿ.ಬಿ. ಜಯಚಂದ್ರ:** ಒಳ್ಳೆಯ ಆಯಕಟ್ಟಿನ ಜಾಗದಲ್ಲಿ ಶಿರಾಗೆ ಹತ್ತಿರವಾಗಿರುವ ಜಾಗದಲ್ಲಿ ಸುಮಾರು ಒಂದು ಸಾವಿರ ಎಕರೆಯಷ್ಟು ಜಮೀನಿರುವ ಕಾರಣ ಶಿರಾದಲ್ಲಿ ಕಾಲೇಜನ್ನು ಪ್ರಾರಂಭ ಮಾಡುವ ಪ್ರಸ್ತಾವನೆ ಕೂಡ ಇದೆ.

**ಶ್ರೀ ಹೆಚ್.ಡಿ. ರೇವಣ್ಣ:** ಚಿತ್ರದುರ್ಗ ಮತ್ತು ತುಮಕೂರಿಗೆ ಮಧ್ಯೆ ಆಗುತ್ತದೆ ಕಾಲೇಜನ್ನು ಪ್ರಾರಂಭ ಮಾಡಿ ನಾವೇನು ಬೇಡವೆಂದು ಹೇಳಿಲ್ಲ. ನಾಲ್ಕು ಕಾಲೇಜುಗಳನ್ನು ಸ್ಥಾಪನೆ ಮಾಡಿ, ರಾಮನಗರಕ್ಕೆ ಕೊಡಿ, ನಿಮ್ಮ ಊರಿನಲ್ಲಿ ಮಾಡಿ.

**ಶ್ರೀ ಟಿ.ಬಿ. ಜಯಚಂದ್ರ:** ಈ ಪ್ರಸ್ತಾಪ ಕೂಡ ಇದೆ. ನಮಗೆ ಬಂದಿರುವ ಸಮಸ್ಯೆಯೆಂದರೆ, ಒಂದು ಕಾಲೇಜನ್ನು ಸ್ಥಾಪನೆ ಮಾಡಬೇಕೆಂದರೆ ಕನಿಷ್ಟ 200 ಕೋಟಿ ರೂ.ಗಳವರೆಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: ಎಲ್ಲೆಲ್ಲೋ ಹಣ ವಿನಿಯೋಗವಾಗುತ್ತಿದೆ. 200 ಕೋಟಿ ರೂ.ಗಳನ್ನು ಖರ್ಚು ಮಾಡುವುದು ಯಾವ ದೊಡ್ಡ ವಿಷಯ. ಹಸುಗಳಿಗೆ ವೈದ್ಯರು ಬೇಡವೆಂದು ಹೇಳುತ್ತೀರಾ, ಯಾವ್ಯಾವುದಕ್ಕೋ ಹಣವನ್ನು ಖರ್ಚು ಮಾಡುತ್ತೀರಿ. Veterinarty college ಗೆ ನೀವು ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ. ಕಾನೂನು ಮಂತ್ರಿಗಳು ದೇವರ ಮಂತ್ರಿಗಳಾಗಿ ದೇವರ ಕಡೆ ನಿಗಾ ವಹಿಸುತ್ತಿದ್ದೀರಿ, ನೀವು ಹಸುಗಳ ಕಡೆ ನಿಗಾ ವಹಿಸುತ್ತಿಲ್ಲ. ದಯಮಾಡಿ ತಲಾ 200 ಕೋಟಿ ರೂ.ಗಳಂತೆ ಒಂದು ಕಾಲೇಜು ಸ್ಥಾಪನೆಗೆ ವೆಚ್ಚವಾದರೆ 4–5 ಕಾಲೇಜುಗಳನ್ನು ಸ್ಥಾಪನೆ ಮಾಡಿ 1000 ಕೋಟಿ ರೂ.ಗಳಾಗುತ್ತದೆ. ಒಂದೇ ಬಾರಿ ಖರ್ಚು ಮಾಡುವುದಿಲ್ಲ. ಚಿತ್ರದುರ್ಗ ಮತ್ತು ತುಮಕೂರು ಮಧ್ಯೆ ನಿಮ್ಮ ಕ್ಷೇತ್ರದಲ್ಲೇ ಮಾಡಿ ಬೇಡವೆಂದು ಹೇಳುವುದಿಲ್ಲ. ಉತ್ತರ ಕರ್ನಾಟಕಕ್ಕೆ ಎರಡು ಕಾಲೇಜು, ಇನ್ನೊಂದು ಎರಡು ಕಾಲೇಜುಗಳನ್ನು ಕೊಡಿ. ಒಟ್ಟಾರೆಯಾಗಿ ಕಾಲೇಜುಗಳನ್ನು ಸ್ಥಾಪನೆ ಮಾಡಿ. ನಮ್ಮಲ್ಲಿ ನಾಲ್ಕು ಕಾಲೇಜುಗಳಿವೆ. ಒಂದು ವರ್ಷಕ್ಕೆ 50 admission ಇದೆ. 50 ಇರುವುದನ್ನು 100 ಮಾಡುವುದಕ್ಕೆ ಏನು ತೊಂದರೆಯಿದೆ. ಇರುವ ನಾಲ್ಕು ಕಾಲೇಜಿಗೆ 200 ವಿದ್ಯಾರ್ಥಿಗಳು ಬರುತ್ತಾರೆ. ಇದರಿಂದ ಏನು ಪ್ರಯೋಜನವಾಗುತ್ತದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇರುವ ಪರಿಸ್ಥಿತಿಯನ್ನು ತಮಗೆ ಹೇಳುತ್ತಿದ್ದೇನೆ. ಉದಾಹರಣೆಗೆ ತಮ್ಮ ಇಲಾಖೆಯಲ್ಲಿ ಡೈರಿಯಿದೆ, ರೈತರು ಒಂದು ಕ್ವಿಂಟಾಲ್ ಮೆಕ್ಕೆಜೋಳವನ್ನು 800 ರಿಂದ 900 ರೂ.ಗಳವರೆಗೆ ಮಾರಾಟ ಮಾಡಿದ್ದಾರೆ. ಮೆಕ್ಕೆಜೋಳವನ್ನು ನಮ್ಮ ಡೈರಿ ಕಡೆಯಿಂದ ಖರೀದಿ ಮಾಡಬಹುದಲ್ಲವೇ? ನೇರವಾಗಿ ರೈತರಿಂದ ಖರೀದಿ ಮಾಡುವುದಕ್ಕೇನು ತೊಂದರೆ? ಹಿಂದಿನ ಸರ್ಕಾರದವರು exemption ಕೊಟ್ಟಿದ್ದಾರೆ, ನೀವು 4(G) ಯಲ್ಲಿ exemption ಕೊಡುವುದಕ್ಕೇನು ತೊಂದರೆ? ಸಮಸ್ಯೆಯೇನಾದರೂ ಇದೆಯೇ? ನಾಲ್ಕು ಪಶು ಆಹಾರ ಕಾರ್ಖಾನೆಗಳಿವೆ, 30,000 ರಿಂದ 40,000 ಟನ್ ಆಹಾರ ಪಶು ಆಹಾರ ಕಾರ್ಖಾನೆಗಳಿಂದ ಮಾರಾಟವಾಗುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ:** ರೈತರಿಂದ ನೇರವಾಗಿ KMF ರವರು ಖರೀದಿ ಮಾಡುವುದಕ್ಕೆ ತೊಂದರೆಯಿಲ್ಲವೆನ್ನುವ ಬಗ್ಗೆ ಅನೇಕ ಸಾರಿ ಹೇಳಿದ್ದೇವೆ.

**ಶ್ರೀ ಹೆಚ್.ಡಿ. ರೇವಣ್ಣ:** 4(G) exemption ಕೊಟ್ಟಿಲ್ಲ ಬೇಕಾದರೆ ಪಶುಸಂಗೋಪನಾ ಇಲಾಖೆಯ ಕಾರ್ಯದರ್ಶಿಯವರಿದ್ದರೆ ಕೇಳಿ ನನಗೆ ಹೇಳಿ.

**ಶ್ರೀ ಟಿ.ಬಿ. ಜಯಚಂದ್ರ:** ಇದಕ್ಕೆ 4(G) exemption ಬೇಕಾಗಿಲ್ಲ. ರೈತರಿಂದ ನೇರವಾಗಿ KMF ಸಂಸ್ಥೆಯವರು ಖರೀದಿ ಮಾಡುವುದಕ್ಕೇನು ತೊಂದರೆಯಿಲ್ಲ. ಸಾಧ್ಯವೇ ಇಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ಇವತ್ತಿನವರೆಗೆ ರೈತರಿಂದ ಒಂದೇ ಒಂದು ಕ್ವಿಂಟಾಲ್ ಜೋಳವನ್ನು ಖರೀದಿ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ. ನಾಲ್ಕು ಪಶು ಆಹಾರ ಕಾರ್ಖಾನೆಗಳಿಗೆ major ಆಗಿ 60% ಜೋಳ ಬೇಕಾಗುತ್ತದೆ. ಸುಮಾರು 30,000 ರಿಂದ 40,000 ಟನ್ ಪಶು ಆಹಾರ ಉತ್ಪಾದನೆಯಾಗುತ್ತಿದೆ.

**ಶ್ರೀ ಹೆಚ್.ಡಿ. ರೇವಣ್ಣ:** ನೀವು ರೈತರ ಹತ್ತಿರ ನೇರವಾಗಿ ತೆಗೆದುಕೊಂಡರೆ 1200 ರೂ.ಗಳವರೆಗೆ ತೆಗೆದುಕೊಳ್ಳಬಹುದು. ಇವತ್ತು 900 ರೂ.ಗಳಿಗೆ ತೆಗೆದುಕೊಂಡು 1,300 ರೂ.ಗಳಿಂದ 1,400 ರೂ.ಗಳಿಗೆ ಕೊಟ್ಟಿದ್ದಾರೆ. ಸರ್ಕಾರದಲ್ಲಿ 1,100 ರೂ.ಗಳ ಬೆಂಬಲ ಬೆಲೆ ಫಿಕ್ಸ್ ಮಾಡಿದ್ದರೂ, ಖರೀದಿ ಆಗುತ್ತಿರುವುದು 800–900 ರೂ.ಗಳಿಗೆ. Maximum ಅಂದರೆ 1,000 ರೂ.ಗಳು. ಉತ್ತರ ಕರ್ನಾಟಕದಲ್ಲಿ ಮತ್ತು ನಮ್ಮಲ್ಲಿ ಹೆಚ್ಚಾಗಿ ಜೋಳದ ಬೆಳೆಯನ್ನು ಬೆಳೆಯುತ್ತಾರೆ. ನಾನು ಹೇಳುವುದೇನೆಂದರೆ, ದಯಮಾಡಿ ಇಂತಹ ರೈತರಿಗೆ ಯಾವ್ಯಾವ ಸಮಯದಲ್ಲಿ ಏನೇನು ಅನುಕೂಲಗಳನ್ನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಈ ಅಂಶವನ್ನು ಕೃಷಿ ಮಂತ್ರಿಗಳಿಲ್ಲದ ಕಾರಣ ಮಾನ್ಯ ಕಾನೂನು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಉದಾಹರಣೆಗೆ ಒಂದು ಕ್ವಿಂಟಾಲ್ ರಾಗಿಗೆ 1,250

ರೂ.ಗಳ ಬೆಂಬಲ ಬೆಲೆಯನ್ನು ನೀಡುತ್ತಾರೆ. ನಾಟಿ ಮಾಡುವ ಸಮಯದಲ್ಲಿ ಪರಿಸ್ಥಿತಿ ಹೇಗಿದೆಯೆಂದರೆ, ಮಳೆ ಬೀಳುವ ಸಮಯದಲ್ಲಿ ಎರಡು ದಿವಸಗೊಳಗೆ ನಾಟಿ ಮಾಡಬೇಕಾಗುತ್ತದೆ. ನಾಟಿ ಮಾಡುವ ಸಮಯದಲ್ಲಿ ಒಂದು ಆಳಿಗೆ ಸುಮಾರು 300 ರೂ.ಗಳು ಮತ್ತು ಇದರ ಜೊತೆಗೆ ಊಟ, ಕ್ವಾರ್ಟರ್ ಎಣ್ಣೆ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಆ ಆಳು ಕೆಲಸಕ್ಕೇ ಬರುವುದಿಲ್ಲ. ನಾಡಿ ಮಾಡುವ ಸಮಯದಲ್ಲಿ ಈ ರೀತಿಯ ಪರಿಸ್ಥಿತಿಯಿದೆ. ಒಂದು ಎಕರೆಯಲ್ಲಿ ಒಂದು ಸಾರಿ ನಾಟಿ ಮಾಡುವುದಕ್ಕೆ minimum 15 ಜನ ಬೇಕಾಗುತ್ತದೆ. ನಾಟಿ ಮಾಡಿದ ನಂತರ ಅವೆಲ್ಲವನ್ನೂ ಬಡಿದು ಕೆಲಸ ಮುಗಿಸುವಷ್ಟರಲ್ಲಿ ಸುಮಾರು ಎಂಟು ಕ್ವಿಂಟಾಲ್ ರಾಗಿ ಬೆಳೆ ಬರಬಹುದು. ಒಟ್ಟಾರೆ ಒಂದು ಎಕರೆಗೆ 10,000 ರೂ.ಗಳು ಬರುವುದು. ಆದರೆ ಒಂದು ಎಕರೆಗೆ ರೈತರಿಗೆ ಕನಿಷ್ಟ 20,000 ರೂ.ಗಳು ಖರ್ಚಾಗುತ್ತದೆ. ರೈತರೆ 12,000 ರೂ.ಗಳನ್ನು ಹಾಕಬೇಕಾಗುತ್ತದೆ. ಹಾಗಾಗಿ ಇಂದಿನ ದಿನಗಳಲ್ಲಿ· ರಾಗಿ ಬೆಳೆಯುವವರೇ ಸಿಗದಂತಹ ಪರಿಸ್ಥಿತಿಯಾಗಿದೆ. ದಯಮಾಡಿ ರೈತರ ಜೊತೆ ನೀವು ಈ ಬಗ್ಗೆ ಮಾತನಾಡಬೇಕು. ಪುಸ್ತಕದಲ್ಲಿ ರೈತರ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳುತ್ತೀರಿ. ಕೃಷಿ ಇಲಾಖೆ ಇರಬಹುದು, ತೋಟಗಾರಿಕಾ ಇಲಾಖೆಗಳಿಗೆ ಹೆಚ್ಚಿನ ಮೊತ್ತದಲ್ಲಿ ಅನುದಾನವನ್ನು ನೀಡಿ. ಖರ್ಚಾಗುವುದರಲ್ಲಿ ಶೇ. 10 ರಷ್ಟನ್ನು ರೈತರಿಗೆ ಮೀಸಲಿಡಿ. ಕೆಲವು ರೈತರು ವ್ಯವಸಾಯ ಮಾಡುವುದು ಬೇಡವೆಂದು ಹೇಳಿ 3,000 ಅಥವಾ 4,000 ರೂ.ಗಳು ಬಂದರೂ ಸಾಕೆಂದು ಹೇಳಿ ಗಾರ್ಮೆಂಟ್ಸ್ ಫ್ಯಾಕ್ಟರಿಗಳಿಗೆ ಕೆಲಸಕ್ಕೆ ಹೋಗುವ ಪರಿಸ್ಥಿತಿಯಾಗಿದೆ. ಇದೇ ರೀತಿಯಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ರೈತರನ್ನು ಕಡೆಗಣಿಸಿದರೆ, ಮುಂದಿನ ದಿನಗಳಲ್ಲಿ ವ್ಯವಸಾಯ ಮಾಡುವವರೇ ಸಿಗುವುದಿಲ್ಲ. ಇದನ್ನು ನೀವು ಅರ್ಥಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು. ಒಂದು ಬೆಳೆ ಬೆಳೆಯಬೇಕಾದರೆ ಇಷ್ಟು ಮೊತ್ತ ಖರ್ಚಾಗುತ್ತದೆಂದು ವಿವರಿಸಿ, ಭತ್ತಕ್ಕಾಗಲಿ, ರಾಗಿಗಾಗಲಿ, ಜೋಳಕ್ಕಾಗಲಿ ಮತ್ತು ಹೈಬ್ರೀಡ್ ಬೆಳೆಗಳಿಗೆ ಬೆಂಬಲ ಬೆಲೆಯನ್ನು ನಿಗಧಿಪಡಿಸುವಾಗ ಕಳೆದ ಸಾರಿ 1,530 ರೂ. ಎಂದು

ಹೇಳಿ 1,300 ರೂ.ಗಳನ್ನು ನೀಡಿದಿರಿ. ಈ ಸಾರಿ 1,100 ರೂ.ಗಳನ್ನು ನಿಗದಿಪಡಿಸಿದಿರಿ. 1,100 ರೂ.ಗಳನ್ನು ಯಾರು ಕೊಡುತ್ತಾರೆ? ನೀವು 1,100 ರೂ.ಗಳ ಬೆಲೆಯನ್ನು ಘೋಷಿಸಿದ ಕೂಡಲೇ, ಖಾಸಗಿಯವರು 1,150 ರೂ.ಗಳನ್ನು ನೀಡಿ ತೆಗೆದುಕೊಳ್ಳುತ್ತಿದ್ದಾರೆ. ಅವರುಗಳು ಏನು ಮಾಡುತ್ತಾರೆಂದರೆ ಜೋಳವನ್ನು ಖರೀದಿ ಮಾಡಿ stock ಮಾಡಿಟ್ಟು ಪುನ: ನಿಮಗೆ ಕೊಡುವ ಪರಿಸ್ಥಿತಿಯಾಗಿದೆ. ಆದ್ದರಿಂದ ದಯಮಾಡಿ ತಾವು ಇದನ್ನು ಸರಿಪಡಿಸಬೇಕು.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಸರ್ಕಾರದವರು MSP ಎಂದು ಘೋಷಣೆ ಮಾಡಿದರು. ಆ ಬೆಲೆಗೆ ಮಾರುಕಟ್ಟೆಯಲ್ಲಿ ರೈತರಿಂದ ಬೆಳೆಗಳನ್ನು ಕೊಂಡುಕೊಳ್ಳದೇ ಹೋದಾಗ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. MSP ಎಂದು ರಾಜ್ಯ ಸರ್ಕಾರದವರು ಘೋಷಣೆ ಮಾಡುತ್ತೀರಿ. ಆದರೆ ಮಾರುಕಟ್ಟೆಯಲ್ಲಿ ಆ ಪದ್ಧತಿಯನ್ನೂ ಯಾರೂ ಸಹ ನಡೆಸಿಕೊಂಡು ಹೋಗುವುದಿಲ್ಲ. ಆಗ ಅದನ್ನು offence ಎಂದು ಟ್ರೀಟ್ ಮಾಡುತ್ತೀರಾ ಅಥವಾ violation ಎಂದು ಟ್ರೀಟ್ ಮಾಡುತ್ತೀರಾ? ಯಾವ ರೀತಿಯಾದರೂ ಒಂದು ಹೆದರಿಕೆ ಅವರಿಗೆ ಬೇಕಲ್ಲವೇ?

**ಶ್ರೀ ಜೆ.ಟಿ. ಪಾಟೀಲ್:** ಇದೊಂದು ಒಳ್ಳೆಯ ಸಲಹೆ. Very good suggestion.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಸಾರ್ವಭೌಮ ಸರ್ಕಾರ ಅಂದರೆ ರಾಜ್ಯ ಸರ್ಕಾರ ಒಂದು ಬೆಲೆ ಎಂದು ನಿರ್ಧಾರ ಮಾಡಿದ ಮೇಲೆ, ರೈತರ ಹತ್ತಿರ ವ್ಯಾಪಾರಸ್ಥರು ಖರೀದಿ ಮಾಡದೇ ಹೋದರೆ ಸರ್ಕಾರ ಏನಾದರೊಂದು ಹಕ್ಕನ್ನು ಚಲಾಯಿಸಬೇಕಲ್ಲವೇ? ಇಲ್ಲದಿದ್ದರೆ ಸರ್ಕಾರಕ್ಕೆ ಬೆಲೆ ಇರುವುದಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾಗಳು ಮತ್ತು ಪಶುಸಂಗೋಪನಾ ಸಚಿವರು):** ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಬೆಳೆಗೂ ಕೂಡ ಬೆಲೆಯನ್ನು ನಿರ್ಧರಿಸುವಂತಹದು, CACP ಇರುವಂತಹ ಭಾರತ ಸರ್ಕಾರದ ಮಟ್ಟದಲ್ಲಿರುತ್ತದೆ. ಅವರು ಎಲ್ಲಾ ರಾಜ್ಯ ಸರ್ಕಾರಗಳಿಂದ ಪ್ರಸ್ತಾವನೆಯನ್ನು ತರಿಸಿಕೊಂಡ ನಂತರ ಬೆಲೆಯನ್ನು ನಿಗಧಿ ಮಾಡುವವರು ಕೇಂದ್ರ ಸರ್ಕಾರದವರು. ಅವರು ನಿಗಧಿ ಮಾಡಿದ ನಂತರ ನೋಟಿಫೈ ಮಾಡಿದ ಮೇಲೆ further ನಾವು ನೋಟಿಫಿಕೇಷನ್ ಮಾಡುತ್ತೇವೆ. ಕೊಳ್ಳುವಂತಹ ಪ್ರಶ್ನೆ ಬಂದಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ಜಂಟಿ ಜವಾಬ್ದಾರಿ ಹೊಂದಿರುತ್ತದೆ. ಇದುವರೆವಿಗೂ ಕೂಡ ಭಾರತ ಸರ್ಕಾರ MSP ಯನ್ನು declare ಏನು ಮಾಡುತ್ತಾರೋ, ಅದರ ಪ್ರಕಾರ ಒಂದು ರಾಜ್ಯ ಏಜೆನ್ಸಿಯಾಗಿ ಅವರ ಪರವಾಗಿ purchase ಮಾಡುತ್ತದೆ. ಕಳೆದ 40-50 ವರ್ಷಗಳಿಂದಲೂ ಅದೇ ಪದ್ಧತಿ ರೂಢಿಯಲ್ಲಿತ್ತು. ಆದರೆ ಪ್ರಪ್ರಥಮವಾಗಿ ಈ ವರ್ಷ ಆ ಪದ್ಧತಿಯನ್ನು back out ಆಗಿರುತ್ತದೆ. Procurement ಗೆ ಯಾವುದೇ ರೀತಿಯ ಪ್ರೋತ್ಸಾಹ ಇಲ್ಲವೆನ್ನುವುದು ಭಾರತ ಸರ್ಕಾರದಿಂದ ರವಾನೆಯಾದಾಗ ನಮಗೆ ಸ್ವಲ್ಪ ತೊಂದರೆಯಾಗಿರುತ್ತದೆ. ಹೀಗಾಗಿ ನಾವು ಧೈರ್ಯದಲ್ಲಿ ನುಗ್ಗಬೇಕು? ಭಾರತ ಸರ್ಕಾರ back out ಆದರೆ ಹೇಗೆ? ಏಕೆಂದರೆ prices declare ಮಾಡುವವರು ಅವರು, ಕೊಳ್ಳಬೇಕಾದವರು ನಾವು ಎಂದರೆ ಹೇಗಾಗುತ್ತದೆ? No doubt. ನೀವು ಹೇಳುವ ಪ್ರಕಾರ Agriculture is a State subject. ಆದಾಗ್ಯೂ ಕೂಡ ಬೆಲೆ ಕೊಡಿಸುವ ವಿಚಾರದಲ್ಲಿ ಜಂಟಿ ಜವಾಬ್ದಾರಿಕೆಯೂ ಇರುತ್ತದೆ. ಕಳೆದ 50 ವರ್ಷಗಳಿಂದಲೂ ಇದೇ ಪದ್ದತಿ ನಡೆದುಕೊಂಡು ಬಂದಿರುವುದು. ಆದರೆ first time Government if India back out ಆಗಿದೆ.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರು ಬಂದ ಕಳೆದ ನಾಲ್ಕು ದಿನಗಳಿಂದ ಕುಳಿತುಕೊಂಡಿದ್ದಾರೆ. ಇದರ ಬಗ್ಗೆ ನೀವು ಮತ್ತು ಅವರೂ ಏನು ಹೇಳುತ್ತಿಲ್ಲ. ಎಂತಹ ಅತಂತ್ರ ಪರಿಸ್ಥಿತಿಯಲ್ಲಿ ಕಬ್ಬು

ಬೆಳೆಗಾರರನ್ನು ಸಿಲುಕಿಸಿದ್ದೀರಿ. ಹೀಗಾದರೆ ಅವರ ಪರಿಸ್ಥಿತಿ ಏನಾಗಬೇಕು? ಕೇಂದ್ರದಲ್ಲಿ ನಿರ್ಧಾರ ಮಾಡಬೇಕೆಂದು ನೀವು ಹೇಳುತ್ತೀರಿ.

**ಶ್ರೀ ಜಗದೀಶ್ ಶೆಟ್ಟರ್:** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಶ್ರೀ ಮಹದೇವ್ ಪ್ರಸಾದ್ ಅವರು ಸೋಮವಾರ statement ಕೊಡುತ್ತೇವೆಂದು ಹೇಳಿದ್ದರು. ಆದರೆ ಇದುವರೆವಿಗೂ ಬಂದಿರುವುದಿಲ್ಲ. Status report ಅನ್ನು ಇವತ್ತು ಕೊಡುತ್ತೀರಾ? ಯಾರಿಗೆ ಎಷ್ಟು ಪೇಮೆಂಟ್ ಆಗಿದೆ ಎನ್ನುವ ಬಗ್ಗೆ ಮಾಹಿತಿ ಕೊಡುತ್ತೇವೆಂದು ಹೇಳಿದ್ದಿರಿ. ಆದರೆ ಸೋಮವಾರದಿಂದ ಇದುವರೆವಿಗೂ ಯಾವುದೇ statement ಬಂದಿರುವುದಿಲ್ಲ.

**ಉಪಾಧ್ಯಕ್ಷರು:** ಇವತ್ತು ಕೊಡಿ. ರೇವಣ್ಣ ನವರೇ ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ತೋಟಗಾರಿಕಾ ಇಲಾಖೆಗೆ ಸುಮಾರು 1,304 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದಾರೆ. 1,304 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾದರೆ, ಮೊದಲಿಗೆ ಈ ಇಲಾಖೆಯಲ್ಲಿ 2,500 vacancy ಇದೆ. ಇದರಲ್ಲಿ ತೋಟಗಾರಿಕಾ ಸಹಾಯಕ ಅಧಿಕಾರಿ ಅಂದರೆ field assistant ನ ಸುಮಾರು 700 ಹುದ್ದೆಗಳು ಖಾಲಿಯಿವೆ. ಹೀಗಿರುವಾಗ 1,304 ಕೋಟ ರೂ.ಗಳನ್ನು ಯಾವ ರೀತಿ ಖರ್ಚು ಮಾಡುತ್ತೀರಿ? ಸಹಾಯಕ ಅಧಿಕಾರಿಯ ಹುದ್ದೆಗಳನ್ನು ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಸುಮಾರು ಒಂದು ಸಾವಿರ ಹುದ್ದೆಗಳ ನೇಮಕಾತಿ ಮಾಡಲಾಗಿರುತ್ತದೆ. ಅದು ಬಿಟ್ಟರೆ ಇವತ್ತಿನವರೆಗೂ ತೋಟಗಾರಿಕಾ ಇಲಾಖೆಯಲ್ಲಿ ಒಂದು ಹುದ್ದೆಯನ್ನಾದರೂ ನೇಮಕಾತಿ ಮಾಡಿರುತ್ತೀರಾ? ಯಾವ ಕಾರಣಕ್ಕಾಗಿ ರೈತರ ಬಗ್ಗೆ ಇಷ್ಟೊಂದು ಅಸಡ್ಡೆ ತೋರಿಸುತ್ತಿದ್ದೀರಾ? ತೆಂಗು ಬೆಳೆಗಾರರ ಬಗ್ಗೆ ಹೇಳುವುದಾದರೆ, ಸಂಪೂರ್ಣ ನಾಶವಾಗಿರುತ್ತದೆ. ತುಮಕೂರು ಜಿಲ್ಲೆಯಲ್ಲಿ ಮೇಜರ್ ಆಗಿರುವ ತಿಪಟೂರು ತಾಲ್ಲೂಕಿರಬಹುದು, ಕಡೂರು ತಾಲ್ಲೂಕಿರಬಹುದು, ಅರಸೀಕೆರೆ ಇರಬಹುದು. ಅರಸೀಕೆರೆ ಕ್ಷೇತ್ರದ ಶಾಸಕರಾದ ಶ್ರೀ ಶಿವಲಿಂಗೇಗೌಡರು ಸದನದಲ್ಲಿಲ್ಲ. ಚೆನ್ನರಾಯಪಟಟ್ಣ ಎಲ್ಲಾ ಸೇರಿದಂತೆ, ತೆಂಗು ಬೆಳೆಗೆ

ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಪ್ಯಾಕೇಜ್‌ವೊಂದನ್ನು ಕೊಟ್ಟರು. ಆದರೆ ಆ ಪ್ಯಾಕೇಜ್ ಏನಾಗಿದೆ? ಇವತ್ತು ಸರಿಯಾಗಿ ಮಳೆಯಾಗುತ್ತಿಲ್ಲ. ಸರಿಯಾಗಿ ಮಳೆಯಾಗದ ಕಾರಣದಿಂದ ಹೆಚ್ಚಾಗಿ ಬೆಳೆ ನಾಶವಾಗುತ್ತಿದೆ. ಕೆಲವೊಂದು ಕಡೆಗಳಲ್ಲಿ 100 ಕ್ಕೆ 60 ರಿಂದ 70 ರಷ್ಟು ತೆಂಗಿನ ಗಿಡಗಳು ನಾಶವಾಗಿದೆ. ಇಂದಿನ ದಿನಗಳಲ್ಲಿ ಏನಾಗಿದೆಯೆಂದರೆ, ಮೂಲಭೂತ ಸೌಕರ್ಯ ಒದಗಿಸುವುದು ಯಾವುದೇ ಇದ್ದರೂ ಅವಶ್ಯಕತೆಯಿರುವಂತಹ ನೇಮಕಾತಿಗಳನ್ನು ಮಾಡುವುದಕ್ಕೆ ಏನು ತೊಂದರೆ?

ಸದನದಲ್ಲಿ RDPR minister ಇದ್ದಾರೆ. ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಲ್ಲಿ ತೋಟಗಾರಿಕೆಗೆ ಕೇಂದ್ರ ಸರ್ಕಾರದಿಂದ ಎಷ್ಟು ದುಡ್ಡು ಬರುತ್ತದೆ? ಸಪೋಟ ಬೆಳೆ ಹಾಕಿದರೆ 50% ಸಬ್ಸಿಡಿ, ಬಾಳೆ ಬೆಳೆ, ಮಾವು ಬೆಳೆ ಹಾಕಿದರೆ ಸಬ್ಸಿಡಿ ಬರುತ್ತದೆ. ತೋಟಗಾರಿಕಾ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳೇ ಇಲ್ಲವೆಂದರೆ, ಇದಕ್ಕೆ ಕಾರಣವೇನು? ತೋಟಗಾರಿಕಾ ಇಲಾಖೆಯ ಕಾರ್ಯದರ್ಶಿ ಮತ್ತು ನಿರ್ದೇಶಕರು ಏನು ಮಾಡುತ್ತಿದ್ದಾರೆ? ಆದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಕೃಷಿ ಇಲಾಖೆಯಲ್ಲಿ ಯಾವ್ಯಾವ vacancy ಇದೆ. ಉದಾಹರಣೆ ಕೃಷಿ ಇಲಾಖೆಯಲ್ಲಿ ಗ್ರೂಪ್ 'ಸಿ' ಎಲ್ಲಾ ಹುದ್ದೆಗಳೂ ಸೇರಿ ಸುಮಾರು 3,000 vacancy ಇದೆ. ಒಟ್ಟು 4,000 ಜನ ಇರಬಹುದು. ಕೃಷಿ ಇಲಾಖೆಗೆ ಸುಮಾರು 3,775 ಕೋಟಿ ರೂ.ಗಳ ಹಣ ಕೊಡುತ್ತೇವೆಂದು ಹೇಳಿರುತ್ತಾರೆ. ಈ ಹಣ ವಿನಿಯೋಗ ಮಾಡುವುದಕ್ಕಾದರೂ ಜನ ಬೇಕಲ್ಲವೇ? ರೇಷ್ಮೆ, ಕೃಷಿ, ಮೀನುಗಾರಿಕೆ ಇಲಾಖೆಗಳಿರಬಹುದು. ಅಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರೆಡಕ್ಕೂ ರೈತರು ಹೋದರೆ ಹೋಗಲಿ ಸಾಯಲಿ. ಇವರಿಗೆ ಬಾಗಿಲು ಮುಚ್ಚಿಸಬೇಕೆನ್ನುವ ಉದ್ದೇಶ ಏನಾದರೂ ಇದೆಯೇ ಎನ್ನುವುದು ಗೊತ್ತಿಲ್ಲ.

ಕಬ್ಬು ಬೆಳೆಗಾರರ ಪರಿಸ್ಥಿತಿ ಏನಾಗಿದೆಯೆಂದರೆ, ಒಂದು ಎಕರೆ ಕಬ್ಬು ಬೆಳೆಯಬೇಕಾದರೆ ಎಷ್ಟು ಹಣ ಬೇಕಾಗುತ್ತದೆ? ಒಂದು ವರ್ಷವಾದರೂ ದುಡ್ಡು ಕೊಡಲಿಲ್ಲವೆಂದರೆ ರೈತರು ಏನು ಮಾಡಬೇಕು? ಕೆಲವು ಮಂತ್ರಿಗಳು

ಹಣ ನೀಡಿದ್ದೇವೆಂದು ಹೇಳಿ ಸಹಿ ಹಾಕಿಸಿಕೊಂಡಿರುವುದು ವೃತ್ತ ಪತ್ರಿಕೆಗಳಲ್ಲಿ ಬರುತ್ತಿದೆ. ಇದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ? ಇದರ ಉದ್ದೇಶವೇನೆಂಬುದು ಗೊತ್ತಿಲ್ಲ. ಏಕೆಂದರೆ ಸರ್ಕಾರ ಏನಾದರೂ ಖಾಸಗಿ ಮಾಲೀಕರ ಜೊತೆ ಶಾಮೀಲಾಗಿದೆಯೇ? ಒಂದು ವರ್ಷ, ಎರಡು ವರ್ಷವಾದರೂ ರೈತರಿಗೆ ದುಡ್ಡು ಕೊಡದೇ ಇರುವುದಕ್ಕೆ ಕಾರಣವೇನು? ಒಂದು ಕೆಲಸ ಮಾಡಿ, ನೀವು ರೈತರಿಗೆ ಹಣವನ್ನು ಕೊಟ್ಟು ಬಿಡಿ, ನಂತರ ಯಾರು ಕೊಡಬೇಕೋ ಅವರ ಫ್ಯಾಕ್ಟರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಿ. ರೈತರಿಗೆ ಸಮಯಕ್ಕೆ ಸರಿಯಾಗಿ ಪೇಮೆಂಟ್ ಕೊಟ್ಟುಬಿಡಿ. ಅದಕ್ಕೇನು ನಾವು ಬೇಡವೆನ್ನುವುದಿಲ್ಲ. ಕೆಲವು ಕಡೆಗಳಲ್ಲಿ ರೈತರಿಗೆ 100 ರೂ.ಗಳನ್ನು ಕಡಿಮೆಯೇ ಕೊಡಿ. ನಾವೇನು ಬೇಡವೆನ್ನುವುದಿಲ್ಲ. ಕಾಲ ಕಾಲಕ್ಕೆ ಸರಿಯಾಗಿ ರೈತರಿಗೆ ಪೇಮೆಂಟ್ ಕೊಡದೇ ಹೋದರೆ, ಮುಂದಿನ ದಿನಗಳಲ್ಲಿ ಕಬ್ಬು, ಭತ್ತ, ರಾಗಿ, ಜೋಳ ಬೆಳೆಯುವ ರೈತರು ಸಿಗುವುದಿಲ್ಲ. ಅವರು ಈ ಸಹವಾಸ ಬೇಡ, ನಾವು garment factory ಗೋ ಅಥವಾ ಯಾರ ಮನೆಗಾದರೂ ಸೇರಿಕೊಳ್ಳೋಣ ಎನ್ನುವ ಪರಿಸ್ಥಿತಿ ಬರುತ್ತದೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕೆಂದು ನಾನು ಸರ್ಕಾರವನ್ನು ಮನವಿ ಮಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಹಾಲು ಉತ್ಪಾದಕರಿಗೆ 4 ರೂ.ಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ರೈತರ ಕುಟುಂಬದಿಂದ ಬಂದಿರುವುದರಿಂದ ಇವತ್ತಿನ ದಿವಸ 4 ರೂ.ಗಳನ್ನು ಕೊಟ್ಟಿದ್ದಾರೆ. ಆ 4 ರೂ.ಗಳನ್ನು ಕೊಡುವಾಗ ಈಗ ಏನು ಮಾಡಿದ್ದಾರೆಂದರೆ, Animal Husbandry Secretary ಯವರಿಂದ ಒಂದು ಆದೇಶ ಬಂದಿದೆ. ರೈತರು ಕೋಲಾರ ಜಿಲ್ಲೆಯಲ್ಲಿ ಅತಿ ಹೆಚ್ಚಿಗೆ ಹಾಲನ್ನು ಹಾಕುತ್ತಾರೆ. ಅದು ಬಿಟ್ಟರೆ ರೇಷ್ಮೆ. ಅದು ಬಿಟ್ಟರೆ ರೈತರಿಗೆ ಬೇರೆ ಏನೂ ಇಲ್ಲ. ಕಡ್ಡಾಯವಾಗಿ 3.5 ಕೊಬ್ಬು ಇರಬೇಕು, ಜಿಡ್ಡಿನ ಅಂಶ ಶೇಕಡ 8.5 SNF ಇರಬೇಕೆಂದು ಇದೆ. ಇವತ್ತಿನ ದಿವಸ, ರೈತರಿಗೆ ಸರಿಯಾಗಿ ಮೇವು ಸಿಗುತ್ತಿಲ್ಲ. ನೀವು ನಿಂತುಕೊಂಡು ಹಾಲು ಕರೆಸಿದರೂ 3.5 ಕೊಬ್ಬು ಬರುವುದಿಲ್ಲ. 8.5

ಬರುವುದಿಲ್ಲ. ಅದು ಬರದೇ ಹೋದರೆ 4 ರೂಪಾಯಿ ಕೊಡುವುದಿಲ್ಲವೆಂದು ಒಂದು ಆದೇಶ ಮಾಡಿದ್ದಾರೆ. ದಯಮಾಡಿ, ತಾವು ಇದರ ಬಗ್ಗೆ ಎಲ್ಲ ಕಡೆ ತನಿಖೆ ಮಾಡಿ, ಅಲ್ಲಿಯವರೆಗೆ ಈ ಆದೇಶವನ್ನು ತಡೆಹಿಡಯಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಇಲ್ಲದೆ ಹೋದರೆ, ನೀವು ಕೊಟ್ಟರೂ ಸಹ ರೈತರಿಗೆ ಅರ್ಧನೂ ಬರುವುದಿಲ್ಲ. ನಮಗಲ್ಲ. ಕೋಲಾರ ಜಿಲ್ಲೆಗೆ ಮುಖ್ಯ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಮಾನ್ಯ ರೇವಣ್ಣನವರೆ, ಸಬ್ಸಿಡಿ ಕೊಡುತ್ತಿರೋ, recovery ಕೊಡುತ್ತಿರೋ ಅದನ್ನು ಕೇಳಿ.

**ಶ್ರೀ ಹೆಚ್.ಡಿ. ರೇವಣ್ಣ:** ನಾನು, ಆ ಉದ್ದೇಶದಿಂದಲೇ ಕೇಳುತ್ತಿದ್ದೇನೆ. ನೀವೇ ಹಾಲು ಕರೆಸಿ ನೋಡಿ. 3.5 ಬರುತ್ತದೆಯೇ, 8.5 ಬರುತ್ತದೆಯೇ? ಎಂದು ಬೇಕಾದರೆ ಪರಿಶೀಲನೆ ಮಾಡಿ. ನಾನು ಬೇಡವೆಂದು ಹೇಳುವುದಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ಹೇಳುವ ಹಾಗೆ, ನೀವು ಸಬ್ಸಿಡಿ ರೂಪದಲ್ಲಿ ಹಣ ಕೊಡುತ್ತಿದ್ದೀರಿ. ನೀವು ಸಬ್ಸಿಡಿ ಕೊಟ್ಟು, ಹೀಗೆ ಇರಬೇಕು, ಇದೇ ಇರಬೇಕು ಎಂದು ಹೇಳಿದರೆ ಏನು ಮಾಡುವುದಕ್ಕೆ ಆಗುತ್ತದೆ? ದಯಮಾಡಿ, ಕೂಡಲೇ ಈ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಯವರಿಗೆ ನಿರ್ದೇಶನ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಇಲ್ಲವಾದರೆ, ನಿಮ್ಮ ಕೋಲಾರ ಜಿಲ್ಲೆಯವರು ನಿಮ್ಮ ಮೇಲೆ ಬಂದು ಗಲಾಟೆ ಮಾಡುತ್ತಾರೆ. ಮಾನ್ಯ ಉಪಾಧ್ಯಕ್ಷರೆ, ತಾವೇ ಹೇಳಿ. ಇದು ತಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೇ ಎನ್ನುವುದನ್ನು ಹೇಳಿ.

**ಉಪಾಧ್ಯಕ್ಷರು:** ಬಂದಿದೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:** ಮಾನ್ಯ ಉಪಾಧ್ಯಕ್ಷರೆ, major ಆಗಿ ನಿಮ್ಮಲ್ಲಿಯೇ ಹಾಲು ಹಾಕುವುದು.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:** ಒಂದು ಕೆಲಸ ಮಾಡಿ. ವಿಧಾನಸೌಧಕ್ಕೆ ಒಂದೆರೆಡು ಎಮ್ಮೆ, ಹಸುಗಳನ್ನು ಕರೆದುಕೊಂಡು ಬಂದು ಇಲ್ಲಿ ಹಾಲನ್ನು ಕರೆಸಿ, test ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಉಪಾಧ್ಯಕ್ಷರೆ, ನಮ್ಮದು ಬೇಡ. ಬೇಕಾದರೆ, ಕೋಲಾರ ಜಿಲ್ಲೆಯ ಹಸುಗಳನ್ನೇ ಕರೆದುಕೊಂಡು ಬಂದು ಅವುಗಳಿಂದ ಹಾಲು ಕರೆಸಿ, ಆಗ ಅದು ಬಂದರೆ ನಮ್ಮದೇನು ಅಭ್ಯಂತರವಿಲ್ಲ. ಹಸು, ಎಮ್ಮೆ ಎರಡನ್ನೂ ಕರೆಸಿ. ಈ ಪರಿಸ್ಥಿತಿ ಬಂದರೆ ಏನು ಮಾಡುವುದು? ಎಂದು ಗೊತ್ತಿಲ್ಲ. ರೈತ ಒಂದು ಲೀಟರ್ ಹಾಲು ಹಾಕಬೇಕಾದರೆ ಅವನ ಪರಿಸ್ಥಿತಿ ಇವತ್ತು ಏನು? ಆತ 2000 ಅಡಿ ಬಾವಿಯಲ್ಲಿ ನೀರನ್ನು ತೆಗೆಯಬೇಕು. ಅಲ್ಲಿ ನೀರು ಸಿಗುತ್ತದೆಯೇ?

**ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ):** ಹಾಲು ಉತ್ಪಾದಕನಿಗೆ ಪ್ರೋತ್ಸಾಹ ಕೊಡಬೇಕೆಂದರೆ ಹೇಳಿ ಅವರು ಅಧಿಕಾರ ಸ್ವೀಕಾರ ಮಾಡಿದ ಮೊದಲ ದಿವಸ aanounce ಮಾಡಿದ ಕಾರ್ಯಕ್ರಮ. ಹಾಲಿನಲ್ಲಿ ಕೊಬ್ಬಿನ ಅಂಶ, ಇನ್ನೊಂದು ಅದಕ್ಕೆ ಏನು ಆಹಾರ ಕೊಡುತ್ತೇವೆ ಅದರ ಮೇಲೆ ಆಧಾರ ಪಡುತ್ತದೆ. 3 ವರ್ಷಗಳು ಕಳೆದಿದೆ. ನಿಮಗೂ ಗೊತ್ತಿದೆ 4ನೇ ವರ್ಷದ ಬರಗಾಲಕ್ಕೆ ಕಾಲಿಟ್ಟಿದ್ದೇವೆ. Green fodder ಅನ್ನು ಕೊಡುವುದಕ್ಕೆ ಸಾಧ್ಯವೇ ಆಗಿಲ್ಲ. KMF ನಿಂದ ಕೊಡುವಂಥ feed ಅನ್ನೇ ತೆಗೆದುಕೊಂಡು ಹಾಕಬೇಕು. ಏನು feed ಕೊಡುತ್ತೇವೆ ಎನ್ನುವುದರ ಮೇಲೆ quality of the feed ಅದರ ಮೇಲೆ ನಿಮಗೆ out put ಬರುತ್ತದೆ. ಇದು ಯಾವುದನ್ನು ಗಮನಕ್ಕೆ ತೆಗೆದುಕೊಳ್ಳದೆ ಬಹುಶ: ಯಾರೋ misguide ಮಾಡಿದ್ದಾರೆ. ಇದರ basic purpose intention, object ಏನು? ಅವರು ಕಷ್ಟದಲ್ಲಿದ್ದಾರೆ, ಅವರಿಗೆ ಸಹಾಯ ಮಾಡಬೇಕೆನ್ನುವುದು ಆಗಿದೆ. ಇವರು ಈ condition ಗಳನ್ನೆಲ್ಲಾ ಹಾಕಿದರೆ ಆ ಉದ್ದೇಶವೇ defeat ಆಗುತ್ತದೆ. Particulary ಕೋಲಾರ ಮತ್ತು ಚಿಕ್ಕಬಳ್ಳಾಪುರ ಎರಡು ಜಿಲ್ಲೆಗಳಲ್ಲಿ ಮಳೆ ಇಲ್ಲದೆ ಇರುವುದರಿಂದ, ಅಭಾವವಿರುವುದರಿಂದ, green fodder ಇಲ್ಲದೆ ಇರುವುದರಿಂದ ನಾವು artificial feed ಅದನ್ನೇ ತಂದು ಹಾಕಬೇಕು. ಅದರಿಂದ fat content

ಬರುವುದಕ್ಕೆ ಸಾಧ್ಯವೇ ಇಲ್ಲ. SNF 8.5 ಬರಬೇಕೆಂದರೆ it is... ಇವರು ಯಾರು ಹಸುವನ್ನು ಇಟ್ಟಿಲ್ಲ. ಎಮ್ಮೆನೂ ಇಟ್ಟಿಲ್ಲ. Circular ಮಾತ್ರ ಕಳುಹಿಸಿದ್ದಾರೆ. Stationery ಇಟ್ಟುಕೊಂಡಿದ್ದಾರೆ. Stationery ಯಲ್ಲಿ SNF ಬರುವುದಿಲ್ಲ. ಹಸು, ಎಮ್ಮೆ ಹಾಲಿನಲ್ಲಿಯೇ ಬರುತ್ತದೆ. He missed that point. I think Chief Minister is a very gracious person. ಅವರು ಆ ರೈತರಿಗೆ ಸಹಾಯ ಆಗಬೇಕೆಂದು ಕೊಟ್ಟಿದ್ದಾರೆ. ಹೀಗಿರುವಾಗ ಆ circular ಅನ್ನು withdraw ಮಾಡುವುದು ಏನು ಮಹಾ ದೊಡ್ಡ ವಿಷಯ. Withdraw ಮಾಡುತ್ತಾರೆ. ಮಾನ್ಯ ರೇವಣ್ಣನವರೆ, ನೀವು ಹೇಳುವುದನ್ನು correct ಆಗಿ ಹೇಳಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಉಪಾಧ್ಯಕ್ಷರೆ, withdraw ಮಾಡಿದವರು ಸಾಹೇಬ್ರರನ್ನೇ ಬೈಯುತ್ತಾರೆ. ಕೊಟ್ಟಿದ್ದರೂ ಜನರ ಕೈಯಲ್ಲಿ ಏಕೆ ಬೈಯಿಸಿಕೊಳ್ಳಬೇಕೆಂದು ಹೇಳುತ್ತಿದ್ದೇನೆ ಅಷ್ಟೇ. ದಯಮಾಡಿ, ಕೂಡಲೇ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಈ ಸದನದ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಆರೋಗ್ಯ ಇಲಾಖೆ. . .

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ರೇವಣ್ಣನವರೆ, ಒಂದು ನಿಮಿಷ. ತಾವು KMF ನಲ್ಲಿ ಬಹಳ ಅನುಭವಸ್ಥರು. ವಾರದಲ್ಲಿ ಒಂದು ದಿವಸ LLR ಎಂದು ಹಾಲು ತೆಗೆದುಕೊಂಡು ಹೋಗುತ್ತಾರೆ. ಆದರೆ, ಅವತ್ತಿನ ಬಿಲ್ ಅನ್ನು ಪಾವತಿ ಮಾಡುವುದಿಲ್ಲ. ನಮ್ಮಲ್ಲಿ ಈಗ ಸೊಸೈಟಿಗಳು ಹುಟ್ಟಿಕೊಂಡು ಬರುತ್ತಿವೆ. LLR ಎಂದರೆ ಏನರ್ಥವೋ ಏನೋ ಗೊತ್ತಿಲ್ಲ. ಹಾಲು ತೆಗೆದುಕೊಂಡು ಹೋಗುತ್ತಾರೆ. ರೈತರಿಗೆ ಬಿಲ್ ಕೊಡುವುದಿಲ್ಲ. ಇದು ಯಾವ ರೀತಿಯ ಮೋಸ? ಇದು ರೈತರಿಂದ ಲೂಟಿ ಮಾಡುವಂಥ ಕೆಲಸವೇ?

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಉಪಾಧ್ಯಕ್ಷರೆ, ಆರೋಗ್ಯ ಇಲಾಖೆಯಲ್ಲಿ ಒಟ್ಟು sanction posts 6,000 ಇವೆ. ಅದರಲ್ಲಿ ಸುಮಾರು 3,000 ಹುದ್ದೆಗಳು ಖಾಲಿ ಇದೆ. ನಮ್ಮ ರೈತರಿಗೆ ಬೇಕಾಗಿರುವುದು ಯಾವುದು? ಒಂದು ಕಡೆ ಕೃಷಿ ಇಲಾಖೆಯಲ್ಲಿ ರೈತರು ಸತ್ತು

ಹೋಗುತ್ತಿದ್ದಾರೆ. ಇನ್ನೊಂದು ಕಡೆ ಆರೋಗ್ಯ ಇಲಾಖೆ, ಅದರಲ್ಲಿ 3,000 vacancy ಎಂದರೆ ಏನು? ಕೆಲವು ಕಡೆ ಆಸ್ಪತ್ರೆಗಳಲ್ಲಿ attender ಗಳು ಇಲ್ಲ. ಆ ಪರಿಸ್ಥಿತಿ ಆಗಿದೆ. ದಯಮಾಡಿ, ಕೂಡಲೇ attender ಗಳನ್ನು ಹಾಕಬೇಕು. ವೈದ್ಯರ ಹುದ್ದೆಗಳು ಎಲ್ಲಿ ಖಾಲಿ ಇವೆ ಅಲ್ಲಿ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಿ ಅವರ ಸಂಬಳವನ್ನು ಜಾಸ್ತಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ದಯಮಾಡಿ, ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಮಾನ್ಯ ಸ್ಪೀಕರ್ ರವರು ಹೇಳಿದ್ದಾರೆ. ನಾವು ಎಲ್ಲ ಸದಸ್ಯರು ಒಂದು ವರ್ಷದಿಂದ ಹೇಳಿ ಹೇಳಿ ಸಾಕಾಗಿದೆ. ಕೂಡಲೇ ಈ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಸನ್ಮಾ ನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಜಯಚಂದ್ರರವರಿಗೆ ನಿಮ್ಮ ಮಕ್ಕಳು ವೈದ್ಯರಾಗಿದ್ದರೆ ಅವರನ್ನು 20,000 ರೂ.ಗಳ ಸಂಬಳಕ್ಕೆ ಕಳುಹಿಸುತ್ತೀರಾ ಎಂದು ಸ್ಪೀಕರ್ ರವರು ಹೇಳಿದರು. ನಾನು ಹೇಳಿಲ್ಲ. ಎರಡನೆ ದರ್ಜೆ ಗುಮಾಸ್ತನಿಗೆ 20,000 ರೂ.ಗಳ ಸಂಬಳ ಇದೆ. ವೈದ್ಯರಿಗೆ 20,000 ರೂ.ಗಳ ಸಂಬಳವನ್ನು ಕೊಟ್ಟರೆ ಯಾರು ಬರುತ್ತಾರೆ? ಅವರು ಡಾಕ್ಟರ್ ಓದಬೇಕಾದರೆ ಎಷ್ಟು ಡೊನೇಷನ್ ಕೊಡಬೇಕು ಎನ್ನುವುದು ಮಾನ್ಯ ಉಪಾಧ್ಯಕ್ಷರೆ ತಮಗೆ ಗೊತ್ತಿರುವ ವಿಚಾರ. ಆದ್ದರಿಂದ, ಈ ಆಸ್ಪತ್ರೆಗಳಿಗೆ ಡಾಕ್ಟರ್‌ಗಳನ್ನು ಕೂಡಲೇ ನೇಮಕ ಮಾಡಬೇಕೆಂದು ಮನವಿ ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಗಮನಕ್ಕೆ ತರಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಕಳೆದ ವಿಧಾನಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಾಡ ಪ್ರಭು ಕೆಂಪೇಗೌಡ ಬಡಾವಣೆ. ಅಲ್ಲಿ ಯಾರು ಬೇನಾಮಿ contractor eligible ಇಲ್ಲ. ಅಂಥ ಗುತ್ತಿಗೆದಾರರು forgery documents ಹಾಕಿ ಕೆಲಸ ತೆಗೆದುಕೊಂಡು ಕಳಪೆ ಕಾಮಗಾರಿಯನ್ನು ಮಾಡಿದ್ದಾರೆ. ಕಳೆದ ವಿಧಾನಸಭೆಯಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2705 ರಲ್ಲಿ ಈ ಟೆಂಡರ್‌ನಲ್ಲಿ ಗುತ್ತಿಗೆದಾರ forgery ಮಾಡಿದ work order certificate ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಇವರ ಮೇಲೆ ತನಿಖೆ ನಡೆಸಿ ಯಾವ ಕ್ರಮ ಕೈಗೊಳ್ಳಲಾಗಿದೆ? ಎಂದು

ಕೇಳುತ್ತಾರೆ. ಇದು ಪ್ರಶ್ನೆ. ಇದಕ್ಕೆ ಉತ್ತರ, ಹೌದು forgery ಮಾಡಿರುವ ಗುತ್ತಿಗೆದಾರರ ಟೆಂಡರ್ ಅನ್ನು ಈಗಾಗಲೇ ರದ್ದು ಮಾಡಿ ಟೆಂಡರ್ ನಿಯಮಾವಳಿಯಂತೆ ರದ್ದುಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳುತ್ತಾರೆ. ಮೊನ್ನೆ, ನಾನು ಕಳೆದ ಸಲ ವಿಧಾನಸಭೆಯಲ್ಲಿ ಒಂದು ಪ್ರಶ್ನೆ ಹಾಕಿದ್ದೆ. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಎರಡು ಉತ್ತರಗಳನ್ನು ಮಾನ್ಯ ಉಪಾಧ್ಯಕ್ಷರೆ, ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೇಳುತ್ತಾರೆ. ಯಾರ್ಯಾರು ಗುತ್ತಿಗೆದಾರರು ಇದ್ದಾರೆ ಎನ್ನುವುದನ್ನು ಪಟ್ಟಿ ಸಮೇತ ಕೊಟ್ಟಿದ್ದಾರೆ. ಅದರಲ್ಲಿ ಟೆಂಡರ್ ರದ್ದುಪಡಿಸಲಾಗಿದೆ, ಗುತ್ತಿಗೆದಾರರು ನಾಡಪ್ರಭು... ಇದುವರೆಗೂ ರದ್ದುಪಡಿಸಿದ್ದಾರೆಯೇ? ಟೆಂಡರ್ ಹಾಕಬೇಕಾದರೆ ನಿಯಮಾವಳಿ ಬಿಟ್ಟು ಹಾಕಿದ್ದಾರೆ. ಅವರ ಮೇಲೆ ಕ್ರಿಮಿನಲ್ ಕೇಸ್ ಏನಾದರೂ ಹಾಕಿದ್ದಾರೆಯೇ? ಇದು ಯಾವ ಉದ್ದೇಶಕ್ಕಾಗಿ, ಕಾರಣಕ್ಕಾಗಿ ಮಾಡಲಾಗಿದೆ? ಯಾರು ಗುತ್ತಿಗೆದಾರನು ಇರುತ್ತಾನೆ ಆತ forgery certificate ಕೊಟ್ಟಿರುತ್ತಾನೆ. ಇದು forgery, ಗುತ್ತಿಗೆದಾರರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಇವತ್ತಿನವರೆಗೂ ಕ್ರಿಮಿನಲ್ ಕೇಸ್ ಹಾಕಿಲ್ಲ. ಅವರಿಗೆ ಇವತ್ತಿನ ದಿವಸ ನೂರಾರು ಕೋಟಿ ಕೆಲಸ ಕೊಡುತ್ತಿದ್ದಾರೆ. ಕೊಡಲಿ, ನಾವು ಬೇಡವೆಂದು ಹೇಳುವುದಿಲ್ಲ. ಆದರೆ, ಈ ರೀತಿ BDA ನಲ್ಲಿ ಪ್ರಕರಣಗಳು ನಡೆಯುತ್ತಿವೆ. ಅದನ್ನು ಮಾನ್ಯ ಉಪಾಧ್ಯಕ್ಷರೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಬೇಕಾದರೆ ತಮ್ಮ ಕಡೆ ಕಳುಹಿಸಿಕೊಡುತ್ತೇನೆ.

**ಉಪಾಧ್ಯಕ್ಷರು:** ಕಳುಹಿಸಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಉಪಾಧ್ಯಕ್ಷರೆ, ಕಳೆದ ಸಲ ಅರ್ಧ ಗಂಟೆ ಚರ್ಚೆ ಮಾಡೋಣವೆಂದು ಮಾನ್ಯ ಅಧ್ಯಕ್ಷರು ಹೇಳಿದ್ದರು. Last time ಬೆಳಗಾವಿ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ಕೊಡಲಿಲ್ಲ. ಅವಕಾಶ ಕೊಟ್ಟಿದ್ದರೆ ಪೂರ್ತಿ ಎಳೆ ಎಳೆಯಾಗಿ ಬಿಡಿಎ ನಲ್ಲಿ ಏನೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ತಮ್ಮ ಗಮನಕ್ಕೆ ತರಬೇಕೆಂದು ಇದ್ದೆ. ದಯಮಾಡಿ

ಕೂಡಲೇ ಬಿಡಿಎನಲ್ಲಿ ಇಂಥ ದೊಡ್ಡ ಹಗರಣಗಳೆಲ್ಲಾ ನಡೆಯುತ್ತಿದೆ. ಅದಕ್ಕೆ ಅವಕಾಶ ಕೊಡಬಾರದೆಂದು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳ ಕಡೆಯೇ ಬಿಡಿಎ ಇದೆ. ತಾವು ದಯಮಾಡಿ ಸುಮಾರು ಫೋರ್ಜರಿ ಪ್ರಕರಣಗಳು ನಡೆದಿದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ವಿಧಾನಸಭೆಯ ಅಟೆಂಡರ್‌ಗಳ ಸಂಘದ ಹಣ ಸುಮಾರು 20 ಕೋಟಿ ರೂಪಾಯಿಗಳನ್ನೇ ಬೋಗಸ್ ಮಾಡಿದ್ದಾರೆ. ಆದ್ದರಿಂದ, ರಾಮಸಿಂಗ್ ಎನ್ನುವವರು complaint ಕೊಟ್ಟಿದ್ದಾರೆ. ಸ್ಟೇಷನ್‌ನಲ್ಲಿ ಕ್ರಿಮಿನಲ್ ಕೇಸ್ ಹಾಕುವುದಕ್ಕಾಗಿ ರಾಮ್‌ಸಿಂಗ್ ಸನ್ ಆಫ್ ಲೇಟ್ ಜಗದ್ದಾರ್ ಬಹದ್ದೂರ್ ಸಿಂಗ್, 80 ವರ್ಷ, ಇವರು ನನ್ನ ಫೋರ್ಜರಿ ಸಹಿಯನ್ನು ಶ್ರೀ ಪಿ.ಕೆ. ಗೋಪಾಲ್ ಎನ್ನುವವರು ದಿ:18.02.2014ರಂದು ನಕಲು ಮಾಡಿ, ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇವರು ದಿ:07.03.2014ಂದು ಪೊಲೀಸ್ ಸ್ಟೇಷನ್‌ಗೆ complaint ಕೊಟ್ಟಿದ್ದಾರೆ. ಫೋರ್ಜರಿ ಸಹಿ ಹಾಕಿ ಸುಮಾರು 20 ಕೋಟಿ ರೂಪಾಯಿಗಳ ಬೋಗಸ್ ಹಗರಣ ನಡೆದಿದೆ. FIR ಹಾಕಿ ಇವತ್ತಿನವರೆಗೆ charge sheet ಹಾಕಿಲ್ಲ. ಇದಕ್ಕೇನು ಕಾರಣ? ಪೊಲೀಸ್ ಸ್ಟೇಷನ್‌ಗೆ complaint ಕೊಟ್ಟ ನಂತರ charge sheet ಹಾಕುವುದಕ್ಕೆ ಎಷ್ಟು ದಿನ ಬೇಕು? ಈ ಪ್ರಕರಣಗಳನ್ನು ತಮ್ಮ ಗಮನಕ್ಕೆ ಕಳುಹಿಸಿ ಕೊಡುತ್ತೇನೆ. ದಯಮಾಡಿ ತಾವು ಸನ್ಮಾನ್ಯ ಮುಖ್ಯಮಂತ್ರಿಗಳು ಪೊಲೀಸ್ ಕಮೀಷನರ್‌ರವರಿಗಾದರೂ ಹೇಳಲಿ. ಏಕೆಂದರೆ, ಅಟೆಂಡರ್‌ಗಳ ಸಂಘದ ಹಣ ರೂ.20 ಕೋಟಿ ಹೊಡೆದಿರುವ ಪ್ರಕರಣವಿದು. ನಿವೇಶನ ಮಾಡುವುದಕ್ಕಾಗಿ ಅಟೆಂಡರ್‌ಗಳ ಸಂಘ ಮಾಡಿದ್ದರಲ್ಲಾ ಆ ಸಂಘದ ಹಣವಿದು. ಇದೊಂದು ಬಿಡಿಎ ಕರ್ಮಕಾಂಡ. ಬಿಡಿಎ ನಲ್ಲಿ ಇಂಥ ಅನೇಕ ಘಟನೆಗಳು ನಡೆಯುತ್ತಿದೆ. ಆದ್ದರಿಂದ, ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

**ಉಪಾಧ್ಯಕ್ಷರು:** ರೇವಣ್ಣನವರು ಇನ್ನೂ ಬಹಳಷ್ಟು ಕಾರ್ಯ ಕಲಾಪಗಳಿದೆ. ಪ್ರಶ್ನೆಗಳಿದೆ, ನೀವು 5 ಗಂಟೆಗೆ ನಿಮ್ಮ ಮಾತನ್ನು ಮುಕ್ತಾಯ ಮಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವುದೇ ಅಪರೂಪ. ಇನ್ನೂ 2-3 ವಿಷಯಗಳಿದೆ. ಮಾತನಾಡಿ ಮುಗಿಸಿ ಬಿಡುತ್ತೇನೆ. ರೈಲ್ವೆ ಯೋಜನೆಗೆ ನಮ್ಮ ರಾಜ್ಯದಲ್ಲಿ ಉದಾಹರಣೆಗೆ

ಹೇಳುವುದಾದರೆ ಹಾಸನ-ಬೆಂಗಳೂರು ರೈಲ್ವೆ ಮಾರ್ಗ. ಎಷ್ಟು ವರ್ಷ ಬೇಕು ಈ ಯೋಜನೆಗೆ, 1997ನೇ ಇಸವಿಯಲ್ಲಿ ಅನುಮತಿ ಕೊಟ್ಟು ಈ ಯೋಜನೆ ಪ್ರಾರಂಭವಾಗಿದೆ. 17 ವರ್ಷ ಆಗಿದೆಯಲ್ಲ, 17 ವರ್ಷದಿಂದ ಒಂದು ರೈಲ್ವೆ ಮಾರ್ಗ ಆಗಿಲ್ಲವೆಂದರೆ ಇದರ ಉದ್ದೇಶವೇನು, ಕಾರಣವೇನು? ದೇವೇಗೌಡರು ಲೋಕಸಭೆಗೆ ಆ ಕ್ಷೇತ್ರದಿಂದ ಅಲ್ಲಿ ಪ್ರತಿನಿಧಿಸುತ್ತಾರೆನ್ನುವ ಉದ್ದೇಶಕ್ಕೋಸ್ಕರ ತಡೆಮಾಡುತ್ತಿದ್ದಾರೆಯೇ? ಈ ಯೋಜನೆಯಿಂದ ಎಷ್ಟು ಅನುಕೂಲವಾಗುತ್ತದೆಯೆಂದರೆ ಶ್ರವಣಬೆಳಗೊಳಕ್ಕೆ ಹೋಗಬಹುದು, ಯಡಿಯೂರು ಸಿದ್ಧಲಿಂಗೇಶ್ವರ ದೇವಸ್ಥಾನಕ್ಕೆ ಹೋಗಬಹುದು, ಈ ಸ್ಥಳಗಳಿಗೆಲ್ಲಾ ಹೋಗುವುದಕ್ಕೆ ಅನುಕೂಲವಾದಂಥ ಒಂದು ರೈಲ್ವೆ ಮಾರ್ಗ. ಅದರ ಜೊತೆಗೆ ಮಂಗಳೂರಿನಿಂದ ನೇರವಾಗಿ ಚೈನ್ನೈ ಏರ್‌ಪೋರ್ಟ್‌ಗೆ ನೇರ ರೈಲ್ವೆ ಸಂಪರ್ಕವೇನಾದರೂ ಆಗುವುದಿದ್ದರೆ ಮಂಗಳೂರಿನಿಂದ ಬೆಂಗಳೂರು ಮಾರ್ಗವಾಗಿ ಚೆನ್ನೈ ಏರ್‌ಪೋರ್ಟ್‌ಗೆ ಹೋಗುವಂಥ ಯಾವುದಾದರೂ ರೈಲ್ವೆ ಮಾರ್ಗವಿದ್ದರೆ ಇದು ಮಂಗಳೂರು-ಹಾಸನ-ಬೆಂಗಳೂರು ರೈಲ್ವೆ ಮಾರ್ಗ. 17 ವರ್ಷ ಬೇಕೇ ಈ ರೈಲ್ವೆ ಮಾರ್ಗವನ್ನು ಪೂರ್ಣಗೊಳಿಸಲು, ಆದ್ದರಿಂದ ಕೂಡಲೇ ಈ ರೈಲ್ವೆ ಮಾರ್ಗವನ್ನು ಮುಂದಿನ ವರ್ಷ 2015-16ನೇ ಸಾಲಿಗದರೂ ಮಾಡಿಕೊಡಿ ಎಂದು ನಮ್ಮ ಮೂಲಭೂತ ಸೌಕರ್ಯ ಮಂತ್ರಿಗಳು ಸದನದಲ್ಲಿ ಇಲ್ಲ, ಅವರ ಗಮನಕ್ಕೆ ತರುತ್ತಿದ್ದೇನೆ.

ಮತ್ತೊಂದು ವಿಚಾರ, ಹೊಳೆನರಸೀಪುರದಲ್ಲಿ ಒಂದು ರೈಲ್ವೆ ಸ್ಟೇಷನ್, ಹಳೆ ರೈಲ್ವೆ ಸ್ಟೇಷನ್ ಮತ್ತು ಹೊಸ ರೈಲ್ವೆ ಸ್ಟೇಷನ್ ಎರಡನ್ನೂ ಸೇರಿಸಿ ಮಧ್ಯೆ ಒಂದು ರೈಲ್ವೆ ಸ್ಟೇಷನ್ ಮಾಡಲಿ. ಒಂದೇ platform ಇದೆ, ಇನ್ನೊಂದು platform ಇಲ್ಲದೇ ಇದ್ದರೆ ಯಾವುದಾದರೂ ಗಾಡಿ ಬಂದು ಕ್ರಾಸ್ ಆಗಬೇಕಾದರೆ ವಾರದಲ್ಲಿ ಮೂರು ಜನ ಕೈಕಾಲು ಮುರಿದುಕೊಳ್ಳುತ್ತಿದ್ದಾರೆ. ದಯಮಾಡಿ, ಅದಕ್ಕೆ ಎರಡು platform ಗಳನ್ನು extra ಮಾಡಿಕೊಡಬೇಕೆಂದು ನಾವು ಹಲವಾರು ಮಂತ್ರಿಗಳಿಗೆ ಮಲ್ಲಿಕಾರ್ಜುನ ಖರ್ಗೆಯವರಿಗೆ, ಸದಾನಂದಗೌಡರವರಿಗೆ, ಹಿಂದಿನ ಲಾಲೂ ಪ್ರಸಾದ್

ಯಾದವ್ ರವರಿಗೆ ಕೇಳಿಕೊಂಡಿದ್ದೇವೆ. ಅದಕ್ಕೆ ಅವರು ರಾಜ್ಯಸರ್ಕಾರದಿಂದ proposal ಬರಬೇಕೆಂದು ಹೇಳಿದ್ದಾರೆ. ಮೂಲಭೂತ ಸೌಕರ್ಯ ಮಂತ್ರಿಗಳು ಕೂಡಲೇ ಇದನ್ನು ಕಳುಹಿಸಿಕೊಡಬೇಕೆಂದು ಮನವಿ ಮಾಡಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರಿ ಮೆಡಿಕಲ್ ಕಾಲೇಜ್‌ಗಳಿವೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ರೈಲ್ವೆ ಯೋಜನೆ ಬಗ್ಗೆ ಪತ್ರಿಕೆಯಲ್ಲಿ ಮುಖ್ಯಮಂತ್ರಿಗಳ ಹೇಳಿಕೆ ಬಂದಿದೆ. ರಾಜ್ಯಸರ್ಕಾರದಿಂದ ರೈಲ್ವೆ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಹಿಂದೆ ಏನು ಹಣ ಕೊಡುತ್ತಿದ್ದರು. ಆ ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಏಕೆಂದರೆ, ರೇವಣ್ಣನವರು ಏನು ಆತಂಕ ವ್ಯಕ್ತಪಡಿಸುತ್ತಿದ್ದಾರೆ ಬಹುಶ: ಹಿಂದೆ ಏನು ಪದ್ಧತಿ ಇತ್ತು, ರಾಜ್ಯ ಸರ್ಕಾರದಿಂದ ಸಹ ಹಣವನ್ನು ಕೊಟ್ಟು ರೈಲ್ವೆ ಪ್ರಗತಿ ಮಾಡುವ ಪದ್ಧತಿ, ಇದು ನಿಂತು ಬಿಟ್ಟರೆ ರೈಲ್ವೆ ಯೋಜನೆ ಪ್ರಗತಿ ನಮ್ಮ ಕರ್ನಾಟಕದಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೆ, ತಾವು ಯಾವ ಹಿನ್ನೆಲೆಯಲ್ಲಿ ಹೇಳಿದ್ದೀರೋ ಗೊತ್ತಿಲ್ಲ. ರೈಲ್ವೆ ಯೋಜನೆಗೆ ಇನ್ನು ಮುಂದೆ ರಾಜ್ಯ ಸರ್ಕಾರದಿಂದ ಯಾವುದೇ ಹಣ ಕೊಡುವುದಿಲ್ಲವೆಂದು ಪತ್ರಿಕೆಯಲ್ಲಿ ವರದಿ ಬಂದಿದೆ.

ಶ್ರೀ ಹೆಚ್.ಡಿ. ರೇವಣ್ಣ: ಆ ರೀತಿ ಹೇಳಿಲ್ಲ. 50% ಕೊಡುತ್ತಾರೆ.

ಶ್ರೀ ಬಿ.ಆರ್. ಪಾಟೀಲ್: ಪತ್ರಿಕೆಯಲ್ಲಿ ವರದಿ ಬಂದಿದೆ. ಏಕೆಂದರೆ, ರೈಲ್ವೆ ಯೋಜನೆಗಳಲ್ಲಿ ನಾವು ತುಂಬಾ ಹಿಂದುಳಿದಿದ್ದೇವೆ. ಇದರಿಂದ ಬಹಳಷ್ಟು ಅಭಿವೃದ್ಧಿಯಾಗುತ್ತದೆ. Tourism, transportation, ಮತ್ತೊಂದಕ್ಕೆಲ್ಲಾ ಅನುಕೂಲವಾಗುತ್ತದೆ. ರಾಜ್ಯಸರ್ಕಾರದವರು ಹಣ ಕೊಡುವುದನ್ನು ನಿಲ್ಲಿಸಿಬಿಟ್ಟರೆ ಬಹುಶ: ರೈಲ್ವೆ ಯೋಜನೆಗಳಿಗೆ ಹಿನ್ನಡೆಯಾಗುತ್ತದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): Planning Commission replace ಮಾಡಿ ನೀಡಿ ಆಯೋಗವೆಂದು ಕೇಂದ್ರ

ಸರ್ಕಾರದವರು ಮಾಡಿದ್ದಾರೆ. ಅದರಲ್ಲಿ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು Prime Minister ರವರು ಕರೆದಿದ್ದರು. ಅಲ್ಲಿ, ನಾನು ಮೊನ್ನೆ respond ಮಾಡುವಾಗ ಕರ್ನಾಟಕದಲ್ಲಿ ಈಗಾಗಲೇ ರೈಲ್ವೆ ಪ್ರಾಜೆಕ್ಟ್‌ಗಳಿಗೆ ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಇರುವ ರೀತಿಯಲ್ಲಿ land free ಯಾಗಿ ಕೊಟ್ಟು project cost ನಲ್ಲಿ 50% ಕೊಡುವಂಥದ್ದು ಅನೇಕ ರಾಜ್ಯಗಳಲ್ಲಿ ಇಲ್ಲ. ಕರ್ನಾಟಕದಲ್ಲಿ ಈ ರೀತಿಯಿದೆ, ಇದು ನಮಗೆ ಹೆಚ್ಚು burden ಆಗುತ್ತಿದೆ. ನಾವು 50:50 ಮಾಡುವುದನ್ನು 2/3rd ನೀವು ಕೊಡಿ, ನಾವು 1/3rd ಕೊಡುತ್ತೇವೆ, land ಪುಕಟ್ಟೆ ಕೊಡುತ್ತೇವೆನ್ನುವ ಒಂದು ಅಂಶವನ್ನು ಹೇಳಿದ್ದೇನೆ. ಎರಡನೆಯದಾಗಿ ನಾವು ಕೊಡುವುದೇ ಇಲ್ಲ ಎಂದು ಹೇಳಿಲ್ಲ. ಈಗ ಒಪ್ಪಿಗೆಯಾಗಿರುವುದಕ್ಕೆ ಕೊಡುವುದಿಲ್ಲವೆಂದು ಹೇಳಿಲ್ಲ. ಇನ್ನೊಂದು ಏನು ಹೇಳಿದ್ದೇವೆಂದು ಹೊಸ ಪ್ರಾಜೆಕ್ಟ್‌ಗಳನ್ನು ನೀವು ಮಾಡುವಾಗ ಆ project cost ನ್ನೆಲ್ಲಾ ನೀವೇ ಹೊಂದಿಸಿ, ನಾವು land ಪುಕ್ಕಟೆಯಾಗಿ ಕೊಡುತ್ತೇವೆಂದು ಹೇಳಿದ್ದೇವೆಯೇ ಹೊರತು ನಾವು ಕೊಡುವುದೇ ಇಲ್ಲ ಎಂದು ಹೇಳಿಲ್ಲ.

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):** ಮಾನ್ಯ ಉಪಾಧ್ಯಕ್ಷರೆ, ಆ ಅರ್ಥದೊಳಗೆ ಬಂದಿದೆ. ಕೊಡುವುದೇ ಇಲ್ಲವೆಂದು ಒಂದು decision ತೆಗೆದುಕೊಂಡಿದ್ದೀರೆನ್ನುವ ಅರ್ಥದೊಳಗೆ ಪತ್ರಿಕೆಯಲ್ಲಿ ವರದಿ ಬಂದಿದೆ. ಅದಕ್ಕೆ ಅದೊಂದು confusion create ಆಗಿದೆ.

**ಶ್ರೀ ಸಿದ್ದರಾಮಯ್ಯ:** Confusion create ಆಗುವುದಕ್ಕೆ ಸಾಧ್ಯವೇ ಇಲ್ಲ. Yes, ನಾವು ಸರ್ಕಾರದ ಪರವಾಗಿ ಕೇಂದ್ರ ಸರ್ಕಾರಕ್ಕೆ ನಮಗೆ burden ಜಾಸ್ತಿಯಾಗುತ್ತದೆ, ನಮ್ಮ burden ನ್ನು ನೀವು ಸ್ವಲ್ಪ ಹೊತ್ತುಕೊಳ್ಳಿ ಎಂದು ಕೇಳುವುದು ತಪ್ಪೇ?

**ಶ್ರೀ ಜಗದೀಶ್ ಶೆಟ್ಟರ್:** ಆ ರೀತಿಯಲ್ಲ, ನೋಡಿ, ಮೊದಲು system ಏನಿತ್ತೆಂದರೆ ಎಲ್ಲಾ ರೈಲ್ವೆ ಯೋಜನೆಗಳನ್ನು 100% ಅವರೇ ಮಾಡುತ್ತಿದ್ದರು. ಆಮೇಲೆ land acquisition ಗೂ ಪರಿಹಾರ ಕೊಡುತ್ತಿದ್ದರು. ಆದರೆ, ನಮ್ಮ

ಸರ್ಕಾರವೂ ಒಂದು ನೀತಿ ತಂದಿತು. ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಗೇರಾಯ್ಡ್ ಎನ್ನುವಂಥ ಒಂದು ಸಂಸ್ಥೆಯನ್ನು ಮಾಡಿ ಅವತ್ತಿನಿಂದ ಈ ರೀತಿಯಾದ ಒಂದು system ತಂದು, ಆದಷ್ಟು ಬೇಗ ನಮ್ಮ ರಾಜ್ಯದಲ್ಲಿ ರೈಲ್ವೆ ಯೋಜನೆಗಳು ಮುಕ್ತಾಯವಾಗಲಿ, ಹೆಚ್ಚು ಬರಲಿ ಎನ್ನುವ ಉದ್ದೇಶದಿಂದ ಮಾಡಿದ್ದು, ನಮ್ಮ ಸರ್ಕಾರವಿದ್ದಾಗಲೂ ನಾವು ಮಾಡಿದ್ದೇವೆ. Land free ಕೊಡುವಂಥದ್ದು ಮತ್ತು ಪೂರ್ತಿ 50% ಖರ್ಚು ಭರಿಸುವಂಥದ್ದು, ಈ system ನಮ್ಮ ಸರ್ಕಾರವಿದ್ದಾಗ ನಾವು ಮಾಡಿದ್ದೇವೆ. ಇಷ್ಟಾದರೂ ಸಹ ಅವತ್ತು ರೈಲ್ವೆಯವರು ಹಣ ಕೊಡುತ್ತಿರಲಿಲ್ಲ. ನಾವು ಕೊಡುವುದಕ್ಕೆ ಬಜೆಟ್ ನಲ್ಲಿ ಹಣ ಇಟ್ಟಾಗಲೂ ಸಹಿತ, ಅದಕ್ಕೆ ಆ ಯೋಜನೆಗೆ ಕೇಂದ್ರ ಸರ್ಕಾರದ 2/3rd ಕೊಟ್ಟರೆ O.K.,

ಶ್ರೀ ಸಿದ್ದರಾಮಯ್ಯ: ನಾವು ಹೇಳಿದ್ದೇವೆ.

ಶ್ರೀ ಜಗದೀಶ ಶೆಟ್ಟರ್: ಆಯಿತು, continue ಮಾಡಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: Continue ಆಗುತ್ತದೆ, this will continue, the present system will continue, ಆದರೆ ಅವರಿಗೆ ನೀವು ಹೆಚ್ಚಾಗಿ ಕೊಡಿಯಪ್ಪಾ ಎಂದು ಕೇಳುವುದು ತಪ್ಪೇ?

ಶ್ರೀ ಜಗದೀಶ್ ಶೆಟ್ಟರ್: ಅದಕ್ಕೇನು ತೊಂದರೆಯಿಲ್ಲ, ಆದರೆ ಆ decision ತೆಗೆದುಕೊಳ್ಳಬೇಡಿ ಅಷ್ಟೆ.

ಶ್ರೀ ಸಿದ್ದರಾಮಯ್ಯ: 2/3rd ಕೊಡಿ, ನಮಗೆ ಭಾರ ಜಾಸ್ತಿಯಾಯಿತು ಎಂದು ಹೇಳಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳೆ, ನೀವು ರೈಲ್ವೆಗೆ 2/3rd ಕೊಡುತ್ತೀರೋ, 50% ಕೊಡುತ್ತೀರೋ MOU ಮಾಡಿಕೊಂಡು ಒಪ್ಪಿಗೆ ಕೊಡಿ. ಆದರೆ, project time bound ಆಗದಿದ್ದರೆ ಏನಾಗುತ್ತದೆಯೆಂದರೆ state ಗೆ ಬಹಳ ದೊಡ್ಡ ಅನ್ಯಾಯವಾಗುತ್ತದೆ. Time bound ನಲ್ಲಿ, ಉದಾಹರಣೆಗೆ

ಒಂದು project ಗದಗವಾಡಿ ಯೋಜನೆಗೆ 2,000 ಕೋಟಿ ರೂಪಾಯಿಗಳಿವೆ. 50% ಒಪ್ಪಿಕೊಂಡಿದ್ದೀರಿ, land free ಆಯಿತು, ಅವರು 5 ವರ್ಷಕ್ಕೆ ಮುಗಿಸುವುದಿಲ್ಲ. 15 ವರ್ಷ ತೆಗೆದುಕೊಳ್ಳುತ್ತಾರೆ. ಆಗ ನಿಮಗೆ 50% burden ಆಗುತ್ತದೆ. ಯಾವಾಗ ರಾಜ್ಯ ಸರ್ಕಾರ 50%ನ್ನು, 35% ನ್ನು share ಮಾಡುತ್ತದೆಯೋ ಆಗ time bound ಮಾಡಿಕೊಳ್ಳುವಂಥ MOU ಮಾಡಿಕೊಳ್ಳಬೇಕು. MOU ಆದರೆ ಮಾತ್ರ ರೈಲ್ವೆ work complete ಆಗುತ್ತದೆ. ಇಲ್ಲದೆ ಇದ್ದರೆ the burden will continue on the state. ಅದಕ್ಕಾಗಿ ಇದರ ಬಗ್ಗೆ ಬಹಳ ಯೋಚನೆ ಮಾಡಿ.

ಶ್ರೀ ಸಿದ್ದರಾಮಯ್ಯ: ಇದೆಲ್ಲಾ ನಿಜ, ಏನಾಗುತ್ತದೆಯೆಂದರೆ 3 ವರ್ಷದಲ್ಲಿ project complete ಆಗಬೇಕೆಂದು ಇರುತ್ತದೆ. ಅವರು ಪೂರ್ಣ ಮಾಡಲ್ಲ. ನಾವು 50% ನಮ್ಮ ಹಣ ಕೊಟ್ಟರೂ ಸಹ ಅದು ಆಗುವುದಿಲ್ಲ. Delay ಆಗುತ್ತದೆ, ಅನೇಕ project ಗಳು ಹಾಗೇ ಆಗಿವೆ, 50% share ಮಾಡಿಕೊಂಡಿರುವಂಥ ಅನೇಕ project ಗಳಿವೆ. ಸಮಯ ಜಾಸ್ತಿ ತೆಗೆದುಕೊಂಡಂತೆ escalation ಆಗುತ್ತದೆ. ಆ escalation ನಲ್ಲಿಯೂ ನಾವು 50% ಕೊಡಬೇಕು. Project delay ಆಗಿ escalation ಆಗುತ್ತದೆಯಲ್ಲ, ಅದರಲ್ಲಿಯೂ ನಾವು 50% ಕೊಡಬೇಕು. ಆದ್ದರಿಂದ, ನಮ್ಮ burden ಸ್ವಲ್ಪ ಜಾಸ್ತಿಯಾಗಿದೆ, ನೀವು ಸ್ವಲ್ಪ ಹೆಚ್ಚು burden ತೆಗೆದುಕೊಳ್ಳಿ ಎಂದು ಹೇಳಿದ್ದೇವೆ ಅಷ್ಟೆ.

ಶ್ರೀ ಬಸವರಾಜ ರಾಯರೆಡ್ಡಿ: ಅದಕ್ಕಾಗಿಯೇ ಮುಖ್ಯಮಂತ್ರಿಗಳೆ, ನೀವು MOU ಮಾಡಿ, MOU ಮಾಡಿದಾಗ time bound ಬರುತ್ತದೆ.

ಶ್ರೀ ಸಿದ್ದರಾಮಯ್ಯ: ನೋಡಿ ಬಸವರಾಜ ರಾಯರೆಡ್ಡಿಯವರೆ, MOU ಮಾಡಿದರೂ ಅಷ್ಟೆ, MOU ಮಾಡದೇ ಹೋದರೂ ಅಷ್ಟೆ. MOU ಮಾಡಿದ ತಕ್ಷಣ project ನ್ನು 3 ವರ್ಷದಲ್ಲಿ complete ಮಾಡಿ ಕೊಟ್ಟುಬಿಡುತ್ತಾರಾ?

ಶ್ರೀ ಬಸವರಾಜ ರಾಯರೆಡ್ಡಿ: ದಯವಿಟ್ಟು, ನೋಡಿ ಗೊತ್ತಿರುವುದರಿಂದ ಮಾತನಾಡುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:** It is only a memorandum of understanding ಅಷ್ಟೆ.

**ಶ್ರೀ ಬಸವರಾಜ್ ರಾಯರೆಡ್ಡಿ:** ಇಲ್ಲ. ನಮ್ಮಲ್ಲಿ ರೈಲ್ವೆ MOU ಆಗಿರುವುದು ಎರಡೇ. ಒಂದು ಕೊಟ್ಟರೂ ಹರಿಹರ. ಹೀಗಾಗಿ MOU ನಲ್ಲಿ ಹೆಚ್ಚಿಗೆ ಕೊಡಲಾಗುವುದಿಲ್ಲ. ಅದಕ್ಕೆ MOU ಮಾಡಿ.

**ಶ್ರೀ ಸಿದ್ದು ನ್ಯಾಮಗೌಡ:** ಬಾಗಲಕೋಟೆ ಲೈನ್ ಕೂಡ ಹಾಗೆ ಇದೆ ಸರ್. MoU ಆಗಿದೆ, 50% ಆಗಿದೆ.

**ಶ್ರೀ ಸಿದ್ದರಾಮಯ್ಯ:** ಆಯಿತು. ನಿಮ್ಮ ಸಲಹೆಯನ್ನು ಕೂಡ ಪರಿಶೀಲನೆ ಮಾಡೋಣ.

**ಉಪಾಧ್ಯಕ್ಷರು:** ರೇವಣ್ಣನವರೆ conclude ಮಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಕೇಳುವುದು ತಪ್ಪೇನು ಇಲ್ಲ. ಕೇಂದ್ರಸರ್ಕಾರಕ್ಕೆ two third ನೀವು ಮಾಡಿ, one third ನಾವು ಕೊಡಲು ತಯಾರಿದ್ದೇವೆಂದು ಹೇಳಿದ್ದಾರೆ, ಅದನ್ನು ಮಾಡಲಿ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಜಗದೀಶ್ ಶೆಟ್ಟರ್‌ರವರನ್ನು ಮನವಿ ಮಾಡುವುದು ಇಷ್ಟೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ರೈಲ್ವೆ ಮಾರ್ಗ ಇರುವುದು ಬಹಳ ಕಡಿಮೆ. ಅದರಿಂದ ಇದನ್ನು ಮನವರಿಕೆ ಮಾಡಿ ಜಗದೀಶ್ ಶೆಟ್ಟರ್ ರವರು ಕೇಂದ್ರಕ್ಕೆ ಒಂದು ನಿಯೋಗ ತೆಗೆದುಕೊಂಡು ಹೋಗಬೇಕಾಗುತ್ತದೆ. 19 ಜನ ಲೋಕಸಭಾ ಸದಸ್ಯರನ್ನು ಗೆಲ್ಲಿಸಿ ಕಳುಹಿಸಿದ್ದೇವೆ ನಾವು. ಬೆಂಗಳೂರು ರೈಲು ಬಿಡುವುದು ಬೇಡ. ನಾವು ರಾಜ್ಯದ ರೈಲ್ವೆ ಬಗ್ಗೆ ಕೇಳುತ್ತಿದ್ದೇನೆ. ದಯಮಾಡಿ ಎರಡು ನಿಮಿಷ ಹೇಳುವವರೆಗೆ ಕೇಳಿ. 19 ಜನರನ್ನು ಗೆಲ್ಲಿಸಿ ಕಳುಹಿಸಿದಕ್ಕೆ, ಸಂತೋಷ ಪಡಬೇಕಲ್ಲವೆ? ದೇವೇಗೌಡರು 6–10 ತಿಂಗಳು ಪಧಾನಮಂತ್ರಿ ಇದ್ದರು. ಹಾಸನ–ಮೈಸೂರು ರೈಲ್ವೆ ಮಾರ್ಗ feasible ಇಲ್ಲವೆಂದು ರೈಲು ಕಂಬಿಗಳನ್ನೆಲ್ಲಾ ಕಿತ್ತುಕೊಂಡು ಹೋಗಿದ್ದರು. 120 ಕಿ.ಮೀ ಅನ್ನು ಹತ್ತುವರೆ ತಿಂಗಳಿನಲ್ಲಿ ನಾವು ಮಾಡಿಸಿಲ್ಲವೆ? ನಾವು 19 ಜನ ಲೋಕಸಭಾ ಸದಸ್ಯರನ್ನು

ಕಳುಹಿಸಿಕೊಟ್ಟಿದ್ದೇವೆ. ಆದುದರಿಂದ ನೀವು ಹೋಗಿ ಪ್ರಧಾನ ಮಂತ್ರಿಗಳಿಗೆ ಹೇಳಬೇಕು. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರೈಲ್ವೆ ಮಾರ್ಗದಲ್ಲಿ ಕೊನೆಯ ತುದಿಯಲ್ಲಿದೆ. ಉದಾಹರಣೆಗೆ ಹೇಳುವುದಾದರೆ, ಚೈನ್ನೈಗೆ ಹೋಗಿ ಕರುಣಾನಿಧಿಯವರು ಒಂದು ಸಣ್ಣ ಊರಿಗೂ ರೈಲು ಬಿಟ್ಟಿದ್ದಾರೆ. ನಾವು ನಮ್ಮ ಊರಿಗೆ ರೈಲು ಬಿಡಿ ಎಂದು ಹೇಳುವುದಿಲ್ಲ. ರಾಜ್ಯದಲ್ಲಿ ಎಲ್ಲಾ ಕಡೆಗೆ ರೈಲು ಬಿಡಿ ಎಂದು ಹೇಳುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಹಾಸನದಲ್ಲಿ ದಿನಕ್ಕೆ ಎರಡು ಸಾವಿರ ಬಸ್ ಬರುತ್ತದೆ. ಒಂದು flyover ನಿರ್ಮಾಣಕ್ಕೆ ನಾನು ಮತ್ತು ದೇವೇಗೌಡರು 7 ವರ್ಷದಿಂದ ಸತತವಾಗಿ ಹೋರಾಟ ಮಾಡುತ್ತಿದ್ದೇವೆ. ದಿನಕ್ಕೆ ಎರಡು ಸಾವಿರ ಬಸ್. ಅಲ್ಲಿ 2 ಸಾವಿರ ಮನೆ ಇದೆ. ಒಂದೊಂದು ಸಾರಿ ರೈಲು ಬಂದರೆ ಸುಮಾರು 2-3 ಗಂಟೆ ನಿಲ್ಲುತ್ತವೆ, 3-4 ಕಿ.ಮೀ ನಿಲ್ಲುತ್ತವೆ. ಮುಖ್ಯಮಂತ್ರಿಗಳು ಹೇಳಿದ್ದಾರೆ. ಕೇಂದ್ರಸರ್ಕಾರಕ್ಕೆ 50% ನೀವು ಕೊಡಿ, ನಾವು ಕೊಡುತ್ತೇವೆ ಎಂದು. ಸಿದ್ದರಾಮಯ್ಯ ಸಾಹೇಬರು ಈಗ ಒಪ್ಪಿಕೊಂಡಿದ್ದಾರೆ. ಅದನ್ನು ಕೊಡಲಿ. ಹಾಸನ district headquarter ಇದೆ. ಹೊಸ ಬಸ್ ನಿಲ್ದಾಣವಾಗಿದೆ. ಅಶೋಕಣ್ಣನವರೆ ಮಾಡಿಕೊಟ್ಟಿರುವುದು.

ಶ್ರೀ ಅಶೋಕ್ ಖೇಣಿ: ರೇವಣ್ಣನವರೆ ಒಂದು ನಿಮಿಷ.

ಶ್ರೀ ಹೆಚ್.ಡಿ. ರೇವಣ್ಣ: ನೀವು ನೈಸ್‌ನವರು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಅಶೋಕ್ ಖೇಣಿ: ನೈಸ್ ಅಲ್ಲ, ನಾನು ಒಬ್ಬ ಎಂ.ಎಲ್.ಎ. ಇದ್ದೇನೆ. Three railway projects ಇವೆ.

ಶ್ರೀ ಹೆಚ್.ಡಿ. ರೇವಣ್ಣ: ಸರ್ ಅವರದ್ದು Highway road, nice ದ್ದು ಏನು ಬೇಕೋ ನೋಡಿಕೊಳ್ಳಲಿ. ನಾವು ರೈಲ್ವೆ ಬಗ್ಗೆ ಕೇಳುತ್ತಿದ್ದೇವೆ.

ಶ್ರೀ ಅಶೋಕ್ ಖೇಣಿ: ನಾನು ರೈಲ್ವೆ ಬಗ್ಗೆಯೇ ಮಾತನಾಡುತ್ತಿದ್ದೇನೆ. sir, three railway projects ಇದೆ. Inflation ನಿಂದ cost ಜಾಸ್ತಿಯಾಗುತ್ತಿದೆ. ಸರ್ಕಾರಕ್ಕೆ ನನ್ನ ಮನವಿಯೇನೆಂದರೆ; take one project, put all the resources in the projec, finish it. ಅಂದರೆ Inflation would be reduced by 2/3, take the next project and finish that, Inflation would be

reduced by 1/3, then do the third one. Instead of trying to drag all the three projects together. ಬೇಕಾದರೆ ಹಾಸನದ್ದ ಮೊದಲು ಮುಗಿಸಲಿ. All the resources can go. ನಾನು ದೆಹಲಿಯಲ್ಲಿ ರೈಲ್ವೆ ಸಚಿವರ ಜೊತೆ ಮಾತನಾಡಿದೆ. ಅವರು ಹೇಳಿದರು. ಸರ್ಕಾರದಿಂದ matching fund ಬರುತ್ತಿಲ್ಲ. We are ready to put as much as yopu want. But we are not getting the matching fund from the state government. That is why the projects are delayed. ಅದಕ್ಕೆ ನನ್ನ request ಎಂದರೆ, do all the resources to Hassan railway line first. Lets finish it. Then next come to Ramanagar, then next come to Gulbarga. I have no problem with that. But atleast the cost of construction will go down and the damge to our treasury is less. Second thing if you study the cost put so for, central government's 50% share, majority of that going to their administrative cost and inflation. So technically we are paying for the cost of the railways. ಅವರು Just administrative ಮಾಡಿ ಅವರ administrative cost reduce ಮಾಡಿಕೊಳ್ಳುತ್ತಾರೆ. ನಮಗೆ ಬಿಲ್ ಕಳುಹಿಸಿ. ಅದನ್ನು ಸ್ವಲ್ಪ ತಾವು ನೋಡಬೇಕು. ರೇವಣ್ಣನವರೆ ನಿಮ್ಮ ಪರವಾಗಿ ಮಾತನಾಡಿದ್ದೇನೆ. ನೈಸ್‌ದ್ದು ನನಗೆ ಗೊತ್ತು ನಿಜ ನಾನು ರೈಲ್ವೆ ಬಗ್ಗೆ ಮಾತನಾಡಿದ್ದು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಅವರು ಹಾಸನ-ಬೆಂಗಳೂರು ಮೊದಲು ಮಾಡಿ ಎಂದು ಹೇಳುತ್ತಿದ್ದಾರೆ. ಅದಕ್ಕೆ ಅವರಿಗೆ ನಾನು ಕೃತಜ್ಞತೆ ಹೇಳುತ್ತೇನೆ. ನಾನೇನೋ ನೈಸ್ ವಿಷಯ ಮಾತನಾಡುತ್ತಾರೆಂದುಕೊಂಡೆ. ರೈಲ್ವೆ ಮಾರ್ಗಕ್ಕೆ ಮೊದಲು ಆದ್ಯತೆ ಕೊಡಿ. ಇಡೀ ರಾಷ್ಟ್ರದಲ್ಲಿ ಕರ್ನಾಟಕ ರೈಲ್ವೆ ಮಾರ್ಗದಲ್ಲಿ ಕೊನೆಯಲ್ಲಿದೆ ಎಂಬುದನ್ನು ಮನವರಿಕೆ ಮಾಡಬೇಕೆಂದು ನಾನು ಈ ಕಡೆ ವಿರೋಧ ಪಕ್ಷದ ನಾಯಕರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಗಮನಕ್ಕೆ ತರುತ್ತಿದ್ದೇನೆ. 1996 ರಲ್ಲಿ ಅಂಕೋಲಾ ರೈಲ್ವೆ ಮಾರ್ಗ ಆಗಿರುವುದು. 17 ವರ್ಷವಾಯಿತು, ಇಂದಿಗೂ take off ಆಗಿಲ್ಲ. ಇಲ್ಲಿಯೇ ದೇಶಪಾಂಡೆ ಸಾಹೇಬರು ಕುಳಿತಿದ್ದಾರೆ.

**ಶ್ರೀ ಆರ್.ವಿ. ದೇಶಪಾಂಡೆ:** ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ವಿಳಂಭ ಆಗಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ಒಂದು ರೈಲ್ವೆ ಮಾರ್ಗ ಮಾಡಬೇಕಾದರೆ ನೀವು ಸುಪ್ರೀಂಕೋರ್ಟ್ . . .

**ಶ್ರೀ ಆರ್.ವಿ. ದೇಶಪಾಂಡೆ:** ಕೆಲವು ಪರಿಸರ ಸ್ನೇಹಿತರು supreme court ಗೆ ಹೋದ ನಂತರ supreme court ಆದೇಶ ಮಾಡಿದೆ. ಆ ಪ್ರಕಾರ ನಮ್ಮ ಸಿ.ಜಿ ಯವರು ಬಂದು ಪರಿಶೀಲನೆ ಮಾಡಿ ಈಗ ವರದಿ ಕೊಡಬೇಕು. ಕೇಂದ್ರಸರ್ಕಾರ, ರಾಜ್ಯಸರ್ಕಾರದ ಮೇಲೆ ಅಪವಾದ ಇಡಲು ಸಿಗುವುದಿಲ್ಲ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಸ್ವಲ್ಪ ತಡೆಯಾಗಬಹುದು, sort out ಆಗಬಹುದೆಂದು ನಾನು ಭಾವಿಸುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ರಾಜ್ಯಸರ್ಕಾರದ್ದು ಎಂದು ನಾನು ಹೇಳುತ್ತಿಲ್ಲ. ಏಕೆಂದರೆ ಒಂದು project 17 ವರ್ಷಗಳಾಗಿವೆ. ನಿಮ್ಮದೇ UPA government 10 ವರ್ಷ ಇತ್ತು. ದೇವೇಗೌಡರು ಬಿಟ್ಟ ಮೇಲೆ 5 ವರ್ಷ ದೇವೇಗೌಡರು announce ಮಾಡಿದ ಯಾವ ರೈಲ್ವೆ ಮಾರ್ಗ ಆಗಿದೆ? ಪರಿಸರ ಇಲಾಖೆ, ಸುಪ್ರೀಂಕೋರ್ಟ್ ಎಂದು ಹೇಳಲಾಗುವುದಿಲ್ಲ. ನಮ್ಮಲ್ಲಿರುವ Advocate General ಆಗಲಿ, Forest Secretary ಏನು ಮಾಡುತ್ತಿದ್ದಾರೆ? ಹಾಗಾದರೆ ಈಗ ಪರಿಸರ ಎಂದು ಹೇಳಿ ರೋಡ್‌ಗಳನ್ನು ಎಲ್ಲಿ ಹೇಗೆ ಬೇಕೋ ಹಾಗೆ ನಿಲ್ಲಿಸಿ ಬಿಡಿ. ಏನಾದರೂ ಕೆಲಸ ಮಾಡಬೇಕಾದರೆ ಪರಿಸರ ಇಲಾಖೆಯ ಮೇಲೆ ಜವಾಬ್ದಾರಿ ಹಾಕವುದಲ್ಲ. ರಾಜ್ಯಸರ್ಕಾರವಿರಬಹುದು ಅಥವಾ ಕೇಂದ್ರಸರ್ಕಾರವಿರಬಹದು, ಇವುಗಳು ಸುಪ್ರೀಂಕೋರ್ಟಿನ ಮುಂದೆ ಮನವರಿಕೆ ಮಾಡಬೇಕಾಗುತ್ತದೆ. ಒಂದು project ಮಾಡುವುದಕ್ಕೆ 17 ವರ್ಷ ಬೇಕೇನು? ದೇಶಪಾಂಡೆಯವರು ಪ್ರಯತ್ನ ಪಟ್ಟೇ ಆಗಿರುವುದು. ದೇಶಪಾಂಡೆಯವರು ಪ್ರಯತ್ನ ಪಡದೆ ಇದ್ದಿದ್ದರೆ ಆ ರೈಲ್ವೆ ಮಾರ್ಗಕ್ಕೆ ಅನುಮತಿ ಸಿಗುತ್ತಿತ್ತೆ? ದೇಶಪಾಂಡೆಯವರಿಗೆ ಅನುಭವವಿರುವುದರಿಂದ ನಾನು

ಹೇಳುತ್ತಿದ್ದೇನೆ. ಬೇರೆ ಉದ್ದೇಶದಿಂದ ಹೇಳುತ್ತಿಲ್ಲ. ಕೂಡಲೇ ಕೇಂದ್ರಸರ್ಕಾರ ಈ ರಾಜ್ಯದಲ್ಲಿ ಇಂದು ರೈಲ್ವೆ ಮಾರ್ಗ ಇಡೀ ರಾಷ್ಟ್ರದಲ್ಲಿ ಲೆಕ್ಕ ಹಾಕಿದರೆ ನಮ್ಮದು ಏನೂ ಇಲ್ಲ. National Highway ಬಗ್ಗೆ ಹೇಳುವುದಾದರೆ; ಈಗ ನಮ್ಮಲ್ಲಿ 4-line National Highway ಎಷ್ಟಿವೆ ನಮ್ಮ ರಾಜ್ಯದಲ್ಲಿ? ಇಲ್ಲಿಯೇ ಲೋಕೋಪಯೋಗಿ ಮಂತ್ರಿಗಳಿದ್ದಾರೆ. ತಮಿಳುನಾಡಿನ ಚೈನ್ನೈನಲ್ಲಿ 6 ಸಾವಿರ ಕಿ.ಮೀ 4 ಲೈನ್ ರಸ್ತೆ ಇದೆ. ಸನ್ಮಾನ್ಯ ಬಾಲು ಅವರು Surface Transport Minister ಇದ್ದಾಗ 6 ಸಾವಿರ ಕಿ.ಮೀ Four Line ರಸ್ತೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ 1200 ಕಿ.ಮೀ Four line ಇರಬಹುದೇನೋ. ನಾನು ಹೇಳುವುದು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯಕ್ಕೆ ಅನ್ಯಾಯ ನಡೆಯುತ್ತಿದೆ. ಅದು ಆಗಬಾರದೆಂದು ನನ್ನ ಅನಿಸಿಕೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್:** ಅನ್ಯಾಯ ಅಲ್ಲಪ್ಪ. ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರಗಳು continuous ಆಗಿ ಬಂದವು. ಅವರು ತಮಿಳುನಾಡಿನವರು ಡಿ.ಎಂ.ಕೆ. ಇರಲಿ, ಎ.ಐ.ಎ.ಡಿ.ಎಂ.ಕೆ ಇರಲಿ portfolio ತೆಗೆದುಕೊಳ್ಳುವಾಗ ಬಹಳ correct ಆಗಿ ತೆಗೆದುಕೊಂಡಿದ್ದಾರೆ. ಅವರ ಕೆಲಸವನ್ನು correct ಆಗಿ ಮಾಡಿಕೊಂಡಿದ್ದಾರೆ. ಆಂಧ್ರದವರೂ ಅಷ್ಟೆ. ನಮ್ಮ ಸರ್ಕಾರವೇ ಇದ್ದಾಗಲೇ ಆಂಧ್ರದ partners ಇದ್ದರಲ್ಲ, Rural developmet ತೆಗೆದುಕೊಂಡಿದ್ದರು. ಕರಣ್ ನಾಯ್ಡು ಎಂದು ಅವರು ತೀರಿಕೊಂಡರು. Maximum ತೆಗೆದುಕೊಂಡು ಹೋದರು. ನಮ್ಮಲ್ಲಿಂದ ಹೋದವರಿಗೆ ಸ್ವಲ್ಪ ರಾಜ್ಯವೆಲ್ಲಾ ಒಂದೇ, ರಾಷ್ಟ್ರವೆಲ್ಲಾ ಒಂದೇ ಎಂಬ ಭಾವನೆ. ಹಾಗಾಗಿ ಹೆಚ್ಚು ಕೆಲಸವಾಗಿಲ್ಲ, ಅಲ್ಲಿ ಕೆಲಸವಾಗುತ್ತದೆ ಅಷ್ಟೆ.

**ಉಪಾಧ್ಯಕ್ಷರು:** ರೇವಣ್ಣನವರೆ conclude ಮಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಸರ್ ನಿಮ್ಮ ಪರವಾಗಿ ವಾಸಿಸುತ್ತಿದ್ದೇವೆ.

**ಉಪಾಧ್ಯಕ್ಷರು:** ಅದು ಸರಿ ಬೇರೆ ವಿಚಾರಗಳಿವೆ, question hour ಇದೆ. ಇನ್ನು ಕೆಲವು discussion ಇವೆ.

**ಶ್ರೀ ಹೆಚ್.ಡಿ. ರೇವಣ್ಣ:** ಆಗಲಿ ಸರ್ ಏನಂತೆ, ಸಭೆಯನ್ನು ಮುಂದೂಡೋಣ ಬಿಡಿ. ದಯಮಾಡಿ ಸ್ವಲ್ಪ ಅವಕಾಶ ಕೊಡಿ. ಇನ್ನೆರಡು ಮೂರು ಇಲಾಖೆಗಳಿವೆ.

**ಉಪಾಧ್ಯಕ್ಷರು:** ಇಲ್ಲ, ಸಮಯವಾಯಿತು. ಇನ್ನು 5 ನಿಮಿಷದಲ್ಲಿ ಮುಗಿಸಬೇಕು. 05.15 ಗಂಟೆಗೆ ಮುಗಿಸಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆ ಈ ಎರಡು ಇಲಾಖೆಗೆ ಸುಮಾರು 14 ಸಾವಿರ ಕೋಟಿ ರೂ. ಹಣ ಕೊಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಹಿಂದುಳಿದ ವರ್ಗಗಳ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು 2014–15ನೇ ಸಾಲಿನಲ್ಲಿ ಮಡಿವಾಳ ಸಮಾಜಕ್ಕೆ ಇರಬಹುದು, ಕೆಲವು ಸಮಾಜಗಳಿಗೆಂದೇ ಹಣ ಕೊಟ್ಟಿದ್ದಾರೆ. ಕೊಡಲಿ ಸಂತೋಷ, ನಾವು ಅದರ ಬಗ್ಗೆ ಏನೂ ವಿರೋಧ ಮಾಡುವುದಿಲ್ಲ. ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕೆಲವು ಸಮಾಜಕ್ಕೆ ತಾಲ್ಲೂಕು ಕೇಂದ್ರದಲ್ಲಿ 20 ಲಕ್ಷ ರೂ. ಸಮುದಾಯ ಭವನಕ್ಕೆ ಕೊಡುತ್ತಾರೆ. ಆ 20 ಲಕ್ಷ ರೂ. ಬಿಲ್ ತೆಗೆದುಕೊಳ್ಳಬೇಕಾದರೆ ಯಾವ ರೀತಿ ನೋವಿದೆ ಎನ್ನುವುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಸದನದಲ್ಲಿ ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳಾದ ಆಂಜನೇಯರವರು ಇಲ್ಲ. ಉದಾಹರಣೆಗೆ ಸವಿತ ಸಮಾಜ ಎಂದು. ಜಗದೀಶ ಶೆಟ್ಟರ್ ರವರು ಇದ್ದಾಗ 20 ಲಕ್ಷ ರೂ. ಮಂಜೂರಾತಿ ಕೊಡಿಸಿದ್ದೆ. ಆ ಬಿಲ್ ತೆಗೆದುಕೊಳ್ಳಬೇಕಾದರೆ ಆರು ತಿಂಗಳಿನಿಂದ ಒಂದು ವರ್ಷದಿಂದ ಒದ್ದಾಡುತ್ತಿದ್ದಾರೆ. First Estimate sanction ಗೆ ಬಿಲ್ ಆದ ತಕ್ಷಣ Backward class ಜಿಲ್ಲಾ ಅಧಿಕಾರಿಗೆ ಹೋಗುತ್ತದೆ, ಅಲ್ಲಿಂದ ಜಿಲ್ಲಾಧಿಕಾರಿಗಳಿಗೆ ಹೋಗುತ್ತದೆ. ಅಲ್ಲಿಂದ ಆಯುಕ್ತರಿಗೆ ಬರುತ್ತದೆ. ಅಲ್ಲಿಂದ ಸಮಾಜ ಕಲ್ಯಾಣ ಇಲಾಖೆಯ

ಕಾರ್ಯದರ್ಶಿಯವರಿಗೆ ಬರಬೇಕು. ಮತ್ತೆ ಕೆಲಸ ಆದ ಮೇಲೆ ಬಿಲ್ ತೆಗೆದುಕೊಳ್ಳುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯ backward class district officer, ಜಿಲ್ಲಾಧಿಕಾರಿ, ಆಯುಕ್ತರು, ಆಯುಕ್ತರಿಂದ ಕಾರ್ಯದರ್ಶಿಗೆ ಬರಬೇಕು. ಏತಕ್ಕೆ ಜಿಲ್ಲಾಧಿಕಾರಿಗಳೇನು ಕಳ್ಳರಾ? ಜಿಲ್ಲಾಧಿಕಾರಿಗಳಿಗೆ ಕೊಡಿ. ಒಂದು ಸಾರಿ ನೀವು ಹಣ ಕೊಟ್ಟ ಮೇಲೆ ಇಲ್ಲಿಂದ ಹಣ transfer ಮಾಡಿ. ಬೆಂಗಳೂರುವರೆಗೆ ಏಕೆ ಬರಬೇಕು? ಒಂದು ಸವಿತಾ ಸಮಾಜದವರು ಒಂದು ಬಿಲ್ ತೆಗೆದುಕೊಳ್ಳುವುದಕ್ಕೆ ಆರು ತಿಂಗಳು ಒಂದು ವರ್ಷ ಆದರೆ ಏನಿದು? ಅವರೇನೋ ದೂರದೃಷ್ಟಿ ಇಟ್ಟುಕೊಂಡು ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡಬೇಕೆನ್ನುವ ದೃಷ್ಟಿಯಲ್ಲಿ ಸಮುಧಾಯ ಭವನಕ್ಕೆ ಕೊಟ್ಟಿದ್ದಾರೆ. ಸವಿತಾ ಸಮಾಜ ಇರಬಹುದು, ಅಥವಾ ಬೇರೆ ಬೇರೆ ಸಣ್ಣ ಪುಟ್ಟ ಸಮಾಜಗಳು ಇರಬಹುದು, ನಾನು ಹೇಳುವುದಕ್ಕೆ ಹೋದರೆ ಬೇರೆ ತರಹ ಆಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ, ಸಮುದಾಯ ಭವನದ ದುಡ್ಡಿನ ಬಿಲ್ ಕೊಡುವುದಕ್ಕೆ ಕಾರ್ಯದರ್ಶಿ ಹತ್ತಿರ ಬರಬೇಕಾ? DC ಗೆ ಪವರ್ಸ್ ಕೊಟ್ಟು ಅವನು ಕೆಲಸ ಪ್ರಾಮಾಣಿಕವಾಗಿ ಮಾಡಿದ್ದರೆ ಅಲ್ಲಿಯೇ ಬಿಲ್ ಕೊಡುವುದಕ್ಕೆ ಹೇಳಿ. ಆಯುಕ್ತರಿಗೆ ಬಂದು, ಕಾರ್ಯದರ್ಶಿ ಹತ್ತಿರ ಬಂದು ಬಿಲ್ ತೆಗೆದುಕೊಳ್ಳುವುದಕ್ಕೆ ಆರು ತಿಂಗಳು ಬೇಕಾಗುತ್ತದೆ. ದಯಮಾಡಿ ಈ ಸಭೆಯಲ್ಲಿ clarification ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಹಿಂದಿನ BJP ಸರ್ಕಾರದವರು ಏನು ಕೊಟ್ಟಿದ್ದರು ಅದಕ್ಕಿಂತ ಎಲ್ಲ ಕಡಿಮೆ ಆಗಿದೆ. ಹಿಂದೆ BJP ಸರ್ಕಾರದಲ್ಲಿ 200 ರಿಂದ 300 ಬಾವಿ ಕೊಡುತ್ತಿದ್ದರು. ಇವತ್ತು ಎಷ್ಟು ಇದೆ, 100 ಬಾವಿ ಇದೆ. ಪರಿಶಿಷ್ಟವರ್ಗದವರಿಗೆ ಬರೀ 100 ಬಾವಿ ಕೊಟ್ಟಿದ್ದೀರಿ. 100, 70 ಬಾವಿ ಕೊಡುವುದು ಕೊಟ್ಟು ಆ ಮೇಲೆ ಇನ್ನೊಂದು ಆದೇಶ ಹೊರಡಿಸುವುದು. 50, 100, 200 ಎಂದು. ಅದಕ್ಕೆ ಏನಾದರೂ ಒಂದು ನೀತಿ ಇದೆಯೇ? SCP grant ಮೂರು ವರ್ಷವಾಗಿದೆ, SCP ಯಲ್ಲಿ ಬೋರ್‌ವೆಲ್ ಹೊಡೆಯುವುದಕ್ಕೆ ದುಡ್ಡು ಕೊಟ್ಟು ಯಾರೋ ಒಬ್ಬ ರಾಜ್ಯ ಮಟ್ಟದಲ್ಲಿ ಒಬ್ಬನೇ ಏಜೆನ್ಸಿ

ಇರುವುದಂತೆ. ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯುವುದಕ್ಕೆ ಏನು ತೊಂದರೆಯಾಗಿದೆ? ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯಿರಿ. ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆಯುವುದು ಎಂದರೆ, ದುಡ್ಡು ಹೊಡೆಯುವ ಸ್ಕೀಮಾ ಇದು? ಆ SCP ದುಡ್ಡು ಹೊಡೆಯುವ ಪರಿಸ್ಥಿತಿ ಬಂದಿದೆಯೇ? ಜಿಲ್ಲಾ ಮಟ್ಟದಲ್ಲಿ 30 ಜಿಲ್ಲೆಗಳಲ್ಲಿಯೂ ಟೆಂಡರ್ ಕರೆಯಿರಿ. 30 ಜಿಲ್ಲೆಗಳಲ್ಲಿ ಟೆಂಡರ್ ಕರೆದರೆ ಅಲ್ಲಿ ಬೋರ್ ಹೊಡೆಯುವವರು ಸಿಗುವುದಿಲ್ಲವಾ? ರಾಜ್ಯಮಟ್ಟದಲ್ಲಿ ಬೋರ್‌ವೆಲ್ ಹೊಡೆಯುವವರು ಒಬ್ಬರೇ ಇದ್ದಾರಾ? ಅದರ ಜೊತೆಗೆ ಹಾಸ್ಟೆಲ್‌ಗಳಿಗೆ food grains ತೆಗೆದುಕೊಳ್ಳುತ್ತಾರಲ್ಲ, ಸಮಾಜ ಕಲ್ಯಾಣ ಇಲಾಖೆಯಲ್ಲಿ backward class hostel ಇರಬಹುದು, social welfare hostel ಇರಬಹುದು, ಈ ಹಾಸ್ಟೆಲ್‌ಗಳಿಗೆ ತೆಗೆದುಕೊಳ್ಳುವ ರಾಗಿ, ಜೋಳ, ಅಕ್ಕಿ, ತೊಗರಿಬೇಳೆ ತೆಗೆದುಕೊಳ್ಳುವುದಕ್ಕೆ state level tender ಕರೆಯುತ್ತೀರಾ? ಮಾರುಕಟ್ಟೆಯಲ್ಲಿ 100 ರೂ.ಗೆ ಸಿಗುವುದು 260 ರೂ. ಇದೆ ಬೇಕಾದರೆ ನೀವು ದಾಖಲೆಗಳನ್ನು ತೆಗೆಸಿ ನೋಡಿ. SC/ST ಹಾಗೂ backward class ಮಕ್ಕಳಿಗೆ ಕೊಡುವುದರಲ್ಲಿಯೂ ದುಡ್ಡು ಹೊಡೆಯುತ್ತಾರೆಂದರೆ ಏನರ್ಥ? ಅದನ್ನು district level ಸರಳೀಕರಣ ಮಾಡಿ. ಇದು state level tender ಏಕೆ ಬೇಕು? ಮಾನ್ಯ ಮುಖ್ಯ ಮಂತ್ರಿಗಳು SC/ST backward class ಎಂದರೆ ಆ ಕಡೆ ಕತ್ತು ತಿರುಗಿಸಿಕೊಳ್ಳುತ್ತೀರಿ. ಮಾನ್ಯ ಉಪಾಧ್ಯಕ್ಷರೆ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತನ್ನಿ.

**ಉಪಾಧ್ಯಕ್ಷರು:** ನೀವು ಹೇಳಿದ್ದೆಲ್ಲಾ ಕೇಳಿಸಿಕೊಳ್ಳುತ್ತಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ಸಮಾಜ ಕಲ್ಯಾಣ ಇಲಾಖೆಯಲ್ಲಿ District level or taluk level tender ಕರೆಯುತ್ತೇನೆಂದು ಹೇಳಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಕ್ಕಿ ರಾಗಿ ಜೋಳ ಖರೀದಿ ಮಾಡುವುದನ್ನು state level tender ಕರೆಯುತ್ತಿದ್ದಾರೆ, ಇದರಲ್ಲಿ ಬಹಳ ಅನ್ಯಾಯವಾಗುತ್ತದೆ. ತಾಲ್ಲೂಕು ಹಾಗೂ district level ನಲ್ಲಿ ಟೆಂಡರ್ ಕರೆಯುವುದಕ್ಕೆ ಸಂಬಂಧಪಟ್ಟ

ಇಲಾಖೆಯ ಕಾರ್ಯದರ್ಶಿಗಳಿಗೆ, ಆಯುಕ್ತರಿಗೆ ತಾವು ಸೂಚನೆ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ. ಅದೇ ರೀತಿ ಬೋರ್‌ವೆಲ್. ಮೂರು ಮೂರು ವರ್ಷಗಳಾದರೂ ಬೋರ್‌ವೆಲ್ ಇಲ್ಲ. SCP grant 2014–15 ಮುಗಿಯುತ್ತಾ ಬಂದಿದೆ. ಇವತ್ತಿಗೂ grant ರಿಲೀಸ್ ಆಗಿಲ್ಲ. ಅಪ್ರೂವ್ ಆಗಿದೆ, ಜಿಲ್ಲಾಧಿಕಾರಿಗಳು ಅಪ್ರೂವ್ ಮಾಡಿದ್ದಾರೆ.

**ಉಪಾಧ್ಯಕ್ಷರು:** ದಯಮಾಡಿ conclude ಮಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾತನಾಡುವುದು ಇನ್ನು ಬೇಕಾದಷ್ಟು ಇದೆ.

**ಉಪಾಧ್ಯಕ್ಷರು:** ದಯವಿಟ್ಟು ಕುಳಿತುಕೊಳ್ಳಿ. ನೀವು ಇನ್ನು ಒಂದು ಗಂಟೆ ಕಾಲ ಬೇಕಾದರೂ ಮಾತನಾಡುತ್ತೀರಿ. ಬಜೆಟ್ ಸಮಯದಲ್ಲಿ ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ಮಾನ್ಯ ಮುಖ್ಯ ಮಂತ್ರಿಗಳು ಒಳ್ಳೆಯ ಕೆಲಸ ಮಾಡಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಉಪಾಧ್ಯಕ್ಷರು:** ಈಗ ಪ್ರಶ್ನೋತ್ತರ. ಮಾನ್ಯ ಹೆಚ್.ಸಿ. ಬಾಲಕೃಷ್ಣರವರು.